ಸೋಮವಾರ, ಆಗಸ್ಟ್ 21, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 232 | ಪುಟ 14


www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ ಐಎಫ್‌ಎಕ್ಸ್ ಕೋರ್ಸ್‌ಗಿದೆ ವಿಪುಲ ಉದ್ಯೋಗಾವಕಾಶ



ಆಳ-ಅಗಲ ಉಡಾನ್ ಶೇ 53ರಷ್ಟು ಮಾರ್ಗಗಳಲ್ಲಿ ಸ್ಥಗಿತ

'ನೀಟ್': ಡಿಎಂಕೆ ಸತ್ಯಾಗ್ರಹ 9

ಇನ್ವಾಯ್ಸ್ ಅಪ್ಲೋಡ್ ಮಾಡಿದವರಿಗೆ ಲಕ್ಕಿ ಡ್ರಾದಲ್ಲಿ ಪಾಲ್ಗೊಳ್ಳಲು ಅವಕಾಶ 8

'ಬಿಜೆಪಿಯಿಂದ ಉಳ್ಳವನೇ ಭೂಮಿ ಒಡೆಯ' 4A

ಜಿಎಸ್‌ಟಿ: ₹1 ಕೋಟಿವರೆಗೆ ಬಹುಮಾನ

ಒಳ ಪುಟ



ಚೀನಾ ಅತಿಕ್ರಮಣ ಮಾಡಿದ್ದು ಸುಳ್ಳೇ? 9

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕಾಂಗ್ರೆಸ್ ಕಾರ್ಯಕಾರಿ ಸಮಿತಿ: ನಿಷ್ಠರು–ಭಿನ್ನರು ಇಬ್ಬರಿಗೂ ಮಣೆ


ಖರ್ಗೆ 'ಕೈ'ಗೆ ಹೊಸ ತಂಡ

ಪ್ರಜಾವಾಣಿ ವಾರ್ತೆ


ನವದೆಹಲಿ: ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ 10 ತಿಂಗಳ ಬಳಿಕ ಅಳೆದೂ ತೂಗಿ 'ಕಾಂಗ್ರೆಸ್ ಕಾರ್ಯಕಾರಿ ಸಮಿತಿ'ಯನ್ನು (ಸಿಡಬ್ಲ್ಯುಸಿ) ಭಾನುವಾರ ರಚನೆ ಮಾಡಿದ್ದಾರೆ. ಸಮಿತಿಯಲ್ಲಿ ಪಕ್ಷ ನಿಷ್ಠರು ಹಾಗೂ ಭಿನ್ನರಿಗೆ ಸ್ಥಾನ ನೀಡುವ ಮೂಲಕ ಸಮತೋಲನ ಕಾಯ್ದುಕೊಳ್ಳುವ ಪ್ರಯತ್ನ ಮಾಡಿದ್ದಾರೆ.

ಲೋಕಸಭಾ ಚುನಾವಣೆಗೆ ಎಂಟು ತಿಂಗಳು ಬಾಕಿ ಇರುವ ಹೊತ್ತಿನಲ್ಲಿ ಖರ್ಗೆ ಅವರು ವಿವೇಚನಾಧಿಕಾರ ಬಳಸಿ ತಮ್ಮ ತಂಡವನ್ನು ರಚಿಸಿದ್ದಾರೆ. ಪಕ್ಷದ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳುವ ಈ ಅತ್ಯುನ್ನತ ಸಮಿತಿಯಲ್ಲಿ ಖರ್ಗೆ ಅವರು ಹೊಂದಾಣಿಕೆ ಸೂತ್ರಕ್ಕೂ ಒತ್ತು ನೀಡಿದ್ದಾರೆ. ಹೀಗಾಗಿ ಸಚಿನ್ ಪೈಲಟ್, ಶಶಿ ತರೂರ್, ಗೌರವ್ ಗೊಗೊಯ್ ಹಾಗೂ ಸಯ್ಯದ್ ನಾಸಿರ್ ಹುಸೇನ್ ಅವರಿಗೆ ಮೊದಲ ಬಾರಿಗೆ ಪಕ್ಷದ ಉನ್ನತ ಸಮಿತಿಯಲ್ಲಿ ಸ್ಥಾನ ಸಿಕ್ಕಿದೆ.

ಪಕ್ಷದ ಹಿರಿಯ ನಾಯಕಿ ಸೋನಿಯಾ ಗಾಂಧಿ ಅವರಲ್ಲದೆ ಮುಂಚೂಣಿ ನಾಯಕರಾದ



ಎಂ.ವೀರಪ್ಪ ಮೊಯಿಲಿ



ಬಿ.ಕೆ. ಹರಿಪ್ರಸಾದ್



ನಾಸಿರ್ ಹುಸೇನ್



ಬಿ.ವಿ. ಶ್ರೀನಿವಾಸ್

ಮನಮೋಹನ್ ಸಿಂಗ್, ರಾಹುಲ್ ಗಾಂಧಿ ಸದಸ್ಯರಾಗಿ ಮುಂದುವರಿದಿದ್ದಾರೆ.

ಛತ್ತೀಸಗಢದ ರಾಯಪುರದಲ್ಲಿ ಫೆಬ್ರುವರಿಯಲ್ಲಿ ನಡೆದ ಕಾಂಗ್ರೆಸ್‌ನ ಮಹಾಧಿವೇಶನದಲ್ಲಿ ಸಮಿತಿಯನ್ನು ಶೀಘ್ರದಲ್ಲಿ ರಚನೆ ಮಾಡಬೇಕು ಎಂದು ಚರ್ಚೆಗಳು ನಡೆದಿದ್ದವು. ಚುನಾವಣಾ ಪ್ರಕ್ರಿಯೆ ಮೂಲಕ ಸದಸ್ಯರ ನೇಮಕ ಮಾಡಬೇಕು ಎಂದು ಕೆಲವು ಹಿರಿಯ ನಾಯಕರು ಒತ್ತಾಯಿಸಿದ್ದರು. ಅದಕ್ಕೆ ಸಹಮತ ವ್ಯಕ್ತವಾಗಿರಲಿಲ್ಲ. ಸದಸ್ಯರ ಹೆಸರನ್ನು ನಾಮನಿರ್ದೇಶನ ಮಾಡುವ ಅಧಿಕಾರವನ್ನು ಖರ್ಗೆ ಅವರಿಗೆ ಪಕ್ಷದ ಸಂಚಾಲಕ ಸಮಿತಿ ನೀಡಿತ್ತು. ಹೊಸ ಕೋಟಾದ ಪ್ರಕಾರ, ಯುವಜನತೆ, ದಲಿತರು, ಬುಡಕಟ್ಟು, ಮಹಿಳೆಯರು, ಒಬಿಸಿ ಹಾಗೂ ಅಲ್ಪಸಂಖ್ಯಾತರಿಗೆ ಶೇ 50ರಷ್ಟು ಮೀಸಲಾತಿ ನೀಡಲು ಒಲವು ವ್ಯಕ್ತವಾಗಿತ್ತು. ರಾಯಪುರ ಸಭೆ ಮುಗಿದ ಆರು ತಿಂಗಳ ಬಳಿಕ ಕಾಂಗ್ರೆಸ್ ಅಧ್ಯಕ್ಷರು ತಮ್ಮ ತಂಡವನ್ನು ಕಟ್ಟಿದ್ದಾರೆ.

4B ಪುಟ ನೋಡಿ

ಅಂಕಿ-ಅಂಶಗಳು

39 ಸಮಿತಿಯ ಸಾಮಾನ್ಯ ಸದಸ್ಯರು

32 ಕಾಯಂ ಆಹ್ವಾನಿತರು, ಕೆಲವು ರಾಜ್ಯಗಳ ಉಸ್ತುವಾರಿಗಳು

13 ವಿಶೇಷ ಆಹ್ವಾನಿತರು


'ಜಿ–23' ನಾಯಕರಿಗೂ ಸಿಡಬ್ಲ್ಯುಸಿ ಮನ್ನಣೆ

ಪಕ್ಷದ ರಾಷ್ಟ್ರೀಯ ನಾಯಕತ್ವವನ್ನು ಟೀಕಿಸಿ ಪತ್ರ ಬರೆದು 'ಕೈ'ಪಾಳಯ-ದಲ್ಲಿ ಸಂಚಲನಕ್ಕೆ ಕಾರಣವಾಗಿದ್ದ ಹಿರಿಯ ನಾಯಕರನ್ನೂ ಸಮಿತಿಯಲ್ಲಿ ಸೇರಿಸಿಕೊಳ್ಳಲಾಗಿದೆ. ಈ ಮೂಲಕ ಲೋಕಸಭಾ ಚುನಾವಣೆಗೆ ಮುನ್ನ ಪಕ್ಷದೊಳಗೆ ಹೆಚ್ಚಿನ ಭಿನ್ನಮತ ಚಟುವಟಿಕೆಗಳು ನಡೆಯದಂತೆ ಎಚ್ಚರಿಕೆ ವಹಿಸಲಾಗಿದೆ.

ಆಗಿನ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದ ಮತ್ತು ಪಕ್ಷದ ನಾಯಕತ್ವದ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದ 'ಜಿ–23' ಭಿನ್ನಮತೀಯ ನಾಯಕರ ಗುಂಪಿನ ಭಾಗವಾಗಿದ್ದ ಮುಕುಲ್ ವಾಸ್ನಿಕ್, ಆನಂದ್ ಶರ್ಮಾ ಮತ್ತು ತರೂರ್ ಸಮಿತಿಯ 'ಸಾಮಾನ್ಯ' ಸದಸ್ಯರಲ್ಲಿ ಸೇರಿದ್ದಾರೆ. ಗುಂಪಿನ ಭಾಗವಾಗಿದ್ದ ಮನೀಶ್ ತಿವಾರಿ ಮತ್ತು ವೀರಪ್ಪ ಮೊಯಲಿ ಅವರನ್ನು ಕಾಯಂ ಆಹ್ವಾನಿತರನ್ನಾಗಿ ಮಾಡಲಾಗಿದೆ.

ರಷ್ಯಾದ ಲೂನಾ–25 ಪತನ

ಭಾರತದ ಚಂದ್ರಯಾನ-3ಕ್ಕಿಂತ ಮೊದಲೇ ಚಂದ್ರನ ದಕ್ಷಿಣ ಧ್ರುವದಲ್ಲಿ ನೌಕೆಯನ್ನು ಇಳಿಸಬೇಕು ಎಂದು ಹೊರಟಿದ್ದ ರಷ್ಯಾಗೆ ಹಿನ್ನಡೆಯಾಗಿದೆ. ರಷ್ಯಾದ ಲೂನಾ–25 ಲ್ಯಾಂಡರ್ ನೌಕೆ ಸಂಪರ್ಕ ಕಡಿದುಕೊಂಡು, ಚಂದ್ರನ ಮೇಲ್ಮೈಗೆ ಅಪ್ಪಳಿಸಿ ಪತನವಾಗಿದೆ



ವಿವರ ಪುಟ 8

ಆಧಾರ: ರಾಯಿಟರ್ಸ್, ಎಎಫ್‌ಪಿ, ರಷ್ಯಾದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ

ಜಲ ವಿವಾದ: 23ಕ್ಕೆ ಸರ್ವಪಕ್ಷ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ, ಮಹದಾಯಿ, ಕೃಷ್ಣಾ, ಮತ್ತಿತರ ಜಲ ವಿವಾದ ಮತ್ತು ರಾಜ್ಯದ ಅಣೆಕಟ್ಟೆಗಳಲ್ಲಿ ನೀರಿನ ಪರಿಸ್ಥಿತಿ ಕುರಿತು ಚರ್ಚಿಸಲು ಇದೇ 23ರಂದು ಸರ್ವಪಕ್ಷಗಳ ಸಭೆ ಕರೆಯಲಾಗಿದೆ. ಈ ಸಭೆಗೆ ಕೆಲವು ಸಂಸದರಿಗೂ ಆಹ್ವಾನ ನೀಡಲಾಗಿದೆ.

ಸುದ್ದಿಗಾರರಿಗೆ ಭಾನುವಾರ ಈ ಮಾಹಿತಿ ನೀಡಿದ ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, 'ಜಲ ವಿವಾದ ವಿಚಾರದಲ್ಲಿ ಕಾನೂನು ಹೋರಾಟ ಹೇಗೆ ಮಾಡಬೇಕೆಂಬ ವಿಚಾರವನ್ನು ಅಡ್ವೊಕೇಟ್ ಜನರಲ್‌ಗೆ ಬಿಟ್ಟಿದ್ದೇವೆ' ಎಂದು ಹೇಳಿದರು.

8ನೇ ಪುಟ ನೋಡಿ

ಕೆ.ಆರ್. ನಗರದ ಕೃಷಿ ಅಧಿಕಾರಿಗಳು ವಶಕ್ಕೆ

ಪ್ರಜಾವಾಣಿ ವಾರ್ತೆ

ಮಂಡ್ಯ/ಮೈಸೂರು: ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ವಿರುದ್ಧ ಕೃಷಿ ಇಲಾಖೆ ಅಧಿಕಾರಿಗಳು ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ ಎನ್ನಲಾದ ಪ್ರಕರಣದಲ್ಲಿ ಸಿಐಡಿ ಅಧಿಕಾರಿಗಳು ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕ (ಎಡಿ) ಗುರುಪ್ರಸಾದ್ ಹಾಗೂ ಕೃಷಿ ಅಧಿಕಾರಿ (ಎಒ) ಸುದರ್ಶನ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

8ನೇ ಪುಟ ನೋಡಿ

ಶಿಕ್ಷಣ ಪುರವಣಿ ಓದಿರಿ

ತಡೆಯಾಜ್ಞೆ ತೆರವಾದ ಕೂಡಲೇ ಕ್ರಮಕ್ಕೆ ಸಾರಿಗೆ ಇಲಾಖೆ ಚಿಂತನೆ

ವೈಯಕ್ತಿಕ ವಾಹನಗಳ ಬಾಡಿಗೆಗೆ ಬಳಕೆ: ಆ್ಯಪ್‌ಗಳ ನಿಷೇಧ?

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬೈಕ್‌ಟ್ಯಾಕ್ಸಿಗಳನ್ನು ಬಾಡಿಗೆಗೆ ಬಳಸುವ ಆನ್‌ಲೈನ್ ಬುಕ್ಕಿಂಗ್ ಆ್ಯಪ್ ಕಂಪನಿಗಳನ್ನು ನಿಷೇಧಿಸಲು ಸಾರಿಗೆ ಇಲಾಖೆ ಚಿಂತನೆ ನಡೆಸಿದೆ. ಕಂಪನಿಗಳು ಹೈಕೋರ್ಟ್‌ನಿಂದ ತಂದಿರುವ ತಡೆಯಾಜ್ಞೆಯನ್ನು ತೆರವುಗೊಳಿಸಿ ಕ್ರಮ ಕೈಗೊಳ್ಳಲು ಮುಂದಾಗಿದೆ.

ಬಾಡಿಗೆ ನಡೆಸುವ ವಾಹನಗಳಿಗೆ ಹಳದಿ ನಂಬರ್ ಪ್ಲೇಟ್ ಇರುತ್ತದೆ. ವೈಯಕ್ತಿಕ ಬಳಕೆಗೆ ಇರುವ ವಾಹನಗಳಿಗೆ ಬಿಳಿ ನಂಬರ್ ಪ್ಲೇಟ್ ನೀಡಲಾಗಿರುತ್ತದೆ. ಆದರೆ, ನಗರದಲ್ಲಿ ಬಿಳಿ ನಂಬರ್ ಪ್ಲೇಟ್ ಹೊಂದಿರುವ ಕೆಲವು ಟ್ಯಾಕ್ಸಿಗಳು ಬಾಡಿಗೆ ನಡೆಸುತ್ತಿವೆ. ಅದಲ್ಲದೇ ಆನ್‌ಲೈನ್ ಬುಕ್ಕಿಂಗ್ ಆ್ಯಪ್‌ಗಳು ಯಾವುದೇ ಅನುಮತಿ ಇಲ್ಲದೆಯೇ ಬೈಕ್ ಟ್ಯಾಕ್ಸಿ ನಡೆಸುತ್ತಿವೆ. ಇದರಿಂದ ಬಾಡಿಗೆ ನಡೆಸಲೆಂದೇ ಇರುವ ವಾಹನಗಳಿಗೆ ಬಾಡಿಗೆ ಇಲ್ಲದಂತಾಗಿದೆ ಎಂದು ಬೆಂಗಳೂರು ಸಾರಥಿ ಸೇನೆ ಅಧ್ಯಕ್ಷ ಬಿ. ರಾಮೇಗೌಡ 'ಪ್ರಜಾವಾಣಿ' ಜೊತೆಗೆ ಅಳಲು ತೋಡಿಕೊಂಡರು.



ಹೈಕೋರ್ಟ್‌ನಲ್ಲಿ ಇರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಬಳಿಕ ನಿಷೇಧದ ಚಿಂತನೆ ನಡೆಸಲಾಗುವುದು

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಪ್ರಜಾವಾಣಿ ವಿಶೇಷ

ಅಕ್ರಮವಾಗಿ ಬಾಡಿಗೆ ನಡೆಸುವ ಬಿಳಿ ನಂಬರ್ ಪ್ಲೇಟ್ ವಾಹನಗಳನ್ನು ಮತ್ತು ಬೈಕ್‌ಟ್ಯಾಕ್ಸಿ ನಡೆಸುವ ರ್‍ಯಾಪಿಡೊ ಸಹಿತ ಎಲ್ಲ ಆ್ಯಪ್‌ಗಳನ್ನು ನಿಷೇಧಿಸಬೇಕು ಎಂಬುದು ಅವರು ಒತ್ತಾಯವಾಗಿದೆ.

'1 ಲಕ್ಷ ಆಟೊಗಳು ರ್‍ಯಾಪಿಡೊ ಕಂಪನಿ ಜೊತೆಗಿನ ಒಪ್ಪಂದದಲ್ಲಿ ಬೆಂಗಳೂರಿನಲ್ಲಿ ಬಾಡಿಗೆ ಮಾಡುತ್ತಿವೆ. ಇವು ಬಾಡಿಗೆ ವಾಹನಗಳೇ ಆಗಿವೆ. ಇದಲ್ಲದೇ ಅಷ್ಟೇ ಸಂಖ್ಯೆಯ ಬೈಕ್ ಟ್ಯಾಕ್ಸಿಗಳಿವೆ. ಬೈಕ್ ಟ್ಯಾಕ್ಸಿಗಳಿಗೆ ಹಳದಿ ನಂಬರ್ ಪ್ಲೇಟ್ ಬಂದಿಲ್ಲ. ಈಗಾಗಲೇ ಆಹಾರ, ತರಕಾರಿಗಳನ್ನು ದ್ವಿಚಕ್ರ-ವಾಹನಗಳ ಮೂಲಕ ತಲುಪಿಸುವ ಕೆಲಸವನ್ನು ಹಲವು ಕಂಪನಿಗಳು ನಡೆಸುತ್ತಿವೆ. ನಮ್ಮ ಬೈಕ್ ಟ್ಯಾಕ್ಸಿಗಳು ಜನರನ್ನು ತಲುಪಿಸುತ್ತವೆ. ಬೈಕ್ ಟ್ಯಾಕ್ಸಿಯಲ್ಲಿ ಒಬ್ಬ ಪ್ರಯಾಣಿಕ ಮಾತ್ರ ಇರುತ್ತಾರೆ. ಇದರಿಂದ ಬೇರೆಯವರಿಗೆ ನಷ್ಟ ಆಗುವುದಿಲ್ಲ' ಎಂದು ರ್‍ಯಾಪಿಡೊ ಅಧಿಕಾರಿಗಳು ಸಮರ್ಥಿಸಿಕೊಂಡರು.

'ರ್‍ಯಾಪಿಡೊ ನಿಷೇಧಿಸದಂತೆ ಹೈಕೋರ್ಟ್‌ನಿಂದ ತಡೆಯಾಜ್ಞೆ ತರಲಾಗಿದೆ. ಅದನ್ನು ತೆರವುಗೊಳಿಸಿ ನಿಷೇಧಿಸಲು ಮುಂದಾದರೆ ಲಕ್ಷಾಂತರ ಮಂದಿ ನಿರುದ್ಯೋಗಿಗಳಾಗಲಿದ್ದಾರೆ. ಕೆಲವರಿಗೆ ಬೈಕ್‌ಟ್ಯಾಕ್ಸಿಯೇ ಪೂರ್ಣಾವಧಿ ಉದ್ಯೋಗವಾಗಿದ್ದು, ಅನೇಕರಿಗೆ ಅರೆಕಾಲಿಕ ಉದ್ಯೋಗವಾಗಿದೆ. ಅವರೆಲ್ಲರಿಗೂ ತೊಂದರೆಯಾಗಲಿದೆ' ಎಂದು ವಿವರಿಸಿದರು.

ಆ್ಯಪ್ ಕಂಪನಿಗಳು ಮತ್ತು ಆಟೊ, ಟ್ಯಾಕ್ಸಿ ಸಂಘಗಳ ನಡುವೆ ಈ ಬಗ್ಗೆ ಹಲವು ಸಮಯಗಳಿಂದ ತಿಕ್ಕಾಟ ನಡೆಯುತ್ತಿದೆ. ಹೊಡೆದಾಟ ಕೂಡ ನಡೆದಿದೆ. ಅಕ್ರಮ ಬಾಡಿಗೆ ಸಂಚಾರದ ಆ್ಯಪ್ ಮತ್ತು ವಾಹನಗಳನ್ನು ನಿಷೇಧಿಸಬೇಕು ಎಂದು ಹಲವು ಬಾರಿ ಪ್ರತಿಭಟನೆಗಳು ನಡೆಸಲಾಗಿತ್ತು. ಹಲ್ಲೆ, ದೂರು–ಪ್ರತಿದೂರು, ಅಶಾಂತಿಯ ವಾತಾವರಣ ತಪ್ಪಿಸಲು ಸರ್ಕಾರವು ಸರಿಯಾದ ಕ್ರಮ ವಹಿಸಬೇಕು ಎಂದು ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ಆಗ್ರಹಿಸಿದೆ.



ಶ್ರೀಕೃಷ್ಣ ಕಲಾ ಸಂಗಮ ಹಾಗೂ ಭೂಮಿಕಾ ಸೇವಾ ಫೌಂಡೇಷನ್ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ನಿವೃತ್ತ ಯೋಧ ಪೂವಯ್ಯ ಅವರನ್ನು ಸನ್ಮಾನಿಸಲಾಯಿತು

ಸನ್ಮಾನ, ಪ್ರತಿಭಾ ಪುರಸ್ಕಾರ

ಪೀಣ್ಯ ದಾಸರಹಳ್ಳಿ: ಸಂಗೀತವು ಮನಸ್ಸಿಗೆ ಉಲ್ಲಾಸ ನೀಡಲಿದ್ದು ಅದನ್ನು ಕೇಳುವುದರಿಂದ ಒತ್ತಡ ನಿವಾರಣೆ ಮಾಡಿಕೊಳ್ಳಬಹುದು ಎಂದು ಕನ್ನಡ ಜಾನಪದ ಪರಿಷತ್ತಿನ ದಾಸರಹಳ್ಳಿ ಕ್ಷೇತ್ರ ಘಟಕದ ಅಧ್ಯಕ್ಷ ವೈ.ಬಿ.ಎಚ್. ಜಯದೇವ್ ಹೇಳಿದರು.

ಶ್ರೀಕೃಷ್ಣ ಕಲಾ ಸಂಗಮ ಹಾಗೂ ಭೂಮಿಕಾ ಸೇವಾ ಫೌಂಡೇಷನ್ ಸಹಯೋಗದಲ್ಲಿ ನಡೆದ 'ಮಧುರ ಶ್ರಾವಣ ಗಾನ' ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ, 77ನೇ ಸ್ವಾತಂತ್ರ್ಯ ದಿನಾಚರಣೆ ಅಮೃತ ಮಹೋತ್ಸವ ಅಂಗವಾಗಿ ನಿವೃತ್ತ ಯೋಧರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಲಾ ಸಂಗಮದ ಅಧ್ಯಕ್ಷ ಎನ್.ಡಿ.ಕೃಷ್ಣಮೂರ್ತಿ, ಕವಿ ಮಮತಾ ವಾರನಹಳ್ಳಿ, ಭೂಮಿಕಾ ಸೇವಾ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ರಾಜೇಂದ್ರ ಕೊಣ್ಣೂರು, ಮಹಿಳಾ ಅಧ್ಯಕ್ಷೆ ಲತಾ ಕುಂದರಗಿ ಇದ್ದರು.

ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯ 25 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

'ಆವಿಷ್ಕಾರಗಳ ಮಾಹಿತಿ ಸಾಮಾನ್ಯರಿಗೂ ತಲುಪಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಯೋಗಾಲಯಗಳಲ್ಲಿ ನಡೆಯುವ ಸಂಶೋಧನೆ, ಆವಿಷ್ಕಾರಗಳು ಸುಲಭ, ಸರಳ ಬರವಣಿಗೆಯ ಮೂಲಕ ಸಾಮಾನ್ಯ ಜನರಿಗೂ ತಲುಪಬೇಕು' ಎಂದು ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಹೇಳಿದರು.

ಭಾರತೀಯ ವಿಜ್ಞಾನ ಅಕಾಡೆಮಿ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಜ್ಞಾನಿ ಟಿ.ಪ್ರದೀಪ್ ಹಾಗೂ ಉದ್ಯಮಿ ಕೃಷ್ಣನ್ ನಾರಾಯಣ್ ಅವರ 'ಎಂಪವರಿಂಗ್ ಇಂಡಿಯಾ @100' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಸಂಶೋಧನೆಗಳ ಲಾಭಗಳು ಜನರಿಗೂ ತಲುಪಬೇಕು. ಹೊಸ ಅನ್ವೇಷಣೆಗಳು ಬರೀ ಪ್ರಯೋಗಾಲಯಕ್ಕೆ ಸೀಮಿತವಾಗಬಾರದು. ವಿಜ್ಞಾನ ವಿಷಯಗಳ ಬರವಣಿಗೆ ಕೌಶಲವನ್ನು ವಿಜ್ಞಾನ ಅಕಾಡೆಮಿಗಳು ಕಲಿಸಬೇಕು. ಅನ್ವೇಷಣೆ ಪ್ರಜ್ಞೆ ಸಮುದಾಯದಲ್ಲಿ ಮೂಡಬೇಕು.' ಎಂದು ಹೇಳಿದರು.

'ತಂತ್ರಜ್ಞಾನದಷ್ಟೇ ಸಮಾಜ ವಿಜ್ಞಾನ, ಇತಿಹಾಸವೂ ಪ್ರಮುಖ. ಅವುಗಳ ಅಧ್ಯಯನವೂ ನಡೆಯಬೇಕು' ಎಂದು ಪ್ರತಿಪಾದಿಸಿದರು.

ಭಾರತೀಯ ವಿಜ್ಞಾನ ಅಕಾಡೆಮಿ ಅಧ್ಯಕ್ಷ ಉಮೇಶ್ ವಾಗ್ಮಾರೆ ಮಾತನಾಡಿ, 'ಅಕಾಡೆಮಿ ವಿಜ್ಞಾನ ಚಟುವಟಿಕೆ ನಡೆಸುತ್ತಿದೆ. ರಾಷ್ಟ್ರದಲ್ಲಿ ವಿಜ್ಞಾನ ಶಿಕ್ಷಣದ ಅಭಿವೃದ್ಧಿಗೆ ಯೋಜನೆ ರೂಪಿಸುತ್ತಿದೆ' ಎಂದು ಹೇಳಿದರು.

ವಿಜ್ಞಾನಿ ಟಿ. ಪ್ರದೀಪ್ ಮಾತನಾಡಿದರು.

ಸುದ್ದಿ 2 ನಿಮಿಷ

ವಿಶ್ವವಿದ್ಯಾಲಯಗಳ ಹೆಚ್ಚುವರಿ ಸಿಬ್ಬಂದಿ ವಜಾಕ್ಕೆ ಸೂಚನೆ

ಬೆಂಗಳೂರು: ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ನೇಮಕಗೊಂಡಿರುವ ಹೊರಗುತ್ತಿಗೆ ಸಿಬ್ಬಂದಿಯನ್ನು ಸೇವೆಯಿಂದ ಬಿಡುಗಡೆಗೊಳಿಸುವಂತೆ ಉನ್ನತ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಆರ್ಥಿಕ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಅನುಮತಿ ಪಡೆಯದೆ ಬಹುತೇಕ ವಿಶ್ವವಿದ್ಯಾಲಯಗಳು ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರನ್ನು ನೇಮಿಸಿಕೊಂಡಿವೆ. ಹೀಗೆ ನೇಮಕವಾದವರು ಕಾಯಂಗೊಳಿಸುವಂತೆ ಒತ್ತಡ ಹಾಕುತ್ತಿದ್ದಾರೆ. ವಿಶ್ವವಿದ್ಯಾಲಯ ಕಾಯ್ದೆ ಹಾಗೂ ಕೋರ್ಟ್ ಆದೇಶಗಳ ಪ್ರಕಾರ ಕಾಯಂ ಮಾಡಲು ಅವಕಾಶವಿಲ್ಲ. ಹಾಗಾಗಿ, ಹೆಚ್ಚುವರಿ ಇರುವ ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು, ವಾಹನ ಚಾಲಕರು ಹಾಗೂ ಇತರೆ ಸಿಬ್ಬಂದಿಯನ್ನು ಬಿಡುಗಡೆ ಮಾಡಬೇಕು ಎಂದು ಸೂಚಿಸಲಾಗಿದೆ.

ಇಲಾಖೆ ಹಲವು ಬಾರಿ ಸೂಚನೆ ನೀಡಿದ್ದರೂ, ಹೆಚ್ಚುವರಿ ಸಿಬ್ಬಂದಿ ಮುಂದುವರಿದಿದ್ದಾರೆ. ತಕ್ಷಣ ಅವರನ್ನು ಬಿಡುಗಡೆ ಮಾಡದಿದ್ದರೆ ಕುಲಪತಿ, ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳನ್ನು ಹೊಣೆ ಮಾಡಲಾಗುವುದು ಎಂದು ಹೇಳಲಾಗಿದೆ.

ಕೆ.ಆರ್.ಪುರ ಬಲಿಜ ಸಂಘದಿಂದ ಆರೋಗ್ಯ ಶಿಬಿರ



ಕೆ.ಆರ್.ಪುರ: ಕೆಟಿವಿ ಬಡಾವಣೆಯಲ್ಲಿ ಕೆ.ಆರ್.ಪುರ ಬಲಿಜ ವೆಲ್ಫೇರ್ ಟ್ರಸ್ಟ್ ವತಿಯಿಂದ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಶಿಬಿರದಲ್ಲಿ ರಕ್ತದ ಒತ್ತಡ, ಇಸಿಜಿ, ಸಾಮಾನ್ಯ ಪರೀಕ್ಷೆ, ಇಎನ್‌ಟಿ, ಕಣ್ಣಿನ ಪರೀಕ್ಷೆ, ಮಧುಮೇಹ, ರಕ್ತದ ಹೆಪಟೈಟಿಸ್ 'ಬಿ' ವೈರಸ್ ಪರೀಕ್ಷೆ ನಡೆಸಲಾಯಿತು. ಕೆ.ಆರ್.ಪುರ ಸುತ್ತಮುತ್ತಲಿನ ಭಾಗಗಳಿಂದ ಆಗಮಿಸಿದ 200ಕ್ಕೂ ಜನರು ಆರೋಗ್ಯ ತಪಾಸಣೆ ಶಿಬಿರದ ಸದುಪಯೋಗ ಪಡೆದುಕೊಂಡರು.

ಟ್ರಸ್ಟ್ ಸಂಸ್ಥಾಪಕ ಎನ್. ಧನಂಜಯ್ ಮಾತನಾಡಿ, ಸರ್ವರ ಆರೋಗ್ಯ ದೃಷ್ಟಿಯಿಂದ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದರು.

ಸಂಘದ ಕೆ.ಎನ್.ಮೋಹನ್, ಪರೋಪಕಾರಿ ಶ್ರೀನಿವಾಸ್, ಜಿ.ಶ್ರೀರಾಮ್, ಶಿವಪ್ಪ, ಸರಸ್ವತಮ್ಮ, ಕೆ.ಆರ್.ಹೇಮಂತ್, ಕೆ.ಎನ್.ಗಿರೀಶ್, ಮಹೇಶ್‌ಬಾಬು, ಆಂಜನೇಯಲು, ಕೆ.ಗಣೇಶ್, ಎಸ್.ಗೋಪಿನಾಥ್, ವಿ.ಶ್ರೀನಿವಾಸ್, ಡೀಸಲ್ ಮಂಜು, ವೇಣು ಇದ್ದರು.



ನಗರದಲ್ಲಿ ಪರಿಮಳ ಗೆಳೆಯರ ಬಳಗದ 48ನೆಯ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಲ್ಲೇಪುರಂ ಜಿ. ವೆಂಕಟೇಶ್, ವೂಡೇ ಪಿ. ಕೃಷ್ಣ, ವೈ.ಜಿ. ಮಧುಸೂದನ್, ಎಚ್.ಎಸ್. ಅರುಣ್, ವಿ. ಕೃಷ್ಣ, ಶ್ರೀಪಾದರಾವ್ ದೇವನಹಳ್ಳಿ, ಶ್ರೀಹರಿ ವಾಳ್ವೇಕರ್ ಆಚಾರ್ಯ, ಡಾ.ಬಿ. ರವಿಶಂಕರ್ ಭಟ್, ಪಿ.ಎಸ್. ದಿನೇಶ್ ಕುಮಾರ್, ಸುಳಾದಿ ಹನುಮೇಶಾಚಾರ್ಯ, ಡಾ.ಎಚ್.ಎನ್. ಸುಬ್ರಹ್ಮಣ್ಯ ಮತ್ತು ಡಾ. ಗಿರಿಧರ ಕಜೆ ಅವರಿಗೆ ಪರಿಮಳ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪರಿಮಳ ಗೆಳೆಯರ ಬಳಗದ ಅಧ್ಯಕ್ಷ ಎಸ್. ಜಯಸಿಂಹ, ನಿವೃತ್ತ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, ಸುಜಯನಿಧಿ ತೀರ್ಥ ಸ್ವಾಮೀಜಿ ಮತ್ತು ಸುವಿದ್ಯೇಂದ್ರ ತೀರ್ಥ ಸ್ವಾಮೀಜಿ ಇದ್ದರು –ಪ್ರಜಾವಾಣಿ ಚಿತ್ರ

'ದುರಾಸೆಯೆಂಬ ರೋಗಕ್ಕೆ ಮದ್ದಿಲ್ಲ'

'ಪರಿಮಳ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಂತೋಷ್ ಹೆಗ್ಡೆ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುರಾಸೆ ಎಂಬ ರೋಗಕ್ಕೆ ಮದ್ದಿಲ್ಲ. ದುರಾಸೆಯಿಂದಲೇ ಸಮಾಜದ ಶಾಂತಿ, ಸೌಹಾರ್ದತೆ ಕೆಟ್ಟು ಹೋಗಿದೆ ಎಂದು ನಿವೃತ್ತ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ಹೇಳಿದರು.

ಪರಿಮಳ ಗೆಳೆಯರ ಬಳಗದ 48ನೇ ವಾರ್ಷಿಕೋತ್ಸವ, ರಾಘವೇಂದ್ರ ರಾಯರ ಆರಾಧನಾಂಗ ಜ್ಞಾನಯಜ್ಞ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತೃಪ್ತಿ ಇದ್ದರೆ ದುರಾಸೆ ಇರುತ್ತಿರಲಿಲ್ಲ. ಎಲ್ಲರಿಗೂ ತೃಪ್ತಿ ಬೇಕು. ಹಾಗೆಯೇ ಮಾನವೀಯತೆ ಇರಬೇಕು. ಹುಟ್ಟುವಾಗ ಹೇಗೇ ಇದ್ದರೂ ಮಾನವೀಯ ಪಥದಲ್ಲಿ ಬೆಳೆಯಬೇಕು. ಸಾಯುವಾಗ ಮಾನವರಾಗಿ ಸಾಯಬೇಕು ಎಂದರು.

ಎಸ್. ಜಯಸಿಂಹ ಅವರ 'ಶ್ರೀಸುಮತೀಂದ್ರ ದರ್ಶನ' ಕೃತಿಯನ್ನು ಬಿಡುಗಡೆ ಮಾಡಿದ ಸುವಿದ್ಯೇಂದ್ರ ತೀರ್ಥ ಸ್ವಾಮೀಜಿ ಮಾತನಾಡಿ, 'ಚರಿತ್ರೆ ಗ್ರಂಥ ಕೇವಲ ಮಾಹಿತಿಯಾಗದೇ ಸಮಾಜಕ್ಕೆ ಏನಾದರೂ ಸಂದೇಶ ಸಿಗಬೇಕು' ಎಂದು ತಿಳಿಸಿದರು.

ಸುಜಯನಿಧಿತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ನಿವೃತ್ತ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಮಾತನಾಡಿದರು.

ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್, ಶಿಕ್ಷಣ ಕ್ಷೇತ್ರದ ವೂಡೆ ಪಿ. ಕೃಷ್ಣ, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್, ವೇದಾಂತದ ಶ್ರೀಹರಿ ವಾಳ್ವೇಕರ್, ದಾಸ ಸಾಹಿತ್ಯ ಸಂಶೋಧನೆ ವಿಭಾಗದ ಸುಳಾದಿ ಹನುಮೇಶಾಚಾರ್ಯ, ವಿಜ್ಞಾನ ವಿಭಾಗದ ವೈ.ಜಿ. ಮಧುಸೂದನ್, ಸುಗಮ ಸಂಗೀತ ಕ್ಷೇತ್ರದ ಪುತ್ತೂರು ನರಸಿಂಹ ನಾಯಕ್, ಮೃದಂಗ ಕಲಾವಿದ ವಿ.ಕೃಷ್ಣ, ವೈದ್ಯಕೀಯ ಕ್ಷೇತ್ರದ ಡಾ.ಎಚ್.ಎನ್. ಸುಬ್ರಹ್ಮಣ್ಯ, ವೈದ್ಯಕೀಯ ಕ್ಷೇತ್ರದ ಡಾ. ಬಿ. ರವಿಶಂಕರ್ ಭಟ್, ಡಾ. ಗಿರಿಧರ ಕಜೆ, ಯೋಗ ಸಾಧಕ ಎಚ್.ಎಸ್. ಅರುಣ್, ಸಮಾಜ ಸೇವಕ ಶ್ರೀಪಾದರಾವ್ ದೇವನಹಳ್ಳಿ ಅವರಿಗೆ ಪರಿಮಳ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮಲ್ಲಿಕಾರ್ಜುನ್ ವಿರುದ್ಧ ಪ್ರಕರಣ ದಾಖಲಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಸಚಿವ ಸಂಪುಟದಿಂದ ಕೈಬಿಡಬೇಕು. ಕೂಡಲೇ ಅವರ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಿಸಬೇಕು' ಎಂದು ಸಮತಾ ಸೈನಿಕ ದಳ, ರಾಷ್ಟ್ರೀಯ ದ್ರಾವಿಡ ಸಂಘ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಾಮಾಜಿಕ ಕಾರ್ಯಕರ್ತ ಲೋಲಾಕ್ಷ, 'ಸಚಿವ ಮಲ್ಲಿಕಾರ್ಜುನ್ ಅವರು ಊರನ್ನು ಹೊಲೆಗೇರಿ ಮಾಡಬೇಡಿ ಎಂದಿರುವುದು ಖಂಡನೀಯ. ಜವಾಬ್ದಾರಿಯುತ ಸ್ಥಾನದಲ್ಲಿದ್ದು ಈ ರೀತಿಯ ಪದಬಳಕೆ ಮಾಡುವುದು ಎಷ್ಟು ಸರಿ? ನಟ ಉಪೇಂದ್ರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರ ಅವರ ವಿರುದ್ಧ ಪ್ರಕರಣ ದಾಖಲಿಸಿದೆ. ಆದರೆ, ಸಚಿವರ ವಿರುದ್ಧ ಪ್ರಕರಣದ ದಾಖಲಿಸದೇ ತಾರತಮ್ಯ ನೀತಿ ಅನುಸರಿಸುತ್ತಿದೆ. ನಾನೇ ದಲಿತ ಮುಖ್ಯಮಂತ್ರಿ ಎಂದು ಹೇಳುವ ಸಿದ್ದರಾಮಯ್ಯ ಅವರ ಕೂಡಲೇ ಪ್ರಕರಣ ದಾಖಲಿಸುವಂತೆ ಪೊಲೀಸರಿಗೆ ಸೂಚಿಸಬೇಕು' ಎಂದು ಒತ್ತಾಯಿಸಿದರು.

ಸಮತಾ ಸೈನಿಕ ದಳದ ಅಧ್ಯಕ್ಷ ಎಂ ವೆಂಕಟಸ್ವಾಮಿ, 'ಹೊಲೆಯರನ್ನು ಅವಮಾನ ಮಾಡಿದರೆ, ಅದು ಮಾನವ ಜಾತಿಗೆ ಅವಮಾನ ಮಾಡಿದಂತಾಗುತ್ತದೆ. ಇಂತಹವರ ವಿರುದ್ಧ ದಲಿತ ಸಂಘಟನೆಗಳೆಲ್ಲ ಒಗ್ಗಟ್ಟಿನಿಂದ ಹೋರಾಡುವ ಅಗತ್ಯವಿದೆ' ಎಂದರು.

ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್, ' ಮಲ್ಲಿಕಾರ್ಜುನ್ ಮತ್ತು ನಟ ಉಪೇಂದ್ರ ಅವರು ದಲಿತರ ಭಾವನೆಗಳಿಗೆ ನೋವುಂಟು ಮಾಡಿದ್ದಾರೆ. ಇವರಿಬ್ಬರ ವಿರುದ್ಧ ಪ್ರಕರಣ ದಾಖಲಿಸಿ ಶಿಕ್ಷೆ ವಿಧಿಸಬೇಕು' ಎಂದು ಒತ್ತಾಯಿಸಿದರು.

ರಾಷ್ಟ್ರೀಯ ದ್ರಾವಿಡ ಸಂಘದ ಅಗ್ನಿ ಶ್ರೀಧರ್, 'ಸಮಾಜದಲ್ಲಿ ಇಂತಹ ಹೇಳಿಕೆಗಳು ಮತ್ತೆ ಮರುಕಳಿಸಬಾರದು ಎಂದರೆ ಇವರಿಗೆ ಶಿಕ್ಷೆ ಆಗಲೇಬೇಕು. ನಟ ಉಪೇಂದ್ರ ಮತ್ತು ಮಲ್ಲಿಕಾರ್ಜುನ್ ಅವರು ಕೋರ್ಟ್‌ಗೆ ಶರಣಾಗಿ ಸಮಾಜಕ್ಕೆ ಮಾದರಿಯಾಗಬೇಕು' ಎಂದು ಅವರು ಹೇಳಿದರು.

ಕಳೆದ ವರ್ಷ ಲಾಭದ ಗಡಿಯೊಳಗೆ ಬಂದಿದ್ದ ಬಿಎಂಆರ್‌ಸಿಎಲ್; ನಷ್ಟದಿಂದ ಚೇತರಿಕೆ

₹ 100 ಕೋಟಿ ಲಾಭ ನಿರೀಕ್ಷೆಯಲ್ಲಿ ಮೆಟ್ರೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ಆರಂಭವಾಗಿ ಒಂದು ದಶಕದ ಬಳಿಕ ಲಾಭದತ್ತ ದಾಪುಗಾಲು ಇರಿಸಿದೆ.

2022–23ನೇ ಸಾಲಿನಲ್ಲಿ ಲಾಭದ ಗಡಿಯೊಳಗೆ ಬಂದಿತ್ತು. 2023–24ರಲ್ಲಿ ₹ 100 ಕೋಟಿ ಲಾಭ ಗಳಿಸುವ ಗುರಿಯನ್ನು ಇಟ್ಟುಕೊಂಡಿದೆ.

ಪ್ರಯಾಣ ದರ, ಇತರ ಶುಲ್ಕಗಳು ಸೇರಿ ಬಿಎಂಆರ್‌ಸಿಎಲ್ 2022–23ರಲ್ಲಿ ₹ 594.02 ಕೋಟಿ ಆದಾಯ ಗಳಿಸಿತ್ತು. ಆದರೆ, ನಿರ್ವಹಣೆಗೆ ₹ 486.61 ಕೋಟಿ ವೆಚ್ಚವಾಗಿತ್ತು. ವೇತನ ಇನ್ನಿತರ ವೆಚ್ಚಗಳನ್ನು ಸರಿದೂಗಿಸಿದ ನಂತರವೂ ₹ 40 ಕೋಟಿ ಲಾಭ ಗಳಿಸಿತ್ತು.



(ಕೋಟಿಗಳಲ್ಲಿ)

2022–23ರ ಅಂಕಿ–ಅಂಶ		2023ರ ಏಪ್ರಿಲ್‌ನಿಂದ ಜುಲೈವರೆಗಿನ ಅಂಕಿ–ಅಂಶ
₹422.61	ಪ್ರಯಾಣಿಕರಿಂದ ಬಂದ ಆದಾಯ	₹170.58
₹171.41	ಇತರ ಶುಲ್ಕಗಳಿಂದ ಬಂದ ಆದಾಯ	₹20.09
₹486.61	ನಿರ್ವಹಣಾ ವೆಚ್ಚ	₹186.92

ಕೋವಿಡ್ ಇಲ್ಲದಿದ್ದರೆ ಲಾಭದ ಹಳಿಗೆ ಮೆಟ್ರೊ ಬರುತ್ತಿತ್ತು. ಆಗ ಉಂಟಾದ ನಷ್ಟದಿಂದ ಈಗ ಚೇತರಿಸಿಕೊಂಡಿದೆ. ಈ ವರ್ಷ ಪ್ರಯಾಣ ದರವನ್ನು ಏರಿಸುವ ಪ್ರಮೇಯ ಇಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

'ಮೆಟ್ರೊ ರೈಲಿನಲ್ಲಿ ಕಳೆದ ವರ್ಷ ಸರಾಸರಿ ನಿತ್ಯ 5.32 ಲಕ್ಷ ಜನ ಪ್ರಯಾಣಿಸಿದ್ದರು. ಈ ವರ್ಷ ನಿತ್ಯ ಸಂಚರಿಸುವವರ ಪ್ರಮಾಣ 6.2ಲಕ್ಷದಿಂದ 6.3 ಲಕ್ಷದವರೆಗೆ ಏರಿದೆ. ಜನರಲ್ಲಿ ಮೆಟ್ರೊ ಮೂಡಿಸಿರುವ ಸುರಕ್ಷತಾ ಭಾವನೆಯಿಂದ ಇದು ಸಾಧ್ಯವಾಗಿದೆ. ಈಗಿನ ಪ್ರಯಾಣಿಕರ ಪ್ರಮಾಣದ ಅಂದಾಜಿನಲ್ಲಿ ಈ ಆರ್ಥಿಕ ವರ್ಷದ ಕೊನೆಗೆ ₹ 100 ಕೋಟಿ ಲಾಭ ನಿರೀಕ್ಷಿಸಲಾಗಿದೆ' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬೈಯಪ್ಪನಹಳ್ಳಿ–ಕೆ.ಆರ್.ಪುರ ನಡುವೆ 2.5 ಕಿಲೋಮೀಟರ್ ಹಾಗೂ ಕೆಂಗೇರಿ–ಚಲ್ಲಘಟ್ಟದ ನಡುವೆ 1.9 ಕಿ.ಮೀ ಕಾಮಗಾರಿ ಮುಗಿದಿದ್ದು, ಎಲ್ಲ ತಾಂತ್ರಿಕ ತೊಂದರೆಗಳು ಬಗೆಹರಿದ ಬಳಿಕ ವಾಣಿಜ್ಯ ಸಂಚಾರ ಆರಂಭಗೊಳ್ಳಲಿದೆ. ಸಂಚಾರ ಶುರುವಾದ ಕೂಡಲೇ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುವುದಿಲ್ಲ. ನಿಧಾನಕ್ಕೆ ಹೆಚ್ಚಾಗುತ್ತಾ ಹೋಗುತ್ತದೆ. ಕನಿಷ್ಠ ಮೂರು ತಿಂಗಳು ರೈಲು ಸಂಚರಿಸಿದ ಮೇಲೆ ನಿತ್ಯ ಸಂಚರಿಸುವವರ ಪ್ರಮಾಣ 7 ಲಕ್ಷ ತಲುಪಬಹುದು. ಈ ಆರ್ಥಿಕ ವರ್ಷದಲ್ಲಿ ಲಾಭ ಗಳಿಸಲು ಇದು ದೊಡ್ಡ ಕೊಡುಗೆಯಾಗದೇ ಇದ್ದರೂ ಮುಂದಿನ ವರ್ಷಕ್ಕೆ ಉತ್ತಮ ಲಾಭ ತಂದುಕೊಡಲಿದೆ' ಎಂಬುದು ಅಂಜುಂ ಪರ್ವೇಜ್ ಅವರ ಅಭಿಪ್ರಾಯವಾಗಿದೆ.

ಈಗ ಇರುವ ಹಸಿರು ಮತ್ತು ನೇರಳೆ ಮಾರ್ಗಗಳ ಜೊತೆಗೆ ಇನ್ನು ಮೂರು ವರ್ಷದ ಒಳಗೆ ಕೆಂಪು, ಹಳದಿ, ನೀಲಿ ಮಾರ್ಗಗಳು ಆರಂಭಗೊಳ್ಳಲಿವೆ. ಮೆಟ್ರೊ ಜಾಲವು ಎರಡು ಪಟ್ಟು (175 ಕಿಲೋಮೀಟರ್) ಹೆಚ್ಚಾಗಲಿದೆ.

ಬೇಂದ್ರೆ ಬೆರಗಿನ ಸಂಜೆ ನಾಳೆ

ಪ್ರಜಾವಾಣಿ ವಾರ್ತೆ



ಬೇಂದ್ರೆ



ಬಸವರಾಜ ಕಲ್ಗುಡಿ



ರಾಮಚಂದ್ರ ಹಡಪದ

ಬೆಂಗಳೂರು: ಕವಿ ಬೇಂದ್ರೆಯವರ ಕಾವ್ಯದ ಮುಖ್ಯ ಪ್ರತಿಮೆಗಳಲ್ಲಿ ಒಂದಾದ 'ಭೃಂಗ'ದ ಬೆನ್ನೇರಿ ಸೃಜನಶೀಲತೆಯ ಹುಡುಕಾಟವನ್ನು ನಡೆಸುವ ಮಾತು ಮತ್ತು ಹಾಡಿನ ವಿಶಿಷ್ಟ ಜುಗಲ್‌ಬಂದಿ ಪ್ರಯತ್ನವೊಂದು ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಆ. 22ರಂದು ಸಂಜೆ 6ಕ್ಕೆ ನಡೆಯಲಿದೆ.

'ಬೇಂದ್ರೆ ಬೆರಗು' ಹೆಸರಿನಲ್ಲಿ ನಡೆಯಲಿರುವ ಈ ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಸಂಸ್ಕೃತಿಯ ಪ್ರಾಚೀನತೆ ಮತ್ತು ಆಧುನಿಕತೆಯನ್ನು ಏಕತ್ರ ಮೇಳವಿಸಿ ನೋಡುವ ಚಿಂತಕ ಬಸವರಾಜ ಕಲ್ಗುಡಿ ಅವರು ನಡೆಸಿಕೊಡಲಿದ್ದಾರೆ. ಗಾಯಕ ರಾಮಚಂದ್ರ ಹಡಪದ ಅವರು ಬೇಂದ್ರೆ ಗೀತೆಗಳನ್ನು ಹಾಡಲಿದ್ದಾರೆ.

ಬೇಂದ್ರೆ ಅವರ ಸೃಜನಶೀಲತೆಯು ವರ್ತಮಾನಕ್ಕೆ ಅನುಗುಣವಾದ ಭಾಷೆ ಮತ್ತು ಶೈಲಿಯನ್ನು ಸೃಷ್ಟಿಸಿತು ಎನ್ನುವುದು ಮಹತ್ವದ ವಿಚಾರ. ಈ ಕವಿಗೆ ಗಂಡು–ಹೆಣ್ಣು, ಪ್ರಕೃತಿ–ಪುರುಷ, ಎರಡು ಬಹುಮುಖ್ಯ ದ್ರವ್ಯಗಳಾಗಿವೆ. ಇವುಗಳ ತೀವ್ರ ಪ್ರೀತಿಯ ಸಾಹಚರ್ಯದಲ್ಲಿಯೇ ಸೃಜನಶೀಲತೆಯ ಉಗಮ ಎನ್ನುವುದು ಕವಿಯ ಗಟ್ಟಿಯಾದ ನಂಬಿಕೆ. ಅವರ ಕಾವ್ಯದಲ್ಲಿ 'ಭೃಂಗ' ಇಂಥ ತಾತ್ವಿಕತೆಯನ್ನು ಹಿಡಿಯುವ ಮುಖ್ಯವಾದ ಪ್ರತಿಮೆಯಾಗಿದೆ. ಈ 'ಪ್ರತಿಮಾ ಪುರಾಣ'ದ ಮೂಲಕ ಬೇಂದ್ರೆ ಕಾವ್ಯ ಜಗತ್ತಿನಲ್ಲಿ ಕೇಳುಗರನ್ನು ಸುತ್ತಾಡಿಸಲಿದ್ದಾರೆ ಕಲ್ಗುಡಿ ಅವರು.

ಸಂಸ್ಕೃತಿ ಚಲನೆಯನ್ನು ವಿವಿಧ ನೆಲೆಗಳಲ್ಲಿ ವಿಶ್ಲೇಷಿಸುವ ಕಲ್ಗುಡಿ ಅವರು, ಕನ್ನಡದ ಕಾವ್ಯ ಪರಂಪರೆಯ ಅಧ್ಯಯನ–ಸಂಶೋಧನೆಯಲ್ಲಿ ವಿಶೇಷ ಕೃಷಿಯನ್ನು ಮಾಡಿದವರು. ಬೇಂದ್ರೆ ಅವರನ್ನೂ ಆಳವಾಗಿ ಓದಿಕೊಂಡವರು. ಕಬೀರ ವಾಣಿಯನ್ನು ನಾಡಿನ ತುಂಬಾ ಪಸರಿಸಿದ ಹಡಪದ ಅವರು ಬೇಂದ್ರೆ ಕಾವ್ಯದ 'ಸ್ಪೆಷಲಿಸ್ಟ್' ಆಗಿಯೂ ಗುರ್ತಿಸಿಕೊಂಡವರು. ಅವರ ಗಾಯನ ಕಾರ್ಯಕ್ರಮಕ್ಕೆ ಇನ್ನಷ್ಟು ಕಳೆ ಕಟ್ಟಲಿದೆ.



ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಜಕ್ಕೂರು ಕ್ರೆಡಿಟ್ ಕೋಆಪರೇಟಿವ್ ಸೊಸೈಟಿಯ ಸರ್ವ ಸದಸ್ಯರ ಸಭೆಯಲ್ಲಿ ಪ್ರತಿಭಾ ಪುರಸ್ಕಾರ ನೀಡಿ, ಅಭಿನಂದಿಸಲಾಯಿತು.

'ಪ್ರಾಮಾಣಿಕತೆಯೇ ಮೂಲಮಂತ್ರ ಆಗಲಿ'

ಯಲಹಂಕ: ಪಾರದರ್ಶಕತೆ, ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆ ಸಹಕಾರ ಸಂಸ್ಥೆಗಳ ಮೂಲಮಂತ್ರ ಆಗಿರಬೇಕು ಎಂದು ವಕೀಲ ಎಸ್.ವಿ.ರಾಮಚಂದ್ರಪ್ಪ ಹೇಳಿದರು.

ಜಕ್ಕೂರು ಗ್ರಾಮದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಜಕ್ಕೂರು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ 5ನೇ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಅವರು ಮಾತನಾಡಿದರು.

ಸಹಕಾರಿ ಸಂಘಗಳು ಉತ್ತಮರೀತಿಯಲ್ಲಿ ಅಭಿವೃದ್ಧಿ ಹೊಂದಲು ಆಡಳಿತ ಮಂಡಳಿ, ನಿಬ್ಬಂದಿ ಮತ್ತು ಷೇರುದಾರ ಸದಸ್ಯರ ನಡುವೆ ಪರಸ್ಪರ ಸಹಕಾರ ಅತಿಮುಖ್ಯ ಎಂದರು.

ಸಂಘದ ಅಧ್ಯಕ್ಷ ರವಿಕುಮಾರ್ ಮಾತನಾಡಿ, ಸಂಘದಲ್ಲಿ 1,838 ಮಂದಿ ಷೇರುದಾರರಿದ್ದು, ಪ್ರಸ್ತುತ ₹ 6 ಕೋಟಿ ವಹಿವಾಟು ನಡೆಯುತ್ತಿದೆ. ಸೊಸೈಟಿಯಿಂದ ಷೇರುದಾರರಿಗೆ ನೀಡಿರುವ ಸಾಲ ಶೇ 95ರಷ್ಟು ಪ್ರಾಮಾಣಿಕವಾಗಿ ಮರುಪಾವತಿಯಾಗುತ್ತಿದೆ. ಸೊಸೈಟಿಯು ಈ ವರ್ಷ ₹ 9.75 ಲಕ್ಷ ಲಾಭದಲ್ಲಿದೆ ಎಂದು ತಿಳಿಸಿದರು.

ಪಂಜು ಗಂಗೊಳ್ಳಿಗೆ ಪ್ರಶಸ್ತಿ



ಪಂಜು ಗಂಗೊಳ್ಳಿ

ಬೆಂಗಳೂರು: ಕಥೆಕೂಟ ನೀಡುವ 'ಜಿ.ವೆಂಕಟಸುಬ್ಬಯ್ಯ ಭಾಷಾ ಸಮ್ಮಾನ್ ಪುರಸ್ಕಾರ'ಕ್ಕೆ 'ಕುಂದಾಪ್ರ ಕನ್ನಡ' ನಿಘಂಟು ಸಂಪಾದಕ ಪಂಜು ಗಂಗೊಳ್ಳಿ ಆಯ್ಕೆಯಾಗಿದ್ದಾರೆ.

ನಿಘಂಟು ತಜ್ಞ ಜಿ. ವೆಂಕಟಸುಬ್ಬಯ್ಯ ಅವರ ಸ್ಮರಣಾರ್ಥ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು ₹ 10 ಸಾವಿರ ನಗದು ಮತ್ತು ಫಲಕ ಒಳಗೊಂಡಿದೆ. ಭಾಷೆಯಲ್ಲಿ ವಿಶಿಷ್ಟ ಪ್ರಯೋಗಗಳನ್ನು ಮಾಡಿದ, ಭಾಷೆಗೆ ಸೃಜನಶೀಲ ಕೊಡುಗೆ ನೀಡಿದ ಮತ್ತು ಭಾಷೆಯ ಸಾಧ್ಯತೆಗಳನ್ನು ವಿಸ್ತರಿಸುವ ಕೆಲಸದಲ್ಲಿ ನಿರತರಾಗಿರುವ ಪ್ರತಿಭಾವಂತರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ.

ಇದೇ 23ರಂದು ಸಂಜೆ 6ಕ್ಕೆ ಜಯನಗರದ ಜಯರಾಮ ಸೇವಾ ಮಂಡಳಿಯ ಪ್ರೊ. ಜಿವಿ ಜನ್ಮಶತಾಬ್ದಿ ಕಲಾ ಭವನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಸಾಹಿತಿ ಅ.ರಾ. ಮಿತ್ರ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ನಾಗೇಶ ಹೆಗಡೆ ಅವರು ಅಭಿನಂದನಾ ನುಡಿಗಳನ್ನಾಡಲಿದ್ದು, ಗಿರೀಶ್ ರಾವ್ ಹತ್ವಾರ್ (ಜೋಗಿ) ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಕಥೆಕೂಟದ ಮುಖ್ಯಸ್ಥ ಗೋಪಾಲಕೃಷ್ಣ ಕುಂಟಿನಿ ತಿಳಿಸಿದ್ದಾರೆ.

ಸಿಪಿಐ ಪಾಲಿಟ್ ಬ್ಯೂರೊ ಸದಸ್ಯ ಅಶೋಕ್ ಧವಳೆ

'ಬೆಂಗಳೂರಿನಲ್ಲಿ ಜೀವನ ದುಬಾರಿ'

ಪ್ರಜಾವಾಣಿ ವಾರ್ತೆ



ಬೆಂಗಳೂರು ನಾಗರಿಕ ಸಮಾವೇಶದಲ್ಲಿ ಎಡದಿಂದ ಸಿಪಿಎಂ ಮುಖಂಡ ವಿ.ಜಿ.ಕೆ. ನಾಯರ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮೀನಾಕ್ಷಿ ಸುಂದರಂ, ಪಾಲಿಟ್ ಬ್ಯೂರೊ ಸದಸ್ಯ ಅಶೋಕ್ ಧವಳೆ, ರಾಜ್ಯ ಸಮಿತಿ ಸದಸ್ಯ ವಸಂತ್ ರಾಜು, ಮಂಜುನಾಥ್ ಭಾಗವಹಿಸಿದ್ದರು. ಪ್ರಜಾವಾಣಿ ಚಿತ್ರ

ಬೆಂಗಳೂರು: 'ದೇಶದ ಬೇರೆ ನಗರಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ಜೀವನ ನಿರ್ವಹಣೆ ವೆಚ್ಚ ಅಧಿಕವಾಗಿದೆ' ಎಂದು ಸಿಪಿಐ ಪಾಲಿಟ್ ಬ್ಯೂರೊ ಸದಸ್ಯ ಅಶೋಕ್ ಧವಳೆ ಹೇಳಿದರು.

ನಗರದಲ್ಲಿ ಭಾನುವಾರ ಸಿಪಿಎಂ ಐಟಿ ಫ್ರಂಟ್ ಲೋಕಲ್ ಕಮಿಟಿ ಆಯೋಜಿಸಿದ್ದ 'ಬೆಂಗಳೂರು ನಾಗರಿಕರ ಸಮಾವೇಶ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ಒಂದು ಬಾಡಿಗೆ ಮನೆ ಪಡೆಯಬೇಕಾದರೆ 10 ತಿಂಗಳ ಬಾಡಿಗೆಯನ್ನು ಮುಂಗಡ ಪಾವತಿಸಬೇಕು. ಆದರೆ, ಮುಂಬೈ ಮತ್ತು ದೆಹಲಿಯಂತಹ ಮಹಾ ನಗರಗಳಲ್ಲಿ ಕೇವಲ ಮೂರು ನಾಲ್ಕು ತಿಂಗಳ ಬಾಡಿಗೆ ಮುಂಗಡವಾಗಿ ಪಡೆದುಕೊಳ್ಳುತ್ತಾರೆ. ಈ ಎರಡು ನಗರಗಳಿಗೆ ಹೋಲಿಸಿದರೆ ಬೆಂಗಳೂರು ಅತೀ ಹೆಚ್ಚು ಬಾಡಿಗೆ ಪಡೆಯುವ ನಗರವಾಗಿ ಮಾರ್ಪಟ್ಟಿದೆ' ಎಂದರು.

'ನಗರದ ಐಟಿ ಕಂಪನಿಗಳಲ್ಲಿ ಹೊಸದಾಗಿ ಸೇರುವ ಉದ್ಯೋಗಿಗಳಿಗೆ ₹ 20 ಸಾವಿರ ವೇತನ ನೀಡಲಾಗುತ್ತದೆ. ಇದರಲ್ಲಿ ಶೇ 60ಕ್ಕಿಂತ ವೇತನವನ್ನು ಬಾಡಿಗೆ, ಸಾರಿಗೆ, ಆರೋಗ್ಯ ಮತ್ತು ಶಿಕ್ಷಣಕ್ಕೆ ವೆಚ್ಚ ಮಾಡುವ ಸ್ಥಿತಿ ಇದೆ. ಸರ್ಕಾರ ಈ ಸಮಸ್ಯೆಗಳನ್ನು ಪರಿಹರಿಸಬೇಕು' ಎಂದು ಒತ್ತಾಯಿಸಿದರು.

'ದೇಶದಲ್ಲಿ 1991ರಲ್ಲಿ ಜಾರಿಯಾದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತಿಕರಣ ಎಂಬ ಹೊಸ ಆರ್ಥಿಕ ನೀತಿಯಿಂದ ಬಂಡವಾಳಶಾಹಿಗಳ ಅಭಿವೃದ್ಧಿಗೆ ನಾಂದಿ ಯಾಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಂಬಾನಿ, ಅದಾನಿ ಸೇರಿ ಬಹುರಾಷ್ಟ್ರೀಯ ಕಂಪನಿಗಳು ಸಾರ್ವಜನಿಕ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆ ಪೂರಕ ಪರಿಸರ ನಿರ್ಮಿಸಲು ಶ್ರಮಿಸುತ್ತಿವೆ. ಆದರೆ, ಜನಸಾಮಾನ್ಯರ ಜೀವನಮಟ್ಟ ಸುಧಾರಣೆ ಕಡೆಗೆ ಗಮನ ಹರಿಸುತ್ತಿಲ್ಲ' ಎಂದು ದೂರಿದರು.

'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಕಡಿಮೆ ಇದ್ದರೂ, ದೇಶದಲ್ಲಿ ಒಂದು ಲೀಟರ್ ಪೆಟ್ರೋಲ್ ದರ ₹ 100 ಗಡಿ ದಾಟಿದೆ. ಅದರಲ್ಲಿ ಶೇ 65 ರಷ್ಟು ತೆರಿಗೆ ವಿಧಿಸಿ ಮಾರಾಟ ಮಾಡಲಾಗುತ್ತಿದೆ. 2018ರಿಂದ 2021ರವರೆಗೆ ಒಟ್ಟು ₹ 8.02 ಲಕ್ಷ ಕೋಟಿ ಹಣ ಸಂಗ್ರಹಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವರೇ ಮಾಹಿತಿ ನೀಡಿದ್ದಾರೆ' ಎಂದು ತಿಳಿಸಿದರು.

'ಟೊಟೊ ಪುರಸ್ಕಾರ'ಕ್ಕೆ ಕೃತಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ಸೃಜನಶೀಲ ಯುವ ಬರಹಗಾರರಿಗೆ ಮೀಸಲಾದ 'ಟೊಟೊ ಪುರಸ್ಕಾರ'ಕ್ಕೆ ಸಾಹಿತ್ಯ ಕೃತಿಗಳನ್ನು ಆಹ್ವಾನಿಸಲಾಗಿದೆ.


ಈ ಪ್ರಶಸ್ತಿಯನ್ನು ಟಿ.ಎಫ್.ಎ. (ಟೊಟೊ ಫಂಡ್ಸ್ ದಿ ಆರ್ಟ್ಸ್) ಸ್ಥಾಪಿಸಿದೆ. ಸೃಜನಶೀಲ ಯುವ ಬರಹಗಾರರಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ಈ ಪುರಸ್ಕಾರ ಸ್ಥಾಪಿಸಲಾಗಿದ್ದು, ನಗದು ಬಹುಮಾನವನ್ನು ₹ 60 ಸಾವಿರಕ್ಕೆ ಏರಿಕೆ ಮಾಡಲಾಗಿದೆ.

ಭಾರತೀಯ ನಾಗರಿಕರಿಗೆ ಮಾತ್ರ ಅವಕಾಶ ಇರಲಿದ್ದು, ಬರಹಗಾರರು 18 ರಿಂದ 29 ವರ್ಷ ವಯಸ್ಸಿನವರಾಗಿರಬೇಕು. ಕಥೆ, ಕವಿತೆ ಅಥವಾ ನಾಟಕ ಪ್ರಕಾರದಲ್ಲಿ ಪ್ರವೇಶಗಳನ್ನು ಕಳಿಸಬಹುದು. ಈ ಮೂರು ಪ್ರಕಾರಗಳಿಂದ ಒಬ್ಬರನ್ನು ಪುರಸ್ಕಾರಕ್ಕೆ ಆಯ್ಕೆ ಮಾಡಲಾಗುತ್ತದೆ.

ಪ್ರವೇಶಗಳನ್ನು ಕಳುಹಿಸಲು ಸೆ.20 ಕೊನೆ ದಿನವಾಗಿದ್ದು, ವಿವರಗಳಿಗೆ http://totofundsthearts.blogspot.in/ ನೋಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಗಾಯನ ಸಮಾಜ: ಸಮ್ಮೇಳನ ಅಧ್ಯಕ್ಷರಾಗಿ ವಿದ್ಯಾಭೂಷಣ

ಪ್ರಜಾವಾಣಿ ವಾರ್ತೆ



ವಿದ್ಯಾಭೂಷಣ

ಬೆಂಗಳೂರು: ಬೆಂಗಳೂರು ಗಾಯನ ಸಮಾಜದ 53ನೇ ಸಂಗೀತ ಸಮ್ಮೇಳನಾಧ್ಯಕ್ಷರಾಗಿ ಗಾಯಕ ವಿದ್ಯಾಭೂಷಣ ಆಯ್ಕೆಯಾಗಿದ್ದಾರೆ.

ಅ.29ರಿಂದ ನ.5ರವರೆಗೆ ಸಂಗೀತ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಏಳು ದಿನಗಳು ನಡೆಯುವ ಈ ಸಮ್ಮೇಳನವು ವಿದ್ಯಾಭೂಷಣ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಅವರಿಗೆ 'ಸಂಗೀತ ಕಲಾರತ್ನ' ಬಿರುದನ್ನೂ ಪ್ರದಾನ ಮಾಡಲಾಗುತ್ತದೆ. ಇದು ₹ 50 ಸಾವಿರ ನಗದು ಒಳಗೊಂಡಿದೆ.

ನಾಡಿನ ಪ್ರಸಿದ್ಧ ಪಿಟೀಲು ವಾದಕ ಎಚ್.ಕೆ. ನರಸಿಂಹಮೂರ್ತಿ ಅವರಿಗೆ 'ಕರ್ನಾಟಕ ಕಲಾಚಾರ್ಯ' ಮತ್ತು ಮೃದಂಗ ವಾದಕ ಎಸ್.ವಿ. ಗಿರಿಧರ್, ನಾದಸ್ವರ ಕಲಾವಿದ ಲಕ್ಷ್ಮಣ್, ಕೊಳಲು ವಾದಕ ಬಿ.ಜಿ. ಶ್ರೀನಿವಾಸ್ ಹಾಗೂ ಚಿಂತನಪಲ್ಲಿ ರಮೇಶ್ ಅವರಿಗೆ 'ಶ್ರೀ ಕಲಾಜ್ಯೋತಿ' ಬಿರುದು ನೀಡಿ ಗೌರವಿಸಲಾಗುವುದು.

ಸಮ್ಮೇಳನದಲ್ಲಿ ವಿದ್ವಾಂಸರಿಂದ ಭಾಷಣ, ಚರ್ಚಾಗೋಷ್ಠಿ ಹಾಗೂ ಕಲಾವಿದರಿಂದ ಸಂಗೀತ ಕಛೇರಿಗಳು ನಡೆಯಲಿವೆ ಎಂದು ಬೆಂಗಳೂರು ಗಾಯನ ಸಮಾಜದ ಅಧ್ಯಕ್ಷ ಎಂ.ಆರ್.ವಿ. ಪ್ರಸಾದ್ ತಿಳಿಸಿದ್ದಾರೆ.

ಕನ್ನಡ ನಿರ್ಲಕ್ಷ್ಯ: ರಾಜ್ಯ ಕ್ರಿಕೆಟ್ ಸಂಸ್ಥೆಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಕನ್ನಡ ಕಡೆಗಣಿಸಲಾಗುತ್ತಿದೆ ಎಂಬ ಕಾರಣಕ್ಕೆ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ಗೆ (ಕೆಎಸ್‌ಸಿಎ) ಕನ್ನಡ ಅಭಿವೃದ್ಧಿ ಪ್ರಾಧಿಕಾರ ನೋಟಿಸ್ ನೀಡಿದೆ.

'ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ಆಡಳಿತದ ಎಲ್ಲಾ ಹಂತದಲ್ಲೂ ಕನ್ನಡ ಅನುಷ್ಠಾನಗೊಳಿಸಬೇಕು ಎವುದು ಸರ್ಕಾರದ ಆಶಯ. ಕನ್ನಡ ಭಾಷೆ ಬಳಕೆಗೆ ಸಂಬಂಧಿಸಿದಂತೆ ಸರ್ಕಾರವು ಸಾಕಷ್ಟು ಆದೇಶ ಮತ್ತು ಸುತ್ತೋಲೆಗಳನ್ನು ಹೊರಡಿಸಿದೆ. ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರ ಸ್ವಾಮ್ಯದ ಉದ್ಯಮಗಳು, ಕಾರ್ಖಾನೆಗಳು, ಖಾಸಗಿ ಸಂಸ್ಥೆಗಳು, ಬ್ಯಾಂಕುಗಳು ಆಯಾ ರಾಜ್ಯ ಭಾಷೆಯಲ್ಲಿ ವ್ಯವಹರಿಸಬೇಕು. ಸರ್ಕಾರ ರೂಪಿಸಿದ ಎಲ್ಲಾ ನಿಯಮಗಳನ್ನು ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳು ಪಾಲಿಸುವುದು ಕಡ್ಡಾಯ. ಆದರೆ, ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಕನ್ನಡ ಕಡೆಗಣಿಸುತ್ತಿರುವ ಬಗ್ಗೆ ದೂರುಗಳು ಬಂದಿವೆ' ಎಂದು ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ತಿಳಿಸಿದ್ದಾರೆ.

'ಮಹಾರಾಜ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಗೆ ಸಂಬಂಧಿಸಿದಂತೆ ಆ.11ರಂದು ನಡೆಸಲಾದ ಸುದ್ದಿಗೋಷ್ಠಿಯಲ್ಲಿ ಕನ್ನಡದ ನಾಮಫಲಕ ಹಾಕಿರಲಿಲ್ಲ. ಕನ್ನಡದಲ್ಲಿ ಮಾತನಾಡದೆ ಕನ್ನಡ ಕಡೆಗಣಿಸಲಾಗಿದೆ. ಆಟಗಾರರ ಹರಾಜು ಪ್ರಕ್ರಿಯೆ ಸೇರಿ ವಿವಿಧ ಕಾರ್ಯಕ್ರಮಗಳಲ್ಲಿಯೂ ಕನ್ನಡಕ್ಕೆ ಆದ್ಯತೆ ನೀಡಿಲ್ಲ. ಈ ಬಗ್ಗೆ ಟೀಕೆ ವ್ಯಕ್ತವಾಗಿದೆ. ಕಾರ್ಯಕ್ರಮಗಳು ಆಂಗ್ಲಮಯವಾಗಿರುವುದು ವಿಷಾದನೀಯ' ಎಂದು ಹೇಳಿದ್ದಾರೆ.

'ಈ ನೆಲದ ಸಂಪನ್ಮೂಲಗಳನ್ನು ಬಳಸಿಕೊಂಡು, ಕರ್ನಾಟಕದಲ್ಲಿ ಅಸ್ತಿತ್ವ ಪಡೆದುಕೊಂಡಿರುವ ಅಸೋಸಿಯೇಷನ್ ಕನ್ನಡ ಕಡೆಗಣಿಸುತ್ತಿರುವುದು ಅಕ್ಷಮ್ಯ. ಆದ್ದರಿಂದ ಏಳು ದಿನಗಳ ಒಳಗೆ ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕು' ಎಂದು ತಿಳಿಸಿದ್ದಾರೆ.

'ಎನ್‌ಎಲ್‌ಟಿಗೆ ಕೇಂದ್ರ ಮನ್ನಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಪೂರ್ಣ ಸ್ವರಾಜ್ ಫೌಂಡೇಶನ್' ಅಭಿವೃದ್ಧಿಪಡಿಸಿರುವ ದಿಕ್ಸೂಚಿ ಕಲಿಕಾ ತಂತ್ರಜ್ಞಾನಕ್ಕೆ (ಎನ್‌ಎಲ್‌ಟಿ) ಕೇಂದ್ರದ ಪಂಚಾಯತ್‌ರಾಜ್ ಸಚಿವಾಲಯ ಮಾನ್ಯತೆ ನೀಡಿದ್ದು, ಗ್ರಾಮ ಪಂಚಾಯಿತಿ ಸದಸ್ಯರಿಗೆ ತರಬೇತಿ ನೀಡುವಲ್ಲಿ ಅದನ್ನು ಬಳಸಿಕೊಳ್ಳಲು ಮುಂದಾಗಿದೆ.

ಆಗಸ್ಟ್ 24ರಂದು ಕೇಂದ್ರ ಪಂಚಾಯತ್‌ರಾಜ್ ಸಚಿವಾಲಯವು ರಾಷ್ಟ್ರಮಟ್ಟದ ವರ್ಚುವಲ್ ಸಭೆ ಆಯೋಜಿಸಿದೆ. ಗ್ರಾಮ ಪಂಚಾಯಿತಿಗಳ ಸಾಮರ್ಥ್ಯ ವೃದ್ಧಿಗೆ ದಿಕ್ಸೂಚಿ ಕಲಿಕಾ ತಂತ್ರಜ್ಞಾನವನ್ನು ಬಳಸಿಕೊಳ್ಳಲು ಅದು ಶಿಫಾರಸು ಮಾಡಿದೆ ಎಂದು ಪ್ರಕಟಣೆ ತಿಳಿಸಿದೆ.

ವರ್ಚುವಲ್ ಸಭೆಯಲ್ಲಿ ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಕರ್ನಾಟಕದ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಸಂಪೂರ್ಣ ಸ್ವರಾಜ್ ಫೌಂಡೇಶನ್, ಎನ್‌ಐಸಿ ಸಪೋರ್ಟ್ ಮತ್ತು ಕೇರಳದ ಕೇರಳ ಸ್ಥಳೀಯ ಆಡಳಿತ ಸಂಸ್ಥೆ (ಕಿಲಾ) ಪಾಲ್ಗೊಳ್ಳಲಿವೆ ಎಂದು ಹೇಳಿದೆ.

ಜಾಗತಿಕ ಭಾಷೆಗಳ ಕೋರ್ಸ್ ಪ್ರವೇಶಕ್ಕೆ ಬಿಸಿಯು ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ (ಬಿಸಿಯು) ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಜಪಾನಿ, ಚೀನಿ, ಕೊರಿಯಾ, ಇಟಾಲಿಯನ್ ಮತ್ತು ಪೋರ್ಚುಗೀಸ್ ಸೇರಿ ಜಾಗತಿಕ ಭಾಷೆಗಳ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಬಿಸಿಯು ಜಾಗತಿಕ ಭಾಷೆಗಳ ವಿಭಾಗ, ಪ್ರಸನ್ನ ಕುಮಾರ್ ಬ್ಲಾಕ್, ಸೆಂಟ್ರಲ್ ಕಾಲೇಜು ಆವರಣ, ಅರಮನೆ ರಸ್ತೆ, ಬೆಂಗಳೂರು-560009 ನಲ್ಲಿ ಪಡೆದುಕೊಳ್ಳಬೇಕು. ಸೆಪ್ಟೆಂಬರ್ 10ರೊಳಗೆ ಅರ್ಜಿಗಳನ್ನು ಸಲ್ಲಿಸಬಹುದು. ಮಾಹಿತಿಗೆ: 080-29572019, 8095588190 ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು


ನಾಗರ ಪಂಚಮಿ, ಗಂಗಮ್ಮ ದೇವಿ ಜಾತ್ರೆ, ಕರಗ ವಾರ್ಷಿಕೋತ್ಸವ: ನಾಗಪಂಚಮಿ ಹಾಗೂ ಗಂಗಮ್ಮ ದೇವಿ ಜಾತ್ರೆ, ಎಲ್ಲ ದೇವರಿಗೆ ವಿಶೇಷ ಪೂಜೆ, ಗಣಹೋಮ, ಬೆಳಿಗ್ಗೆ 7.30ಕ್ಕೆ, ಮಹಾಪೂರ್ಣಾಹುತಿ, ಅನ್ನದಾನ ಮಧ್ಯಾಹ್ನ 12ಕ್ಕೆ, ಭಕ್ತಿಗೀತೆ: ಸೆಲ್ವಕುಮಾರಿ ಬಿ.ಆರ್., ಗಂಗಾಭವಾನಿ ಭಜನಾ ಮಂಡಳಿ, ಆಯೋಜನೆ ಮತ್ತು ಸ್ಥಳ: ಪಾತಾಳ ಪಂಚನಾಗೇಂದ್ರಸ್ವಾಮಿ ಮತ್ತು ದೇವಸ್ಥಾನ, ಮಹಾಲಕ್ಷ್ಮಿಪುರ

ವಚನ ಶ್ರಾವಣ–2023: ವಚನ ಗಾಯನ: ಎಸ್. ಪಿನಾಕಪಾಣಿ, ವಚನ ಚಿಂತನ: ಮಹೇಶ್ ಸುಂಕದಕಟ್ಟೆ, ಅಧ್ಯಕ್ಷತೆ: ಸದಾಶಿವ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗಂಗೊಂಡನಹಳ್ಳಿ, ಲಕ್ಷ್ಮಿಪುರ ಅಂಚೆ, ಬೆಳಿಗ್ಗೆ 9.30

ವಿಶೇಷ ಕಾರ್ಯಕ್ರಮ: ಅತಿಥಿಗಳು: ಪ್ರಿಯಾಂಕ್ ಖರ್ಗೆ, ಕೆ. ರತ್ನಪ್ರಭಾ, ಶಶಿಕಲಾ ಗುರ್ಪುರ್, 'ಮಹಿಳಾ ಸಾಧಕಿ ಪ್ರಶಸ್ತಿ ಪ್ರದಾನ': ದಿನೇಶ್ ಗುಂಡೂರಾವ್, ರವಿಕುಮಾರ್ ಪಿ., ಆಯೋಜನೆ: ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವಾಲಯ, ಸ್ಥಳ: ತಾಜ್ ಹೋಟೆಲ್, ಯಶವಂತಪುರ, ಬೆಳಗ್ಗೆ 9.30ರಿಂದ

'ಸಂಪೂರ್ಣ ರಾಮಾಯಣ' ನಾಟಕ ಪ್ರದರ್ಶನ: ಉದ್ಘಾಟನೆ: ವಿಶ್ವನಾಥ್ ಪಿ. ಹಿರೇಮಠ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಎಂ. ಜಗದೀಶ್ ಗೌಡ, ಎಂ. ವೆಂಕಟಸ್ವಾಮಿ, ಆರ್. ನರಸೇಗೌಡ, ಆಯೋಜನೆ: ಪ್ರತಿಭಾ ಕಲಾನಿಕೇತನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11.30

ಹಾಡ್ಲಹಳ್ಳಿ ರಂಗೋತ್ಸವ: ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಪ್ರಾಸ್ತಾವಿಕ ನುಡಿ: ಚಲಂ ಹಾಡ್ಲಹಳ್ಳಿ, ಅತಿಥಿಗಳು: ಹಾಡ್ಲಹಳ್ಳಿ ನಾಗರಾಜ್, ಗಿರಿರಾಜ್ ಬಿ.ಎಂ., ಶಿವಕುಮಾರ್ ಜಾಗಟೆ, ಬೇಲೂರು ರಘುನಂದನ್, ಅಕ್ಷತಾ ಪಾಂಡವಪುರ, ಲವ ಕುಮಾರ್, ಕೃಷ್ಣಮೂರ್ತಿ, ಶಿವಾನಂದ ತಗಡೂರು, ಉಲಿವಾಲ ಮೋಹನ್ ಕುಮಾರ್, 'ಕಡವೆಬೇಟೆ' ನಾಟಕ ಪ್ರದರ್ಶನ: ನಿರ್ದೇಶನ: ರತಿ ಎಚ್.ಜಿ., ಆಯೋಜನೆ: ಉಲಿವಾಲ ಸ್ಕೂಲ್ ಆಫ್ ಡ್ರಾಮಾ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6




ಸಿದ್ಧರಾಮಯ್ಯ

'ಬ್ರಹ್ಮಕಪಾಲ, ಲವಕುಶ (ಪಠ ಸಂಧಿ)' ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಗಣಪತಿ ಪ್ರವಾಸಿ ಯಕ್ಷಗಾನ ಮಂಡಳಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 10

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಶಿಕ್ಷಣ

ನಿಮ್ಮನ್ನು ನೀವು ಜಯಿಸಿ ಆಗ ಇಡೀ ಜಗತ್ತೆ ನಿಮ್ಮದಾಗುತ್ತದೆ
– ಸ್ವಾಮಿ ವಿವೇಕಾನಂದ



ಸಾಂದರ್ಭಿಕ ಚಿತ್ರ

ಶ್ರೀಮಂತ ಅವಕಾಶಗಳ ತಾಣ ವಿಎಫ್‌ಎಕ್ಸ್

ಸಿಬಂತಿ ಪದ್ಮನಾಭ ಕೆ. ವಿ.

ಸ್ಪೆಷಲ್

ಡರ್‌ಮ್ಯಾನ್, ಐರನ್‌ಮ್ಯಾನ್, ಅವತಾರ್, ಸ್ಟಾರ್‌ವರ್ಸ್, ಜುರಾಸಿಕ್ ಪಾರ್ಕ್ ಸಿನಿಮಾಗಳ ಹೆಸರು ಕೇಳದವರಿಲ್ಲ. ಬಾಹುಬಲಿ, ಕೆಜಿಎಫ್, ವಿಕ್ರಾಂತ್ ರೋಣ, 777 ಚಾರ್ಲಿ ಚಲನಚಿತ್ರಗಳ ದೃಶ್ಯಪರಿಣಾಮಗಳಿಗೆ ಮಾರುಹೋಗದವರಿಲ್ಲ. ಅಬ್ಬಾ! ಏನು ಅದ್ದೂರಿ ನಿರ್ಮಾಣ! ಏನು ಅದ್ಭುತ ಪ್ರೊಡಕ್ಷನ್! ಎಂದೆಲ್ಲ ವಿಸ್ಮಯಪಟ್ಟುಕೊಳ್ಳದವರಿಲ್ಲ.

ಬಾಹುಬಲಿ ಸಿನಿಮಾದಲ್ಲಿ ಬಲ್ಲಾಳದೇವ 'ಕೋಣನ ಜೊತೆ' ಗುದ್ದಾಡುವುದು, ಬಾಹುಬಲಿ ಜಲಪಾತ ದಾಟುತ್ತಾ, ಬೆಟ್ಟದಿಂದ ಬೆಟ್ಟಕ್ಕೆ ಜಿಗಿಯುವುದು, ಬಾಜಿರಾವ್ ಮಸ್ತಾನಿ ಸಿನಿಮಾದಲ್ಲಿ ಶತಮಾನಗಳ ಹಿಂದೆ ನಡೆದಿರುವ ಘಟನೆಗಳನ್ನು ಮರುಸೃಷ್ಟಿ.. ಇಂಥ ಅದ್ಭುತ ದೃಶ್ಯಗಳ ನಿರ್ಮಾಣದ ಹಿಂದೆ ಅಡಗಿರುವುದು 'ವಿಎಫ್‌ಎಕ್ಸ್' ಎಂಬ ತಾಂತ್ರಿಕ ಚಮತ್ಕಾರ.

ವಿಎಫ್‌ಎಕ್ಸ್‌ನ ಚಮತ್ಕಾರವೇ ಅಂಥದ್ದು. ಸಣ್ಣಮಕ್ಕಳಿಂದ ತೊಡಗಿ ವಯೋವೃದ್ಧರವರೆಗೆ ಎಲ್ಲರನ್ನೂ ಸೆಳೆಯಬಲ್ಲ ದೊಡ್ಡ ಆಕರ್ಷಣೆ ಅದು.

ವಿಎಫ್‌ಎಕ್ಸ್ ಇಂದು ಜಾಗತಿಕ ಚಲನಚಿತ್ರರಂಗದ ಅವಿಭಾಜ್ಯ ಅಂಗವೆನಿಸಿದೆ. ಕೆಲವು ವರ್ಷಗಳ ಹಿಂದೆ ಈ ಬಗೆಯ ಸಿನಿಮಾಗಳನ್ನು ನೋಡಬೇಕೆಂದರೆ ಹಾಲಿವುಡ್ ಕಡೆಗೆ ತಿರುಗಬೇಕಿತ್ತು. ಈಗ ಬಾಲಿವುಡ್, ಸ್ಯಾಂಡಲ್‌ವುಡ್ ಎಲ್ಲೆಡೆಯೂ ಇದು ಹಬ್ಬಿಕೊಂಡಿದೆ. ದೊಡ್ಡ ಬಜೆಟ್‌ನ ಬೆಂಬಲ ಇರುವವರು ಎಂತಹ ಅದ್ದೂರಿ ಚಿತ್ರಗಳನ್ನಾದರೂ ನಿರ್ಮಿಸುವುದಕ್ಕೆ ಇಂದು ತಂತ್ರಜ್ಞಾನ ಸಿದ್ಧವಾಗಿ ಕುಳಿತಿದೆ. ತಂತ್ರಜ್ಞಾನದ ಜಾಗತೀಕರಣದ ಹೊಸ ಸಾಧ್ಯತೆಯಿದು.

2022ರಲ್ಲಿ ಜಾಗತಿಕ ವಿಎಫ್‌ಎಕ್ಸ್ ಉದ್ಯಮದ ಒಟ್ಟಾರೆ ಗಾತ್ರ 9.95 ಬಿಲಿಯನ್ ಡಾಲರ್‌ಗಳಷ್ಟು ಇತ್ತು. ಇದು ಶೇ 10ರ ಪ್ರಮಾಣದಲ್ಲಿ ಬೆಳೆಯುತ್ತಾ 2028ರ ವೇಳೆಗೆ 18.02 ಬಿಲಿಯನ್ ಡಾಲರ್‌ಗೆ ಹಿಗ್ಗಬಹುದು ಎಂದು ಅಂದಾಜಿಸಲಾಗಿದೆ. ಕೇವಲ ಭಾರತವನ್ನಷ್ಟೇ ಗಮನದಲ್ಲಿ ಇಟ್ಟುಕೊಂಡರೂ ಕಳೆದ ವರ್ಷ ವಿಎಫ್‌ಎಕ್ಸ್ ರಂಗದ ಗಾತ್ರ ₹ 107 ಬಿಲಿಯನ್ (₹10,700 ಕೋಟಿ)ಇತ್ತು. ಗುಣಮಟ್ಟದ ಮಾನವ ಸಂಪನ್ಮೂಲ, ದುಬಾರಿಯಲ್ಲದ ವೇತನ ನಿರೀಕ್ಷೆಗಳಿಂದಾಗಿ ಭಾರತವು ವಿಎಫ್‌ಎಕ್ಸ್ ಉದ್ಯಮದ ಪ್ರಮುಖ ಆಕರ್ಷಣೆಗಳಲ್ಲಿ ಒಂದೆನಿಸಿದೆ.

ಉದ್ಯೋಗ ಸಾಧ್ಯತೆ

ಯಾವುದೇ ರಂಗ ಇಷ್ಟು ವಿಸ್ತಾರವಾಗಿ ಬೆಳೆದಿದೆ ಎಂದರೆ ಅದು ಅಷ್ಟೇ ದೊಡ್ಡ ಉದ್ಯೋಗ ಸಾಧ್ಯತೆಗಳನ್ನೂ ಒಳಗೊಂಡಿದೆ ಎಂದು ಅರ್ಥ. ಇದು ವಿಎಫ್‌ಎಕ್ಸ್ ಕೋರ್ಸ್ ಮತ್ತು ಕೌಶಲಕ್ಕೂ ಅನ್ವಯಿಸುತ್ತದೆ. ಈ ವಿಎಫ್‌ಎಕ್ಸ್ ತಂತ್ರಜ್ಞಾನ ಇಂದು ಕೇವಲ ಸಿನಿಮಾ ಉದ್ಯಮವಷ್ಟೇ ಅಲ್ಲ, ಟಿವಿ ಸರಣಿಗಳು, ಜಾಹೀರಾತುಗಳು, ಆನ್‌ಲೈನ್ ವೀಡಿಯೊಗಳು, ಗೇಮಿಂಗ್ ಉದ್ಯಮ- ಎಲ್ಲವಕ್ಕೂ ವಿಸ್ತರಿಸಿಕೊಂಡಿದೆ. ಕೋವಿಡ್ ಸಂದರ್ಭದಲ್ಲಿ ಒಮ್ಮೆ ಉದ್ಯಮಕ್ಕೆ ಹೊಡೆತ ಬಿತ್ತಾದರೂ ಅದು ಮುಂದಿನ ಹಂತದಲ್ಲಿ ವರವಾಗಿ ಪರಿಣಮಿಸಿತು ಎಂದು ಈ ಕ್ಷೇತ್ರದ ಪರಿಣಿತರು ಅಭಿಪ್ರಾಯಪಡುತ್ತಾರೆ.

ಕೋವಿಡ್ ಸಂದರ್ಭದಲ್ಲಿ ಹಿಗ್ಗಿದ ಆನ್‌ಲೈನ್ ಸಾಧ್ಯತೆಗಳಿಂದಾಗಿ ವಿಎಫ್‌ಎಕ್ಸ್ ಹಾಗೂ ಅನಿಮೇಶನ್ ರಂಗ ದೊಡ್ಡಮಟ್ಟದಲ್ಲಿ ಬೆಳೆಯಿತು. ಅದರಲ್ಲೂ ಒಟಿಟಿ ಕ್ಷೇತ್ರಕ್ಕೆ(over the top)ಉಂಟಾದ ಅಪಾರ ಬೇಡಿಕೆಯಿಂದಾಗಿ ವಿಎಫ್‌ಎಕ್ಸ್ ಉದ್ಯಮ ಹಲವು ಪಟ್ಟುಗಳಲ್ಲಿ ಬೆಳೆದಿದೆ. ಹೀಗಾಗಿ ವಿಎಫ್‌ಎಕ್ಸ್ ತಂತ್ರಜ್ಞರಿಗೆ ಇನ್ನಿಲ್ಲದ ಅವಕಾಶಗಳು ಹುಟ್ಟಿಕೊಂಡಿವೆ. ಇದಕ್ಕೆ ಸರಿಸಮನಾಗಿ ವಿಎಫ್‌ಎಕ್ಸ್ ಶಿಕ್ಷಣ ಮತ್ತು ತರಬೇತಿ, ಸಂಬಂಧಿಸಿದ ಕೋರ್ಸುಗಳು ಲಭ್ಯವಿವೆ.

> ಮನರಂಜನಾ ಕ್ಷೇತ್ರ ಆನ್‌ಲೈನ್ ವೇದಿಕೆ ಏರಿದ ಮೇಲೆ ವಿಶ್ಯುವೆಲ್ ಎಫೆಕ್ಟ್ಸ್(ವಿಎಫ್‌ಎಕ್ಸ್) ಹಾಗೂ ಅನಿಮೇಶನ್ ರಂಗ ದೊಡ್ಡಮಟ್ಟದಲ್ಲಿ ಬೆಳೆಯಿತು. ಒಟಿಟಿ ಕ್ಷೇತ್ರಕ್ಕೆ(over the top) ಬೇಡಿಕೆ ಹೆಚ್ಚಿದ ಮೇಲೆ ವಿಎಫ್‌ಎಕ್ಸ್ ಉದ್ಯಮ ಹಲವು ಪಟ್ಟುಗಳಲ್ಲಿ ವಿಸ್ತರಿಸಿದೆ. ಹೀಗಾಗಿ ವಿಎಫ್‌ಎಕ್ಸ್ ತಂತ್ರಜ್ಞರಿಗೆ ಇನ್ನಿಲ್ಲದ ಅವಕಾಶಗಳು ಹುಟ್ಟಿಕೊಂಡಿವೆ. ಇದಕ್ಕೆ ಸರಿಸಮನಾಗಿ ವಿಎಫ್‌ಎಕ್ಸ್ ಶಿಕ್ಷಣ ಮತ್ತು ತರಬೇತಿ, ಸಂಬಂಧಿಸಿದ ಕೋರ್ಸುಗಳು ಲಭ್ಯವಿವೆ.



ಸಾಂದರ್ಭಿಕ ಚಿತ್ರ

ಏನಿದು ಕೋರ್ಸ್

ವಿಎಫ್‌ಎಕ್ಸ್ ಕೋರ್ಸುಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಜನಪ್ರಿಯವೆನಿಸಿವೆ. ವಿಎಫ್‌ಎಕ್ಸ್ ಸಂಬಂಧಿಸಿದ ಸರ್ಟಿಫಿಕೇಟ್, ಡಿಪ್ಲೊಮಾ, ಸ್ನಾತಕ ಹಾಗೂ ಸ್ನಾತಕೋತ್ತರ ಹಂತದ ಕೋರ್ಸುಗಳನ್ನು ಈಗ ವಿವಿಧ ಸಂಸ್ಥೆಗಳು ಒದಗಿಸುತ್ತಿವೆ.

ವಿಎಫ್‌ಎಕ್ಸ್ ಅನೇಕ ಆಯಾಮಗಳ ಒಂದು ಕೋರ್ಸ್. ಅನಿಮೇಶನ್, ವಿಶುವಲ್ ಎಫೆಕ್ಟ್ಸ್, ಗ್ರಾಫಿಕ್ ಡಿಸೈನಿಂಗ್, ಕಾರ್ಟೂನ್, ಗೇಮ್ಸ್- ಹೀಗೆ ಹಲವು ಕೌಶಲಗಳ ಗುಚ್ಛವನ್ನೇ ವಿಎಫ್‌ಎಕ್ಸ್ ಒದಗಿಸುತ್ತದೆ. ಈ ವಿಷಯಗಳನ್ನು ಪ್ರತ್ಯೇಕವಾಗಿಯೂ ಕಲಿಯಬಹುದು, ಒಟ್ಟಾಗಿಯೂ ಕಲಿಯಬಹುದು ಎಂಬುದೇ ಇದರ ವಿಶೇಷತೆ. ನಾವು ಯಾವ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿ ಅದರಲ್ಲಿ ನೈಪುಣ್ಯತೆ ಸಾಧಿಸುತ್ತೇವೋ ಆ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣಬಹುದು.

ವಿಎಫ್‌ಎಕ್ಸ್ ಕೋರ್ಸ್‌ಗಳನ್ನು ಪೂರೈಸಿದವರು ವೆಬ್‌ಡಿಸೈನರ್, ಗ್ರಾಫಿಕ್ ಡಿಸೈನರ್, ಮಲ್ಟಿಮೀಡಿಯಾ ಪ್ರೋಗ್ರಾಮರ್, 3ಡಿ ಮಾಡೆಲರ್, ವಿಡಿಯೊ ಎಡಿಟರ್, 2ಡಿ/3ಡಿ ಅನಿಮೇಟರ್, ಗೇಮ್ ಡೆವಲಪರ್ ಆಗಿ ಉದ್ಯೋಗಗಳನ್ನು ಪಡೆಯಬಹುದು. ವೇತನ ಹಾಗೂ ಹುದ್ದೆಯಲ್ಲಿ ಬಹುಬೇಗನೆ ಭಡ್ತಿ ಪಡೆಯುತ್ತಾ ಹೋಗುವುದು ಈ ರಂಗದ ಇನ್ನೊಂದು ವೈಶಿಷ್ಟ್ಯ. ಮೈಕ್ರೋಸಾಫ್ಟ್, ನಿಕೆಲೋಡಿಯನ್ ಅನಿಮೇಶನ್ ಸ್ಟುಡಿಯೋಸ್, ಹಾಟ್‌ಸ್ಟಾರ್, ಕೆಪಿಎಂಜಿ, ಬ್ಲೂ ಸ್ಕೈ ಸ್ಟುಡಿಯೋಸ್, ವೀಟಾ ಡಿಜಿಟಲ್, ಅಡೋಬ್, ಸನ್‌ರೈಸ್ ಮುಂತಾದವು ವಿಎಫ್‌ಎಕ್ಸ್ ಪದವೀಧರರಿಗೆ ಉದ್ಯೋಗಾವಕಾಶ ನೀಡುವ ಬೃಹತ್ ಕಂಪನಿಗಳಾಗಿವೆ.

ಯಾರು ಕಲಿಯಬಹುದು?

ಚಿತ್ರಕಲೆ, ಕಾರ್ಟೂನಿಂಗ್ ಮೊದಲಾದ ಸೃಜನಶೀಲ ವಿಚಾರಗಳಲ್ಲಿ ಆಸಕ್ತಿಯಿರುವವರಿಗೆ ವಿಎಫ್‌ಎಕ್ಸ್ ಕ್ಷೇತ್ರ ಹೇಳಿಮಾಡಿಸಿದ್ದು. ಕಲೆ, ವಾಣಿಜ್ಯ ಅಥವಾ ವಿಜ್ಞಾನ - ಇಂತಹದೇ ಹಿನ್ನೆಲೆಯಿಂದ ಬಂದಿರಬೇಕು ಎಂಬ ನಿಬಂಧನೆಯೇನೂ ಇಲ್ಲ. ಇಲ್ಲಿ ಹೊಸತನ್ನು ಕಲಿಯುವ ಮತ್ತು ಹೊಸ ಸವಾಲುಗಳನ್ನು ಎದುರಿಸುವ ಮನೋಭಾವ ಉಳ್ಳವರಿಗೆ ಹೆಚ್ಚಿನ ಮನ್ನಣೆ. ಹತ್ತನೇ ತರಗತಿ ತೇರ್ಗಡೆಯಾದವರು ಸರ್ಟಿಫಿಕೇಟ್ ಕೋರ್ಸುಗಳನ್ನು, ಪಿಯುಸಿ ತೇರ್ಗಡೆಯಾದವರು ಡಿಪ್ಲೊಮಾ ಇಲ್ಲವೇ ಪದವಿ ಕೋರ್ಸುಗಳನ್ನು ಮಾಡಬಹುದು. ಔಪಚಾರಿಕ ಡಿಗ್ರಿಗಳ ಹೊರತಾಗಿಯೂ ಆಯಾ ಕ್ಷೇತ್ರ ಬಯಸುವ ತಾಂತ್ರಿಕ ಕೌಶಲ್ಯಗಳನ್ನು ಗಳಿಸಿಕೊಂಡರೆ, ಅಂದರೆ ಅಗತ್ಯ ಸಾಫ್ಟ್‌ವೇರ್‌ಗಳನ್ನು ನಿರ್ವಹಿಸುವ ಸಾಮರ್ಥ್ಯ ಪಡೆದರೆ ಅಂಥವರನ್ನು ಉದ್ಯಮ ತಾನಾಗಿಯೇ ಸ್ವಾಗತಿಸುತ್ತದೆ.

ಸಾಂಪ್ರದಾಯಿಕ ಕೋರ್ಸುಗಳಿಗೆ ಹೋಲಿಸಿದರೆ ವಿಎಫ್‌ಎಕ್ಸ್ ಕೋರ್ಸುಗಳು ತುಸು ಹೆಚ್ಚಿನ ಶುಲ್ಕ ಅಪೇಕ್ಷಿಸುತ್ತವೆ. ₹50 ಸಾವಿರದಿಂದ ₹5 ಲಕ್ಷದವರೆಗೂ ಬೇರೆಬೇರೆ ಹಂತದ ಕೋರ್ಸುಗಳು ಇವೆ. ಬೆಂಗಳೂರು, ಮುಂಬೈ, ಚೆನ್ನೈ, ಪೂನಾ, ನೋಯ್ಡಾ, ಅಹಮದಾಬಾದ್, ದೆಹಲಿ ಮುಂತಾದ ಕಡೆಗಳಲ್ಲಿ ಸಾಕಷ್ಟು ಖಾಸಗಿ ಸಂಸ್ಥೆಗಳು ಉತ್ತಮ ಗುಣಮಟ್ಟದ ವಿಎಫ್‌ಎಕ್ಸ್ ಕೋರ್ಸುಗಳನ್ನು ಒದಗಿಸುತ್ತಿವೆ. ಕೊಂಚ ತುಟ್ಟಿ ಎನಿಸಿದರೂ ಗುಣಮಟ್ಟದ ಸಂಸ್ಥೆಗಳಲ್ಲಿ ಇಂತಹ ತರಬೇತಿಗಳನ್ನು ಪಡೆಯುವುದೇ ಉತ್ತಮ.

(ಲೇಖಕರು ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ)

ಆನ್‌ಲೈನ್ ಕಲಿಕಾ ತಾಣಗಳು

ಇಂದು ಸಾಕಷ್ಟು ಆನ್‌ಲೈನ್ ತಾಣಗಳ ಮೂಲಕ ವಿಎಫ್‌ಎಕ್ಸ್ ಕೌಶಲಗಳನ್ನು ಅಭ್ಯಾಸ ಮಾಡುವುದಕ್ಕೆ ಅವಕಾಶವಿದೆ. ಕೆಲವನ್ನು ಇಲ್ಲಿ ಪಟ್ಟಿ ಮಾಡಲಾಗಿದೆ:


ಯುಡೆಮಿ ಸಂಸ್ಥೆ ಹಲವು ಬಗೆಯ ವಿಎಫ್‌ಎಕ್ಸ್ ಆನ್‌ಲೈನ್ ಕೋರ್ಸುಗಳನ್ನು ಒದಗಿಸುತ್ತದೆ. ಆಫ್ಟರ್ ಎಫೆಕ್ಟ್ಸ್, ಮೋಶನ್ ಗ್ರಾಫಿಕ್ಸ್, ಅನಿಮೇಶನ್, ವಿಡಿಯೊ ಪ್ರೊಡಕ್ಷನ್, ಗೇಮ್ ಡಿಸೈನ್, ಡಿಜಿಟಲ್ ಕಂಪೋಸಿಟಿಂಗ್, ಅನ್‌ರಿಯಲ್ ಎಂಜಿನ್- ಹೀಗೆ ಹಲವು ವಿಷಯಗಳನ್ನು ಪ್ರತ್ಯೇಕವಾಗಿ ಕಲಿಯುವ ಕೋರ್ಸುಗಳೂ ಇಲ್ಲಿವೆ. ನೋಡಿ:https://www.udemy.com/

ವಿಡಿಯೊ ಕಾಪಿಲೋಟ್ ವಿಎಫ್‌ಎಕ್ಸ್ ಕುರಿತ ವಿವಿಧ ಉಚಿತ ಹಾಗೂ ಪಾವತಿ ಕೋರ್ಸುಗಳನ್ನು ಒದಗಿಸುತ್ತದೆ. ವಿವರಗಳಿಗಾಗಿ ಇಲ್ಲಿ ನೋಡಿ: https://www.videocopilot.net/

ನಿರ್ದಿಷ್ಟವಾಗಿ ಸಿನಿಮಾ ಕ್ಷೇತ್ರದ ವಿಶುವಲ್ ಎಫೆಕ್ಟ್ಸ್ ಕುರಿತಾದ ಕೌಶಲಗಳನ್ನು ಅಭ್ಯಾಸ ಮಾಡಲು ಫಿಲಂ ರಯಟ್ ಒಂದು ಉತ್ತಮ ವೇದಿಕೆ. ಇಲ್ಲಿ ವಿವರಗಳನ್ನು ಗಮನಿಸಬಹುದು: https://www.filmriot.com/

ಇನ್ಫೊಸಿಸ್ ಸ್ಪ್ರಿಂಗ್ ಬೋರ್ಡ್ ವಿಎಫ್‌ಎಕ್ಸ್ ಕುರಿತ ಅನೇಕ ಉಚಿತ ಕೋರ್ಸುಗಳನ್ನು ಒಂದೇ ತಾಣದಲ್ಲಿ ಕಲೆಹಾಕಿದೆ. ಅವುಗಳನ್ನು ಇಲ್ಲಿ ತಿಳಿಯಿರಿ: https://infyspringboard.onwingspan.com/web/en/page/home

ಗ್ರಾಫಿಕ್ ಡಿಸೈನ್‌ನಲ್ಲಿ ಉನ್ನತ ಶಿಕ್ಷಣ ಹೇಗೆ?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ನಾನು 2ನೇ ವರ್ಷದ ಬಿಎ ಕೋರ್ಸ್ ಮಾಡುತ್ತಿದ್ದೇನೆ. ನನಗೆ ಐಎಎಸ್ ಮಾಡಬೇಕೆಂಬ ಆಸೆಯಿದೆ. ಆದರೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಎಂಬಿಬಿಎಸ್, ಎಂಜಿನಿಯರಿಂಗ್ ಮಾಡಿದವರೇ ಉತ್ತೀರ್ಣರಾಗುತ್ತಾರೆ; ನಿಮಗೆಲ್ಲಾ ಆಗುವುದಿಲ್ಲಾ ಎಂದು ನನ್ನ ಸ್ನೇಹಿತರು ಹೇಳುತ್ತಾರೆ. ನನಗೆ ಇಂಗ್ಲಿಷ್ ಕಷ್ಟ ಇದೆ. ನಾನು, ಈ ಪರೀಕ್ಷೆ ಬರೆದು ಉತ್ತೀರ್ಣವಾಗಬಹುದೇ?

ಹೆಸರು, ಊರು ತಿಳಿಸಿಲ್ಲ.

ಯುಪಿಎಸ್‌ಸಿ ಕಠಿಣವಾದ ಸ್ಪರ್ಧಾತ್ಮಕ ಪರೀಕ್ಷೆ; ಹಾಗಾಗಿ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸಿರುವ ಅನುಭವ ಯುಪಿಎಸ್‌ಸಿ ಪರೀಕ್ಷೆಗೆ ಸ್ವಲ್ಪ ಮಟ್ಟಿಗೆ ಸಹಾಯವಾಗಬಹುದು; ಆದರೆ ಅದೇ ನಿರ್ಣಾಯಕವಲ್ಲ. ಕಠಿಣವಾದ ಈ ಪರೀಕ್ಷೆಯ ಯಶಸ್ಸಿಗೆ ಸೂಕ್ತವಾದ ಕಾರ್ಯತಂತ್ರ, ಸಾಕಷ್ಟು ಪರಿಶ್ರಮ ಹಾಗೂ ಏಕಾಗ್ರತೆಯಿದ್ದರೆ ಯಾರು ಬೇಕಾದರೂ ಐಎಎಸ್ ಅಧಿಕಾರಿಯಾಗಬಹುದು.
ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ಬಹು ಆಯ್ಕೆ ಮಾದರಿಯಾಗಿರುತ್ತದೆ; ಮುಖ್ಯ ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯಬಹುದು; ಸಂದರ್ಶನವನ್ನು ಕನ್ನಡದಲ್ಲಿ ನೀಡಬಹುದು. ಮೇಲ್ನೋಟಕ್ಕೆ, ಕಲಾ ವಿಭಾಗದ ಅಭ್ಯರ್ಥಿಯಾದ ನಿಮಗೆ ಸಮಾಜ ಶಾಸ್ತ್ರ, ಇತಿಹಾಸ, ಭೂಗೋಳ, ಸಾರ್ವಜನಿಕ ಆಡಳಿತ ಮುಂತಾದ ವಿಷಯಗಳು ಯುಪಿಎಸ್‌ಸಿ ಮುಖ್ಯ ಪರೀಕ್ಷೆಯ ಐಚ್ಛಿಕ ವಿಷಯಗಳ ಆಯ್ಕೆಗೆ ಸೂಕ್ತವಾಗಬಹುದು.
ವಿಷಯ ಯಾವುದಿದ್ದರೂ ಪಠ್ಯಕ್ರಮವನ್ನು ಅರಿತು, ಪುಸ್ತಕಗಳು ಮತ್ತು ಅಧ್ಯಯನದ ಸಾಮಗ್ರಿಯನ್ನು ಸಿದ್ದ ಪಡಿಸಿಕೊಳ್ಳಬೇಕು. ಪ್ರಮುಖವಾಗಿ, ಓದುವಿಕೆ ಪರಿಣಾಮಕಾರಿಯಾಗಿರಬೇಕು. ಇದಕ್ಕೆ ಬೇಕಾದ ಪುಸ್ತಕಗಳನ್ನು ಖರೀದಿಸಿ ಸ್ವತಂತ್ರವಾಗಿ ತಯಾರಾಗಬಹುದು ಅಥವಾ ಹೆಚ್ಚಿನ ಮಾರ್ಗದರ್ಶನಕ್ಕಾಗಿ ಕೋಚಿಂಗ್ ಇನ್‌ಸ್ಟಿಟ್ಯೂಟ್ ಸೇರಬಹುದು.
ಈ ವೃತ್ತಿಯಲ್ಲಿ ಯಶಸ್ಸನ್ನು ಗಳಿಸಲು, ಆಡಳಿತಾತ್ಮಕ ವಿಷಯಗಳ ಕುರಿತ ಜ್ಞಾನ ಮತ್ತು ಕೌಶಲಗಳ ಜೊತೆಗೆ ಸಕಾರಾತ್ಮಕ ಆಲೋಚನೆ, ನಿಷ್ಠೆ, ಪ್ರಾಮಾಣಿಕತೆ, ಸ್ವಯಂಪ್ರೇರಣೆ ಮತ್ತು ಆತ್ಮವಿಶ್ವಾಸವಿರಬೇಕು. ನಿಮ್ಮ ಇಂಗ್ಲಿಷ್ ಕಲಿಕೆಗೆ ಸಹಾಯವಾಗಬಹುದಾದ ಈ ವಿಡಿಯೊ ವೀಕ್ಷಿಸಿ:
https://www.youtube.com/watch?v=NoFcIQAFDCA

2. ನಾನು ಡಿಪ್ಲೊಮಾ (ಮೆಕ್ಯಾನಿಕಲ್) ಮಾಡುತ್ತಿದ್ದೇನೆ. ಮುಂದೆ ಬಿ.ಟೆಕ್ ಮಾಡುವುದು ಹೇಗೆ? ದಯವಿಟ್ಟು ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ಡಿಪ್ಲೊಮಾ ಮುಗಿಸಿದ ನಂತರ ಲ್ಯಾಟರಲ್ ಎಂಟ್ರಿ ಮೂಲಕ ಎರಡನೇ ವರ್ಷದ ಬಿಟೆಕ್‌ಗೆ ಸೇರಬಹುದು. ಕರ್ನಾಟಕದಲ್ಲಿ, ಪ್ರವೇಶ ಪ್ರಕ್ರಿಯೆ ಸಿಇಟಿ ಮೂಲಕ ನಡೆಯುತ್ತದೆ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ:https://cetonline.karnataka.gov.in/keawebentry456/dcet22/Diploma%202022%20%20Information%20Bulletin%20finalkannada.pdf

3. ನನ್ನ ಮಗ 4 ವರ್ಷದ ಗ್ರಾಫಿಕ್ ಡಿಸೈನ್ ಕೋರ್ಸ್ ಮಾಡುತ್ತಿದ್ದಾನೆ. ಇದಾದ ಮೇಲೆ, ಉನ್ನತ ಶಿಕ್ಷಣಕ್ಕಾಗಿ ಯಾವ ಕೋರ್ಸ್ ಮಾಡಬಹುದು?

ರಾಜಕುಮಾರ, ಕಮಲಾಪುರ (ಹಂಪಿ).

ಡಿಸೈನ್ ಕ್ಷೇತ್ರಕ್ಕೆ ಸಂಬಂಧಿಸಿದ ಅನೇಕ ಉದ್ದಿಮೆಗಳಲ್ಲಿ, ವೈವಿಧ್ಯಮಯ ಮತ್ತು ವಿಭಿನ್ನವಾದ ವೃತ್ತಿಯ ಆಯ್ಕೆಗಳಿವೆ. ಉದಾಹರಣೆಗೆ, ಗ್ರಾಫಿಕ್ ಡಿಸೈನರ್, UX ಡಿಸೈನರ್, ಆರ್ಟ್ ಡೈರೆಕ್ಟರ್, ಅನಿಮೇಟರ್, ಪ್ರಾಡಕ್ಟ್ ಡೆವಲಪರ್, ಮಾರ್ಕೆಟಿಂಗ್ ಸ್ಪೆಷಲಿಸ್ಟ್ ಇತ್ಯಾದಿ. ಹಾಗಾಗಿ, ಗ್ರಾಫಿಕ್ ಡಿಸೈನ್ ಕೋರ್ಸ್ ನಂತರ ಯಾವ ವೃತ್ತಿಯನ್ನು ಅನುಸರಿಸಬೇಕು ಎಂದು ಮೊದಲು ನಿರ್ಧರಿಸಬೇಕು. ತಾಂತ್ರಿಕ ಕ್ಷೇತ್ರದಲ್ಲಿ ಮುಂದುವರಿಯಬೇಕಾದರೆ, ಹೆಚ್ಚಿನ ತಜ್ಞತೆಗಾಗಿ ಡಿಸೈನ್ ಸಂಬಂಧಿತ ಸ್ನಾತಕೋತ್ತರ ಕೋರ್ಸ್ ಮಾಡಬಹುದು. ಮಾರ್ಕೆಟಿಂಗ್ ಕ್ಷೇತ್ರದಲ್ಲಿ ಆಸಕ್ತಿಯಿದ್ದರೆ, ಎಂಬಿಎ ಮಾಡಬಹುದು. ಹಾಗೂ, ಈ ಕ್ಷೇತ್ರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್(ಬೆಂಗಳೂರು), ನೀಡುತ್ತಿರುವ ಕೋರ್ಸ್‌ಗಳು ಸೂಕ್ತವೇ ಎಂದು ಪರಿಶೀಲಿಸಿ.

4. ಬಿ.ಎಸ್ಸಿ (ನರ್ಸಿಂಗ್) ಆದ ಮೇಲೆ ಬಿ.ಎಸ್ಸಿ (ಫೊರೆನ್ಸಿಕ್ ಸೈನ್ಸ್) ಮಾಡಬಹುದೇ?

ಹೆಸರು, ಊರು ತಿಳಿಸಿಲ್ಲ.

ಫೊರೆನ್ಸಿಕ್ ಮತ್ತು ನರ್ಸಿಂಗ್ ವಿಶೇಷ ಮತ್ತು ಬೇಡಿಕೆಯಲ್ಲಿರುವ ಕ್ಷೇತ್ರ. ಹಾಗಾಗಿ, ಬಿ.ಎಸ್ಸಿ (ಫೊರೆನ್ಸಿಕ್ ಸೈನ್ಸ್) ಕೋರ್ಸ್ ಮಾಡಬಹುದು. ಹಾಗೂ ನಿಮ್ಮ ವೃತ್ತಿಯೋಜನೆ ಮತ್ತು ಆದ್ಯತೆಯಂತೆ, ಒಂದು ವರ್ಷದ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ (ಫೊರೆನ್ಸಿಕ್ ಸೈನ್ಸ್) ಮಾಡಿದರೆ ಸಾಕಾಗಬಹುದೇ ಎಂದು ಪರಿಶೀಲಿಸಿ.

5. ನಾನು ಪಿಯುಸಿ (ವಾಣಿಜ್ಯ) ಮುಗಿಸಿದ್ದೇನೆ. ಮುಂದಿನ ವಿದ್ಯಾಭ್ಯಾಸಕ್ಕೆ ಯಾವ ಕೋರ್ಸ್ ತೆಗೆದುಕೊಳ್ಳಬೇಕೆಂಬ ಗೊಂದಲದಲ್ಲಿದ್ದೇನೆ. ದಯವಿಟ್ಟು ಮಾರ್ಗದರ್ಶನ ನೀಡಿ.

ತ್ರಿವೇಣಿ, ಪೂರ್ಲೇಹಳ್ಳಿ, ಸಿರಾ ತಾಲ್ಲೂಕು.

ಪಿಯುಸಿ ನಂತರದ ಕೋರ್ಸ್ ಆಯ್ಕೆಗಾಗಿ, ಈ ಮೂರು ಸಲಹೆಗಳನ್ನು ಗಮನಿಸಿ:

- ವಾಣಿಜ್ಯ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಆಯ್ಕೆ ಎಂದರೆ ಚಾರ್ಟರ್ಡ್ ಅಕೌಂಟೆಂಟ್ (ಸಿಎ) ಕೋರ್ಸ್.
- ಈಗ ಬಿಕಾಂ ಕೋರ್ಸ್‌ನಲ್ಲಿ ಅಕೌಂಟಿಂಗ್, ಅಕೌಂಟಿಂಗ್ ಮತ್ತು ಫೈನಾನ್ಸ್, ಟ್ಯಾಕ್ಸೇಷನ್, ಬ್ಯಾಂಕಿಂಗ್ ಮತ್ತು ಇನ್‌ಶ್ಯೂರೆನ್ಸ್, ಇಂಟರ್‌ನ್ಯಾಷನಲ್ ಬಿಸಿನೆಸ್, ಮಾರ್ಕೆಟಿಂಗ್, ಇನ್ವೆಸ್ಟ್‌ಮೆಂಟ್ ಸೇರಿದಂತೆ ಸುಮಾರು ಹತ್ತು ವಿಭಾಗಗಳಿವೆ. ನಿಮ್ಮ ಆಸಕ್ತಿಯ ಅನುಸಾರ ಆಯ್ಕೆ ಮಾಡಬಹುದು.
- ಐದು ವರ್ಷದ ಇಂಟಿಗ್ರೇಟೆಡ್ ಎಂಬಿಎ ಕೋರ್ಸ್ ಮಾಡಬಹುದು.

ಕೋರ್ಸ್ ಆಯ್ಕೆ ಮುನ್ನ ನಿಮ್ಮ ಅಭಿರುಚಿ, ಆಸಕ್ತಿ, ಸಾಮರ್ಥ್ಯಗಳನ್ನು ಪರಿಶೀಲಿಸಿ, ನಿಮಗೆ ಸರಿಹೊಂದುವ ವೃತ್ತಿಯೋಜನೆಯನ್ನು ಮಾಡಿ, ವೃತ್ತಿಯ ಆಯ್ಕೆಗೆ ಅನುಗುಣವಾಗಿ ಕೋರ್ಸ್ ಆಯ್ಕೆ ಮಾಡಬೇಕು. ವೃತ್ತಿಯೋಜನೆಯ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=oyUMPrEKPPU

6. ನಾನು ಬಿಕಾಂ ಪದವಿಯನ್ನು ಮುಗಿಸಿದ್ದು ಮುಂದೆ ಎಂಬಿಎ ಮಾಡಬೇಕೆಂದುಕೊಂಡಿದ್ದೇನೆ. ಫೈನಾನ್ಸ್ ಮತ್ತು ಅಗ್ರಿ ಬಿಸಿನೆಸ್ ಮ್ಯಾನೇಜ್‌ಮೆಂಟ್ ವಿಷಯಗಳಲ್ಲಿ ಎಂಬಿಎ (ಡ್ಯುಯಲ್ ಸ್ಪೆಷಲೈಜೇಷನ್) ಮಾಡಬಹುದೇ? ಈ ಕೋರ್ಸ್ ಮೈಸೂರು ವಿಶ್ವವಿದ್ಯಾಲಯದಲ್ಲಿ ಲಭ್ಯವಿದೆಯೇ?

ಹೆಸರು, ಊರು ತಿಳಿಸಿಲ್ಲ.

ಬಿಕಾಂ ಪದವಿಯ ನಂತರ ಎಂಬಿಎ ಉತ್ತಮ ಆಯ್ಕೆ; ಆದರೆ, ಎಂಬಿಎ (ಫೈನಾನ್ಸ್ ಮತ್ತು ಅಗ್ರಿ ಬಿಸಿನೆಸ್) ಸಂಯೋಜನೆ ಸಿಗುವುದು ವಿರಳ. ನಮಗಿರುವ ಮಾಹಿತಿಯಂತೆ, ಈ ಸಂಯೋಜನೆಯ ಎಂಬಿಎ ಕೋರ್ಸ್, ಮೈಸೂರು ವಿಶ್ವವಿದ್ಯಾಲಯದಲ್ಲಿ ಲಭ್ಯವಿಲ್ಲ. ಎಲ್ಲಾ ಎಂಬಿಎ ಕೋರ್ಸ್‌ಗಳಲ್ಲಿ ಹಣಕಾಸು ನಿರ್ವಹಣೆಯ ವಿಷಯದ ಆಳವಾದ ಕಲಿಕೆಯಾಗುತ್ತದೆ ಎನ್ನುವುದು ನಿಮ್ಮ ಗಮನದಲ್ಲಿರಲಿ. ನಮ್ಮ ಅಭಿಪ್ರಾಯದಂತೆ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಕೃಷಿ ವಿಶ್ವವಿದ್ಯಾಲಯ ಬೆಂಗಳೂರು ಸೇರಿದಂತೆ ಅನೇಕ ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿರುವ ಎಂಬಿಎ (ಅಗ್ರಿ ಬಿಸಿನೆಸ್) ಮಾಡಬಹುದು. ಹಣಕಾಸು ನಿರ್ವಹಣೆ ಕುರಿತಂತೆ ಹೆಚ್ಚಿನ ತಜ್ಞತೆಗಾಗಿ, ಸರ್ಟಿಫಿಕೆಟ್ / ಡಿಪ್ಲೊಮಾ ಕೋರ್ಸ್‌ಗಳನ್ನು ಆನ್‌ಲೈನ್ ಮೂಲಕ ಮಾಡಬಹುದು. ಎಂಬಿಎ (ಅಗ್ರಿ ಬಿಸಿನೆಸ್) ಕೋರ್ಸ್ ಮಾಹಿತಿಗಾಗಿ

ಗಮನಿಸಿ: https://www.shiksha.com/mba/colleges/mba-in-agri-business-colleges-india

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಷೇಫ್ಲರ್ ಇಂಡಿಯಾ ಫೆಲೋಶಿಪ್ ಪ್ರೋಗ್ರಾಂ

ವಿವರ: ಸಮಾಜದ ಅಭಿವೃದ್ಧಿಗೆ ಪೂರಕವಾಗುವ ವಿಶೇಷ ಸುಸ್ಥಿರ ಹಾಗೂ ಸಕಾರಾತ್ಮಕ ಪರಿಹಾರಗಳನ್ನು ಕಂಡುಹಿಡಿಯುವಂತಹ ಯುವಕರನ್ನು ಗುರುತಿಸಿ ಗೌರವಿಸುವುದಕ್ಕಾಗಿ ರೂಪಿಸಿರುವ ವಿಶೇಷ ಕಾರ್ಯಕ್ರಮ 'ಷೇಫ್ಲರ್ ಇಂಡಿಯಾ ಸೋಷಿಯಲ್ ಇನ್ನೋವೇಟಿವ್ ಫೆಲೊಷಿಪ್ ಪ್ರೋಗ್ರಾಂ 2023.

ಅರ್ಹತೆ: ಅರ್ಜಿದಾರರು 18 ರಿಂದ 35 ವರ್ಷ ವಯಸ್ಸಿನವರಾಗಿರಬೇಕು (2023ರ ಸೆಪ್ಟೆಂಬರ್ 1ಕ್ಕೆ). ಭಾರತದ ನಿವಾಸಿಗಳಾಗಿರಬೇಕು. ಪರಿಣಾಮಕಾರಿ ಸುಸ್ಥಿರ ಪರಿಹಾರಗಳ ಮೂಲ ಮಾದರಿಗಳನ್ನು ರೂಪಿಸುವ ಸ್ವಯಂ ಸೇವಾ ಸಂಸ್ಥೆಯ ಕಾರ್ಯಕರ್ತರು ಅಥವಾ ಆರಂಭಿಕ ಹಂತ ಸ್ಟಾರ್ಟ್ ಅಪ್‌ಗಳು ಅರ್ಜಿ ಸಲ್ಲಿಸಬಹುದು.

ಆರ್ಥಿಕ ನೆರವು: ಆಯ್ಕೆಯಾದ ಅಭ್ಯರ್ಥಿಗಳಿಗೆ ₹10 ಲಕ್ಷ ಮೌಲ್ಯದ ಫೆಲೊಷಿಪ್ ಅನುದಾನ ಜೊತೆಗೆ, ಅಹಮದಾಬಾದ್‌ನ ಐಐಎಂ ಅಡಿಯಲ್ಲಿ ರೂಪುಗೊಂಡಿರುವ 'ಕ್ಯಾಪಿಟಲ್ ಇನ್‌ಕ್ಯುಬೇಷನ್ ಇನ್‌ಸೈಟ್ಸ್ ಎವೆರಿಥಿಂಗ್(CIIE) ಮತ್ತು ನೆಟ್‌ವರ್ಕಿಂಗ್‌ನಿಂದ ವಿಶೇಷ ಮಾರ್ಗದರ್ಶನ.

ಅರ್ಜಿ ಸಲ್ಲಿಸಲು ಕೊನೆ ದಿನ: 10-09-2023

ಅರ್ಜಿ ಸಲ್ಲಿಸುವ ವಿಧಾನ :ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: www.b4s.in/praja/SIA2

ಲೆಗ್ರಾಂಡ್ ಎಂಪವರಿಂಗ್ ಸ್ಕಾಲರ್‌ಷಿಪ್ ಪ್ರೋಗ್ರಾಂ

ಟೆಕ್ನಾಲಜಿ, ಆರ್ಕಿಟೆಕ್ಟ್ ಸೇರಿದಂತೆ ವಿವಿಧ ಎಂಜಿನಿಯರಿಂಗ್ ಪದವಿ ಕೋರ್ಸ್‌ಗಳ ಜೊತೆಗೆ, ಬಿಎಸ್ಸಿ, ಬಿಕಾಂ ಮತ್ತು ಬಿಬಿಎ ಕೋರ್ಸ್‌ಗಳಂತಹ ಪದವಿಗಳನ್ನು ಕಲಿಯಲು ಆಸಕ್ತಿಯಿರುವ ಪ್ರತಿಭಾನ್ವಿತ ವಿದ್ಯಾರ್ಥಿನಿಯರನ್ನು ಬೆಂಬಲಿಸುವುದಕ್ಕಾಗಿ ರೂಪಿಸಿರುವ ಸ್ಕಾಲರ್‌ಷಿಪ್ ಕಾರ್ಯಕ್ರಮ 'ಲೆಗ್ರಾಂಡ್ ಎಂಪವರಿಂಗ್ ಪ್ರೋಗ್ರಾಂ'.

ಅರ್ಹತೆ: ಬಿ.ಟೆಕ್/ಬಿ.ಇ/ಬಿ.ಆರ್ಕ್ ಎಂಜನಿಯರಿಂಗ್ ಅಥವಾ ಬಿಬಿಎ/ ಬಿ.ಕಾಂ/ ಬಿ.ಎಸ್‌ಸಿ (ಗಣಿತ ಮತ್ತು ವಿಜ್ಞಾನ) ಪದವಿಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು 2022–2023 ರಲ್ಲಿ 12ನೇ ತರಗತಿಯನ್ನು ಉತ್ತೀರ್ಣರಾಗಿರಬೇಕು. 10 ಮತ್ತು 12ನೇ ತರಗತಿಗಳಲ್ಲಿ ಶೇ 70ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ಆದಾಯ ಎಲ್ಲಾ ಮೂಲಗಳಿಂದ ₹ 5ಲಕ್ಷಕ್ಕಿಂತ ಕಡಿಮೆಯಿರಬೇಕು.

ಆರ್ಥಿಕ ಸಹಾಯ: ಶೈಕ್ಷಣಿಕ ಕಾರ್ಯಕ್ಷಮತೆಯ ಆಧಾರದ ಮೇಲೆ ಕೋರ್ಸ್ ಪೂರ್ಣಗೊಳ್ಳುವವರೆಗೆ ಪ್ರತಿ ವರ್ಷ ಕೋರ್ಸ್ ಶುಲ್ಕದ ಶೇ 60 ಹಣವನ್ನು(₹ 60 ಸಾವಿರದವರೆಗೆ) ನೀಡಲಾಗುತ್ತದೆ
ವಿಶೇಷ ವರ್ಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕಾರ್ಯಕ್ಷಮತೆಯ ಆಧಾರದ ಮೇಲೆ ಕೋರ್ಸ್ ಪೂರ್ಣಗೊಳ್ಳುವವರೆಗೆ ಪ್ರತಿ ವರ್ಷ ಕೋರ್ಸ್ ಶುಲ್ಕದ ಶೇ 80ರಷ್ಟು(₹ 1ಲಕ್ಷದವರೆಗೆ) ನೀಡಲಾಗುತ್ತದೆ.

ವಿಶೇಷ ವರ್ಗ: ಅಂಗವಿಕಲ ವಿದ್ಯಾರ್ಥಿಗಳು/ಟ್ರಾನ್ಸ್ ಜೆಂಡರ್ ವಿದ್ಯಾರ್ಥಿಗಳು/ ಒಂಟಿ ಪೋಷಕರನ್ನು ಹೊಂದಿರುವ ವಿದ್ಯಾರ್ಥಿಗಳು/ ಕೋವಿಡ್‌ನಿಂದಾಗಿ ತಮ್ಮ ಪೋಷಕರನ್ನು ಕಳೆದುಕೊಂಡ ವಿದ್ಯಾರ್ಥಿಗಳು.

ಅರ್ಜಿ ಸಲ್ಲಿಸಲು ಕೊನೆ ದಿನ: 31-08-2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ. ಹೆಚ್ಚಿನ ಮಾಹಿತಿಗೆ: www.b4s.in/praja/LFLS7

ವೈರಸ್ ಎಂದರೇನು?

ಜೀವಾನ್ವೇಷಣೆ


ಡಾ. ಎಸ್. ಶಿಶುಪಾಲ

ಆ........ಆಕ್ಷೀ....... ಮೂಗು ಸೋರುತ್ತಿದೆ, ಸೀನು ಬರುತ್ತಿದೆ, ಜ್ವರ ಬಂದಿದೆ, ಮುಂತಾದ ಲಕ್ಷಣಗಳು ಕಂಡು ಬಂದರೆ 'ಇದು ವೈರಸ್ ಸೋಂಕಿನಿಂದಾಗಿದೆ' ಎನ್ನುತ್ತೇವೆ. ಈ ವೈರಸ್ ಸೋಂಕು ತಗುಲಿದವರು ಸೀನಿದಾಗ, ಕೆಮ್ಮಿದಾಗ ಹೊರ ಹೊಮ್ಮುವ ಹನಿಗಳ ಮೂಲಕ ಬೇರೆಯವರಿಗೂ ಹರಡುತ್ತವೆ. ಕೋವಿಡ್ ಸೋಂಕು ಹರಡಿದ್ದು ನಿಮಗೆ ನೆನಪಿರಬೇಕಲ್ಲವಾ ?

ಅಂದ ಹಾಗೆ, ಈ ವೈರಸ್‌ಗಳು ಜೀವಿ ಮತ್ತು ನಿರ್ಜೀವಿಗಳಂತೆ ನೆಲೆಸಿರುತ್ತವೆ. ಇವು ಆತಿಥೇಯ ಜೀವಕೋಶದ ಹೊರಗೆ ನಿರ್ಜೀವಿಯಂತೆ ಇರುತ್ತವೆ. ಸೋಂಕು ಆದಾಗ ಜೀವಕೋಶಗಳಲ್ಲಿ ಜೀವಿಗಳಂತೆ ಸಂತಾನಭಿವೃದ್ಧಿ ಮಾಡುತ್ತವೆ.

ಭೂಮಿಯ ಪರಿಸರದಲ್ಲಿ ಜೀವವಿಕಾಸವಾಗುವಾಗ ವಿವಿಧ ರಾಸಾಯನಿಕಗಳ ಮಿಶ್ರಣಗಳು ತಯಾರಾದವು. ಇಂಗಾಲ, ಜಲಜನಕ, ಆಮ್ಲಜನಕ ಮತ್ತು ಸಾರಜನಕ ಪರಮಾಣುಗಳು ಹಲವಾರು ರಾಸಾಯನಿಕ ಕ್ರಿಯೆಗಳಲ್ಲಿ ಭಾಗವಹಿಸಿ ವಿವಿಧ ಅಣುಗಳ ಉತ್ಪಾದನೆಯಾದವು. ಈ ರೀತಿಯ ವಿಭಿನ್ನ ಅಣುಗಳು ಸಂಯೋಜನೆಗೊಂಡು ಜೀವರಾಶಿಗಳ ವಿಕಾಸಕ್ಕೆ ಕಾರಣವಾಯಿತು ಎಂದು ವಿಜ್ಞಾನಿಗಳು ಅರ್ಥೈಸಿದ್ದಾರೆ. ಈ ಹಿನ್ನಲೆಯಲ್ಲಿ ವೈರಸ್‌ಗಳು ಬಹು ಮುಖ್ಯ ಅಂಶಗಳೆಂದು ಪರಿಗಣಿಸಲ್ಪಟ್ಟಿವೆ.

ವೈರಸ್‌ಗಳು ಅತೀ ಸಣ್ಣದಾದ, ಸರಳವಾದ, ಯಾವುದೇ ಜೀವಕೋಶಗಳಿಲ್ಲದ, ನ್ಯೂಕ್ಲಿಯಿಕ್ ಆಮ್ಲ ಮತ್ತು ಪ್ರೊಟಿನ್‌ಗಳ ಮಿಶ್ರಣಗಳಾಗಿದ್ದು, ಜೀವಿಗಳಲ್ಲಿ ಸೊಂಕು ಉಂಟು ಮಾಡುತ್ತವೆ. ಅಂದರೆ ಇವು ಕಡ್ಡಾಯವಾಗಿ ಪರಾವಲಂಬಿಗಳು.



ಸಸ್ಯ ಮತ್ತು ಪ್ರಾಣಿಗಳಲ್ಲಿ ರೋಗ ಉಂಟು ಮಾಡುವ ವೈರಸ್‌ಗಳು (ಕೃಪೆ : ಎನ್‌ಸಿಆರ್‌ಟಿ ಮತ್ತು ಸಿಡಿಸಿ)

ವೈರಸ್ ಎಂದರೆ ವಿಷ ಎಂದು ಅರ್ಥ. ಅವುಗಳ ಆಕಾರ, ಗಾತ್ರ ಮತ್ತು ಅತಿಥೇಯ ಜೀವಿಗಳನ್ನು ಬಳಸುವಿಕೆಯಲ್ಲಿ ಸಾಕಷ್ಟು ವೈವಿಧ್ಯವಿದೆ.

ಗುಣಲಕ್ಷಣಗಳು

ವೈರಸ್‌ಗಳು ರೋಗಕಾರಕಗಳಾಗಿದ್ದು ಪ್ರಾಣಿಗಳು, ಸಸ್ಯಗಳು, ಪಾಚಿಗಳು, ಶಿಲೀಂಧ್ರಗಳು ಮತ್ತು ಬ್ಯಾಕ್ಟೀರಿಯಾಗಳಲ್ಲೂ ರೋಗವನ್ನುಂಟು ಮಾಡುತ್ತವೆ! ಸಂಪೂರ್ಣವಾಗಿ ತಯಾರಾಗಿರುವ ಪ್ರಬುದ್ಧ ವೈರಸ್ ಕಣಗಳನ್ನು ವಿರಿಯಾನ್ ((Virion) ಎನ್ನುತ್ತಾರೆ. ವೈರಸ್‌ಗಳು ನ್ಯೂಕ್ಲಿಯೋಕ್ಯಾಪ್ಸಿಡ್ (Nucleocapsid) ರಚನೆಯನ್ನು ಹೊಂದಿವೆ. ಇದರಲ್ಲಿ ವಂಶವಾಹಿಗಳಾಗಿ ಡಿಆಕ್ಸಿರೈಬೋ ನ್ಯೂಕ್ಲಿಯಿಕ್ ಅಮ್ಲ (ಡಿಎನ್‌ಎ) ಅಥವ ರೈಬೋನ್ಯೂಕ್ಲಿಯಿಕ್ ಅಮ್ಲ (ಆರ್‌ಎನ್‌ಎ)ವಿರುತ್ತದೆ. ಇದನ್ನು ಸುತ್ತುವರಿದ ಪ್ರೋಟಿನ್ ರಕ್ಷಣ ಕವಚ (ಕ್ಯಾಪ್ಸಿಡ್) ಇರುತ್ತದೆ. ವೈರಸ್‌ಗಳಿಗೆ ಅತಿಥೇಯ ಜೀವಕೋಶಗಳಿಲ್ಲದೆ ಸಂತಾನಭಿವೃದ್ಧಿ ಸಾಧ್ಯವಿಲ್ಲ. ಇವುಗಳನ್ನು ಜೀವಿ-ನಿರ್ಜೀವಿಗಳ ನಡುವಿನ ಕೊಂಡಿಯೆಂದೇ ಪರಿಗಣಿಸಲಾಗಿದೆ. ವೈರಸ್‌ಗಳು ಅತೀ ಸಣ್ಣ ಕಣಗಳಾಗಿದ್ದು ಗಾತ್ರದಲ್ಲಿ ಕೇವಲ 10 ರಿಂದ 400 ನ್ಯಾನೊಮೀಟರ್‌ಗಳಲ್ಲಿರುತ್ತವೆ (1 ಮೀ = 109 ನ್ಯಾನೋ ಮೀ. ಅಂದರೆ ಒಂದು ಮೀಟರ್‌ನ್ನು ಶತಕೋಟಿ ಭಾಗಗಳನ್ನಾಗಿ ಮಾಡಿದಾಗ ಬರುವ ಒಂದು ಭಾಗವೇ 1 ನ್ಯಾನೋ ಮೀ.). ಇವುಗಳನ್ನು ನೋಡಲು ಎಲೆಕ್ಟ್ರಾನ್ ಸೂಕ್ಷ್ಮದರ್ಶಕ ಯಂತ್ರವೇ ಬೇಕು.

ವೈರಸ್‌ಗಳ ಸಂತಾನಭಿವೃದ್ಧಿ

ವೈರಸ್‌ಗಳು ತಮ್ಮ ಅತಿಥೇಯ ಜೀವಕೋಶಗಳನ್ನು ಹುಡುಕಿಕೊಂಡು ಹೋಗುವುದಿಲ್ಲ. ಹಾಗಾಗಿ ಗಾಳಿ, ನೀರು, ಆಹಾರ, ಮತ್ತು ಇತರೆ ವಾಹಕಗಳ ಮೂಲಕ ಇವು ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತವೆ. ಅತಿಥೇಯ ಜೀವಕೋಶಗಳ ಹೊರಗೆ ಏನೂ ಮಾಡಲಾಗದ ವೈರಸ್‌ಗಳು ಜೀವಕೋಶದ ಒಳಗೆ ಅಲ್ಲೋಲಕಲ್ಲೋಲವನ್ನೇ ಉಂಟುಮಾಡುತ್ತವೆ. ಮೊದಲಿಗೆ ಯಾಂತ್ರಿಕವಾಗಿ ಸೂಕ್ತ ಜೀವಕೋಶಗಳ ಪೊರೆಗೆ ವಿರಿಯಾನ್‌ಗಳು ಅಂಟಿಕೊಳ್ಳುತ್ತವೆ. ನಂತರ ತನ್ನಲ್ಲಿರುವ ವಂಶವಾಹಿಗಳನ್ನು ಅತಿಥೇಯ ಜೀವಕೋಶದ ಒಳಗೆ ತೂರಿಸುತ್ತವೆ. ಈ ರೀತಿ ಜೀವಕೋಶಗಳೊಳಗೆ ಬಂದ ವೈರಸ್‌ನ ವಂಶವಾಹಿಗಳು ಅತಿಥೇಯ ಜೀವಕೋಶಗಳ ಬೆಳವಣಿಗೆಗೆ ಅಗತ್ಯವಿರುವ ಕಿಣ್ವಗಳನ್ನು ಬಳಸಿಕೊಂಡು ತನ್ನದೇ ವಂಶವಾಹಿಗಳಿಂದ ತನಗೆ ಬೇಕಾದ ನ್ಯೂಕ್ಲಿಯಿಕ್ ಆಮ್ಲ ಮತ್ತು ಪ್ರೊಟೀನ್‌ಗಳನ್ನು ಉತ್ಪಾದಿಸುತ್ತವೆ. ಒಂದು ಅತಿಥೇಯ ಜೀವಕೋಶದಲ್ಲಿ ನೂರರಿಂದ ಸಾವಿರಾರು ವಿರಿಯಾನ್‌ಗಳು ಉತ್ಪತ್ತಿಗೊಂಡು ಆ ಜೀವಕೋಶವನ್ನೇ ಒಡೆದು ಹೊರಬಂದು ಸೋಂಕನ್ನು ಹರಡುತ್ತವೆ. ಈ ಕ್ರಿಯೆಯಿಂದ ಅತಿಥೇಯ ಜೀವಿಯಲ್ಲಿ ತೊಂದರೆಗಳುಂಟಾಗುತ್ತದೆ.

ಮಾನವನಲ್ಲಿ ಬರುವ ವೈರಸ್ ರೋಗಗಳೆಂದರೆ ಶೀತ, ದಡಾರ (Measles), ಮಂಗನಬಾವು (Mumps), ರೇಬಿಸ್, ಕಾಮಾಲೆ (Hepatitis), ಹರ್ಪಿಸ್, ಡೆಂಗ್ಯೂ, ಕೊವಿಡ್ ಮುಂತಾದವುಗಳು. ಸಸ್ಯಗಳಲ್ಲಿ ಬರುವ ವೈರಸ್ ರೋಗಗಳು ತಂಬಾಕಿನ ಶಬಲಚಿತ್ರ (Mosaic), ಆಲೂಗಡ್ಡೆಯ ಎಲೆ ಸುರುಳಿ (Leaf roll), ಬೆಂಡೆ ಗಿಡದ ಹಳದಿ ನರ ಶಬಲಚಿತ್ರ (Yellow vein mosaic) ಮುಂತಾದವುಗಳು. ವೈರಸ್ ಸೊಂಕನ್ನು ನಿಭಾಯಿಸುವುದು ಕಷ್ಟಸಾಧ್ಯ. ಮಾನವರಲ್ಲಿ ಲಸಿಕೆಗಳಿಂದ ವೈರಸ್ ರೋಗಗಳು ಬಾರದಂತೆ ತಡೆಗಟ್ಟಬಹುದು. ಸಸ್ಯಗಳಲ್ಲಿ ರೋಗ-ಬಾಧಿತ ಗಿಡಗಳನ್ನು ಕಿತ್ತು ಸುಟ್ಟು ಹಾಕುವುದರಿಂದ ರೋಗ ಹರಡುವುದನ್ನು ತಡೆಯಬಹುದು.

(ಲೇಖಕರು: ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮಜೀವಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು).

ನೈಸ್ ಹೆಸರಲ್ಲಿ ಲೂಟಿ; ಡಿ.ಕೆ. ಸಹೋದರರ ವಿರುದ್ಧ ಎಚ್‌ಡಿಕೆ ಆರೋಪ

'ದಾಖಲೆ ಶೀಘ್ರ ಬಹಿರಂಗ'

ಪ್ರಜಾವಾಣಿ ವಾರ್ತೆ



ಕುಮಾರಸ್ವಾಮಿ

ರಾಮನಗರ: 'ನೈಸ್ ಸಂಸ್ಥೆ ಹೆಸರಿನಲ್ಲಿ ಡಿ.ಕೆ ಸಹೋದರರು ಕೊಳ್ಳೆ ಹೊಡೆದಿರುವ ರೈತರ ಭೂಮಿ ಹಾಗೂ ನೈಸ್ ಅಕ್ರಮಗಳ ದಾಖಲೆಗಳು ನನ್ನ ಬಳಿ ಇವೆ. ಸೋಮವಾರ ಅಥವಾ ಮಂಗಳವಾರ ಬಹಿರಂಗ ಮಾಡುತ್ತೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ನೈಸ್ ಕಂಪನಿ ವಿಷಯಕ್ಕೆ ಸಂಬಂಧಿಸಿದಂತೆ ಸಂಸದ ಡಿ.ಕೆ. ಸುರೇಶ್ ತಮ್ಮ ವಿರುದ್ಧ ಮಾಡಿದ ಆರೋಪಕ್ಕೆ ಭಾನುವಾರ ಪ್ರತಿಕ್ರಿಯಿಸಿದ ಅವರು, ಡಿ.ಕೆ. ಸುರೇಶ್ ಸಂಸದರಾಗುವುದಕ್ಕೂ ಮುಂಚೆ ಅವರ ಆಸ್ತಿ ಎಷ್ಟಿತ್ತು? ಈಗ ಎಷ್ಟಿದೆ ಎಂಬುದು ಎಲ್ಲರಿಗೂ ಗೊತ್ತಿದೆ ಎಂದರು.

'ಡಿ.ಕೆ. ಸುರೇಶ್ ಅವರ ಅಣ್ಣ ಡಿ.ಕೆ. ಶಿವಕುಮಾರ್ ಅವರು 2004ರಲ್ಲಿ ನಗರಾಭಿವೃದ್ಧಿ ಸಚಿವರಾಗಿದ್ದು ರಾಮನಗರ ಜಿಲ್ಲೆಯ ಉದ್ಧಾರಕ್ಕೊ ಅಥವಾ ನೈಸ್ ಕಂಪನಿ ಉದ್ಧಾರ ಮಾಡಿ, ರೈತರ ಭೂಮಿ ಲೂಟಿ ಹೊಡೆಯುವುದಕ್ಕೊ' ಎಂದು ಪ್ರಶ್ನಿಸಿದರು.

'ಬೆಂಗಳೂರು ಸುತ್ತ ಉತ್ತಮ ರಸ್ತೆ ನಿರ್ಮಾಣವಾಗಿ ಜನರಿಗೆ ಅನುಕೂಲವಾಗಲಿ ಎಂದು ದೇವೇಗೌಡರು ನೈಸ್ ಯೋಜನೆಗೆ ಒಪ್ಪಿಗೆ ನೀಡಿದರು. ಒಪ್ಪಂದದಂತೆ ರಸ್ತೆ ಆಗಿದ್ದಿದ್ದರೆ ಏಷ್ಯಾ ಖಂಡದಲ್ಲಿಯೇ ಬೆಂಗಳೂರು- ಮೈಸೂರು ನಗರಗಳು ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಯಾಗುತ್ತಿದ್ದವು. ವಾಣಿಜ್ಯ ಚಟುವಟಿಕೆಗಳು ಹೆಚ್ಚಾಗಿ ಜನರಿಗೆ ಜೀವನೋಪಾಯವಾಗುತ್ತಿತ್ತು. ಈ ಲೂಟಿಕೋರರು ಮಾಡಿದ್ದೇನು? ಬೆಂಗಳೂರು ಸುತ್ತಮುತ್ತ ರೈತರ ಭೂಮಿ ಕೊಳ್ಳೆ ಹೊಡೆದರು' ಎಂದು ಅವರು ತರಾಟೆಗೆ ತೆಗೆದುಕೊಂಡರು.

'ನಮ್ಮ ನೀರು, ನಮ್ಮ ಹಕ್ಕು ಎಂದು ಜಾಗಟೆ ಹೊಡೆದುಕೊಂಡು ಊರೂರು ತಿರುಗಾಡಿದವರು, ಗೋಡೆಗಳ ಮೇಲೆ ಸ್ಲೋಗನ್ ಬರೆದುಕೊಂಡಿದ್ದವರು ತಮಿಳುನಾಡಿಗೆ ಕಾವೇರಿ ನೀರು ಹರಿಸಿದ್ದೇಕೆ' ಎಂದು ಕುಮಾರಸ್ವಾಮಿ ಅವರು ಪ್ರಶ್ನಿಸಿದರು.

'ನೀರಿನ ಹಕ್ಕು ಸಾಧಿಸಲು ಹೊರಟವರು, ರಾಜ್ಯದ ಹಿತ ಕಡೆಗಣಿಸಿ ನೆರೆ ರಾಜ್ಯಕ್ಕೆ ನೀರು ಬಿಟ್ಟಿದ್ದಾರೆ. ನೀರು ಬೇಕು ಎಂದು ತಮಿಳುನಾಡು ಸುಪ್ರೀಂ ಕೋರ್ಟ್‌ಗೆ ಅರ್ಜಿ ಹಾಕಿದ ತಕ್ಷಣ ರಾಜ್ಯ ಸರ್ಕಾರ ಹೆದರಿ ನೀರು ಬಿಟ್ಟಿದ್ದೇಕೆ? ಕೋರ್ಟ್‌ಗೆ ಏಕೆ ಆಕ್ಷೇಪ ಸಲ್ಲಿಸಲಿಲ್ಲ. ರಾಜ್ಯದ ಜಲ ಸಂಕಷ್ಟದ ಬಗ್ಗೆ ಏಕೆ ಮನವರಿಕೆ ಮಾಡಿಕೊಡಲಿಲ್ಲ' ಎಂದು ಕೇಳಿದರು.

'ಸಾಬೀತಾದ ಸುಲಿಗೆ'

ಬೆಂಗಳೂರು: 'ಸಚಿವ ಚಲುವರಾಯಸ್ವಾಮಿ ವಿರುದ್ಧ ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ ಎನ್ನಲಾದ ಕೃಷಿ ಇಲಾಖೆಯ ಇಬ್ಬರು ಅಧಿಕಾರಿಗಳನ್ನು ಸಿಐಡಿ ವಶಕ್ಕೆ ಪಡೆಯುವ ಮೂಲಕ, ಈ ಸರ್ಕಾರದಲ್ಲಿ ವರ್ಗಾವಣೆ ದಂಧೆ ಹಾಗೂ ಸಚಿವರಿಂದ ಸುಲಿಗೆ ನಡೆಯುತ್ತಿದೆ ಎನ್ನುವುದು ಸಾಬೀತಾಗಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಭಾನುವಾರ ಜರಗನಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆ ಪತ್ರವು ನಕಲಿಯೋ, ಅಸಲಿಯೋ ಎನ್ನುವುದು ಹಾಗಿರಲಿ. ಆದರೆ, ಕೃಷಿ ಇಲಾಖೆಯಲ್ಲಿ ಸುಲಿಗೆ, ವರ್ಗಾವಣೆ ದಂಧೆ ನಡೆಯುತ್ತಿರುವುದು ಅಸಲಿ ಎನ್ನುವುದು ಗೊತ್ತಾಯಿತಲ್ಲ' ಎಂದರು.

'ಅಧಿಕಾರಿಗಳು ಪತ್ರ ಯಾಕೆ ಬರೆದರು? ಅವರು ಮೈಸೂರಿನವರಾದರೂ ಆಗಲಿ ಅಥವಾ ಮಂಡ್ಯದವರಾದರೂ ಆಗಲಿ. ಸತ್ಯ ಏನೆಂಬುದು ಬಯಲಿಗೆ ಬಂತು' ಎಂದರು.

'ಆರೋಪಿ ಸ್ಥಾನದಲ್ಲಿರುವ ಸಚಿವರೇ ಪ್ರತಿಯೊಂದಕ್ಕೂ ಹೇಳಿಕೆ ಕೊಡುತ್ತಿದ್ದಾರೆ. ಸಿಐಡಿ ಪೊಲೀಸರು ತನಿಖಾ ವರದಿಯನ್ನು ಗೃಹ ಸಚಿವರಿಗೆ ಕೊಡುತ್ತಾರೋ ಅಥವಾ ಮುಖ್ಯಮಂತ್ರಿ ಅವರಿಗೆ ಕೊಡುತ್ತಾರೋ? ಇಲ್ಲವೇ ಆರೋಪಿ ಸ್ಥಾನದಲ್ಲಿರುವ ಸಚಿವರಿಗೆ ಎಲ್ಲಾ ಮಾಹಿತಿಯನ್ನು ಸೋರಿಕೆ ಮಾಡಿತ್ತಾರೋ? ಇದೇನು ತನಿಖೆಯಾ' ಎಂದು ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು.

ಸ್ವದೇಶಿ ನಿರ್ಮಿತ ಡ್ರೋನ್ ಮಾದರಿ ವಿಮಾನ ಹಿರಿಯೂರು ಬಳಿ ಧರೆಗೆ

ತಾಂತ್ರಿಕ ದೋಷ: 'ತಪಸ್' ಪತನ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಸ್ವದೇಶಿ ನಿರ್ಮಿತ ಮಾನವ ರಹಿತ ವಿಮಾನ (ಯುಎವಿ) 'ತಪಸ್' ಪರೀಕ್ಷಾರ್ಥ ಹಾರಾಟದ ವೇಳೆ ತಾಂತ್ರಿಕ ದೋಷದಿಂದ ಹಿರಿಯೂರು ತಾಲ್ಲೂಕಿನ ವದ್ದಿಕೆರೆಯ ಜಮೀನಿನಲ್ಲಿ ಭಾನುವಾರ ಪತನವಾಗಿದೆ. ಘಟನೆಯಲ್ಲಿ ಯಾವುದೇ ಜೀವಹಾನಿ ಆಗಿಲ್ಲ.

ಡ್ರೋನ್ ಮಾದರಿಯ ಈ ವಿಮಾನವನ್ನು ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಅಭಿವೃದ್ಧಿಪಡಿಸಿದೆ. 'ತಪಸ್'ನ ತಾಂತ್ರಿಕ ಅಭಿವೃದ್ಧಿಗಾಗಿ ಚಳ್ಳಕೆರೆ ತಾಲ್ಲೂಕಿನ ನಾಯನಕಹಟ್ಟಿ ಸಮೀಪದ ಕುದಾಪುರ ಏರೋನಾಟಿಕಲ್ ಟೆಸ್ಟ್ ರೇಂಜ್‌ನಿಂದ (ಎಟಿಆರ್) ಭಾನುವಾರ ಬೆಳಿಗ್ಗೆ 6.30ಕ್ಕೆ ಪರೀಕ್ಷಾರ್ಥ ಹಾರಾಟ ನಡೆಸಲಾಗಿತ್ತು. ಹಾಸನದ ವಾಯುನೆಲೆಯನ್ನು ತಲುಪಿ ಮರಳಿ ಬರುವಾಗ ಧರೆಗುರುಳಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

'ಪರೀಕ್ಷಾರ್ಥ ಹಾರಾಟ ನಡೆಸುತ್ತಿದ್ದಾಗ 'ತಪಸ್'ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿತು. ಎಟಿಆರ್ ಸಮೀಪದ ಕೃಷಿ ಭೂಮಿಗೆ ಅಪ್ಪಳಿಸಿದ್ದು, ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಆಗಿಲ್ಲ. ಪತನಕ್ಕೆ ಕಾರಣವನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಡಿಆರ್‌ಡಿಒ ತನ್ನ 'ಎಕ್ಸ್' (ಟ್ವೀಟರ್) ಖಾತೆಯಲ್ಲಿ ಬರೆದುಕೊಂಡಿದೆ.

ನಾಯಕನಹಟ್ಟಿಯಿಂದ ಹಾರಾಟ ಆರಂಭಿಸಿದ್ದ 'ತಪಸ್', 130 ನಿಮಿಷಗಳಲ್ಲಿ ಏರೋನಾಟಿಕಲ್ ಟೆಸ್ಟ್ ರೇಂಜ್‌ಗೆ ಮರಳಬೇಕಿತ್ತು. 8.30ಕ್ಕೆ ಸಂಪರ್ಕ ಕಳೆದುಕೊಂಡು ವದ್ದಿಕೆರೆಯ ಜಮೀನಿಗೆ ಅಪ್ಪಳಿಸಿತು. ಅವಘಡಕ್ಕೆ ಸಂಬಂಧಿಸಿದಂತೆ ಡಿಆರ್‌ಡಿಒ ಸಿಬ್ಬಂದಿ ಜಿಲ್ಲಾ ಪೊಲೀಸರಿಗೆ ಮಾಹಿತಿ ನೀಡಿ ಸ್ಥಳಕ್ಕೆ ಧಾವಿಸಿದರು. ವಿಮಾನದ ಎಲ್ಲ ಅವಶೇಷಗಳನ್ನು ಮರಳಿ ಕುದಾಪುರಕ್ಕೆ ಕೊಂಡೊಯ್ದರು.



ಹಿರಿಯೂರು ತಾಲ್ಲೂಕಿನ ವದ್ದಿಕೆರೆ ಗ್ರಾಮದ ಸಿದ್ದಪ್ಪ ಎಂಬುವರ ಜಮೀನಿನಲ್ಲಿ ಭಾನುವಾರ ಪತನಗೊಂಡಿರುವ ಮಾನವ ರಹಿತ ವಿಮಾನ 'ತಪಸ್'

ಶೇಂಗಾ ಬೆಳೆಗೆ ಹಾನಿ

'ತಪಸ್' ತಪನವಾಗಿದ್ದರಿಂದ ಸಿದ್ಧಪ್ಪ ಎಂಬುವರ ಜಮೀನಿನಲ್ಲಿದ್ದ ಶೇಂಗಾ ಬೆಳೆಗೆ ಹಾನಿಯಾಗಿದೆ. ಕುತೂಹಲದಿಂದ ಜನರು ಜಮೀನಿಗೆ ನುಗ್ಗಿದ್ದರಿಂದ ಕಾಲ್ತುಳಿತಕ್ಕೂ ಬೆಳೆ ನಾಶವಾಗಿದೆ. ಬೆಳೆಹಾನಿಗೆ ಪರಿಹಾರ ನೀಡುವಂತೆ ರೈತ ಸಿದ್ಧಪ್ಪ ಅಧಿಕಾರಿಗಳ ಬಳಿ ಮನವಿ ಮಾಡಿದ್ದಾರೆ.

'ಬೆಳೆ ಹಾನಿಗೆ ಸಂಬಂಧಿಸಿದಂತೆ ಡಿಆರ್‌ಡಿಒ ಗಮನಕ್ಕೆ ತರಲಾಗಿದೆ. ವಿಮಾ ಸೌಲಭ್ಯದಡಿ ಪರಿಹಾರಕ್ಕೆ ಅವಕಾಶ ಇದೆ ಎಂಬುದು ಗೊತ್ತಾಗಿದೆ. ಸ್ಥಳೀಯ ಕಂದಾಯ ಅಧಿಕಾರಿಗಳು ನೀಡಿದ ವರದಿಯನ್ನು ಡಿಆರ್‌ಡಿಒಗೆ ರವಾನಿಸಲಾಗುವುದು' ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಜಿ.ಆರ್.ಜೆ ಅವರು ಮಾಹಿತಿ ನೀಡಿದ್ದಾರೆ.

200 ಬಾರಿ ಹಾರಾಟ

ಮಾನವರಹಿತ ಸುಧಾರಿತ ಕಣ್ಗಾವಲು ವಿಮಾನ 'ತಪಸ್' ಜೂನ್ ತಿಂಗಳಲ್ಲಿ 200ನೇ ಹಾರಾಟ ನಡೆಸಿತ್ತು. ಆಗ ಭೂಸೇನೆ, ವಾಯುಸೇನೆ ಹಾಗೂ ನೌಕಾಪಡೆಯ (ಟ್ರೈ ಸರ್ವಿಸ್) ತಂಡ ಇದನ್ನು ಪರಿಶೀಲಿಸಿತ್ತು. 31 ಅಡಿ ಉದ್ದ, 1,800 ಕೆ.ಜಿ ತೂಕದ ಈ ವಿಮಾನವು 350 ಕೆ.ಜಿ. ಭಾರ ಹೊತ್ತೊಯ್ಯಬಹುದಾದ ಸಾಮರ್ಥ್ಯ ಹೊಂದಿದೆ.

ಭಾರತೀಯ ನೌಕಾಪಡೆಯು ಕಾರವಾರದ ಐಎನ್‌ಎಸ್ ಸುಭದ್ರಾ ನೌಕಾನೆಲೆಯಿಂದ 'ತಪಸ್'ನ ಕಮಾಂಡ್ ಮತ್ತು ಕಂಟ್ರೋಲ್ ಸಾಮರ್ಥ್ಯಗಳನ್ನು ಪರೀಕ್ಷಿಸಲಾಗಿತ್ತು. ತಾಂತ್ರಿಕ ಅಭಿವೃದ್ಧಿಗಾಗಿ ಮತ್ತೊಂದು ಹಂತದ ಪರೀಕ್ಷೆಗೆ ಒಳಪಡಿಸಿದಾಗ ಅನಾಹುತ ಸಂಭವಿಸಿದೆ.

ಹೋರಾಟ ಅನಿವಾರ್ಯ: ಕೂಡಲಸಂಗಮಶ್ರೀ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ದೊರಕದಿದ್ದರೆ, ಹೋರಾಟ ಅನಿವಾರ್ಯ. ಮುಂದಿನ ದಿನಗಳಲ್ಲಿ ಹೋರಾಟದ ಕುರಿತು ಜಿಲ್ಲೆಗಳಲ್ಲಿಯೂ ಸಭೆ ಮಾಡಲಾಗುವುದು. ರಾಜ್ಯಮಟ್ಟದ ಕಾರ್ಯಕಾರಿಣಿ ಸಭೆ ಕರೆದು ಹೋರಾಟ ನಿರ್ಧರಿಸಲಾಗುವುದು' ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮನವಿ ಮಾಡಿದ್ದೇವೆ. ಸಂವಿಧಾನ, ಕಾನೂನು ತಜ್ಞರ ಕರೆದು ಚರ್ಚಿಸಬೇಕು. ಶ್ರಾವಣ ಮಾಸದಲ್ಲಿ ಬೀದಿಯಲ್ಲಿ ಇಷ್ಟಲಿಂಗ ಪೂಜೆ ಮಾಡಿ ಸರ್ಕಾರದ ಗಮನ ಸೆಳೆಯುವ ಕೆಲಸ ಮಾಡಲಾಗುವುದು' ಎಂದರು.

ಆ.30ರಂದು ಸರ್ಕಾರದ ಸಭೆ

'ಕಬ್ಬು ಅಭಿವೃದ್ಧಿ ಕಚೇರಿ ಮುತ್ತಿಗೆ ವಾಪಸ್'

ಪ್ರಜಾವಾಣಿ ವಾರ್ತೆ

ಧಾರವಾಡ: 'ಕಬ್ಬು ಬೆಳೆಗಾರರಿಗೆ ಆಗುತ್ತಿರುವ ಅನ್ಯಾಯ ವಿರೋಧಿಸಿ ಆ.21ರಂದು ಬೆಂಗಳೂರಿನ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ ಕಚೇರಿಗೆ ಮುತ್ತಿಗೆ ಹಾಕುವ ಕಾರ್ಯಕ್ರಮ ತಾತ್ಕಾಲಿಕವಾಗಿ ಹಿಂಪಡೆಯಲಾಗಿದೆ' ಎಂದು ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅವರು ತಿಳಿಸಿದರು.



'ಕಬ್ಬು ಬೆಳೆಗಾರರ ಸಮಸ್ಯೆಗಳ ಕುರಿತು ಚರ್ಚಿಸಲು ಸರ್ಕಾರ ಆ.30ರಂದು ಸಭೆ ಕರೆದಿದೆ. ರಾಜ್ಯದ ಎಲ್ಲ ರೈತ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸುತ್ತೇವೆ' ಎಂದು ಅವರು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಕಬ್ಬು ಕಾರ್ಖಾನೆಗಳು ಬೆಳೆಗಾರರಿಗೆ ಮೋಸ ಮಾಡುತ್ತಿವೆ. ಕಾರ್ಖಾನೆಯವರನ್ನು ಬಗ್ಗಿಸಲು ಸರ್ಕಾರಗಳು ವಿಫಲವಾಗಿವೆ' ಎಂದು ನಾಗೇಂದ್ರ ಅವರು ದೂರಿದರು.

'ಕಬ್ಬು ಬೆಳೆಗಾರರನ್ನು ನಿಕೃಷ್ಟವಾಗಿ ನಡೆಸಿಕೊಳ್ಳುವುದಕ್ಕೆ ಕಡಿವಾಣ ಹಾಕಬೇಕು. ದರ ನಿಗದಿ ಇತ್ಯಾದಿ ಒಪ್ಪಂದಕ್ಕೆ ಸಂಬಂಧಿಸಿದಂತೆ ಏಕಪಕ್ಷೀಯ ನಿರ್ಧಾರ ಕೈಗೊಳ್ಳಬಾರದು. ಬೆಳೆಗಾರರಿಗೆ ಬಾಕಿ ಪಾವತಿಸಬೇಕು ಎಂದು ಆಗ್ರಹಿಸುತ್ತೇವೆ. 30ರಂದು ಸಭೆ ಫಲಪ್ರದವಾಗದಿದ್ದರೆ ರಾಜ್ಯವ್ಯಾಪಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ' ಎಂದು ಅವರು ಎಚ್ಚರಿಕೆ ನೀಡಿದರು.

'ಎಕ್ಸ್‌ಪ್ರೆಸ್ ವೇ ಬಂದ್ ಇಲ್ಲ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುತ್ತಿರುವುದನ್ನು ವಿರೋಧಿಸಿ ಸೋಮವಾರ ಬಿಜೆಪಿ ನಡೆಸುತ್ತಿರುವ ಹೋರಾಟದಲ್ಲಿ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ತಡೆ ಇರುವುದಿಲ್ಲ, ಪ್ರತಿಭಟನೆ ಮಾತ್ರ ನಡೆಸಲಾಗುವುದು' ಎಂದು ಸಂಸದ ಪ್ರತಾಪ ಸಿಂಹ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ತಾಲ್ಲೂಕಿನ ಇಂಡುವಾಳು ಬಳಿ ಎಕ್ಸ್‌ಪ್ರೆಸ್‌ವೇ ತಡೆದು ಬೃಹತ್ ಹೋರಾಟ ನಡೆಸಲಾಗುವುದು ಎಂದು ಬಿಜೆಪಿ ಮುಖಂಡರು ತಿಳಿಸಿದ್ದರು. ಇದಕ್ಕೆ ಸ್ಪಷ್ಟನೆ ನೀಡಿರುವ ಪ್ರತಾಪ, 'ಎಕ್ಸ್‌ಪ್ರೆಸ್ ವೇ ತಡೆ ಕೈಬಿಟ್ಟು ಮಂಡ್ಯದಲ್ಲಿ ಪ್ರತಿಭಟಿಸಲಾಗುವುದು' ಎಂದಿದ್ದಾರೆ.

'ಸಾಂಕೇತಿಕವಾಗಿ ಮಂಡ್ಯದ ಜೆ.ಸಿ ವೃತ್ತದಲ್ಲಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ತಡೆಯಲಾಗುವುದು. ಎಕ್ಸ್‌ಪ್ರೆಸ್‌ವೇ ತಡೆ ನಿರ್ಧಾರ ಕೈಬಿಡಲಾಗಿದೆ' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಪಿ.ಉಮೇಶ್ ತಿಳಿಸಿದರು.

ಕಾಗೋಡು ತಿಮ್ಮಪ್ಪಗೆ 'ದೇವರಾಜ ಅರಸು' ಪ್ರಶಸ್ತಿ ಪ್ರದಾನ

'ಬಿಜೆಪಿಯಿಂದ ಉಳ್ಳವನೇ ಭೂಮಿ ಒಡೆಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಜಿ ಮುಖ್ಯಮಂತ್ರಿ ದೇವರಾಜ ಅರಸರು ಜಾರಿಗೆ ತಂದಿದ್ದು, ಮಾಜಿ ಸಚಿವ ಕಾಗೋಡು ತಿಮ್ಮಪ್ಪನವರು ಹೋರಾಟ ಮಾಡಿದ್ದು ಉಳುವವನೇ ಭೂಮಿ ಒಡೆಯ ಆಗಬೇಕು ಎಂದು. ಆದರೆ, ಬಿಜೆಪಿ ಬಂದ ಮೇಲೆ ಉಳ್ಳವನೇ ಭೂಮಿ ಒಡೆಯ ಎನ್ನುವಂತಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭಾನುವಾರ ನಡೆದ ದೇವರಾಜ ಅರಸು 108ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಕಾಗೋಡು ತಿಮ್ಮಪ್ಪ ಅವರಿಗೆ 'ದೇವರಾಜ ಅರಸು' ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, 'ಕಾಗೋಡು ಹೋರಾಟ ಮತ್ತು ಗೇಣಿ ಹೋರಾಟದ ಫಲಾನುಭವಿಗಳು ಮತ್ತು ಯುವ ಸಮೂಹ ಇದನ್ನು ಅರ್ಥ ಮಾಡಿಕೊಳ್ಳಬೇಕು' ಎಂದರು.

'ದೇವರಾಜ ಅರಸು ಅವರ ಕಾರ್ಯಕ್ರಮಗಳ ಅನುಕೂಲ ಪಡೆದ ಫಲಾನುಭವಿಗಳು ಮತ್ತು ಅವರ ಮಕ್ಕಳು ಶಾಶ್ವತವಾಗಿ ಸಾಮಾಜಿಕ ನ್ಯಾಯದ ಪರವಾಗಿ ಇರಬೇಕು' ಎಂದು ಮುಖ್ಯಮಂತ್ರಿ ಹೇಳಿದರು.

'ಸಂವಿಧಾನದಲ್ಲಿ ಮೀಸಲಾತಿಗೆ ಅವಕಾಶ ಇದ್ದರೂ ಅದು ಜಾರಿ ಆಗಿರಲಿಲ್ಲ. ದೇವರಾಜ ಅರಸು ಮುಖ್ಯಮಂತ್ರಿಯಾಗಿ ಹಾವನೂರು ವರದಿ ತರಿಸಿಕೊಂಡು ಅದನ್ನು ಜಾರಿ ಮಾಡುವ ಎದೆಗಾರಿಕೆ ತೋರಿಸಿದರು. ಹೀಗೆ ಮಾಡುವಾಗ ಎಲ್ಲ ಜಾತಿ-ಸಮುದಾಯಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡರು. ಆ ಮೂಲಕ, ರಾಜ್ಯದಲ್ಲಿ ಸಂವಿಧಾನಬದ್ಧವಾದ ಮೀಸಲಾತಿಯನ್ನು ಜಾರಿಗೆ ತಂದರು' ಎಂದು ವಿವರಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಶಾಸಕ ಬೇಳೂರು ಗೋಪಾಲಕೃಷ್ಣ, ವಿಧಾನ ಪರಿಷತ್ ಸದಸ್ಯ ನಾಗರಾಜ ಯಾದವ್ ಇದ್ದರು.

ಕಾರ್ಯಕ್ರಮಕ್ಕೂ ಮೊದಲು ವಿಧಾನಸೌಧದ ಆವರಣದಲ್ಲಿರುವ ದೇವರಾಜ ಅರಸು ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಮುಖ್ಯಮಂತ್ರಿ, ಬಳಿಕ ದೇವರಾಜ ಅರಸು ಅವರು ಬಳಸುತ್ತಿದ್ದ ಎಂಇಒ 777 ನೋಂದಣಿ ಸಂಖ್ಯೆಯ ಕಪ್ಪು ಬಣ್ಣದ ಬೆಂಜ್ ಕಾರಿನಲ್ಲಿ ವಿಧಾನಸೌಧದ ಆವರಣದಲ್ಲಿ ಸುತ್ತು ಹಾಕಿದರು.



ಕಾಗೋಡು ತಿಮ್ಮಪ್ಪ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ 'ದೇವರಾಜ ಅರಸು' ಪ್ರಶಸ್ತಿ ಪ್ರದಾನ ಮಾಡಿದರು. ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ, ಶಾಸಕ ಬೇಳೂರು ಗೋಪಾಲಕೃಷ್ಣ ಇದ್ದರು —ಪ್ರಜಾವಾಣಿ ಚಿತ್ರ

ಎಲೆಕ್ಟ್ರಾನಿಕ್ ಸಿಟಿಗೆ ಅರಸು ಹೆಸರು

'ಎಲೆಕ್ಟ್ರಾನಿಕ್ ಸಿಟಿಗೆ ದೇವರಾಜ ಅರಸು ಎಲೆಕ್ಟ್ರಾನಿಕ್ ಸಿಟಿ ಎಂದು ಹೆಸರಿಡಲು ಚಿಂತನೆ ಮಾಡಿದ್ದೇನೆ' ಎಂದು ಮುಖ್ಯಮಂತ್ರಿ ಹೇಳಿದರು.

'ಎಲೆಕ್ಟ್ರಾನಿಕ್ ಸಿಟಿಗೆ ಜಮೀನು ಕೊಟ್ಟವರು ದೇವರಾಜ ಅರಸು. ಆದ್ದರಿಂದ, ಅಲ್ಲಿಗೆ ಅವರ ಹೆಸರಿಡುವ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡುತ್ತೇನೆ. ಬೆಂಗಳೂರಿಗೆ ಸಿಲಿಕನ್ ವ್ಯಾಲಿ ಎಂದು ಹೆಸರು ಬಂದಿದ್ದರೆ, ಅದಕ್ಕೆ ದೇವರಾಜ ಅರಸು ಕೊಡುಗೆಯೂ ಇದೆ' ಎಂದರು.

ಭಿನ್ನಮತೀಯ ಚಟುವಟಿಕೆಗೆ ಕಡಿವಾಣ ಹಾಕಲು ಎಐಸಿಸಿ ಅಧ್ಯಕ್ಷರ ಉದ್ದೇಶ

ಮುಖ್ಯಮಂತ್ರಿಗಳಿಗೆ ಸಂದೇಶ?

• ಮಂಜುನಾಥ್ ಹೆಬ್ಬಾರ್

ನವದೆಹಲಿ: ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಮುಖ್ಯಮಂತ್ರಿಗಳ ಜತೆಗೆ ಸದಾ ಸಂಘರ್ಷದಲ್ಲಿರುವ ನಾಯಕರನ್ನು ಸಹ ಸಮಿತಿಯಲ್ಲಿ ಸೇರಿಸಿಕೊಳ್ಳಲಾಗಿದೆ.

ಈ ನಾಯಕರನ್ನು ಸಮಿತಿಯಲ್ಲಿ ಸೇರಿಸಿಕೊಂಡು ಮುಖ್ಯಮಂತ್ರಿಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಪ್ರಯತ್ನಕ್ಕೆ 'ಕೈ' ಹಾಕಲಾಗಿದೆ. ಪಕ್ಷದ ಉನ್ನತ ಸಮಿತಿಯ ಭಾಗವನ್ನಾಗಿ ಮಾಡಿ ಭಿನ್ನಮತೀಯ ಚಟುವಟಿಕೆಗೆ ಕಡಿವಾಣ ಹಾಕುವ ಉದ್ದೇಶವೂ ಇದರ ಹಿಂದಿದೆ.

ರಾಜಸ್ಥಾನದ ಯುವ ನಾಯಕ ಸಚಿನ್ ಪೈಲಟ್ ಅವರು ಅಲ್ಲಿನ ಮುಖ್ಯಮಂತ್ರಿ ಅಶೋಕ ಗೆಹಲೋತ್ ಜತೆಗೆ ನಾಲ್ಕು ವರ್ಷಗಳಿಂದ ಭಿನ್ನಮತ ಹೊಂದಿದ್ದಾರೆ. ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯಾಗಿದ್ದ ಅವರು ಪಕ್ಷ ಬಿಡಲು ಸಜ್ಜಾಗಿದ್ದರು. ಖರ್ಗೆ ಹಾಗೂ ರಾಹುಲ್ ಅವರು ಜೂನ್ ತಿಂಗಳಲ್ಲಿ ಪೈಲಟ್ ಜತೆಗೆ ಮಾತುಕತೆ ನಡೆಸಿ 'ಸಂಧಾನ ಸೂತ್ರ' ಹೆಣೆದಿದ್ದರು. ಬಳಿಕ ಪೈಲಟ್ ಅವರು ಗೆಹಲೋತ್ ಅವರನ್ನು ಟೀಕಿಸುವುದನ್ನು ನಿಲ್ಲಿಸಿದ್ದರು.

ಛತ್ತೀಸಗಢದ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರೊಂದಿಗೆ ಭಿನ್ನಮತ ಹೊಂದಿರುವ ಸಚಿವ ತಾಮ್ರಧ್ವಜ್ ಸಾಹು ಅವರನ್ನು ಸಹ ಸಮಿತಿಯ ಭಾಗವನ್ನಾಗಿ ಮಾಡಲಾಗಿದೆ.

ಹಿಮಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿ ವೀರಭದ್ರ ಸಿಂಗ್ ಪತ್ನಿ ಪ್ರತಿಭಾ ಸಿಂಗ್ ಅವರು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯಾಗಿದ್ದರು. ಸುಖ್ವಿಂದರ್ ಸಿಂಗ್ ಸುಖು ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಾಗಿತ್ತು. ಹಿರಿಯ ನಾಯಕ ಆನಂದ ಶರ್ಮಾ ಅವರೂ ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದರು. ಇದೀಗ, ಪ್ರತಿಭಾ ಸಿಂಗ್ ಹಾಗೂ ಆನಂದ ಶರ್ಮಾ ಅವರನ್ನು ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ಮಾಡಲಾಗಿದೆ.

ಕರ್ನಾಟಕದ ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್ ಅವರು ಮೊದಲಿನಿಂದಲೂ ಸಿದ್ದರಾಮಯ್ಯ ಅವರ ಜತೆಗೆ ಉತ್ತಮ ಬಾಂಧವ್ಯ ಹೊಂದಿದವರು ಅಲ್ಲ. ತಮಗೆ ಸಚಿವ ಸ್ಥಾನ ತಪ್ಪಲು ಸಿದ್ದರಾಮಯ್ಯ ಅವರೇ ಕಾರಣ ಎಂದು ಕೋಪಗೊಂಡಿದ್ದರು. ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ಧತೆ ನಡೆಸಿದ್ದರು. ಪಕ್ಷದ ರಾಷ್ಟ್ರೀಯ ನಾಯಕರು ಮನವೊಲಿಸಿ ರಾಜೀನಾಮೆ ನೀಡದಂತೆ ತಡೆದಿದ್ದರು. ರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಸ್ಥಾನ ನೀಡುವ ಅಭಯ ನೀಡಿದ್ದರು. ಇದೀಗ, ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿದೆ. ಈ ಮೂಲಕ, ಸಿದ್ದರಾಮಯ್ಯ ಅವರಿಗೂ ಪರೋಕ್ಷ ಸಂದೇಶ ರವಾನಿಸಲಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಖರ್ಗೆ ಆಪ್ತ ನಾಸಿರ್ ಹೈಜಂಪ್!

ಮಲ್ಲಿಕಾರ್ಜುನ ಖರ್ಗೆ ಅವರ ಪರಮಾಪ್ತರೆಂದು ಪಕ್ಷದ ವಲಯದಲ್ಲಿ ಗುರುತಿಸಿಕೊಂಡಿರುವ ಕರ್ನಾಟಕದ ರಾಜ್ಯಸಭಾ ಸದಸ್ಯ ಸಯ್ಯದ್ ನಾಸಿರ್ ಹುಸೇನ್ ಅವರನ್ನು ಸಮಿತಿಯ 'ಸಾಮಾನ್ಯ' ಸದಸ್ಯರನ್ನಾಗಿ ನೇಮಿಸುವ ಮೂಲಕ ಬಹುದೊಡ್ಡ ಬಡ್ತಿ ನೀಡಲಾಗಿದೆ. ಈ ವಿಷಯದಲ್ಲಿ ಅವರಿಗೆ ಎಂ.ವೀರಪ್ಪ ಮೊಯಿಲಿ ಹಾಗೂ ಬಿ.ಕೆ.ಹರಿಪ್ರಸಾದ್ ಅವರನ್ನು ಹಿಂದಕ್ಕೆ ಹಾಕಿದ್ದಾರೆ. ಮೊಯಿಲಿ ಹಾಗೂ ಹರಿಪ್ರಸಾದ್ ಅವರನ್ನು 'ಶಾಶ್ವತ ಆಹ್ವಾನಿತರು' ಎಂದು ನೇಮಿಸಲಾಗಿದೆ.

ನಾಸಿರ್ ಅವರು ರಾಜ್ಯಸಭೆಯಲ್ಲಿ ಪಕ್ಷದ ಸಚೇತಕರು ಹಾಗೂ ಕಾಂಗ್ರೆಸ್ ಅಧ್ಯಕ್ಷರ ಕಚೇರಿಯಲ್ಲಿ ಎಐಸಿಸಿ ಸಂಯೋಜಕರು. ಅಂತರಾಷ್ಟ್ರೀಯ ಅಧ್ಯಯನದಲ್ಲಿ ಪಿಎಚ್.ಡಿ ಪಡೆದಿರುವ ಹುಸೇನ್ ಅವರು ಮೈಸೂರು ವಿಶ್ವವಿದ್ಯಾನಿಲಯ ಮತ್ತು ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿ ರಾಜಕೀಯದ ಮೂಲಕ ಪ್ರವರ್ಧಮಾನಕ್ಕೆ ಬಂದವರು. ರಾಜ್ಯಸಭಾ ಸದಸ್ಯರಾದ ಬಳಿಕ ಖರ್ಗೆ ಅವರಿಗೆ ಪರಮಾಪ್ತರಾದವರು.

ಕರ್ನಾಟಕದ ಸಚಿವರಾದ ಕೆ.ಎಚ್.ಮುನಿಯಪ್ಪ, ಎಚ್.ಕೆ.ಪಾಟೀಲ ಹಾಗೂ ದಿನೇಶ್ ಗುಂಡೂರಾವ್ ಅವರು ಈ ಹಿಂದೆ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು. ಮುನಿಯಪ್ಪ ಅವರು ರಾಷ್ಟ್ರ ರಾಜಕಾರಣದಿಂದ ರಾಜ್ಯ ರಾಜಕಾರಣಕ್ಕೆ ಸ್ಥಳಾಂತರ ಆಗಿದ್ದಾರೆ. ಕರ್ನಾಟಕದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರು. ಎಚ್.ಕೆ.ಪಾಟೀಲ ಹಾಗೂ ದಿನೇಶ್ ಗುಂಡೂರಾವ್ ಅವರು ಮಹಾರಾಷ್ಟ್ರ, ಗೋವಾ ರಾಜ್ಯಗಳ ಉಸ್ತುವಾರಿಗಳಾಗಿದ್ದಾರೆ. ಕರ್ನಾಟಕ ಸಚಿವ ಸಂಪುಟದಲ್ಲಿ ಸ್ಥಾನ ಪಡೆದಿರುವುದರಿಂದ ಅವರನ್ನು ರಾಷ್ಟ್ರೀಯ ಸಮಿತಿಯಲ್ಲಿ ಪರಿಗಣಿಸಿಲ್ಲ. ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷರಾಗಿರುವ ಬಿ.ವಿ.ಶ್ರೀನಿವಾಸ್ ಅವರು ಸಮಿತಿಯ ವಿಶೇಷ ಆಹ್ವಾನಿತರಾಗಿದ್ದಾರೆ.

ಖರ್ಗೆ 'ಕೈ'ಗೆ ಹೊಸ ತಂಡ

ಒಂದನೇ ಪುಟದಿಂದ

ಆದರೆ, ಕೋಟಾ ನಿಯಮವನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲಾಗಿದೆಯೇ ಎಂಬುದು ಸ್ಪಷ್ಟವಾಗಿಲ್ಲ. ತಂಡದಲ್ಲಿ ಕೇವಲ ಆರು ಮಹಿಳೆಯರು ಇದ್ದಾರೆ. 50 ವರ್ಷದೊಳಗಿನವರು ಪೈಲಟ್ ಹಾಗೂ ಗೊಗೊಯ್ ಮಾತ್ರ. ವಿಶೇಷ ಆಹ್ವಾನಿತರಲ್ಲಿ ಒಂಬತ್ತು ಮಹಿಳೆಯರು ಇದ್ದಾರೆ. ಆದರೆ, ಕನ್ಹಯ್ಯಾ ಕುಮಾರ್ ಅವರಂತಹ ಯುವ ಮುಖಗಳೂ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಈ ಹಿಂದಿನ ಸಮಿತಿಯಲ್ಲಿದ್ದ ಬಹುತೇಕ ಹಿರಿಯ ನಾಯಕರಿಗೆ ಹೊಸ ಸಮಿತಿಯಲ್ಲಿ ಜಾಗ ಸಿಕ್ಕಿದೆ. ಕೆ.ಸಿ.ವೇಣುಗೋಪಾಲ್, ಪ್ರಿಯಾಂಕಾ ಗಾಂಧಿ ವಾದ್ರಾ, ದಿಗ್ವಿಜಯ್ ಸಿಂಗ್, ಪಿ.ಚಿದಂಬರಂ, ತಾರಿಕ್ ಅನ್ವರ್, ಜೈರಾಮ್ ರಮೇಶ್, ರಣದೀಪ್ ಸಿಂಗ್ ಸುರ್ಜೇವಾಲಾ, ಅಂಬಿಕಾ ಸೋನಿ, ಮೀರಾ ಕುಮಾರ್, ಕುಮಾರಿ ಸೆಲ್ಜಾ ಸೇರಿದಂತೆ ಹೆಚ್ಚಿನವರು ಈ ಹಿಂದಿನ ಸಮಿತಿಯ ಭಾಗವಾಗಿದ್ದರು. ಸಮಿತಿ ರಚನೆ ಬಳಿಕ ದೊಡ್ಡ ಮಟ್ಟದ ಪ್ರತಿರೋಧದ ಧ್ವನಿ ಬಾರದಂತೆ ಖರ್ಗೆ ಅವರು ಮುಂಜಾಗ್ರತೆ ವಹಿಸಿದ್ದಾರೆ.

ರಾಷ್ಟ್ರ ರಾಜಕಾರಣದ ಭಾಗವಾಗುವುದಿಲ್ಲ ಎಂದು ಪ್ರಕಟಿಸಿ ತಮ್ಮ ಚಟುವಟಿಕೆಯನ್ನು ತಿರುವನಂತಪುರಕ್ಕೆ ಸೀಮಿತಗೊಳಿಸಿದ್ದ ಗಾಂಧಿ ಕುಟುಂಬದ ಪರಮಾಪ್ತ ಎ.ಕೆ. ಆ್ಯಂಟನಿ ಅವರು ಸಮಿತಿಯಲ್ಲಿ ಸ್ಥಾನ ಉಳಿಸಿಕೊಂಡಿದ್ದಾರೆ. ಆ್ಯಂಟನಿ ಪುತ್ರ ಅನಿಲ್ ಆ್ಯಂಟನಿ ಅವರು ರಾಹುಲ್ ಗಾಂಧಿ ಅವರನ್ನು ಟೀಕಿಸಿ ಕೆಲವು ತಿಂಗಳ ಹಿಂದೆ ಬಿಜೆಪಿಗೆ ಸೇರ್ಪಡೆಯಾಗಿದ್ದರು. ಅವರನ್ನು ಬಿಜೆಪಿಯ ರಾಷ್ಟ್ರೀಯ ಕಾರ್ಯದರ್ಶಿಯಾಗಿ ಕೆಲವು ದಿನಗಳ ಹಿಂದೆ ನೇಮಿಸಲಾಗಿತ್ತು.

ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಖರ್ಗೆ ಅವರಿಗೆ ತರೂರ್ ಎದುರಾಳಿಯಾಗಿದ್ದರು. ಅವರು ಸಾವಿರಕ್ಕೂ ಹೆಚ್ಚು ಮತಗಳನ್ನು ಪಡೆದಿದ್ದರು. ಸಮಿತಿಯಲ್ಲಿ ತರೂರ್ ಅವರನ್ನು ಸೇರಿಸುವ ಬಗ್ಗೆ ಪಕ್ಷದ ವಲಯದಲ್ಲಿ ಊಹಾಪೋಹಗಳು ಇದ್ದವು. ಆದರೆ, ಹಾಗೇನೂ ಆಗಿಲ್ಲ.

ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಹಾಗೂ ರಾಜಸ್ಥಾನದ ಸಚಿವ ಮಹೇಂದ್ರಜೀತ್ ಸಿಂಗ್ ಮಾಳವಿಯಾ ಸಮಿತಿಗೆ ಅಚ್ಚರಿಯ ಪ್ರವೇಶ ಪಡೆದಿದ್ದಾರೆ. ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಹೀನಾಯವಾಗಿ ಸೋತ ಬಳಿಕವೂ ಚನ್ನಿ ಅವರ ಮೇಲೆ ರಾಷ್ಟ್ರೀಯ ನಾಯಕರು ವಿಶ್ವಾಸ ಉಳಿಸಿಕೊಂಡಿರುವುದು ಪಕ್ಷದ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಆದರೆ, ನವಜ್ಯೋತ್ ಸಿಂಗ್ ಸಿದ್ದು ವಿಷಯದಲ್ಲಿ ರಾಷ್ಟ್ರೀಯ ನಾಯಕರು ಉದಾರತೆ ತೋರಿಲ್ಲ.

'ಪ್ರಜಾಪ್ರಭುತ್ವವನ್ನೇ ಗೌರವಿಸದ ಮೋದಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜೀವ್ ಗಾಂಧಿ ಕಾರ್ಯವೈಖರಿಯನ್ನು ಪ್ರಸ್ತಾಪಿಸಿ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಕುಟುಕಿದರು.

'ರಾಜೀವ್ ಗಾಂಧಿ ಅವರಿಗೆ ಭಾರಿ ಬಹುಮತ ಇದ್ದಾಗ್ಯೂ, ಕೇವಲ ಇಬ್ಬರು ಸಂಸದರನ್ನು ಹೊಂದಿದ್ದ ಪಕ್ಷಗಳೊಂದಿಗೂ ಸಮಾಲೋಚನೆ ನಡೆಸುತ್ತಿದ್ದರು. ಸಂಸತ್ ಹಾಗೂ ಪ್ರಜಾಪ್ರಭುತ್ವಕ್ಕೂ ಉತ್ತರದಾಯಿಯಾಗಿದ್ದರು' ಎಂದು ಹೇಳಿದರು.

ರಾಜೀವ್ ಗಾಂಧಿ ಅವರ ಜಯಂತಿ ಅಂಗವಾಗಿ ರಾಜಸ್ಥಾನ ಮೂಲದ ವನಸ್ಥಲಿ ವಿದ್ಯಾಪೀಠಕ್ಕೆ ರಾಜೀವ್ ಗಾಂಧಿ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ರಾಜೀವ್ ಗಾಂಧಿ ಅವರು ಪ್ರಧಾನಿಯಾಗಿದ್ದಾಗ ಸಮರ್ಪಕವಾದ ಚರ್ಚೆ ನಂತರ ಹಲವಾರು ಮಸೂದೆಗಳನ್ನು ಅಂಗೀಕರಿಸಲಾಗಿತ್ತು. ಈಗಿರುವ ಕೇಂದ್ರ ಸರ್ಕಾರಕ್ಕೆ ರಾಜ್ಯಭೆಯಲ್ಲಿ ಮಸೂದೆಗಳ ಮೇಲೆ ಚರ್ಚೆ ಬೇಕಿಲ್ಲ. ಹಾಗೆಯೇ ಅಂಗೀಕರಿಸಲಾಗುತ್ತಿದೆ' ಎಂದರು.

ಪಕ್ಷಾಂತರ ನಿಷೇಧ ಮಸೂದೆ ಬಗ್ಗೆ ವಿರೋಧ ಪಕ್ಷಗಳು ಹಲವು ಆಕ್ಷೇಪಗಳನ್ನು ಎತ್ತಿದ್ದವು. ಅವುಗಳನ್ನು ಒಪ್ಪಿಕೊಂಡಿದ್ದ ರಾಜೀವ್ ಗಾಂಧಿ, ಮಸೂದೆಯಿಂದ ಕೆಲ ಅಂಶಗಳನ್ನು ತೆಗೆದುಹಾಕಿದ್ದರು. ಇದು ಆಗಿನ ಪ್ರಜಾತಾಂತ್ರಿಕ ಸಂಪ್ರದಾಯವಾಗಿತ್ತು ಎಂದು ಹೇಳಿದರು.



ಗೋಂಧಳಿ ನೃತ್ಯ...

ಕಲಬುರಗಿಯಲ್ಲಿ ಭಾನುವಾರ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಜನ್ಮದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಅರಸು ಭಾವಚಿತ್ರದ ಮೆರವಣಿಗೆಯಲ್ಲಿ ಗೋಂಧಳಿ ಸಮಾಜ ಸುಧಾರಣ ಸಂಘದ ಕಲಾವಿದರ ನೃತ್ಯ ಪ್ರದರ್ಶನ ಗಮನ ಸೆಳೆಯಿತು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಪುಸ್ತಕಗಳಿಗೂ ವೆಂಡಿಂಗ್ ಮಷಿನ್

ಪ್ರಜಾವಾಣಿ ವಾರ್ತೆ

ನವದೆಹಲಿ: ತಿಂಡಿಗಳ ಪೊಟ್ಟಣಗಳು ಅಥವಾ ಕೆಲ ಪಾನೀಯಗಳನ್ನು ಖರೀದಿಸುವಂತೆಯೇ, ಇನ್ನು ಮುಂದೆ ಪುಸ್ತಕಗಳನ್ನು ಕೂಡ ವೆಂಡಿಂಗ್ ಮಷಿನ್ ಮೂಲಕ ಪಡೆಯಬಹುದಾಗಿದೆ.

ರೂಪಾ ಪಬ್ಲಿಕೇಷನ್ಸ್ ಆರಂಭಿಸಿರುವ ಈ ವ್ಯವಸ್ಥೆ ಬೆಂಗಳೂರು, ಚೆನ್ನೈ, ಗುರುಗ್ರಾಮ ಹಾಗೂ ನೋಯ್ಡಾದಲ್ಲಿ ಲಭ್ಯ. ಆಗಸ್ಟ್ 10ರಂದು ಈ ವ್ಯವಸ್ಥೆಗೆ ಚಾಲನೆ ನೀಡಲಾಗಿದ್ದು, ಒಂದು ತಿಂಗಳ ಕಾಲ ಖರೀದಿಗೆ ಅವಕಾಶ ಇರಲಿದೆ.

ಈ ಉದ್ದೇಶಕ್ಕಾಗಿ, ರಾಷ್ಟ್ರೀಯ ಪುಸ್ತಕ ಪ್ರೇಮಿಗಳ ದಿನ'ದ ಅಂಗವಾಗಿ ಸಂಸ್ಥೆಯು ವೆಂಡಿಂಗ್ ಮಷಿನ್‌ಗಳ ಮಾರಾಟ ಮಾಡುವ ಕಂಪನಿ 'ದಾಲ್‌ಚಿನಿ'ಯೊಂದಿಗೆ ಕೈಜೋಡಿಸಿದೆ.

'ಓದುವ ಸಂಸ್ಕೃತಿ ಉತ್ತೇಜಿಸುವುದೇ ಇದರ ಉದ್ದೇಶ. ಭಾರತವು ಜ್ಞಾನ ಮತ್ತು ಆರ್ಥಿಕ ಕ್ಷೇತ್ರದಲ್ಲಿ ದೊಡ್ಡಶಕ್ತಿಯಾಗಿ ಹೊರಹೊಮ್ಮುವಲ್ಲಿ ಇದು ನಿರ್ಣಾಯಕವೆನಿಸಲಿದೆ' ಎಂದು ರೂಪಾ ಪಬ್ಲಿಕೇಷನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಕಪೀಶ್ ಮೆಹ್ರ ಹೇಳಿದ್ದಾರೆ.


'ಈ ವ್ಯವಸ್ಥೆ ಪಾಲುದಾರಿಕೆ ಮಾತ್ರವಲ್ಲ. ಜ್ಞಾನ, ಸಾಹಿತ್ಯ ಹಾಗೂ ಮನಸ್ಸಿಗೆ ಪುಷ್ಟಿ ನೀಡುವುದನ್ನು ಸಂಭ್ರಮಿಸುವುದಾಗಿದೆ' ಎಂದು 'ದಾಲ್‌ಚಿನಿ'ಯ ಸಿಇಒ ಪ್ರೇರಣಾ ಕಲ್ರಾ ಹೇಳಿದ್ದಾರೆ.

'ಬೀಮಾರು' ಹಣೆಪಟ್ಟಿಯಿಂದ ಮುಕ್ತಿ

ಮಧ್ಯಪ್ರದೇಶ ಸರ್ಕಾರದ 'ರಿಪೋರ್ಟ್ ಕಾರ್ಡ್' ಬಿಡುಗಡೆ

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ಸರ್ಕಾರದ 2003ರಿಂದ 2023ರ ವರೆಗಿನ 'ರಿಪೋರ್ಟ್ ಕಾರ್ಡ್' ಅನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ಬಿಡುಗಡೆ ಮಾಡಿದ್ದು, 'ಬಿಜೆಪಿ ಆಡಳಿತವು ರಾಜ್ಯವನ್ನು ಬೀಮಾರು ರಾಜ್ಯಗಳ ಪಟ್ಟಿಯಿಂದ ಹೊರ ತಂದಿದೆ' ಎಂದು ಹೇಳಿದ್ದಾರೆ.

ಭೋಪಾಲ್‌ನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ಸಂಸದ ವಿ.ಡಿ. ಶರ್ಮಾ ಮತ್ತು ಗೃಹ ಸಚಿವ ನರೋತ್ತಮ್ ಮಿಶ್ರಾ ಅವರ ಸಮ್ಮುಖದಲ್ಲಿ ಶಾ ಅವರು 20 ವರ್ಷಗಳ 'ರಿಪೋರ್ಟ್ ಕಾರ್ಡ್' ಬಿಡುಗಡೆಗೊಳಿಸಿದರು.



'ಮಧ್ಯಪ್ರದೇಶವು 1956ರಲ್ಲಿ ಅಸ್ತಿತ್ವಕ್ಕೆ ಬಂದ ಬಳಿಕ 2003ರ ವರೆಗೆ ಐದರಿಂದ ಆರು ವರ್ಷಗಳನ್ನು ಹೊರತುಪಡಿಸಿದರೆ ಉಳಿದ ಅವಧಿಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ನಡೆಸಿದೆ. ಕಾಂಗ್ರೆಸ್ ಆಡಳಿತದಲ್ಲಿ ರಾಜ್ಯವು 'ಬೀಮಾರು' ಪಟ್ಟಿಯಲ್ಲೇ ಉಳಿದಿತ್ತು' ಎಂದು ಶಾ ಅವರು ಹೇಳಿದ್ದಾರೆ.

'ಬಿಜೆಪಿ ಸರ್ಕಾರವು ಹಲವು ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಿ ರಾಜ್ಯವನ್ನು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸಿದೆ' ಎಂದೂ ಬಣ್ಣಿಸಿದ್ದಾರೆ.

'ಬೀಮಾರು' (BIMARU) ಸಂಕ್ಷಿಪ್ತ ಪದವನ್ನು ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರಪ್ರದೇಶ ರಾಜ್ಯಗಳನ್ನು ಉಲ್ಲೇಖಿಸಲು ಬಳಸಲಾಗುತ್ತಿದೆ. ಈ ರಾಜ್ಯಗಳು ಆರ್ಥಿಕ ಬೆಳವಣಿಗೆ, ಆರೋಗ್ಯ, ಶಿಕ್ಷಣ ಮತ್ತು ಇತರ ಕ್ಷೇತ್ರಗಳಲ್ಲಿ ಹಿಂದುಳಿದಿವೆ ಎಂಬುದನ್ನು ಇದು ಸೂಚಿಸಿತ್ತದೆ.

ರಾಜ್ಯದಲ್ಲಿ ಸುಮಾರು 53 ವರ್ಷಗಳ ಕಾಲ ಆಡಳಿತ ನಡೆಸಿರುವ ಕಾಂಗ್ರೆಸ್ ತನ್ನ ಆಡಳಿತಾವಧಿಯ ರಿಪೋರ್ಟ್ ಕಾರ್ಡ್ ಬಿಡುಗಡೆ ಮಾಡಬೇಕು ಎಂದು ಬಿಜೆಪಿಯ ಹಿರಿಯ ಮುಖಂಡರು ಒತ್ತಾಯಿಸಿದ್ದಾರೆ. ಮಧ್ಯಪ್ರದೇಶದಲ್ಲಿ ವಿಧಾನಸಭಾ ಚುನಾವಣೆಯು ಈ ವರ್ಷದ ಕೊನೆಯಲ್ಲಿ ನಡೆಯಲಿದೆ.

ಉತ್ತರಪ್ರದೇಶದ ಹರಗಾಂವ್‌ನಲ್ಲಿ ನಡೆದ ಪ್ರಕರಣ

ಮುಸ್ಲಿಂ ದಂಪತಿಗೆ ಥಳಿಸಿ ಹತ್ಯೆ

ಪ್ರಜಾವಾಣಿ ವಾರ್ತೆ

ಲಖನೌ: ಹಿಂದೂ ಯುವತಿ ಮುಸ್ಲಿಂ ಯುವಕನ ಜೊತೆ ಓಡಿ ಹೋಗಿದ್ದಾಳೆ ಎಂದು ಆರೋಪಿಸಿ ಗುಂಪೊಂದು ಆತನ ತಂದೆ, ತಾಯಿಯನ್ನು ಹತ್ಯೆ ಮಾಡಿರುವ ಪ್ರಕರಣ ಉತ್ತರ ಪ್ರದೇಶದ ಸೀತಾಪುರ ಜಿಲ್ಲೆಯ ಹರಗಾಂವ್ ಪ್ರದೇಶದಲ್ಲಿ ನಡೆದಿದೆ.

'ಅಬ್ಬಾಸ್ ಮತ್ತು ಕಮರುನ್ನಿಸಾ ಎಂಬುವವರ ಮೇಲೆ ಯುವತಿಯ ಕುಟುಂಬದವರು ಹಾಗೂ ನೆರೆಮನೆಯವರು ದೊಣ್ಣೆಯಿಂದ ಸದೆ ಬಡಿದಿದ್ದು, ದಂಪತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಈ ಸಂಬಂಧ ಮೂವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಅಬ್ಬಾಸ್ ಮತ್ತು ಕಮರುನ್ನಿಸಾ ಅವರ ಪುತ್ರ ಶೌಕತ್ ಎಂಬಾತ ಕೆಲವು ವರ್ಷಗಳ ಹಿಂದೆ ಹಿಂದೂ ಬಾಲಕಿಯನ್ನು ಪ್ರೀತಿಸುತ್ತಿದ್ದ ಮತ್ತು ಆಕೆ ಆತನೊಂದಿಗೆ ಓಡಿ ಹೋಗಿದ್ದಳು. ಆಗ ಶೌಕತ್‌ನನ್ನು ಪೊಲೀಸರು ಬಂಧಿಸಿದ್ದರು.

ಶೌಕತ್ ಜೈಲಿನಲ್ಲಿರುವಾಗ ಬಾಲಕಿಗೆ ಹದಿನೆಂಟು ತುಂಬಿದ್ದರಿಂದ ಆಕೆಯ ಮನೆಯವರು ಬೇರೆ ವ್ಯಕ್ತಿಯ ಜೊತೆ ಮದುವೆ ಮಾಡಿದ್ದರು. ಕಳೆದ ಜೂನ್‌ನಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಶೌಕತ್‌ನ ಜೊತೆ ಆಕೆ ಮತ್ತೆ ಓಡಿ ಹೋಗಿದ್ದಳು. ಪೊಲೀಸರು ಅನಂತರ ಇಬ್ಬರನ್ನೂ ಪತ್ತೆ ಹಚ್ಚಿದ್ದರು. ಯುವತಿಯು ಶೌಕತ್ ಜೊತೆಗೆ ತೆರಳಿದ್ದಳು ಎಂದು ಮೂಲಗಳು ಹೇಳಿವೆ.

ಹಲವು ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಿಯಾಗಿದ್ದ ಶೌಕತ್‌ನನ್ನು ಪೊಲೀಸರು ಈಚೆಗೆ ಬಂಧಿಸಿದ್ದರು. ಈ ಸಂದರ್ಭದಲ್ಲಿ ಯುವತಿಯು ತನ್ನ ಮನೆಗೆ ಮರಳಿದ್ದಳು.

ಶೌಕತ್ ಕಳೆದ ಬುಧವಾರ ಜೈಲಿನಿಂದ ಬಿಡುಗಡೆಯಾಗಿದ್ದು, ಯುವತಿಯು ಮತ್ತೆ ಆತನ ಜೊತೆ ಓಡಿ ಹೋಗಿದ್ದಳು. ಇದರಿಂದ ಕುಪಿತರಾದ ಆಕೆಯ ಸಂಬಂಧಿಕರು ಹಾಗೂ ನೆರೆಮನೆಯವರು ಶೌಕತ್‌ನ ತಂದೆ, ತಾಯಿಯನ್ನು ಹತ್ಯೆಮಾಡಿದ್ದಾರೆ ಎಂದೂ ಮೂಲಗಳು ವಿವರಿಸಿವೆ.

ಬಿಜೆಪಿ ಸ್ಥಿತಿ 'ತಬ್ಬಲಿಯು ನೀನಾದೆ ಮಗನೆ'

• ಎಸ್.ರವಿಪ್ರಕಾಶ್


ಸುದ್ದಿ ವಿಶ್ಲೇಷಣೆ

ಬೆಂಗಳೂರು: ವಿಧಾನಸಭಾ ಚುನಾವಣೆ ಸೋಲಿನಿಂದ ಕಂಗೆಟ್ಟಿರುವ ರಾಜ್ಯ ಬಿಜೆಪಿಗೆ ಈಗ ನಾಯಕತ್ವದ ಶೂನ್ಯತೆಯ 'ಗ್ರಹಣ'ದಂತೆ ಬಾಧಿಸಿದೆ. ಪಕ್ಷ ಮುನ್ನಡೆಸುವ ನಾಯಕರಿಲ್ಲದೇ 'ತಬ್ಬಲಿಯು ನಿನಾದೆ ಮಗನೇ' ಎಂಬ ಸ್ಥಿತಿಗೆ ಬಂದು ನಿಂತಿದೆ.

ಬಿಜೆಪಿಯ ಒಂದಷ್ಟು ಶಾಸಕರು ಕಾಂಗ್ರೆಸ್ ಕದ ತಟ್ಟುತ್ತಿದ್ದಾರೆ. ಅವರನ್ನು ಪಕ್ಷದಲ್ಲೇ ಉಳಿಸಿಕೊಳ್ಳಲು ಕೊನೇ ಹಂತದಲ್ಲಿ ಯಡಿಯೂರಪ್ಪ ಅವರೇ ಮಧ್ಯ ಪ್ರವೇಶಿಸಬೇಕಾಗಿದೆ. ಮತ್ತೊಂದೆಡೆ ಕೇಂದ್ರ ಸಚಿವ ಭಗವಂತ ಖೂಬಾ ಮತ್ತು ಶಾಸಕ ಪ್ರಭು ಚವ್ಹಾಣ್ ನಡುವಿನ ಜಗಳ ತಾರಕಕ್ಕೇರಿದೆ. ಲೋಕಸಭಾ ಚುನಾವಣೆಗೆ 8 –9 ತಿಂಗಳು ಬಾಕಿ ಇದ್ದರೂ ಕಾರ್ಯಕರ್ತರಲ್ಲೂ ಉತ್ಸಾಹವೇ ಕಾಣುತ್ತಿಲ್ಲ.

ಶಾಸಕರಾದ ಎಸ್.ಟಿ.ಸೋಮಶೇಖರ್, ಶಿವರಾಮ ಹೆಬ್ಬಾರ್ ಅವರು ಪಕ್ಷದಿಂದ ಒಂದು ಕಾಲನ್ನು ಹೊರ-ತೆಗೆದಿದ್ದಾರೆ. ಕಳೆದ ಚುನಾವಣೆಯಲ್ಲಿ ತಮ್ಮನ್ನು ಸೋಲಿಸಲು ಪಕ್ಷದ ಸ್ಥಳೀಯ ನಾಯಕರು ಪ್ರಯತ್ನಿಸಿದ್ದ-ರು. ಆ ಬಗ್ಗೆ ದೂರು ನೀಡಿದ್ದರೂ ಪಕ್ಷ ಯಾವುದೇ ಕ್ರಮ ಜರುಗಿಸಿಲ್ಲ. ಪಕ್ಷದಲ್ಲಿ ಇದ್ದು ಏನು ಪ್ರಯೋಜನ ಎಂದು ಪ್ರಶ್ನಿಸಿದ್ದಾರೆ. ಪಕ್ಷ ತೊರೆದು ಹೋಗುವವರನ್ನು ತಡೆಯಲು ಬಿ.ಎಸ್. ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಮುಂದಾಗಿದ್ದು, ಅವರ ಮನವೊಲಿಸುವ ಕಸರತ್ತು ನಡೆಸಿದ್ದಾರೆ.

'ಕೇಂದ್ರ ಸಚಿವ ಭಗವಂತ ಖೂಬಾ ತಮ್ಮ ಹತ್ಯೆಗೆ ಸುಪಾರಿ ಕೊಟ್ಟಿದ್ದಾರೆ' ಎಂದು ಶಾಸಕ ಪ್ರಭು ಚವ್ಹಾಣ್ ಆರೋಪ ಮಾಡಿದ್ದಾರೆ. 'ಅವರ ಹತ್ಯೆ ಆದರೆ ನಾನು ಜವಾಬ್ದಾರನಲ್ಲ. ನಾನು ಅಂತ ಕೃತ್ಯಗಳನ್ನು ಮಾಡುವವನಲ್ಲ' ಎಂದು ಖೂಬಾ ಹೇಳಿದ್ದಾರೆ. ಆದರೆ, ಇವರಿಬ್ಬರ ಬೀದಿ ರಂಪಾಟವನ್ನು ಬಗೆಹರಿಸಲು ಯಾವುದೇ ನಾಯಕರು ಮುಂದಾಗಿಲ್ಲ. ಈ ವಿದ್ಯಮಾನ ಪಕ್ಷದ ಹಲವು ನಾಯಕರಿಗೆ ಮುಜುಗರ ಉಂಟು ಮಾಡಿದೆ.



ವಿಧಾನಸಭೆ ಮತ್ತು ವಿಧಾನಪರಿ-ಷತ್ತಿಗೆ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಗಳಿಗೆ ನೇಮಕ ಮಾಡುವ ಬಗ್ಗೆ ಪಕ್ಷದ ವರಿಷ್ಠರೂ ತಲೆ ಕೆಡಿಸಿಕೊಂಡಿಲ್ಲ. ರಾಜ್ಯದ ಯಾವುದೇ ನಾಯಕರನ್ನು ಭೇಟಿ ಮಾಡಲು ವರಿಷ್ಠರು ಆಸಕ್ತಿ ತೋರುತ್ತಿಲ್ಲ. ಹೀಗಾಗಿ ದಿಕ್ಕು ದೆಸೆ ಇಲ್ಲದೆ ಕಂಗೆಟ್ಟು ನಿಂತಿದೆ. ವಿಧಾನಸಭೆ ಚುನಾವಣೆಗೂ ಮುನ್ನ ಪಕ್ಷದ ಸೋಲು– ಗೆಲುವಿನ ಸರಿಯಾದ ಚಿತ್ರಣ ನೀಡದೇ ದಾರಿ ತಪ್ಪಿಸಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರು ಕರ್ನಾಟಕ ಮೂಲದ ಕೇಂದ್ರ ಸಚಿವರ ಬಗ್ಗೆ ಗರಂ ಆಗಿದ್ದಾರೆ. ಯಾರನ್ನೂ ಭೇಟಿ ಮಾಡಲು ಬಯಸುತ್ತಿಲ್ಲ ಎಂದು ಬಿಜೆಪಿ ಮೂಲಗಳು ಹೇಳಿವೆ.

ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪಗಳು ಕೇಳಿಬಂದರೂ ಬಿಜೆಪಿಯ ಅಷ್ಟೇನೂ ಪ್ರಮುಖರಲ್ಲದ ನಾಯಕರ ಹೇಳಿಕೆ ಗಳನ್ನು ನೀಡುವುದನ್ನು ಬಿಟ್ಟರೆ, ವ್ಯವಸ್ಥಿತ ಹೋರಾಟ ರೂಪಿಸುವ ಬಗ್ಗೆ ಯಾರೂ ತಲೆಕೆಡಿಸಿಕೊಂಡಿಲ್ಲ. ಬಸವರಾಜ ಬೊಮ್ಮಾಯಿ ಅವರು ತಮ್ಮ ಇತಿಮಿತಿಯಲ್ಲಿ ಸರ್ಕಾರದ ವಿರುದ್ಧ ಕೆಲವು ಹೋರಾಟಗಳ ಮುಂಚೂಣಿ ವಹಿಸಿದ್ದರು. ಪಕ್ಷದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹದಿನೈದು ದಿನಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಪಕ್ಷದ ಕಾರ್ಯಲಯಕ್ಕೆ ಬಂದು ಹೋಗುತ್ತಿದ್ದಾರೆ. ಮುಂದೇನು ಮಾಡಬೇಕು ಎಂದು ಮಾರ್ಗದರ್ಶನ ಮಾಡುವ ಸ್ಥಾನದಲ್ಲಿ ಈಗ ಯಾರೂ ಇಲ್ಲ. ಕರ್ನಾಟಕ ಬಿಜೆಪಿಯ ಎಲ್ಲ ಆಗು ಹೋಗುಗಳಲ್ಲಿ ಮೂಗು ತೂರಿಸಿ, ಪರೋಕ್ಷವಾಗಿ ನಿಯಂತ್ರಣಕ್ಕೆ ತೆಗೆದು ಕೊಂಡಿದ್ದ ದೆಹಲಿಯ ನಾಯಕರೊಬ್ಬರು ಈಗ ಮೌನಕ್ಕೆ ಶರಣಾದಂತಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಪ್ರತಿ 15 ದಿನಗಳಿಗೊಮ್ಮೆ ಬಂದು ಸಭೆಗಳನ್ನು ಮಾಡಿಹೋಗುತ್ತಿದ್ದ ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್ ಪತ್ತೆ ಇಲ್ಲ.

ಬಿಜೆಪಿಯಲ್ಲಿ ಇಂತಹ ದೊಡ್ಡದು ಶೂನ್ಯ ಸ್ಥಿತಿ ಹಿಂದೆಂದೂ ನಿರ್ಮಾಣ-ವಾಗಿರಲಿಲ್ಲ. ಹಲವು ಚುನಾವಣೆಗಳಲ್ಲಿ ಪಕ್ಷ ಸೋತಾಗಲೂ ನಾಯಕರು ಧೃತಿಗೆ-ಟ್ಟಿರಲಿಲ್ಲ. ಕಾರ್ಯಕರ್ತರಲ್ಲಿ ಉತ್ಸಾಹಕ್ಕೆ ಕೊರತೆ ಇರಲಿಲ್ಲ. ಪುಟಿದೆದ್ದು, ಹೋರಾಟಗಳಲ್ಲಿ ತೊಡಗಿಸಿಕೊಳ್ಳುತ್ತಿ-ದ್ದರು. ಆಗ ಅನಂತಕುಮಾರ್, ಬಿ.ಎಸ್. ಯಡಿಯೂರಪ್ಪ, ಕೆ.ಎಸ್.ಈಶ್ವರಪ್ಪ, ಡಿ.ಎಚ್.ಶಂಕರಮೂರ್ತಿ, ಜಗದೀಶ ಶೆಟ್ಟರ್, ಡಿ.ವಿ.ಸದಾನಂದಗೌಡ, ಮತ್ತಿತರ ನಾಯಕರು ಪಕ್ಷವನ್ನು ಸಾಮೂಹಿಕವಾಗಿ ಮುನ್ನಡೆಸುತ್ತಿದ್ದ-ರು. ಈಗ ಮುಂಚೂಣಿಯಲ್ಲಿರುವ ನಾಯಕರು ಆ ಎತ್ತರವನ್ನು ತಲುಪಲು ಸಾಧ್ಯವಾಗಿಲ್ಲ. ಕೇಂದ್ರ ಸಚಿವರ ಪೈಕಿ ಯಾರಲ್ಲೂ ಪ್ರಬಲ ನಾಯಕತ್ವದ ಲಕ್ಷಣಗಳಿಲ್ಲ. ಯಾರಿಗೂ ಜವಾಬ್ದಾರಿ ಕೊಡದ ಕಾರಣ ಮುನ್ನುಗ್ಗಿ ಕೆಲಸ ಮಾಡುವ ಸ್ಥಿತಿಯಲ್ಲಿ ಯಾವ ನಾಯಕರೂ ಇಲ್ಲ.

ಇತ್ತೀಚೆಗೆ ಬಿ.ಎಸ್.ಯಡಿಯೂರಪ್ಪ ಅವರ ಮನೆಯಲ್ಲಿ ಸಭೆ ನಡೆದಾಗ, ಮುಂದಿನ ವ್ಯವಸ್ಥೆ ಆಗುವವರೆಗೆ ನೀವೇ ನಾಯಕತ್ವ ವಹಿಸಿಕೊಂಡು, ಮಾರ್ಗದರ್ಶನ ಮಾಡಬೇಕು ಎಂದು ಹಲವು ನಾಯಕರು ಅವರಲ್ಲಿ ಮನವಿ ಮಾಡಿದ್ದಾರೆ. ಇದು ಪಕ್ಷದ ಇಂದಿನ ಸ್ಥಿತಿಗೆ ಕೈಗನ್ನಡಿ. ಮುಂದೇನು ಎಂಬುದು ತೋಚುತ್ತಿಲ್ಲ ಎಂಬುದು ನಾಯಕರೊಬ್ಬರ ವಿವರಣೆ.

ಇಂದು ಪ್ರಮುಖ ನಾಯಕರ ಸಭೆ

ಬಿಜೆಪಿ ಪ್ರಮುಖ ನಾಯಕರ ಸಭೆಯನ್ನು ಸೋಮವಾರ ಪಕ್ಷದ ಕಚೇರಿಯಲ್ಲಿ ಏರ್ಪಡಿಸಲಾಗಿದೆ. ಸಭೆಯಲ್ಲಿ ಪಕ್ಷದಿಂದ ಕೆಲವು ಶಾಸಕರು ಕಾಂಗ್ರೆಸ್ ಹೋಗುವುದನ್ನು ತಡೆಯುವುದು ಮತ್ತು ರಾಜ್ಯ ಸರ್ಕಾರದ ವಿರುದ್ಧ ಹೋರಾಟ ಹಮ್ಮಿಕೊಳ್ಳುವ ಬಗ್ಗೆ ಚರ್ಚೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.ಅಲ್ಲದೇ, ಇದೇ 23 ರಂದು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ಹಮ್ಮಿಕೊಂಡಿ ರುವುದಾಗಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

ಅಂದು 5ರಿಂದ 6 ಸಾವಿರ ಜನ ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ. ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಜನಜಾಗೃತಿ ಮೂಡಿಸಲಾಗುವುದು. ವರ್ಗಾವಣೆ ದಂಧೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಪ್ರತಿಯೊಂದು ಹುದ್ದೆಗೂ ಹಣ ನಿಗದಿ ಮಾಡಿ ವಸೂಲಿ ಮಾಡುತ್ತಿದ್ದಾರೆ. ಸರ್ವಾಧಿಕಾರಿ ಧೋರಣೆ ಹೊಂದಿರುವ ಸರ್ಕಾರ ಮಾಧ್ಯಮದರಿಗೂ ಕಿರುಕುಳ ನೀಡುತ್ತಿದ್ದಾರೆ ಎಂದು ಯಡಿಯೂರಪ್ಪ ಹರಿಹಾಯ್ದಿದ್ದಾರೆ.

ಯಶವಂತಪುರದಲ್ಲಿ ಇಬ್ಬರ ಉಚ್ಚಾಟನೆ

ಯಶವಂತಪುರ ಶಾಸಕ ಎಸ್.ಟಿ.ಸೋಮಶೇಖರ್ ನೀಡಿದ ದೂರಿನ ಮೇರೆಗೆ ಯಶವಂತಪುರ ಬಿಜೆಪಿ ಮಂಡಲದ ಮಾಜಿ ಅಧ್ಯಕ್ಷ ಮಾರೇಗೌಡ ಹಾಗೂ ಯಶವಂತಪುರ ಮಂಡಲದ ಉಪಾಧ್ಯಕ್ಷ ಧನಂಜಯ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ಚುನಾವಣೆಯಲ್ಲಿ ತಮ್ಮನ್ನು ಸೋಲಿಸಲು ಯತ್ನಿಸಿದ್ದರು ಎಂದು ಸೋಮಶೇಖರ್ ದೂರು ನೀಡಿದ್ದರು.

'ಬಿಜೆಪಿಗೆ ಈಗ ಬಿಎಸ್‌ವೈ ನೆನಪಾಗಿದೆ'

ಚನ್ನಮ್ಮನ ಕಿತ್ತೂರು(ಬೆಳಗಾವಿ ಜಿಲ್ಲೆ) 'ಯಡಿಯೂರಪ್ಪ ಇಲ್ಲದೆ ಹಾಳಾಗಿ ಹೋದೆವು ಎನ್ನುವುದು ಈಗ ಬಿಜೆಪಿಗೆ ನೆನಪಾಗಿದೆ. ಹೀಗಾಗಿ ಅವರ ನೇತೃತ್ವದಲ್ಲಿ ರಾಜ್ಯ ಘಟಕದ ಅಧ್ಯಕ್ಷರನ್ನು ನೇಮಕ ಮಾಡಬೇಕೆಂಬ ಮಾತುಗಳು ಪಕ್ಷದ ನಾಯಕರಿಂದ ಕೇಳಿಬರುತ್ತಿವೆ' ಎಂದು ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಕುಟುಕಿದರು.

'ಅವಕಾಶ ಸಿಕ್ಕರೆ ಇದೇ ಅವಧಿಯಲ್ಲಿ ಪರಮೇಶ್ವರ ಸಿ.ಎಂ'

ಪ್ರಜಾವಾಣಿ ವಾರ್ತೆ

ತುಮಕೂರು: 'ಅವಕಾಶ ಸಿಕ್ಕರೆ ಇದೇ ಅವಧಿಯಲ್ಲಿ ಸಚಿವ ಜಿ.ಪರಮೇಶ್ವರ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂಬ ಚಿಂತನೆ ಇದೆ' ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದ್ದಾರೆ.

ನಗರದಲ್ಲಿ ಭಾನುವಾರ ಜಿಲ್ಲಾ ಸಹಕಾರ ಸಂಘಗಳ ಒಕ್ಕೂಟದಿಂದ ಹಮ್ಮಿಕೊಂಡಿದ್ದ ನೂತನ ಸಚಿವರು, ಶಾಸಕರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

'ನನ್ನನ್ನು ಸೇರಿದಂತೆ ಶಾಸಕರಾದ ಟಿ.ಬಿ.ಜಯಚಂದ್ರ, ಕೆ.ಷಡಕ್ಷರಿ, ಸಂಸದ ಬಸವರಾಜು ಅವರು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಪರಮೇಶ್ವರ ಅವರಿಗೆ ಮುಖ್ಯಮಂತ್ರಿ ಆಗಬೇಕು ಎಂಬ ಆಸೆ ಇದೆ. ಹೀಗಾಗಿ ಅವರು ಮುಂದಿನ ಬಾರಿಯೂ ಸ್ಪರ್ಧೆ ಮಾಡಬಹುದು' ಎಂದರು.

ಸುದ್ದಿಗಾರರ ಜತೆ ಮಾತನಾಡಿದ ಸಚಿವ ಜಿ.ಪರಮೇ-ಶ್ವರ, 'ರಾಜಣ್ಣ ಅವರು ಸಂತೋಷದ ಸಂದರ್ಭದಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಅದಕ್ಕೆ ಬೇರೆ ಅರ್ಥ ಕಲ್ಪಿಸಲು ಹೋಗಬೇಡಿ' ಎಂದು ಪ್ರತಿಕ್ರಿಯಿಸಿದರು.

ಆಯನೂರು, ಎಸ್‌.ಟಿ.ಸೋಮಶೇಖರ್ ಬೆಂಬಲಿಗರು ಕಾಂಗ್ರೆಸ್‌ನತ್ತ

'ಕೈ'ಗೆ ಪ್ರಮುಖರ ಸೇರ್ಪಡೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವಿಧಾನಸಭೆ ಚುನಾವಣೆಯಲ್ಲಿ ಶಿವಮೊಗ್ಗ ನಗರ ಕ್ಷೇತ್ರದಿಂದ ಬಿಜೆಪಿಯಿಂದ ಟಿಕೆಟ್ ಸಿಗದ ಕಾರಣಕ್ಕೆ ಮುನಿಸಿಕೊಂಡು ಜೆಡಿಎಸ್ ಸೇರಿ ಕಣಕ್ಕಿಳಿದಿದ್ದ ಆಯನೂರು ಮಂಜುನಾಥ್ ಅವರು 'ಕೈ' ಹಿಡಿಯಲು ನಿರ್ಧರಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಪಕ್ಷ ಸೇರ್ಪಡೆ ಕಾರ್ಯಕ್ರಮ ಸೋಮವಾರ ನಡೆಯಲಿದೆ. ಶಿಕಾರಿಪುರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ಸಿಗದೆ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದು ಬಿಜೆಪಿಯ ಬಿ.ವೈ. ವಿಜಯೇಂದ್ರಗೆ ತೀವ್ರ ಸ್ಪರ್ಧೆ ಒಡ್ಡಿದ್ದ ನಾಗರಾಜ್ ಗೌಡ ಮತ್ತು ಯಶವಂತಪುರ ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್ ಅವರ ಬೆಂಬಲಿಗರೂ ಕಾಂಗ್ರೆಸ್ ಸೇರಲಿದ್ದಾರೆ.

ಆ ಮೂಲಕ, ವಿಧಾನಸಭೆ ಚುನಾವಣೆಯ ನಂತರ ಲೋಕಸಭೆ ಚುನಾವಣೆ ಮೇಲೆ ಕಣ್ಣಿಟ್ಟು ಮೊದಲ ಹಂತದ 'ಆಪರೇಷನ್ ಹಸ್ತ'ಕ್ಕೆ ಕಾಂಗ್ರೆಸ್ ಚಾಲನೆ ನೀಡಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಸದಾಶಿವನಗರದಲ್ಲಿರುವ ಅವರ ನಿವಾಸದಲ್ಲಿ ಭಾನುವಾರ ಭೇಟಿ ಮಾಡಿ ಆಯನೂರು ಮಾತುಕತೆ ನಡೆಸಿದ್ದಾರೆ. ನೈರುತ್ಯ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಆಯನೂರು ಕಾಂಗ್ರೆಸ್ ಟಿಕೆಟ್ ಆಕಾಂ-ಕ್ಷಿಯಾಗಿದ್ದಾರೆ.

ಶಿವಕುಮಾರ್ ಅವರನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಆಯನೂರು, 'ಬಿಜೆಪಿ ತೊರೆದಾಗಲೇ ಕಾಂಗ್ರೆಸ್ ಸೇರಲು ತೀರ್ಮಾನಿಸಿದ್ದೆ. ಆದರೆ, ಆಗ ಸೇರ್ಪಡೆಗೆ ಅವಕಾಶ ಇರಲಿಲ್ಲ. ಆ ಸಂದರ್ಭದಲ್ಲಿ ಎಚ್.ಡಿ. ಕುಮಾರಸ್ವಾಮಿ ಅವಕಾಶ ನೀಡಿದ್ದರಿಂದ ಜೆಡಿಎಸ್ ಸೇರಿದ್ದೆ' ಎಂದರು.

'ಪಕ್ಷ ಸೇರ್ಪಡೆ ಬಗ್ಗೆ ಅಧ್ಯಕ್ಷರ ಜೊತೆ ಒಂದು ಹಂತದ ಮಾತುಕತೆಯಾಗಿದೆ. ನಾನು ವಿಧಾನ ಪರಿಷತ್ ಟಿಕೆಟ್ ಆಕಾಂಕ್ಷಿ. ಆದರೆ, ಪಕ್ಷ ಸೇರ್ಪಡೆ ಆಗುವಾಗ ಷರತ್ತು ಹಾಕುವುದಿಲ್ಲ' ಎಂದರು.

ಆಯನೂರು ಮಂಜುನಾಥ ಅವರ ಭೇಟಿ ಕುರಿತು ಪ್ರತಿಕ್ರಿಯಿಸಿದ ಶಿವಕುಮಾರ್, 'ಅನೇಕ ಜನ ನನ್ನನ್ನು ಭೇಟಿ ಮಾಡುತ್ತಿರುತ್ತಾರೆ. ಯಾರು ಯಾವ ಕಾರಣಕ್ಕೆ ಭೇಟಿ ಆಗುತ್ತಿದ್ದಾರೆ ಎಂದು ಹೇಳಲು ಸಾಧ್ಯವೇ?' ಎಂದರು.

ಕುತೂಹಲ ಮೂಡಿಸಿದ ಸಿಎಂ– ಸೋಮಶೇಖರ್ ಭೇಟಿ

ಯಶವಂತಪುರ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭಾನುವಾರ ಸಂಜೆ ಭೇಟಿ ಮಾಡಿ ಕೆಲಹೊತ್ತು ಚರ್ಚೆ ನಡೆಸಿದರು.

ಕಾಂಗ್ರೆಸ್ ತೊರೆದು ಬಿಜೆಪಿ ಸೇರಿ ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಪತನಕ್ಕೆ ಕಾರಣರಾಗಿದ್ದ ಶಾಸಕರ ಪೈಕಿ ಒಬ್ಬರಾದ ಸೋಮಶೇಖರ್ ಅವರು ಮಾತೃಪಕ್ಷ ಸೇರಲು ಮುಂದಾಗಿದ್ದಾರೆಂಬ ಚರ್ಚೆಯ ಮಧ್ಯೆ ನಡೆದ ಬೆಳವಣಿಗೆ ಕುತೂಹಲ ಮೂಡಿಸಿದೆ. ತಮ್ಮ ಕ್ಷೇತ್ರದ ಅಭಿವೃದ್ಧಿ ವಿಷಯದ ಬಗ್ಗೆ ಚರ್ಚಿಸಲು ಸಿದ್ದರಾಮಯ್ಯ ಅವರನ್ನು ಸೋಮಶೇಖರ್ ಮಾಡಿ ಭೇಟಿ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.



ಶಾಸಕರ ಖರೀದಿಸುವ ಪರಿಸ್ಥಿತಿ ಕಾಂಗ್ರೆಸ್‌ಗೆ ಬಂದಿಲ್ಲ: ಖಂಡ್ರೆ

ಪ್ರಜಾವಾಣಿ ವಾರ್ತೆ

ಬೀದರ್: 'ಬಿಜೆಪಿಯವರಂತೆ ಹಣ ಕೊಟ್ಟು ಶಾಸಕರನ್ನು ಖರೀದಿಸುವ ಪರಿಸ್ಥಿತಿ ಕಾಂಗ್ರೆಸ್‌ಗೆ ಬಂದಿಲ್ಲ. ಯಾರಾದರೂ ಕಾಂಗ್ರೆಸ್ ತತ್ವ, ಸಿದ್ಧಾಂತ ಒಪ್ಪಿಕೊಂಡು ಬೇಷರತ್ ಆಗಿ ಪಕ್ಷಕ್ಕೆ ಬರುವುದಾದರೆ ಅಭ್ಯಂತರವಿಲ್ಲ' ಎಂದು ಪರಿಸರ, ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ನಗರದಲ್ಲಿ ಭಾನುವಾರ ಏರ್ಪಡಿಸಿದ್ದ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಜಯಂತಿಯಲ್ಲಿ ಪಾಲ್ಗೊಂಡ ನಂತರ ಪತ್ರಕರ್ತರೊಂದಿಗೆ ಮಾತನಾಡಿದರು.

'ಕಾಂಗ್ರೆಸ್‌ಗೆ ಆಪರೇಷನ್ ಹಸ್ತ ಮಾಡುವ ಅಗತ್ಯವಿಲ್ಲ. ನಮ್ಮ ಪಕ್ಷದ 136 ಜನ ಗೆದ್ದು ಶಾಸಕರಾಗಿದ್ದಾರೆ. ಹೀಗಾಗಿ ಬಿಜೆಪಿಯವರಂತೆ ಹಣ ಕೊಟ್ಟು ಶಾಸಕರ ಖರೀದಿಸುವ ಪರಿಸ್ಥಿತಿ ಕಾಂಗ್ರೆಸ್‌ಗೆ ಬಂದಿಲ್ಲ' ಎಂದು ಹೇಳಿದರು.

'ಕಾಂಗ್ರೆಸ್‌ಗೆ ರಿವರ್ಸ್ ಆಪರೇಷನ್ ಮಾಡುತ್ತೇವೆ ಎಂದು ಬಿಜೆಪಿ ನಾಯಕ ಸಿ.ಟಿ ರವಿ ಹೇಳಿದ್ದಾರೆ. ಅವರಿಗೆ ಜನ ಭಾರಿ ಬಹುಮತದಿಂದ ಗೆಲ್ಲಿಸಿದ್ದಾರಲ್ಲಾ' ಎಂದು ವ್ಯಂಗ್ಯವಾಡಿದರು.

'ರಾಜ್ಯದಲ್ಲಿ ಉತ್ತಮ ಆಡಳಿತ ನೀಡುತ್ತಿದ್ದೇವೆ. ಇದರಿಂದ ಬಿಜೆಪಿಗೆ ಭಯ ಶುರುವಾಗಿದೆ. ಕೇಂದ್ರರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಅವರು ನೀಡುತ್ತಿರುವ ಅಸಂಬದ್ಧವಾದ ಹೇಳಿಕೆ ಗಳಿಗೆ ಪ್ರತಿಕ್ರಿಯಿಸುವುದಿಲ್ಲ. ರಾಜ್ಯದಲ್ಲಿ ಬಿಜೆಪಿ ಸೋತಿದೆ. ಅಧಿಕಾರ ಕಳೆದು ಕೊಂಡಿದ್ದಾರೆ. ಹತಾಶೆಯಿಂದ ಏನೇನೋ ಮಾತನಾಡುತ್ತಿದ್ದಾರೆ' ಎಂದರು

'ಬಿಜೆಪಿ ಭಯ ಯಾವತ್ತೂ ಇದೆ'

ಚಾಮರಾಜನಗರ: 'ಕಾಂಗ್ರೆಸ್‌ಗೆ ಬಿಜೆಪಿಯ ಭಯ ಯಾವಾಗಲೂ ಇದೆ. ಗಡಿಯಾರ ದಂತೆ 24 ಗಂಟೆಯೂ ಅವರು ಏನಾದರೂ ಮಾಡುತ್ತಿರುತ್ತಾರೆ. ಹಾಗಾಗಿ, ಬೇರೆ ಪಕ್ಷಗಳ ಶಾಸಕರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಚರ್ಚೆ ನಡೆಯುತ್ತಿದೆ. ಇದನ್ನು ಆಪರೇಷನ್ ಹಸ್ತ ಎಂದೂ ಕರೆಯಬಹುದು ಅಥವಾ ಘರ್ ವಾಪಸಿ ಎಂದೂ ಹೇಳಬಹುದು' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಭಾನುವಾರ ಹೇಳಿದರು.



ಸತೀಶ ಜಾರಕಿಹೊಳಿ

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಬೇರೆ ಪಕ್ಷದ ಶಾಸಕರು ಕಾಂಗ್ರೆಸ್‌ಗೆ ಬರಲು ಆಸಕ್ತಿ ತೋರುತ್ತಿದ್ದಾರೆ. ಪಕ್ಷದ ತತ್ವ ಸಿದ್ಧಾಂತ ಒಪ್ಪಿ ಬರುವವರಿಗೆ ಸ್ವಾಗತ ಎಂದು ಪಕ್ಷದ ಅಧ್ಯಕ್ಷರು, ಮುಖ್ಯಮಂತ್ರಿ ಹೇಳಿದ್ದಾರೆ. ಆ ಕಡೆಯಿಂದ (ಬಿಜೆಪಿ) 10, ಈ ಕಡೆಯಿಂದ (ಜೆಡಿಎಸ್) 10 ಶಾಸಕರು ಸಂಪರ್ಕದಲ್ಲಿದ್ದಾರೆ' ಎಂದರು.

'ಆಪರೇಷನ್ ಹಸ್ತ ಮಾಡಿದರೆ ರಾಜ್ಯ ರಾಜಕೀಯ ಮತ್ತೆ ಕಲುಷಿತವಾ-ಗುವುದಿಲ್ಲವೇ' ಎಂಬ ಪ್ರಶ್ನೆಗೆ, 'ಬಿಜೆಪಿಯವರಂತೆ ಸರ್ಕಾರ ಉರುಳಿಸಲು ಹೊರಟಿಲ್ಲ. ನಾವಾಗಿಯೇ ಶಾಸಕರನ್ನು ಕರೆದಿಲ್ಲ. ಅವರಾಗಿಯೇ ಆಸಕ್ತಿ ತೋರಿದ್ದಾರೆ. ಈಗ ರಾಜಕೀಯ ವಾತಾವರಣ ಬದಲಾಗಿದೆ. ಪಕ್ಷದಿಂದ ಹೋಗಿದ್ದವರು ಪಶ್ಚಾತ್ತಾಪ ಪಟ್ಟಿದ್ದಾರೆ' ಎಂದು ಹೇಳಿದರು.

ನದಿ ಬಂದರೆ ಸೇರಿಸಿಕೊಳ್ಳುತ್ತೆ: ವೈದ್ಯ

ಕಾರವಾರ: 'ಕಾಂಗ್ರೆಸ್ ಪಕ್ಷ ಸಮುದ್ರದಂತೆ. ಯಾವುದೇ ನದಿ ಹರಿದು ಬಂದರೂ ತನ್ನಲ್ಲಿ ಸೇರಿಸಿಕೊಳ್ಳುತ್ತದೆ' ಎಂದು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಮಂಕಾಳ ವೈದ್ಯ ಹೇಳಿದರು.

ಬಿಜೆಪಿಯ ಕೆಲ ಶಾಸಕರು, ಮಾಜಿ ಶಾಸಕರು ಕಾಂಗ್ರೆಸ್ ಸೇರ್ಪಡೆಗೆ ಯತ್ನಿ-ಸುತ್ತಿರುವ ವದಂತಿಗಳ ಕುರಿತು ಪತ್ರಕರ್ತರ ಪ್ರಶ್ನೆಗೆ ಅವರು ಭಾನುವಾರ ಹೀಗೆ ಪ್ರತಿಕ್ರಿಯಿಸಿದರು.

'ಬೇರೆ ಪಕ್ಷದ ಶಾಸಕರು, ಮಾಜಿ ಶಾಸಕರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಬಗ್ಗೆ ಪಕ್ಷದ ವರಿಷ್ಠರು ನಿರ್ಣಯ ಕೈಗೊಳ್ಳಲಿದ್ದಾರೆ. ಹೆಬ್ಬಾರ್ ನಾನು ದಶಕಗಳಿಂದಲೂ ಒಳ್ಳೆಯ ಸ್ನೇಹಿತರು. ಪಕ್ಷ ಸೇರ್ಪಡೆ ವಿಚಾರದಲ್ಲಿ ಅವರೊಂದಿಗೆ ಯಾವುದೇ ಚರ್ಚೆ ಮಾಡಿಲ್ಲ' ಎಂದರು.

ಶಾಸಕ ಸತೀಶ ಸೈಲ್ ಪ್ರತಿಕ್ರಿಯಿಸಿ, 'ಶಿವರಾಮ ಹೆಬ್ಬಾರ್ ಕಾಂಗ್ರೆಸ್ ಸೇರುವುದು ಅನುಮಾನ' ಎಂದರು.

ಕಬ್ಬು ನುರಿಸಲು ಅನುಮತಿ ಕಡ್ಡಾಯ: ಸಕ್ಕರೆ ಸಚಿವ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಪ್ರತಿಯೊಂದು ಕಾರ್ಖಾನೆಯೂ ಕಡ್ಡಾಯವಾಗಿ ಸಕ್ಕರೆ ಇಲಾಖೆ ಅನುಮತಿ ಪಡೆದು ನವೆಂಬರ್ ತಿಂಗಳಲ್ಲಿ ಅಥವಾ ನವೆಂಬರ್ ನಂತರವೇ ಕಬ್ಬು ನುರಿಸುವಿಕೆ ಪ್ರಕ್ರಿಯೆ ಆರಂಭಿಸಬೇಕು ಎಂಬ ನಿರ್ದೇಶನ ನೀಡಲಾಗಿದೆ' ಎಂದು ಜವಳಿ ಮತ್ತು ಕೈಮಗ್ಗ ಹಾಗೂ ಸಕ್ಕರೆ ಖಾತೆ ಸಚಿವ ಶಿವಾನಂದ ಎಸ್. ಪಾಟೀಲ ತಿಳಿಸಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯದಲ್ಲಿ ಈ ಹಿಂದೆ ಕಟ್ಟುನಿಟ್ಟಾಗಿ ಕಬ್ಬು ನುರಿಸುವಿಕೆ ಪ್ರಕ್ರಿಯೆ ಮಾಡುತ್ತಿರ-ಲಿಲ್ಲ. ಕಾರ್ಖಾನೆಗಳು ತಮ್ಮ ಮರ್ಜಿ ಬಂದಾಗ ನುರಿಸುತ್ತಿದ್ದರು. ಇದನ್ನು ತಪ್ಪಿಸಿ ಬೆಳೆಗಾರರ ಹಿತಕಾಯಲು ಮೊದಲ ಬಾರಿಗೆ ಅನುಮತಿ ಮತ್ತು ನುರಿಸುವಿಕೆ ಅವಧಿ ನಿಗದಿಪಡಿ-ಸಲಾಗಿದೆ. ಮಳೆ ಕೊರತೆಯಿಂದ ಕಬ್ಬಿನಲ್ಲಿನ ಸಕ್ಕರೆ ಪ್ರಮಾಣ ಕಡಿಮೆ ಆಗಲಿದ್ದು, ಉತ್ತಮ ಇಳುವರಿ ಬರಬೇಕಾದರೆ ಸಕಾಲಕ್ಕೆ ನುರಿಸುವುದು ಅವಶ್ಯವಿದೆ. ಸುಮಾರು 74 ಕಾರ್ಖಾನೆಗಳು ಕಬ್ಬು ನುರಿಸಲು ಮುಂದೆ ಬರುವ ನಿರೀಕ್ಷೆ ಇದೆ' ಎಂದರು.

'ಕಳೆದ ವರ್ಷ ಅಫಜಲಪುರದ ಕೆಪಿಆರ್ ಸಕ್ಕರೆ ಕಾರ್ಖಾನೆಯು ಪರವಾನಗಿ ಪಡೆಯದೆ ಮತ್ತು ಬೇರೊಂದು ಕಾರ್ಖಾನೆಯ ಪ್ರದೇಶ-ದಲ್ಲಿನ ಕಬ್ಬು ಖರೀದಿಸಿ ನುರಿಸಿತ್ತು. ಈ ಬಗ್ಗೆ ಹೈಕೋರ್ಟ್, ಸುಪ್ರೀಂಕೋರ್ಟ್ ಮೊರೆ ಹೋಗಲಾಯಿತು. ಕಾರ್ಖಾನೆ ನುರಿಸಿದ್ದ ಸಕ್ಕರೆ ಮತ್ತು ಮೊಲಾಸಿಸ್ ಅನ್ನು ಅಂದಾಜು ಮಾಡಿ ಕೋರ್ಟ್ ನಿರ್ದೇಶನದಂತೆ ಹರಾಜು ಮಾಡಲಾಯಿತು. ಈಗ ₹ 125 ಕೋಟಿ ಕೋರ್ಟ್ ಅಧೀನದಲ್ಲಿದ್ದು, ನಿಯಮ ಉಲ್ಲಂಘಿಸುವವರಿಗೆ ಇದೊಂದು ನಿದರ್ಶನ' ಎಂದು ಎಚ್ಚರಿಸಿದರು.

'ಶೇ 90ರಷ್ಟು ರೈತರಿಗೆ ಕಬ್ಬಿನ ಬಾಕಿ ಹಣ ಪಾವತಿಯಾಗಿದೆ. ನ್ಯಾಯ ಮತ್ತು ಮೌಲ್ಯಾಧಾರಿತ ದರ (ಎಫ್‌ಆರ್‌ಪಿ) ಬಾಕಿ ಉಳಿಸಿಕೊಂಡ ಕಾರ್ಖಾನೆಗಳು ಇದ್ದರೆ ಬೆಳೆಗಾರರು ಇಲಾಖೆ ಗಮನಕ್ಕೆ ತರಬೇಕು. ಅಧಿಕಾರಿಗಳ ಮೂಲಕ ಪಾವತಿಸುವ ವ್ಯವಸ್ಥೆ ಮಾಡಲಾಗುವುದು' ಎಂದರು.

ನಿಷ್ಠಾವಂತರ ಕಡೆಗಣಿಸದಿರಿ: ಹರಿಪ್ರಸಾದ್

ಬೆಂಗಳೂರು: 'ಹೊಸದಾಗಿ ಪಕ್ಷಕ್ಕೆ ಬಂದ ನಾಯಕರುಗಳಿಂದ ವಿರೋಧ ಬಂದರೂ ಲೆಕ್ಕಿಸದೆ ಪಕ್ಷದ ನಿಷ್ಠಾವಂತರಿಗೆ ಅಧಿಕಾರದಲ್ಲಿ ಅವಕಾ-ಶಗಳನ್ನು ಕಲ್ಪಿಸಬೇಕು' ಎಂದು ಪಕ್ಷದ ನಾಯಕರಿಗೆ ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಸಲಹೆ ನೀಡಿದರು.

ಕೆಪಿಸಿಸಿ ಕಚೇರಿಯಲ್ಲಿ ಮಾಜಿ ಪ್ರಧಾನಿ ದಿ. ರಾಜೀವ್ ಗಾಂಧಿ ಮತ್ತು ಮಾಜಿ ಮುಖ್ಯಮಂತ್ರಿ ದಿ. ದೇವರಾಜ ಅರಸು ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರಾಜೀವ್ ಗಾಂಧಿ ಹೇಳಿದಂತೆ ನಡೆದುಕೊಳ್ಳುತ್ತಿದ್ದರು. ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಕೂಡ ಅವರನ್ನೇ ಅನುಸರಿಸುತ್ತಾರೆಂದು ನಾನು ಭಾವಿಸುತ್ತೇನೆ. ಕಾರ್ಯಕರ್ತರು ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ನಮ್ಮವರಿಗೆ ಏನಾದರೂ ಸಹಾಯ ಮಾಡಬೇಕೆನ್ನುವ ಸಂದರ್ಭದಲ್ಲಿ ಹೊಸದಾಗಿ ಪಕ್ಷಕ್ಕೆ ಬಂದ ನಾಯಕರು ಅಡ್ಡಿಪಡಿಸುತ್ತಾರೆ. ಅದನ್ನು ಮೀರಿ ನಿಷ್ಠಾವಂತ ಕಾರ್ಯಕರ್ತರಿಗೆ ರಕ್ಷಣೆ ನೀಡಿದರೆ ಮಾತ್ರ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಜೀವಂತವಾಗಿರಲು ಸಾಧ್ಯ' ಎಂದು ಎಚ್ಚರಿಸಿದರು.

'ಹಿಂದುಳಿದ ವರ್ಗದ ನಾಯಕರಾಗಿದ್ದ ದೇವರಾಜ ಅರಸು ಅವರು ಒಂದು ಸಮುದಾಯಕ್ಕೆ ಆದ್ಯತೆ ನೀಡುತ್ತಿರಲಿಲ್ಲ. ಅತಿ ಸಣ್ಣ ಸಮು-ದಾಯಗಳನ್ನೂ ಗುರುತಿಸುತ್ತಿದ್ದರು. ರಾಜಕೀಯವಾಗಿ ಪ್ರಜಾಪ್ರಭುತ್ವದ-ಲ್ಲಿ, ಪ್ರತಿನಿತ್ಯದ ರಾಜಕಾರಣದಲ್ಲಿ ಎಲ್ಲರನ್ನೂ ಒಳಗೊಂಡು ರಾಜಕಾರಣ ಮಾಡಬೇಕು. ನಾವು ಬಲಾಢ್ಯರು, ನಮ್ಮ ಜನಸಂಖ್ಯೆ ಹೆಚ್ಚಿದೆ, ಅದಕ್ಕಾಗಿ ನಮಗೆ ಮಾತ್ರ ಅವಕಾಶವಿರಬೇಕು ಎಂದು ಪ್ರತಿಪಾದಿಸಿದರೆ, ಅದು ಹೆಚ್ಚು ದಿನ ನಡೆಯದು. ಪ್ರಾದೇಶಿಕವಾರು, ಜಾತಿವಾರು ಪ್ರಾತಿನಿಧ್ಯ ನೀಡಬೇಕು' ಎಂದು ಸಲಹೆ ನೀಡಿದರು.

ಕವನ ಸಂಕಲನ ಆಹ್ವಾನ

ಹುಬ್ಬಳ್ಳಿ: ಡಾ.ಡಿ.ಎಸ್.ಕರ್ಕಿ ವೇದಿಕೆ ಕಾವ್ಯ ಪ್ರಶಸ್ತಿ ನೀಡಲಿದ್ದು, ಆಸಕ್ತರಿಂದ ಕವನ ಸಂಕಲನಗಳನ್ನು ಆಹ್ವಾನಿಸಿದೆ.

ಕವನ ಸಂಕಲನಗಳು 2020, 2021, 2022ನೇ ವರ್ಷದಲ್ಲಿ ಮೊದಲ ಬಾರಿಗೆ ಪ್ರಕಟವಾಗಿರಬೇಕು. ಈ ಮೊದಲು ಪ್ರಶಸ್ತಿ ಪಡೆದಿರಬಾರದು ಎಂದು ತಿಳಿಸಿದ್ದಾರೆ.

ಕಳುಹಿಸಬೇಕಾದ ವಿಳಾಸ: ಎಂ.ಎ. ಸುಬ್ರಹ್ಮಣ್ಯ, ಸಾಹಿತ್ಯ ಪ್ರಕಾಶನ, ಕೊಪ್ಪಿಕರ್ ರಸ್ತೆ, ಹುಬ್ಬಳ್ಳಿ– 580020. ದೂರವಾಣಿ ಸಂಖ್ಯೆ: 9448354805 ಅಥವಾ 9448110034.

ಅಂಗಡಿಯಲ್ಲಿ ಕ್ಷೀರ ಭಾಗ್ಯದ ಪೌಡರ್ ಪತ್ತೆ

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್ ಜಿಲ್ಲೆ): ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆಯ ಕಿರಾಣಿ ಅಂಗಡಿವೊಂದರಲ್ಲಿ ಶಾಲಾ ಮಕ್ಕಳಿಗೆ ವಿತರಿಸುವ ಕ್ಷೀರ ಭಾಗ್ಯ ಹಾಲಿನ ಪೌಡರ್ ಪ್ಯಾಕೆಟ್ ಪತ್ತೆಯಾಗಿವೆ.

1 ಕೆ.ಜಿಯ ಒಟ್ಟು 45 ಹಾಲಿನ ಪೌಡರ್ ಪ್ಯಾಕೆಟ್ ಪತ್ತೆಯಾಗಿವೆ. ಈ ಕುರಿತು ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಯನ್ನು ಕೂಡ ಬಂಧಿಸಲಾಗಿದೆ. ಕಿರಾಣಿ ಅಂಗಡಿಯೊಂದರಲ್ಲಿ ಪ್ಯಾಕೆಟ್ ಇರುವುದು ಗೊತ್ತಾಗಿ ಪೊಲೀಸರಿಗೆ ದೂರು ನೀಡಲಾಗಿದೆ ಎಂದು ತಾಲ್ಲೂಕು ಅಕ್ಷರ ದಾಸೋಹ ಅಧಿಕಾರಿ ಇನಾಯತ್ ಅಲಿ ಸೌದಾಗರ ತಿಳಿಸಿದ್ದಾರೆ.

ಸೌಜನ್ಯಾ ಹೋರಾಟ ಸಮಿತಿಯ ಮಹೇಶ್ ಶೆಟ್ಟಿ ತಿಮರೋಡಿ ಎಚ್ಚರಿಕೆ

ಗೃಹ ಸಚಿವರ ಮನೆಗೂ ತಲುಪಲಿದೆ ಹೋರಾಟ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಸೌಜನ್ಯಾಗೆ ನ್ಯಾಯ ಕೊಡಿಸಲು ರಾಜ್ಯದಾದ್ಯಂತ ನಡೆಯುತ್ತಿರುವ ಹೋರಾಟ ನಾಲ್ಕು ದಿನಗಳಿಗೆ ಸೀಮಿತ ಎಂದು ಭಾವಿಸಬೇಡಿ. ಒಂದು ದಿನ ರಾಜ್ಯದ ಗೃಹ ಸಚಿವರ ಮನೆ ಬಾಗಿಲಿಗೂ ಈ ಹೋರಾಟ ತಲುಪಬಹುದು' ಎಂದು ಸೌಜನ್ಯಾ ಹೋರಾಟ ಸಮಿತಿಯ ಮುಖಂಡ ಮಹೇಶ ಶೆಟ್ಟಿ ತಿಮರೋಡಿ ಎಚ್ಚರಿಸಿದರು.

ಧರ್ಮಸ್ಥಳದಲ್ಲಿ 11 ವರ್ಷಗಳ ಹಿಂದೆ ನಡೆದಿದ್ದ ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಮರುತನಿಖೆಗೆ ಒತ್ತಾಯಿಸಿ ಸೌಜನ್ಯಾ ಹೋರಾಟ ಸಮಿತಿಯ ಮಂಗಳೂರು ಘಟಕದ ಆಶ್ರಯದಲ್ಲಿ ಇಲ್ಲಿ ಭಾನುವಾರ ಏರ್ಪಡಿಸಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

'ಸೌಜನ್ಯಾ ಪ್ರಕರಣದ ತನಿಖೆ ಮುಗಿದ ಅಧ್ಯಾಯ' ಎಂಬ ಗೃಹ ಸಚಿವ ಜಿ. ಪರಮೇಶ್ವರ ಅವರ ಹೇಳಿಕೆಗೆ ಪ್ರತಿ-ಕ್ರಿಯಿಸಿದ ಅವರು, 'ನಿಮ್ಮ ಕುಟುಂಬದ ಹೆಣ್ಣುಮಕ್ಕಳಿಗೆ ಇಂಥ ಸ್ಥಿತಿ ಎದುರಾಗು-ತ್ತಿದ್ದರೆ ಇಂತಹದ್ದೇ ಹೇಳಿಕೆ ನೀಡುವಿರಾ' ಎಂದು ಪ್ರಶ್ನಿಸಿದರು.



ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಮರುತನಿಖೆಗೆ ಒತ್ತಾಯಿಸಿ ಮಂಗಳೂರಿನ ಕದ್ರಿ ಮೈದಾನದಲ್ಲಿ ಭಾನುವಾರ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡ ಜನಸ್ತೋಮ ಪ್ರಜಾವಾಣಿ ಚಿತ್ರ

'ಧರ್ಮದ ಜಾಗದಲ್ಲಿ ಅಧರ್ಮ ತಾಂಡವವಾಡುತ್ತಿದೆ. ಈಗ ಜನರೇ ಕಾಳಿ, ಕೃಷ್ಣನ ಸ್ವರೂಪ ತಾಳ ಬೇಕಾಗುತ್ತದೆ. ದುಡ್ಡಿನ ಬಲದಲ್ಲಿ ಏನು ಬೇಕಾದರೂ ಮಾಡಬಹುದು ಎನ್ನುವುದು ಈಗ ನಡೆಯುವುದಿಲ್ಲ. ಸ್ವಾರ್ಥಕ್ಕಾಗಿ ಹೋರಾಟ ನಡೆಸುತ್ತಿಲ್ಲ. ಕೋಟ್ಯಂತರ ಜನರ ಕಿಚ್ಚು ಇದರಲ್ಲಿ ಅಡಗಿದೆ. 11 ವರ್ಷ ಶಾಂತಿಯುತ ಹೋರಾಟ ನಡೆಸಿದೆವು. ಮುಂದಿನ ಹೋರಾಟ ಇದೇ ರೀತಿ ಇರುವುದಿಲ್ಲ. ಪೇಟಧಾರಿಗಳನ್ನೂ ಬಿಡುವುದಿಲ್ಲ. ಅಗತ್ಯ ಬಿದ್ದರೆ ನಿಮ್ಮ ಮನೆಗೆ ನುಗ್ಗಲೂ ಹಿಂಜರಿಯುವುದಿಲ್ಲ' ಎಂದರು.

ಸೌಜನ್ಯಾ ತಾಯಿ ಕುಸುಮಾವತಿ ಗೌಡ ವೇದಿಕೆಯಲ್ಲೇ ಅಡ್ಡಬಿದ್ದು ನಮಸ್ಕರಿಸಿ 'ಮಗಳಿಗೆ ನ್ಯಾಯಕೊಡಿಸಿ' ಎಂದು ಕಣ್ಣೀರಿಟ್ಟು ಅಂಗಲಾಚಿದರು.

ಸೌಜನ್ಯಾ ಹೋರಾಟ ಸಮಿತಿಯ ಮಂಗಳೂರು ಘಟಕದ ಸಂಚಾಲಕಿ ಪ್ರಸನ್ನಾ ರವಿ, 'ಸೌಜನ್ಯಾಳಿಗೆ ನ್ಯಾಯ ಕೊಡಿಸಲು ಪ್ರತಿಭಟನೆ ನಡೆಸುವುದಾಗಿ ಬಿಜೆಪಿಯವರೂ ತಿಳಿಸಿದ್ದಾರೆ. ಸಂತೋಷವೇ. ಆದರೆ ಆಕೆಯ ಮೇಲೆ ಅತ್ಯಾಚಾರ ನಡೆದಾಗ ನಿಮ್ಮದೇ ಪಕ್ಷದ ಸರ್ಕಾರವಿತ್ತು. ನ್ಯಾಯ ಕೊಡಿಸಲು ಆಗ ನೀವೇನೂ ಮಾಡಿಲ್ಲ ಎಂಬುದನ್ನೂ ನಾವು ಮರೆತಿಲ್ಲ. ನಿಮ್ಮ ನಾಟಕ ನೋಡಿದ್ದೇವೆ. ಸೌಜನ್ಯಾ ಬಗ್ಗೆ ನಿಜವಾದ ಕಾಳಜಿ ಇದ್ದರೆ ರಾಜ್ಯದ ಸಂಸದರೆಲ್ಲ ಸೇರಿ ರಾಷ್ಟ್ರಪತಿ, ಪ್ರಧಾನಿ, ಕೇಂದ್ರದ ಗೃಹ ಸಚಿವರಲ್ಲಿ ಈ ಬಗ್ಗೆ ಒತ್ತಾಯಿಸಲಿ. ನ್ಯಾಯ ಸಿಗದಿದ್ದರೆ ಚುನಾವಣೆ ಬಹಿಷ್ಕ-ರಿಸುತ್ತೇವೆ' ಎಂದರು.

ಪತ್ರಕರ್ತರ ಹೆಸರಲ್ಲಿ ಹಣಕ್ಕೆ ಬೇಡಿಕೆ; ಒಬ್ಬನ ಬಂಧನ

ಬೀದರ್: ಟಿ.ವಿ. 19 ಚಾನೆಲ್‌ನ ಪತ್ರಕರ್ತರು ಎಂದು ಹೇಳಿಕೊಂಡು ನಗರದ ಖಾಸಗಿ ಆಸ್ಪತ್ರೆಯೊಳಗೆ ನುಗ್ಗಿ ಧಮ್ಕಿ ಹಾಕಿ, ಪರೋಕ್ಷವಾಗಿ ಹಣಕ್ಕೆ ಬೇಡಿಕೆ ಇಟ್ಟಿದ್ದ ಆರೋಪದ ಮೇರೆಗೆ ಪೊಲೀಸರು ಮೂವರ ಪೈಕಿ ಒಬ್ಬ ವ್ಯಕ್ತಿಯನ್ನು ಬಂಧಿಸಿದ್ದಾರೆ.

'ಖಾಲಿದ್ ಬಂಧಿತ ವ್ಯಕ್ತಿ. ಈ ವ್ಯಕ್ತಿ ರೌಡಿಶೀಟರ್ ಹಿನ್ನೆಲೆಯವನು. ಈತನೊಂದಿಗೆ ಖಾಸಗಿ ಆಸ್ಪತ್ರೆಗೆ ತೆರಳಿದ್ದ ಅಶ್ವಿನ್ ಹಾಗೂ ಇನ್ನೊಬ್ಬ ವ್ಯಕ್ತಿಯ ಪತ್ತೆಗೆ ಜಾಲ ಬೀಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಎಸ್.ಎಲ್. ತಿಳಿಸಿದ್ದಾರೆ.

ನಗರದ ಗುದಗೆ ಮಲ್ಟಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಆಡಳಿತಾಧಿಕಾರಿ ಖಾನ್ ಹಾಜರಾ ಖಾತೂನ್ ಅವರು ಕೊಟ್ಟ ದೂರಿನ ಮೇರೆಗೆ ಶನಿವಾರ (ಆ.19) ನೂತನ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆಗಸ್ಟ್ 18ರಂದು ರಸ್ತೆ ಅಪಘಾತದಲ್ಲಿ ಇಬ್ಬರು ಗಾಯಗೊಂಡಿದ್ದರು. ಈ ಪೈಕಿ ಒಬ್ಬರು ಸಾವನ್ನಪ್ಪಿದ್ದರು. ಗಾಯಗೊಂಡ ಒಬ್ಬ ವ್ಯಕ್ತಿಯನ್ನು ನಗರದ ಗುದಗೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಖಾಲಿದ್ ಸೇರಿದಂತೆ ಮೂವರು ಟಿ.ವಿ.19 ಚಾನೆಲ್‌ನವರು ಎಂದು ಹೇಳಿಕೊಂಡು ಅನುಮತಿ ಪಡೆಯದೆ ಆಸ್ಪತ್ರೆಯೊಳಗೆ ಪ್ರವೇಶಿಸಿ ಛಾಯಾಚಿತ್ರ, ವಿಡಿಯೊ ಮಾಡಿದ್ದಾರೆ. ಅಪಘಾತಕ್ಕೊಳಗಾದ ರೋಗಿಗಳಿಗೆ ಇಲ್ಲೇಕೆ ಚಿಕಿತ್ಸೆ ನೀಡುತ್ತಿದ್ದೀರಿ? ಎಷ್ಟು ಹಣ ಪಡೆದಿದ್ದೀರಿ ಎಂದು ವಿಚಾರಿಸಿದ್ದಾರೆ. ಅನಂತರ ಛಾಯಾಚಿತ್ರ, ವಿಡಿಯೊ ಎಲ್ಲೆಡೆ ವೈರಲ್ ಮಾಡುತ್ತೇವೆ ಎಂದು ಧಮ್ಕಿ ಹಾಕಿ ಅಸಭ್ಯವಾಗಿ ವರ್ತಿಸಿದ್ದಾರೆ. ಪರೋಕ್ಷವಾಗಿ ಹಣಕ್ಕೂ ಬೇಡಿಕೆ ಇಟ್ಟಿದ್ದಾರೆ ಎಂದು ದೂರಿನಲ್ಲಿ ತಿಳಿಸಿರುವುದಾಗಿ' ಎಸ್ಪಿ ತಿಳಿಸಿದರು.

ಪಾದಚಾರಿ ಸಾವು

ಬೆಂಗಳೂರು: ಬ್ಯಾಟರಾಯನಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ್ದ ಅಪಘಾತದಲ್ಲಿ ಗಾಯಗೊಂಡಿದ್ದ ಮದಿ ಅಳಗನ್ (50) ಅವರು ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಭಾನುವಾರ ಮೃತಪಟ್ಟಿದ್ದಾರೆ.

'ಸ್ಥಳೀಯ ನಿವಾಸಿ ಮದಿ ಅಳಗನ್ ಅವರು ನಾಯಂಡನಹಳ್ಳಿ ಜಂಕ್ಷನ್ ಬಳಿ ಆಗಸ್ಟ್ 19ರಂದು ರಾತ್ರಿ ರಸ್ತೆ ದಾಟುತ್ತಿದ್ದರು. ಅದೇ ಸಂದರ್ಭದಲ್ಲಿ ಅತೀ ವೇಗವಾಗಿ ಬಂದಿದ್ದ ವಾಹನವೊಂದು ಅವರಿಗೆ ಡಿಕ್ಕಿ ಹೊಡೆದಿತ್ತು' ಎಂದು ಪೊಲೀಸರು ಹೇಳಿದರು.

'ಗಾಯಗೊಂಡಿದ್ದ ಅಳಗನ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ. ಅಪಘಾತದ ನಂತರ ವಾಹನ ಸಮೇತ ಚಾಲಕ ಪರಾರಿಯಾಗಿದ್ದಾನೆ. ಆತನ ವಿರುದ್ಧ ತನಿಖೆ ಮುಂದುವರಿಸಲಾಗಿದೆ' ಎಂದರು.

ಚನ್ನಪಟ್ಟಣದಲ್ಲಿ ಬೈಕ್ ಕದ್ದು ಕೃತ್ಯ • ಮುಡಿ ನೀಡಿದ್ದ ಆರೋಪಿಗಳು

ಸರಗಳ್ಳತನ ಯಶಸ್ಸಿಗೆ ಹರಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಎದುರು ವಾಯುವಿಹಾರ ಮಾಡುತ್ತಿದ್ದ ವೃದ್ಧೆಯೊಬ್ಬರ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸುಬ್ರಹ್ಮಣ್ಯಪುರ ನಿವಾಸಿ ಮಂಜುನಾಥ್ ಅಲಿಯಾಸ್ ಮಾಸ್ ಮಂಜ ಹಾಗೂ ಚಿಕ್ಕಮಗಳೂರಿನ ಯತೀಶ್ ಬಂಧಿತರು. ಇವರಿಬ್ಬರು ಆಗಸ್ಟ್ 13ರಂದು ಬೆಳಿಗ್ಗೆ ವೃದ್ಧೆಯ ಸರ ಕಿತ್ತೊಯ್ದಿದ್ದರು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಇಬ್ಬರನ್ನೂ ಬಂಧಿಸಲಾಗಿದೆ. 25 ಗ್ರಾಂ ತೂಕದ ಚಿನ್ನದ ಸರ ಹಾಗೂ ಮೂರು ಬೈಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಂಜುನಾಥ್ ಹಾಗೂ ಯತೀಶ್, ಅಪರಾಧ ಹಿನ್ನೆಲೆಯುಳ್ಳವರು. ಇವರ ವಿರುದ್ಧ ರಾಜ್ಯದ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ' ಎಂದರು.

ಜೈಲಿನಲ್ಲಿ ಪರಿಚಯ: 'ಕೆಲ ಪ್ರಕರಣಗಳಲ್ಲಿ ಇಬ್ಬರನ್ನೂ ಬಂಧಿಸಿ ಜೈಲಿಗೆ ಕಳುಹಿಸಲಾಗಿತ್ತು. ಅಲ್ಲಿಯೇ ಅವರಿಬ್ಬರು ಪರಿಚಯವಾಗಿದ್ದರು. ಜಾಮೀನು ಮೇಲೆ ಹೊರಗೆ ಹೋಗುತ್ತಿದ್ದಂತೆ ಕಳ್ಳತನ ಮಾಡೋಣವೆಂದು ಜೈಲಿನಲ್ಲೇ ಸಂಚು ರೂಪಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕದ್ದ ಬೈಕ್‌ನಲ್ಲಿ ಕೃತ್ಯ: 'ಒಂದೂವರೆ ತಿಂಗಳ ಹಿಂದೆಯಷ್ಟೇ ಇಬ್ಬರೂ ಜೈಲಿನಿಂದ ಹೊರಗೆ ಬಂದಿದ್ದರು. ಸರಗಳ್ಳತನ ಮಾಡಲು ಸಜ್ಜಾಗಿದ್ದ ಇಬ್ಬರೂ ಚನ್ನಪಟ್ಟಣಕ್ಕೆ ಹೋಗಿ ಬೈಕ್ ಕದ್ದಿದ್ದರು. ಅದೇ ಬೈಕ್‌ನಲ್ಲಿ ನಗರಕ್ಕೆ ಬಂದಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಯಾವ ಪ್ರದೇಶದಲ್ಲಿ ಸರಗಳ್ಳತನ ಮಾಡಬೇಕು? ಸಿ.ಸಿ.ಟಿ.ವಿ ಕ್ಯಾಮೆರಾಗಳು ಎಲ್ಲೆಲ್ಲಿವೆ? ಎಂಬಿತ್ಯಾದಿ ಮಾಹಿತಿ ಕಲೆಹಾಕಿದ್ದರು. ಮನೆಯಿಂದ ಹೋಗಿ ಕಳ್ಳತನ ಮಾಡಿದರೆ, ಪೊಲೀಸರಿಗೆ ಸುಳಿವು ಸಿಗಬಹುದೆಂದು ತಿಳಿದಿದ್ದರು. ಅದೇ ಕಾರಣಕ್ಕೆ ಆಗಸ್ಟ್ 13ರಂದು ರಾತ್ರಿ ಪಾಳು ಬಿದ್ದ ಮನೆಯೊಂದರಲ್ಲಿ ಉಳಿದುಕೊಂಡಿದ್ದರು.'

'ಮರುದಿನ ಬೆಳಿಗ್ಗೆ ಅದೇ ಮನೆಯಿಂದ ಗಿರಿನಗರಕ್ಕೆ ಬಂದು ವೃದ್ಧೆಯ ಚಿನ್ನದ ಸರ ಕದ್ದೊಯ್ದಿದ್ದರು. ಬೈಕ್ ಚಲಾಯಿಸುತ್ತಿದ್ದ ಆರೋಪಿ, ಹೆಲ್ಮೆಟ್ ಧರಿಸಿದ್ದ. ಹಿಂಬದಿಯಲ್ಲಿ ಕುಳಿತಿದ್ದ ಇನ್ನೊಬ್ಬ ಆರೋಪಿ, ಮಾಸ್ಕ್ ಮಾತ್ರ ಧರಿಸಿದ್ದ' ಎಂದು ಹೇಳಿವೆ.

ದೇವರಿಗೆ ಮುಡಿ: 'ಆರೋಪಿಗಳು ಚಿನ್ನದ ಸರವನ್ನು ಅಡವಿಟ್ಟು, ಹಣ ಪಡೆದಿದ್ದರು. ಕಳ್ಳತನ ಯಶಸ್ವಿಯಾದರೆ ಮುಡಿ ನೀಡುವುದಾಗಿ ಆರೋಪಿ ಮಂಜುನಾಥ್ ಹರಕೆ ಹೊತ್ತಿದ್ದ. ಹೀಗಾಗಿ, ಯತೀಶ್ ಹಾಗೂ ನಾಲ್ವರು ಸ್ನೇಹಿತರ ಜೊತೆ ಕಾರಿನಲ್ಲಿ ಮಲೆ ಮಹದೇಶ್ವರ ಸ್ವಾಮಿ ದೇವಾಲಯಕ್ಕೆ ಹೋಗಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮಂಜುನಾಥ್ ಹಾಗೂ ಇತರರು, ದೇವರಿಗೆ ಮುಡಿ ನೀಡಿದ್ದರು. ನಂತರ, ನಾಗಮಲೈಗೆ ಹೋಗಿ ವಾಪಸು ಬೆಂಗಳೂರಿಗೆ ಬಂದಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಬೈಕ್ ಬಿಟ್ಟು 2 ಕಿ.ಮೀ ನಡಿಗೆ: 'ಕೃತ್ಯದ ಬಗ್ಗೆ ಸುಳಿವು ಸಿಗಬಾರದೆಂದು ಆರೋಪಿಗಳು ವ್ಯವಸ್ಥಿತ ಸಂಚು ರೂಪಿಸಿದ್ದರು. ವೃದ್ಧೆ ಸರ ಕಿತ್ತುಕೊಂಡು ಹಲವೆಡೆ ಸುತ್ತಾಡಿದ್ದ ಅವರು, ರಸ್ತೆ ಪಕ್ಕದಲ್ಲಿ ಬೈಕ್ ನಿಲ್ಲಿಸಿದ್ದರು. ಅಲ್ಲಿಂದ 2 ಕಿ.ಮೀ ನಡೆದುಕೊಂಡು ನಿರ್ಜನ ಪ್ರದೇಶದ ಮೂಲಕ ಪರಾರಿಯಾಗಿದ್ದರು. ಮೊಬೈಲ್ ಸಹ ಬಳಕೆ ಮಾಡುತ್ತಿರಲಿಲ್ಲ' ಎಂದು ಮೂಲಗಳು ತಿಳಿಸಿವೆ.

ಪತ್ನಿ, ಮಗುವಿಗೆ ಗುಂಡಿಕ್ಕಿ ಬಳಿಕ ಆತ್ಮಹತ್ಯೆ

ದಾವಣಗೆರೆ: ಅಮೆರಿಕದ ಮೇರಿಲ್ಯಾಂಡ್‌ನ ಬಾಲ್ಟಿಮೋರ್‌ನಲ್ಲಿ ದಾವಣಗೆರೆ ಮೂಲದ ಒಂದೇ ಕುಟುಂಬದ ಮೂವರ ನಿಗೂಢ ಸಾವಿನ ಪ್ರಕರಣದ ಕುರಿತು ಪೊಲೀಸರು ಮಾಹಿತಿ ನೀಡಿದ್ದು, ಕುಟುಂಬದ ಮುಖ್ಯಸ್ಥ ಎಚ್.ಎನ್. ಯೋಗೇಶ್ ಅವರು ಪತ್ನಿ ವೈ.ಎ.ಪ್ರತಿಭಾ ಹಾಗೂ ಪುತ್ರ ಯಶ್ ಅವರನ್ನು ಗುಂಡಿಕ್ಕಿ ಹತ್ಯೆ ಮಾಡಿದ ಬಳಿಕ ತಾವೂ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಗಿ ತಿಳಿಸಿದ್ದಾರೆ.

ಎಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದ ಯೋಗೇಶ್ ದಂಪತಿ 9 ವರ್ಷಗಳಿಂದ ಬಾಲ್ಟಿಮೋರ್‌ನಲ್ಲಿ ನೆಲೆಸಿದ್ದರು. 'ಮೂವರ ಮೃತದೇಹಗಳಲ್ಲೂ ಗುಂಡುಗಳು ಪತ್ತೆಯಾಗಿವೆ. ಪ್ರಾಥಮಿಕ ತನಿಖೆಯಿಂದ ಇದೊಂದು ಕೊಲೆ, ಆತ್ಮಹತ್ಯೆ ಎಂಬುದು ಗೊತ್ತಾಗಿದೆ. ತನಿಖೆ ಪ್ರಗತಿಯ ಹಂತದಲ್ಲಿದೆ. ಆಗಸ್ಟ್ 15ರಂದು ದಂಪತಿ ಕೊನೆ ಬಾರಿ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದರು' ಎಂದು ಬಾಲ್ಟಿಮೋರ್ ಕೌಂಟಿ ಪೊಲೀಸರು ತಿಳಿಸಿದ್ದಾಗಿ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.



ವಾದ್ಯವೃಂದ

77ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ನಗರದ ಲುಲು ಮಾಲ್‌ನಲ್ಲಿ ಭಾನುವಾರ ಭಾರತೀಯ ವಾಯು ಪಡೆಯ ಬ್ಯಾಂಡ್ ತಂಡವು ಸಂಗೀತ ಕಛೇರಿ ಪ್ರಸ್ತುತಪಡಿಸಿತು –ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಹತ್ಯೆಗೆ ಸಂಚು: ರೌಡಿ ರಘುಗೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈಲಿನಿಂದ ಹೊರಬರುತ್ತಿದ್ದಂತೆ ರೌಡಿ ಮಹೇಶ್‌ನನ್ನು ಹತ್ಯೆ ಮಾಡಿದ್ದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಸಿಸಿಬಿ ಪೊಲೀಸರು, ಹಲವು ರೌಡಿಗಳನ್ನು ವಶಕ್ಕೆ ಪಡೆದು ಎಚ್ಚರಿಕೆ ನೀಡಿ ಮುಚ್ಚಳಿಕೆ ಬರೆಸಿಕೊಳ್ಳುತ್ತಿದ್ದಾರೆ.

ಸಿದ್ದಾಪುರ ಠಾಣೆಯ ರೌಡಿ ಪಟ್ಟಿಯಲ್ಲಿ ಹೆಸರಿದ್ದ ಮಹೇಶ್‌ನನ್ನು ಆಗಸ್ಟ್ 4ರಂದು ಹತ್ಯೆ ಮಾಡಲಾಗಿತ್ತು. ರೌಡಿ ವಿಲ್ಸನ್ ಗಾರ್ಡನ್ ನಾಗ, ಮೀಟರ್ ಮೋಹನ್ ಹಾಗೂ ಇತರರು ಕೃತ್ಯ ಎಸಗಿದ್ದರೆಂಬುದು ತನಿಖೆಯಿಂದ ಗೊತ್ತಾಗಿತ್ತು. ಇಬ್ಬರೂ ಪ್ರಮುಖ ಆರೋಪಿಗಳು ಈಗಾಗಲೇ ನ್ಯಾಯಾಲಯಕ್ಕೆ ಶರಣಾಗಿದ್ದಾರೆ.

ಇದರ ಬೆನ್ನಲ್ಲೇ ರೌಡಿ ಬೇಕರಿ ರಘುನನ್ನು ಹತ್ಯೆ ಮಾಡಲು ತಂಡವೊಂದು ಸಂಚು ರೂಪಿಸುತ್ತಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ಲಭ್ಯವಾಗಿದೆ. ಇದೇ ಕಾರಣಕ್ಕೆ ಸಿಸಿಬಿ ಪೊಲೀಸರು, ಬೇಕರಿ ರಘುನನ್ನು ಇತ್ತೀಚೆಗೆ ವಿಚಾರಣೆ ನಡೆಸಿ ಎಚ್ಚರಿಕೆ ನೀಡಿದ್ದಾರೆ.

'ರೌಡಿ ಸೈಕಲ್ ರವಿ ಸಹಚರನಾಗಿರುವ ರಘು ವಿರುದ್ಧ 20 ಪ್ರಕರಣಗಳು ದಾಖಲಾಗಿವೆ. ಹನುಮಂತನಗರ ಠಾಣೆಯ ರೌಡಿ ಪಟ್ಟಿಯಲ್ಲಿ ಈತನ ಹೆಸರಿದೆ. ಜೊತೆಗೆ, ಈತ ಹಲವು ದಿನಗಳಿಂದ ಆಂಧ್ರಪ್ರದೇಶದಲ್ಲಿ ನೆಲೆಸಿದ್ದಾನೆ. ಈತನನ್ನು ಕೊಲೆ ಮಾಡಲು ಎದುರಾಳಿ ತಂಡದವರು ಸಂಚು ರೂಪಿಸುತ್ತಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ. ಹೀಗಾಗಿ, ರಘುನನ್ನು ಕಚೇರಿಗೆ ಕರೆಸಿ ಎಚ್ಚರಿಕೆ ನೀಡಲಾಗಿದೆ. ಅಪರಾಧ ಕೃತ್ಯಗಳಲ್ಲಿ ಭಾಗಿಯಾಗದಂತೆ ಮುಚ್ಚಳಿಕೆ ಬರೆಸಿಕೊಳ್ಳಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ನಗರದ ಹಲವು ರೌಡಿಗಳ ನಡುವೆ ವೈಷಮ್ಯವಿದೆ. ಅದೇ ಕಾರಣಕ್ಕೆ, ಪರಸ್ಪರ ಹಲ್ಲೆ ಹಾಗೂ ಕೊಲೆ ಮಾಡಲು ಸಂಚು ರೂಪಿಸುತ್ತಿದ್ದಾರೆ. ಇಂಥ ರೌಡಿಗಳ ಮೇಲೆ ನಿಗಾ ವಹಿಸಲಾಗಿದೆ' ಎಂದು ತಿಳಿಸಿವೆ.

ವಾಯು ಪಡೆ ಜಾಗಕ್ಕೆ ಪ್ರವೇಶ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಚ್‌ಎಎಲ್ ಬಳಿಯ ವಾಯುಪಡೆ ಜಾಗಕ್ಕೆ ಅಕ್ರಮವಾಗಿ ಪ್ರವೇಶಿಸಿದ್ದ ರಾಜ್‌ಕುಮಾರ್ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

'ಪಶ್ಚಿಮ ಬಂಗಾಳದ ರಾಜ್‌ಕುಮಾರ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ವಾಯುಪಡೆ-ಜಾಗದಲ್ಲಿ ಸುತ್ತಾಡುತ್ತಿದ್ದ ಈತನನ್ನು ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದು ಠಾಣೆಗೆ ಒಪ್ಪಿಸಿದ್ದಾರೆ. ಅಕ್ರಮ ಪ್ರವೇಶ ಆರೋಪದಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನೀಲಿ ಬಣ್ಣದ ಕುರ್ತಾ ಧರಿಸಿದ್ದ ರಾಜ್‌ಕುಮಾರ್, ಪಾನಮತ್ತನಾಗಿ ವಾಯುಪಡೆಯ ತಾಂತ್ರಿಕ ವಿಭಾಗದ ಜಾಗದೊಳಗೆ ಹೋಗಿದ್ದ. ಆತನನ್ನು ನೋಡಿದ್ದ ಭದ್ರತಾ ಸಿಬ್ಬಂದಿ, ಸುತ್ತುವರೆದು ಹಿಡಿದಿದ್ದರು. ಆರೋಪಿಯನ್ನು ವಿಚಾರಣೆ ಮಾಡಲಾಗಿದೆ. ಈತನ ವಿರುದ್ಧ ಯಾವುದೇ ಅಪರಾಧ ಪ್ರಕರಣಗಳಿಲ್ಲ' ಎಂದು ತಿಳಿಸಿವೆ.

'ವಾಯುಪಡೆ ಜಾಗದ ಸುತ್ತಮುತ್ತ ಭದ್ರತೆ ಹೆಚ್ಚಿದೆ. ಇದರ ನಡುವೆಯೇ ಆರೋಪಿ, ಒಳಗೆ ನುಗ್ಗಿದ್ದಾನೆ. ಮದ್ಯದ ಅಮಲಿನಲ್ಲಿ ತನಗೆ ಅರಿವಿಲ್ಲದಂತೆ ಒಳಗೆ ಹೋಗಿದ್ದಾಗಿ ಆತ ಹೇಳುತ್ತಿದ್ದಾನೆ' ಎಂದು ಮೂಲಗಳು ವಿವರಿಸಿವೆ.

ದೊಡ್ಡಜಾಲ ಗ್ರಾ.ಪಂ: ಬೈರೇಗೌಡ ಆಯ್ಕೆ



ಯಲಹಂಕ: ದೊಡ್ಡಜಾಲ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಆರ್.ಬೈರೇಗೌಡ, ಉಪಾಧ್ಯಕ್ಷರಾಗಿ ಗೌರಮ್ಮ ಕೃಷ್ಣಪ್ಪ ಅವಿರೋಧವಾಗಿ ಆಯ್ಕೆ ಆಗಿದ್ದಾರೆ. ಸದಸ್ಯರಾದ ಮಹೇಶ್ ಕುಮಾರ್, ಪ್ರಕಾಶ್, ಚೇತನ್, ಹಂಸವೇಣಿ, ಭಾಗ್ಯಮ್ಮ, ರತ್ನಮ್ಮ, ಶೃತಿ, ಗೀತಾ, ಕಾಂಗ್ರೆಸ್ ಮುಖಂಡರಾದ ದಾನೇಗೌಡ, ಗೋವಿಂದರಾಜ್, ಶಿವಕುಮಾರ್ ಇದ್ದರು.

40 ಬಾರಿ ನಿಯಮ ಉಲ್ಲಂಘನೆ: ಸವಾರನಿಗೆ ₹ 12 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮಗಳನ್ನು 40 ಬಾರಿ ಉಲ್ಲಂಘಿಸಿದ್ದ ಬೈಕ್ ಸವಾರರೊಬ್ಬರಿಗೆ ಪೊಲೀಸರು ₹ 12 ಸಾವಿರ ದಂಡ ವಿಧಿಸಿದ್ದಾರೆ.

ತಲಘಟ್ಟಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಶನಿವಾರ ಹೊರಟಿದ್ದ ಬೈಕ್ ಸವಾರರೊಬ್ಬರನ್ನು ಪೊಲೀಸರು ತಡೆದು ನಿಲ್ಲಿಸಿದ್ದರು. ವಾಹನಗಳ ಮೇಲೆ ದಾಖಲಾಗಿದ್ದ ಪ್ರಕರಣಗಳ ಬಗ್ಗೆ ಉಪಕರಣದಲ್ಲಿ ಪರಿಶೀಲನೆ ನಡೆಸಿದ್ದರು. ಇದೇ ವೇಳೆ ಬೈಕ್ ಮೇಲೆ ₹ 12 ಸಾವಿರ ದಂಡವಿರುವುದು ಗೊತ್ತಾಗಿತ್ತು.

ಸವಾರನಿಗೆ ರಶೀದಿ ನೀಡಿದ್ದ ಪೊಲೀಸರು, ದಂಡ ಸಂಗ್ರಹಿಸಿದ್ದಾರೆ. ಇದರ ಫೋಟೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ.

'ಸಂಚಾರ ನಿಯಮ ಉಲ್ಲಂಘನೆಯು ಫೋಟೊ ಸಮೇತ ಕ್ಯಾಮೆರಾದಲ್ಲಿ ಸೆರೆಯಾಗುತ್ತಿದೆ. ಇದರ ಸಹಾಯದಿಂದಲೇ ಇದೀಗ ಬೈಕ್ ಸವಾರನಿಂದ ₹ 12 ಸಾವಿರ ದಂಡ ಸಂಗ್ರಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.



ಸಂಚಾರ ನಿಯಮಗಳನ್ನು 40 ಬಾರಿ ಉಲ್ಲಂಘಿಸಿದ್ದ ಬೈಕ್ ಸವಾರನಿಗೆ ಪೊಲೀಸರು ದಂಡದ ರಶೀದಿ ನೀಡಿದರು

ಸುದ್ದಿ 2 ನಿಮಿಷ

'ಪಪ್ಸ್‌ಗಾಗಿ' ಗಲಾಟೆ: ಇಬ್ಬರ ಬಂಧನ

ಬೆಂಗಳೂರು: ತುಂಗಾನಗರ ಮುಖ್ಯರಸ್ತೆಯಲ್ಲಿರುವ 'ಶ್ರೀ ಮಂಜುನಾಥ್ ಕೇಕ್ ಕಾರ್ನರ್ಸ್ ಸ್ವೀಟ್ಸ್' ಬೇಕರಿಗೆ ನುಗ್ಗಿ ಗಲಾಟೆ ಮಾಡಿ ಮಾಲೀಕರಿಗೆ ಜೀವ ಬೆದರಿಕೆಯೊಡ್ಡಿದ್ದ ಇಬ್ಬರು ಆರೋಪಿಗಳನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಟೊ ಚಾಲಕರಾದ ಬಸವರಾಜ್ (33) ಹಾಗೂ ಭರತ್ (25) ಬಂಧಿತರು. ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಆರೋಪಿಯೊಬ್ಬ ಇತ್ತೀಚೆಗೆ ಬೇಕರಿಗೆ ಹೋಗಿದ್ದ. ಪಪ್ಸ್ ಖರೀದಿ ವಿಚಾರವಾಗಿ ಮಾಲೀಕನ ಜೊತೆ ಗಲಾಟೆ ಮಾಡಿದ್ದ. ಪರಿಸ್ಥಿತಿ ವಿಕೋಪಕ್ಕೆ ತಿರುಗಿತ್ತು. ಆರೋಪಿ ಹಾಗೂ ಮಾಲೀಕ, ಪರಸ್ಪರ ಬೈದಾಡಿಕೊಂಡಿದ್ದರು.'

'ಕೋಪದಲ್ಲಿ ಹೊರಟು ಹೋಗಿದ್ದ ಆರೋಪಿ, ಆಗಸ್ಟ್ 16ರಂದು ತನ್ನ ಸ್ನೇಹಿತರ ಜೊತೆ ಬೇಕರಿಗೆ ಬಂದು ಗಲಾಟೆ ಮಾಡಿದ್ದ. ಎಲ್ಲ ಆರೋಪಿಗಳು ಸೇರಿ, ಬೇಕರಿ ಮಾಲೀಕ ಚಂದ್ರಶೇಖರ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆಯೊಡ್ಡಿದ್ದರು. ಬೇಕರಿ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿದ್ದರು. ಕಬ್ಬಿಣದ ರಾಡ್‌ನಿಂದ ಬೇಕರಿ ಗಾಜಿನ ವಸ್ತುಗಳನ್ನು ಒಡೆದಿದ್ದರು' ಎಂದರು

ಕಾರು ಪಲ್ಟಿ: ಚಾಲಕನಿಗೆ ಗಾಯ



ರಾಮನಗರ: ನಗರದ ಹೊರವಲಯದ ಮಾಗಡಿ ರಸ್ತೆ ಬಳಿಯ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಭಾನುವಾರ ಕಾರು ಚಾಲಕನಿಗೆ ಏಕಾಏಕಿ ತಲೆ ಸುತ್ತು ಬಂದಿದ್ದರಿಂದ ನಿಯಂತ್ರಣ ಕಳೆದುಕೊಂಡು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದ್ದರಿಂದ, ಕಾರು ಪಲ್ಟಿಯಾಗಿದೆ. ಘಟನೆಯಲ್ಲಿ ಚಾಲಕನಿಗೆ ಸಣ್ಣಪುಟ್ಟ ಗಾಯವಾಗಿದ್ದು, ರಾಮನಗರ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ.

ಚಾಲಕ ಕುಟುಂಬದೊಂದಿಗೆ ಸಂಜೆ 5.30ರ ಸುಮಾರಿಗೆ ಬೆಂಗಳೂರಿನಿಂದ ಮೈಸೂರಿಗೆ ಹೋಗುತ್ತಿದ್ದರು. ಮಾಗಡಿ ರಸ್ತೆ ಸಮೀಪ ಬಂದಾಗ, ತಲೆ ಸುತ್ತು ಬಂದಾಗ ಚಾಲಕ ಕಾರಿನ ನಿಯಂತ್ರಣ ಕಳೆದುಕೊಂಡು ವಿಭಜಕಕ್ಕೆ ಡಿಕ್ಕಿ ಹೊಡೆದಿದ್ದಾರೆ.

ಡಿಕ್ಕಿಯ ರಭಸಕ್ಕೆ ಕಾರು ಪಕ್ಕದ ರಸ್ತೆಗೆ ಹಾರಿ ಪಲ್ಟಿಯಾಗಿದೆ. ಘಟನೆ ವೇಳೆ, ಕಾರಿನೊಳಗಿದ್ದ ಇಬ್ಬರು ಮಹಿಳೆಯರಿಗೆ ಯಾವುದೇ ತೊಂದರೆಯಾಗಿಲ್ಲ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ತೆರಳಿ, ರಸ್ತೆಗೆ ಅಡ್ಡವಾಗಿ ಬಿದ್ದಿದ್ದ ಕಾರನ್ನು ತೆರವುಗೊಳಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಯಿ ಎಂದು ರಾಮನಗರ ಸಂಚಾರ ಠಾಣೆ ಪೊಲೀಸರು ತಿಳಿಸಿದರು

ಅಪಹರಿಸಿ ಸುಲಿಗೆ: ರೌಡಿ ಬಂಧನ

ಬೆಂಗಳೂರು: ವ್ಯಕ್ತಿಯೊಬ್ಬರನ್ನು ಅಪಹರಿಸಿ ಸುಲಿಗೆ ಮಾಡಿದ್ದ ಆರೋಪದಡಿ ರೌಡಿ ಸೇರಿ ಇಬ್ಬರನ್ನು ಯಲಹಂಕ ನ್ಯೂ ಟೌನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರೌಡಿ ಮನೋಜ್ ಅಲಿಯಾಸ್ ಕೆಂಚ (25) ಹಾಗೂ ಈತನ ಸಹಚರ ಪ್ರಮೋದ್ ಬಂಧಿತರು. ಹರಿಪ್ರಸಾದ್ ಅವರು ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಮನೋಜ್‌ನನ್ನು ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ. ಪ್ರಮೋದ್ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸರು ಹೇಳಿದರು.'ಕೊಲೆ, ಕೊಲೆ ಯತ್ನ, ಅಪಹರಣ, ಸುಲಿಗೆ ಸೇರಿದಂತೆ ವಿವಿಧ ಆರೋಪದಡಿ ಮನೋಜ್ ವಿರುದ್ಧ 12 ಪ್ರಕರಣಗಳು ದಾಖಲಾಗಿವೆ. ಪ್ರಕರಣವೊಂದರಲ್ಲಿ ಜೈಲಿಗೆ ಹೋಗಿದ್ದ ಈತ, ಕೆಲ ದಿನಗಳ ಹಿಂದೆಯಷ್ಟೇ ಜಾಮೀನಿನ ಮೇಲೆ ಹೊರಗೆ ಬಂದಿದ್ದ' ಎಂದು ತಿಳಿಸಿದರು.

'ಚಿಕ್ಕಬೊಮ್ಮಸಂದ್ರದ ಕೆನರಾ ಬ್ಯಾಂಕ್ ಬಳಿ ಹೊರಟಿದ್ದ ಹರಿಪ್ರಸಾದ್ ಅವರನ್ನು ಜುಲೈ 16ರಂದು ರಾತ್ರಿ ಅಪಹರಣ ಮಾಡಿದ್ದ ಆರೋಪಿಗಳು, ಹಣ ಸುಲಿಗೆ ಮಾಡಿದ್ದರು. ಜೀವ ಬೆದರಿಕೆಯೊಡ್ಡಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಹೇಳಿದರು.

ಚಲಿಸುತ್ತಿದ್ದ ಬಸ್‌ನಿಂದ ಕಳಚಿ ಬಿದ್ದ ಗಾಲಿ

ಗದಗ: ತಾಲ್ಲೂಕಿನ ಹೊಂಬಳ– ತಗಡೂರು ಗ್ರಾಮದ ಬಳಿ ಭಾನುವಾರ ಚಲಿಸುತ್ತಿದ್ದ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ನ ಹಿಂಬದಿ ಚಕ್ರವೊಂದು ಕಳಚಿ ಬಿದ್ದಿದ್ದು ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ. ಬಸ್ ಹಿಂದೆ ಕಾರಿನಲ್ಲಿದ್ದ ಪ್ರಯಾಣಿಕರು ಈ ಘಟನೆ ವಿಡಿಯೊ ಮಾಡಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಗದಗ–ಹೊಂಬಳ ಮಾರ್ಗವಾಗಿ ನರಗುಂದಕ್ಕೆ ಹೊರಟ್ಟಿದ್ದ ಬಸ್‌ನಲ್ಲಿ 40ಕ್ಕೂ ಹೆಚ್ಚು ಪ್ರಯಾಣಿಕರು ಇದ್ದರು. ಚಾಲಕನ ಚಾಕಚಕ್ಯತೆಯಿಂದ ಬಸ್ ಸುರಕ್ಷಿತವಾಗಿ ನಿಂತಿದ್ದು, ಪ್ರಯಾಣಿಕರಿಗೆ ಯಾವುದೇ ತೊಂದರೆ ಆಗಿಲ್ಲ.

ಕುಂದು ಕೊರತೆ ಜನದನಿ




ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ಜತೆಗೆ ವಿಧಾನಸಭಾ ಕ್ಷೇತ್ರದ ಹೆಸರನ್ನು ನಮೂದಿಸಬೇಕು. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ **9606038256** ಮಾಡಬಹುದು.

'ರಸ್ತೆ ದುರಸ್ತಿಗೊಳಿಸಿ'

ಬನಶಂಕರಿ 6ನೇ ಹಂತದಲ್ಲಿರುವ ಎನ್‌ಪಿಎಸ್ ಶಾಲೆ ಮುಂಭಾಗದಲ್ಲಿರುವ ರಸ್ತೆ ಸಂಪೂರ್ಣ ಹಾಳಾಗಿದೆ. ಕಳೆದ ಎರಡು ಮೂರು ವರ್ಷಗಳಿಂದ ಈ ರಸ್ತೆ ಡಾಂಬರೀಕರಣಗೊಂಡಿಲ್ಲ. ಒಂದು ವರ್ಷದ ಹಿಂದೆ ಜಲ್ಲಿಕಲ್ಲು ಹಾಕಲಾಗಿತ್ತು. ಇದರಿಂದ, ದೂಳಿನಿಂದ ಶಾಲೆಯ ಮಕ್ಕಳಿಗೆ ಆರೋಗ್ಯ ಸಮಸ್ಯೆಗಳು ಪ್ರಾರಂಭವಾಗುತ್ತಿವೆ. ಈಗ ಮಳೆಗಾಲ ಪ್ರಾರಂಭವಾಗಿದೆ. ಜಿಟಿಜಿಟಿ ಮಳೆ ಬಂದರೂ ರಸ್ತೆಯಲ್ಲಿ ಸಾಗುವುದೇ ಕಷ್ಟವಾಗುತ್ತದೆ. ಈ ಭಾಗದ ಬಹುತೇಕ ಎಲ್ಲ ರಸ್ತೆಗಳಿಗೆ ಡಾಂಬರು ಹಾಕಲಾಗಿದೆ. ಬಿಬಿಎಂಪಿ ಅಧಿಕಾರಿಗಳು ಕೂಡಲೇ ಈ ರಸ್ತೆಯನ್ನು ದುರಸ್ತಿಗೊಳಿಸಬೇಕು.

ಅನ್ವಿ ಆರ್. ವೈ. ವಿದ್ಯಾರ್ಥಿ ಎನ್‌ಪಿಎಸ್ ಶಾಲೆ, ಬನಶಂಕರಿ



ಬನಶಂಕರಿ 6ನೇ ಹಂತದಲ್ಲಿರುವ ಎನ್‌ಪಿಎಸ್ ಶಾಲೆಯ ಮುಂಭಾಗದ ರಸ್ತೆ.



ಹೆಬ್ಬಾಳ ಹಾಗೂ ವಿಶ್ವನಾಥ ನಾಗೇನಹಳ್ಳಿ ಮುಖ್ಯ ರಸ್ತೆಯಲ್ಲಿ ನೀರು ಪೋಲಾಗುತ್ತಿದೆ.

ಪೋಲಾಗುತ್ತಿದೆ ಕಾವೇರಿ ನೀರು

ಹೆಬ್ಬಾಳ ಹಾಗೂ ವಿಶ್ವನಾಥ ನಾಗೇನಹಳ್ಳಿ ಮುಖ್ಯರಸ್ತೆ ವಾರ್ಡ್ ನಂ 22ರಲ್ಲಿ ಪ್ರತಿನಿತ್ಯ ಕಾವೇರಿ ನೀರು ಪೋಲಾಗುತ್ತಿದೆ. ನಗರದ ಕೆಲವು ಪ್ರದೇಶಗಳಲ್ಲಿ ಸಮರ್ಪಕವಾಗಿ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ. ಆದರೆ, ಇಲ್ಲಿ ನಿತ್ಯ ನೀರು ಪೋಲಾಗುತ್ತಿದೆ. ಈ ಬಗ್ಗೆ ಜಲಮಂಡಳಿ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಆದರೂ, ನೀರು ಸೋರಿಕೆಯನ್ನು ತಡೆಯಲು ಹಿಂದೇಟು ಹಾಕುತ್ತಿದ್ದಾರೆ.

ರಮೇಶ್, ಹೆಬ್ಬಾಳ ನಿವಾಸಿ



ಟಿ. ದಾಸರಹಳ್ಳಿ ಕಾಂಕ್ರೀಟ್ ರಸ್ತೆಯಿಂದ ಕಬ್ಬಿಣದ ಸರಳುಗಳು ಹೊರ ಬಂದಿವೆ

ಕಾಂಕ್ರೀಟ್ ರಸ್ತೆ: ಹೊರಬಂದ ಸಲಾಕೆ

ಟಿ. ದಾಸರಹಳ್ಳಿಯ ಕಾಂಕ್ರೀಟ್ ರಸ್ತೆಯಿಂದ ಕಬ್ಬಿಣದ ಸಲಾಕೆಗಳು ಹೊರಬಂದಿವೆ. ಇದರಿಂದ, ವಾಹನ ಸವಾರರು ಸೇರಿದಂತೆ ಪಾದಚಾರಿಗಳು ಓಡಾಟಕ್ಕೆ ಅನನುಕೂಲವಾಗಿದೆ. ದ್ವಿಚಕ್ರ ವಾಹನ ಸವಾರರು ಈ ಸಲಾಕೆಗಳಿಗೆ ಸಿಲುಕಿಕೊಂಡು ಬೀಳುತ್ತಿದ್ದಾರೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಈ ರಸ್ತೆಯಲ್ಲಿ ಏನಾದರೂ ಅನಾಹುತವಾಗುವ ಮುನ್ನ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಯುವರಾಜ್, ಸ್ಥಳೀಯ ನಿವಾಸಿ



ಲ್ಯಾವೆಲ್ಲೆ ರಸ್ತೆಯಲ್ಲಿ ಸಂಗ್ರಹವಾಗಿರುವ ಚರಂಡಿ ನೀರು.

ರಸ್ತೆಯಲ್ಲಿ ಚರಂಡಿ ನೀರು

ನಗರದ ಲ್ಯಾವೆಲ್ಲೆ ಮುಖ್ಯರಸ್ತೆಯಲ್ಲಿ ಚರಂಡಿ ನೀರು ಸಂಗ್ರಹವಾಗಿದ್ದು, ವಾಹನ ಸವಾರರು ಮೂಗು ಮುಚ್ಚಿಕೊಂಡು ಸಂಚರಿಸುವ ಪರಿಸ್ಥಿತಿ ಇದೆ. ಕಳೆದ ಎರಡು–ಮೂರು ವಾರಗಳಿಂದ ಈ ರಸ್ತೆ ಮೇಲೆ ಕೊಳಚೆ ನೀರು ಹರಿಯುತ್ತಿದೆ. ರಸ್ತೆ ಒಂದು ಅಂಚಿನಲ್ಲಿ ಸಂಗ್ರಹವಾಗಿರುವ ನೀರಿನಿಂದ ಸೊಳ್ಳೆಗಳು ಉತ್ಪತ್ತಿಯಾಗುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಗೆ ಮುಕ್ತಿಗೆ ನೀಡಬೇಕು.

ಮಂಜುನಾಥ್, ಸ್ಥಳೀಯ ನಿವಾಸಿ

ಚಿಕ್ಕಸಂದ್ರ: ಹದಗೆಟ್ಟ ರಸ್ತೆ ದುರಸ್ತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಮಳೆ ಬಂದರೆ ಕೆಸರು ಗದ್ದೆ, ಬಿಸಿಲಲ್ಲಿ ದೂಳು, ಕಲ್ಲುಗಳಿಂದ ಕೂಡಿದ ರಸ್ತೆ ..

ಚಿಕ್ಕಸಂದ್ರದ 14, 15, 16ನೇ ಕ್ರಾಸ್ ಮತ್ತು ಹಲವು ಪ್ರದೇಶಗಳಲ್ಲಿ ರಸ್ತೆಗಳ ದುಃಸ್ಥಿತಿ ಇದು.

ಈ ಬಡಾವಣೆಯಲ್ಲಿ ಸಾವಿರಾರು ಮನೆಗಳಿದ್ದು, ಹಿರಿಯ ನಾಗರಿಕರು, ಮಕ್ಕಳು, ಮಹಿಳೆಯರು ರಸ್ತೆಗಳಲ್ಲಿ ಓಡಾಡಲು ಹರಸಾಹಸ ಪಡುತ್ತಿದ್ದಾರೆ. ಜಲ್ಲಿಕಲ್ಲುಗಳಿಂದ ಕೂಡಿದ ಈ ಹಾಳಾದ ರಸ್ತೆಗಳಿಗೆ ಡಾಂಬರೀಕರಣದ ಕಾಯಕಲ್ಪ ಆಗಬೇಕಿದೆ ಎಂದು ಇಲ್ಲಿನ ನಿವಾಸಿಗಳು ಒತ್ತಾಯಿಸಿದ್ದಾರೆ.

'ಈ ಬಡಾವಣೆಗಳನ್ನು ನಿರ್ಮಿಸಿ ಹಲವು ವರ್ಷಗಳಾಗಿದ್ದರೂ ಡಾಂಬರೀಕರಣ ಕಂಡಿಲ್ಲ. ಶೀಘ್ರ ಈ ರಸ್ತೆಗಳಿಗೆ ಕಾಯಕಲ್ಪ ನೀಡಲಿ' ಎಂದು ಚಿಕ್ಕಸಂದ್ರದ 15ನೇ ಕ್ರಾಸ್ ನಿವಾಸಿ ಜಯದೇವ್ ಆಗ್ರಹಿಸುತ್ತಾರೆ.

'ಚಿಕ್ಕದಾದ ರಸ್ತೆಗಳಲ್ಲಿ ಚರಂಡಿ ವ್ಯವಸ್ಥೆ ಇಲ್ಲದೆಯೇ ಮಳೆಯಾದಾಗ ಇಳಿಜಾರು ರಸ್ತೆಯಿಂದ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗುತ್ತದೆ. ಹಿಂದೆ ಹಾಕಿದ್ದ ಜಲ್ಲಿ ಕಲ್ಲು ಮೇಲೆ ಮಣ್ಣು ಸಹ ಕೊಚ್ಚಿ ಹೋಗಿದೆ. ಇದರಿಂದ, ರಸ್ತೆ ಹಾಳಾಗಿ ಓಡಾಡುವುದು ಕಷ್ಟವಾಗಿದೆ. ಈ ಭಾಗದ ಕೆಲವು ರಸ್ತೆಗಳನ್ನು ಮಾತ್ರ ಡಾಂಬರೀಕರಣ ಮಾಡಲಾಗಿದೆ. ರಸ್ತೆ ದುರಸ್ತಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮಕೈಗೊಂಡಿಲ್ಲ' ಎಂದು ನಿವೃತ್ತ ಶಿಕ್ಷಕ ಸಿದ್ದಲಿಂಗಪ್ಪ ಹೇಳುತ್ತಾರೆ..

'ರಸ್ತೆಗಳೆಲ್ಲ ಕಿತ್ತು ಹಾಳಾಗಿವೆ. ಜಲ್ಲಿ ಕಲ್ಲುಗಳ ರಸ್ತೆಗಳಲ್ಲಿ ಓಡಾಡಲು ಭಯವಾಗಿದ್ದೇವೆ. ಸಂಬಂಧಪಟ್ಟವರು ರಸ್ತೆಯ ಬಗ್ಗೆ ಗಮನ ಹರಿಸಲಿ' ಎಂದು ಸ್ಥಳೀಯ ನಿವಾಸಿ ರಾಮಲಿಂಗಯ್ಯ ಹೇಳುತ್ತಾರೆ.




ಚಿಕ್ಕಸಂದ್ರದ 15ನೇ ಕ್ರಾಸ್‌ನಲ್ಲಿ ಹದಗೆಟ್ಟ ರಸ್ತೆ

ಟ್ಯೂಷನ್‌ಗೆ ಹೋಗುತ್ತಿದ್ದ ಮಕ್ಕಳಿಗೆ ಅಪಘಾತ: ಮತ್ತೊಬ್ಬ ಬಾಲಕಿ ಸಾವು

ಗೂಡ್ಸ್ ವಾಹನ ಡಿಕ್ಕಿ: ಸಾವಿನ ಸಂಖ್ಯೆ 4ಕ್ಕೆ

ಪ್ರಜಾವಾಣಿ ವಾರ್ತೆ



ಜ್ಞಾನವಿ

ರಾಮನಗರ: ತಾಲ್ಲೂಕಿನ ಗೊಲ್ಲರ ದೊಡ್ಡಿಯಲ್ಲಿ ಮಕ್ಕಳಿಗೆ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪ್ರಕರಣದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಮತ್ತೊಬ್ಬ ಬಾಲಕಿ ಭಾನುವಾರ ರಾತ್ರಿ ಬೆಂಗಳೂರಿನ ಇಂದಿರಾ ಗಾಂಧಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ. ಇದರೊಂದಿಗೆ ಘಟನೆಯಲ್ಲಿ ಸಾವನ್ನಪ್ಪಿದ ಮಕ್ಕಳ ಸಂಖ್ಯೆ 4ಕ್ಕೆ ಏರಿಕೆಯಾಗಿದೆ.

ಗ್ರಾಮದ ರಾಜಣ್ಣ ಮತ್ತು ಶಾಂತಮ್ಮ ದಂಪತಿಯ ಎರಡನೇ ಪುತ್ರಿ, ಒಂದನೇ ತರಗತಿಯಲ್ಲಿ ಓದುತ್ತಿದ್ದ ಜ್ಞಾನವಿ ಮೃತ ಬಾಲಕಿ. ಘಟನೆ ನಡೆದ ದಿನವೇ ಅವರ ಮೊದಲ ಪುತ್ರಿ ಶಾಲಿನಿ (9) ಕೊನೆಯುಸಿರೆಳೆದಿದ್ದಳು. ಗೂಡ್ಸ್ ಚಾಲಕನ ನಿರ್ಲಕ್ಷ್ಯದಿಂದಾಗಿ, ಇದೀಗ ದಂಪತಿಯ ಇಬ್ಬರೂ ಪುತ್ರಿಯರು ಬಾರದ ಲೋಕಕ್ಕೆ ಹೋಗಿದ್ದಾರೆ.

ಆ. 9ರಂದು ರಾತ್ರಿ ಐವರು ಮಕ್ಕಳು ಟ್ಯೂಷನ್ ಮುಗಿಸಿಕೊಂಡು ಮನೆಗೆ ವಾಪಸ್ಸಾಗುತ್ತಿದ್ದರು. ರಸ್ತೆ ದಾಟುತ್ತಿದ್ದಾಗ ವೇಗವಾಗಿ ಬಂದ ಗೂಡ್ಸ್ ವಾಹನ ಮಕ್ಕಳಿಗೆ ಡಿಕ್ಕಿ ಹೊಡೆದಿತ್ತು. ಡಿಕ್ಕಿಯ ರಭಸಕ್ಕೆ ಇಬ್ಬರು ಮಕ್ಕಳು ಸ್ಥಳದಲ್ಲೇ ಮೃತಪಟ್ಟಿದ್ದರು.

ಗಂಭೀರವಾಗಿ ಗಾಯಗೊಂಡಿದ್ದ ಮೂವರಿಗೆ ರಾಮನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಸ್ಥಳಾಂತರಿಸಲಾಗಿತ್ತು. ಆ ಪೈಕಿ, ತಲೆಗೆ ಗಂಭೀರವಾಗಿ ಗಾಯವಾಗಿದ್ದ 5ನೇ ತರಗತಿಯ ಸುಚಿತ್‌ಗೆ ಬಿಜಿಎಸ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಬಳಿಕ, ಒಂದು ವಾರ ಸಾವು–ಬದುಕಿನೊಂದಿಗೆ ಹೋರಾಡಿದ್ದ ಸುಚಿತ್, ಕಡೆಗೂ ಸಾವು ಗೆಲ್ಲಲಾಗಲಿಲ್ಲ.

ಅದೇ ರೀತಿ, ಇಂದಿರಾ ಗಾಂಧಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಬದುಕಿಗಾಗಿ ಹನ್ನೊಂದು ದಿನಗಳಿಂದ ಸೆಣಸಾಡುತ್ತಿದ್ದ ಜ್ಞಾನವಿ ಕೂಡ ಇಹಲೋಕ ತ್ಯಜಿಸಿದ್ದಾಳೆ. ಘಟನೆಯಲ್ಲಿ ಗಾಯಗೊಂಡಿದ್ದ ಮೃತ ಸುಚಿತ್ ತಂಗಿ, 3ನೇ ತರಗತಿಯ ಗೌತಮಿ ಚಿಕಿತ್ಸೆ ಬಳಿಕ ಚೇತರಿಸಿಕೊಳ್ಳುತ್ತಿದ್ದಾಳೆ.

'ಮರಣೋತ್ತರ ಪರೀಕ್ಷೆ ಬಳಿಕ ರಾತ್ರಿಯೇ ಶವವನ್ನು ಗ್ರಾಮಕ್ಕೆ ತರಲಾಗಿದೆ. ಸೋಮವಾರ ಮಧ್ಯಾಹ್ನದ ಹೊತ್ತಿಗೆ ಅಂತ್ಯಕ್ರಿಯೆ ನೆರವೇರಲಿದೆ. ಘಟನೆ ಖಂಡಿಸಿ ರಾಮನಗರ–ಮಾಗಡಿ ರಸ್ತೆಯನ್ನು ಸೋಮವಾರ ತಡೆದು ಪ್ರತಿಭಟನೆ ನಡೆಸಲಾಗುವುದು' ಎಂದು ಗ್ರಾಮಸ್ಥರು ತಿಳಿಸಿದರು.

ಘಟನೆಗೆ ಸಂಬಂಧಿಸಿದಂತೆ, ರಾಮನಗರ ಗ್ರಾಮಾಂತರ ಠಾಣೆ ಪೊಲೀಸರು ಗೂಡ್ಸ್ ವಾಹನ ಚಾಲಕ ವರದರಾಜು ವಿರುದ್ಧ ಐಪಿಸಿ 304 ಕಲಂನಡಿ ಪ್ರಕರಣ ದಾಖಲಿಸಿಕೊಂಡು ಬಂಧಿಸಿದ್ದಾರೆ. ಸದ್ಯ ಆತ ನ್ಯಾಯಾಂಗ ಬಂಧನದಲ್ಲಿದ್ದಾನೆ.

ಮುಖ್ಯಾಂಶಗಳು
- ಆ. 9ರಂದು ನಡೆದಿದ್ದ ಅವಘಡ
- ಚಾಲಕನ ವಿರುದ್ಧ ಪ್ರಕರಣ ದಾಖಲು

ಹೃದಯಾಘಾತ: ಬೃಹತ್ ಆರೋಗ್ಯ ಶಿಬಿರ ನಡೆಸಿದ ಆರೋಗ್ಯ ಇಲಾಖೆ

‘ಸಾರ್ವಜನಿಕ ಸ್ಥಳದಲ್ಲಿಯೂ ಎಇಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಠಾತ್ ಹೃದಯಾಘಾತ ತಡೆಯಲು ಸಾರ್ವಜನಿಕ ಸ್ಥಳಗಳಲ್ಲಿಯೂ ‘ಆಟೊಮೇಟೆಡ್ ಎಕ್ಸ್‌ಟರ್ನಲ್ ಡಿಫೈಬ್ರಿಲ್ಲೇಟರ್ಸ್ (ಎಇಡಿ)’ ಸಾಧನ ಅಳವಡಿಸಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಆರೋಗ್ಯ ಇಲಾಖೆ ಇಲ್ಲಿನ ಗಾಂಧಿನಗರದಲ್ಲಿ ಭಾನುವಾರ ಹಮ್ಮಿಕೊಂಡ ಬೃಹತ್ ಉಚಿತ ಆರೋಗ್ಯ ಶಿಬಿರ ಉದ್ಘಾಟಿಸಿ, ಮಾತನಾಡಿದರು. ‘ವ್ಯಕ್ತಿಗೆ ಹೃದಯಾಘಾತ ಸಂಭವಿಸಿದ ಒಂದು ಗಂಟೆ ನಿರ್ಣಾಯಕವಾಗಿರುತ್ತದೆ. ಆದ್ದರಿಂದ ಹಠಾತ್ ಹೃದಯಾಘಾತ ತಡೆಯಲು ಪುನೀತ್ ರಾಜ್‌ಕುಮಾರ್ ಹೆಸರಲ್ಲಿ ಯೋಜನೆ ರೂಪಿಸಲಾಗಿದೆ. ಈ ಯೋಜನೆಯಡಿ ಜಿಲ್ಲಾ ಆಸ್ಪತ್ರೆ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಎಇಡಿ ಸಾಧನಗಳನ್ನು ಅಳವಡಿಸಲಾಗುತ್ತದೆ. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಚಿಕಿತ್ಸೆಯ ಬಗ್ಗೆ ಕಾರ್ಯಾಚರಣೆ ಮಾಡಲಿದೆ. ಹೃದಯಾಘಾತದ ಅಪಾಯ ತಡೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿಯೂ ಮಾತ್ರೆಗಳನ್ನು ಒದಗಿಸಲಾಗುವುದು. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಗುತ್ತದೆ. ಈ ಬಗ್ಗೆ ಎರಡು ವಾರಗಳಲ್ಲಿ ಟೆಂಡರ್ ಕರೆದು, ರಾಜ್ಯದಾದ್ಯಂತ ಯೋಜನೆ ಜಾರಿಗೆ ಕ್ರಮವಹಿಸಲಾಗುವುದು’ ಎಂದರು.

‘ಬಸ್, ರೈಲ್ವೆ, ವಿಮಾನ ನಿಲ್ದಾಣ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿಯೂ ಎಇಡಿ ಸಾಧನ ಅಳವಡಿಕೆ ಮಾಡಲಾಗುವುದು. ಇದರಿಂದಾಗಿ ಸಾರ್ವಜನಿಕ ಸ್ಥಳಗಳಲ್ಲಿ ಹೃದಯ ಸಂಬಂಧಿ ಸಮಸ್ಯೆ ಕಂಡು ಬಂದರೆ ಅಲ್ಲಿಯೇ ತುರ್ತು ಚಿಕಿತ್ಸೆ ಸಾಧ್ಯವಾಗುತ್ತದೆ’ ಎಂದು ಹೇಳಿದರು.

ರಾಜ್ಯದಾದ್ಯಂತ ಶಿಬಿರ: ‘ಜೀವನ ವಿಧಾನ ಬದಲಾದಂತೆ ಮಧುಮೇಹ, ಅಧಿಕ ರಕ್ತದೊತ್ತಡ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳು ಜನರನ್ನು ಕಾಡುತ್ತಿವೆ. ಈ ಕಾಯಿಲೆಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿದರೆ ರೋಗವನ್ನು ವಾಸಿ ಮಾಡಬಹುದು. ಆದ್ದರಿಂದ ರಾಜ್ಯದಾದ್ಯಂತ ಆರೋಗ್ಯ ತಪಾಸಣೆ ಶಿಬಿರಗಳನ್ನು ನಡೆಸಲಾಗುತ್ತದೆ. ಆರೋಗ್ಯ ಸೇವೆಗಳು ರಾಜ್ಯದ ಹಳ್ಳಿಗಾಡಿನ ಜನರಿಗೂ ತಲುಪಬೇಕು’ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ಇಲಾಖೆ ಆಯುಕ್ತ ಡಿ. ರಂದೀಪ್, ‘ಇಲ್ಲಿನ ಗಾಂಧಿನಗರದಲ್ಲಿ ನಡೆಸಿರುವ ಆರೋಗ್ಯ ತಪಾಸಣೆ ಶಿಬಿರವು ರಾಜ್ಯದಾದ್ಯಂತ ಹಮ್ಮಿಕೊಳ್ಳುವ ಆರೋಗ್ಯ ಶಿಬಿರಕ್ಕೆ ಮುನ್ನುಡಿಯಾಗಿದೆ. ಒಂದೇ ಸೂರಿನಡಿ ಎಲ್ಲ ವೈದ್ಯಕೀಯ ಚಿಕಿತ್ಸೆ ಒದಗಿಸುವುದು ಈ ಶಿಬಿರದ ಮುಖ್ಯ ಉದ್ದೇಶ’ ಎಂದು ಹೇಳಿದರು.



ಶಿಬಿರದಲ್ಲಿ ದಿನೇಶ್ ಗುಂಡೂರಾವ್ ಆರೋಗ್ಯ ತಪಾಸಣೆ ಮಾಡಿಸಿಕೊಂಡರು

₹3 ಕೋಟಿ ಮೌಲ್ಯದ ಔಷಧ

ಆರೋಗ್ಯ ಶಿಬಿರಕ್ಕೆ ಸಾವಿರಾರು ಜನರು ಭೇಟಿ ನೀಡಿ, ಉಚಿತ ಚಿಕಿತ್ಸೆಯ ಲಾಭ ಪಡೆದುಕೊಂಡರು. 16 ಕೌಂಟರ್, 10 ಫಾರ್ಮಸಿ ಸೆಂಟರ್‌ಗಳಲ್ಲಿ 100ಕ್ಕೂ ಹೆಚ್ಚು ತಜ್ಞ ವೈದ್ಯರು ಸೇವೆ ನೀಡಿದರು. ₹ 3 ಕೋಟಿ ಮೌಲ್ಯದ ಔಷಧಗಳನ್ನು ಒದಗಿಸಲಾಯಿತು. ವೈದ್ಯರು ಸೇರಿ 700 ಆರೋಗ್ಯ ಸಿಬ್ಬಂದಿ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಸ್ತ್ರೀ ರೋಗ, ಮಕ್ಕಳ ತಜ್ಞರು ಸಹ ಶಿಬಿರದಲ್ಲಿ ಇದ್ದರು. ಹೃದಯ, ಮೂತ್ರಪಿಂಡ, ಯಕೃತ್ತು ಸೇರಿ ವಿವಿಧ ಅಂಗಾಂಗಗಳ ಸಮಸ್ಯೆಗಳಿಗೂ ಚಿಕಿತ್ಸೆ ನೀಡಲಾಯಿತು.



ಕಾರ್ಯಕ್ರಮದಲ್ಲಿ ಜಯಂತ ಕಾಯ್ಕಿಣಿ ಅವರು ನಾಲ್ಕು ಪುಸ್ತಕಗಳನ್ನು ಬಿಡುಗಡೆ ಮಾಡಿದರು. (ಎಡದಿಂದ) ಲೇಖಕರಾದ ಎನ್‌.ಸಿ.ಮಹೇಶ್, ಅಮಿತಾ ಭಾಗವತ್, ಎಚ್. ಡುಂಡಿರಾಜ್, ಜೋಗಿ ಮತ್ತು ಕೃಷ್ಣಮೂರ್ತಿ ಕರ್ಕಿ ಇದ್ದಾರೆ –ಪ್ರಜಾವಾಣಿ ಚಿತ್ರ

‘ಪ್ರತಿಮೆ ಮಾಡದಿರುವುದೇ ಗೌರವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾತ್ಮರ, ಸಾಧಕರ ಪ್ರತಿಮೆ ನಿರ್ಮಿಸುವ ನಾವು, ಮನೆಗೆ ಹೋಗಿ ಬೆಚ್ಚಗೆ ಮಲಗುತ್ತೇವೆ. ಪ್ರತಿಮೆ ಮಾತ್ರ ಬಿಸಿಲು–ಮಳೆಯಲ್ಲಿ ಇರಬೇಕಾಗುತ್ತದೆ. ಆದ್ದರಿಂದ ಪ್ರತಿಮೆ ನಿರ್ಮಿಸದಿರುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ’ ಎಂದು ಸಾಹಿತಿ ಜಯಂತ ಕಾಯ್ಕಿಣಿ ಹೇಳಿದರು.

ಅಂಕಿತ ಪುಸ್ತಕ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಎಚ್. ಡುಂಡಿರಾಜ್ ಅವರ ‘ಹನಿಟ್ರ್ಯಾಪ್’, ಅಮಿತಾ ಭಾಗವತ್ ಅವರ ‘ನೀಲಿ ನಕ್ಷೆ’, ನಾ. ಮೊಗಸಾಲೆ ಅವರ ‘ನೀರು’, ಎನ್‌.ಸಿ. ಮಹೇಶ್ ಅವರ ‘ಸಾಕುತಂದೆ ರೂಮಿ’ ಪುಸ್ತಕವನ್ನು ಬಿಡುಗಡೆ ಮಾಡಿ, ಮಾತನಾಡಿದರು.

‘ಯಾರ ಪ್ರತಿಮೆ ನಿರ್ಮಿಸಿದರೂ ಈಗ ವಾದ ವಿವಾದದ ಬೇಗೆ. ಎಲ್ಲರ ಪ್ರತಿಮೆಯನ್ನೂ ನಿರಾಯಾಸದಿಂದ ಸ್ವಾಗತಿಸುವುದು ಕಾಗೆ’ ಎಂಬ ಡುಂಡಿರಾಜ್ ಅವರ ಹನಿಗವನ ಓದಿದ ಜಯಂತ ಕಾಯ್ಕಿಣಿ, ‘ಕೆಲವು ಪ್ರತಿಮೆಗಳಿಗೆ ಕನ್ನಡಕವನ್ನೂ ಹಾಕಲಾಗುತ್ತದೆ. ಹಿಂದೆಲ್ಲ ಪ್ರತಿಮೆಯ ಕನ್ನಡಕದ ಗ್ಲಾಸ್‌ಗಳು ಕಳವಾಗುತ್ತಿದ್ದವು. ಮುಂಬೈನಲ್ಲಿ ನಿರ್ಮಿಸಿದ್ದ ನಾನಾವಟಿ ಅವರ ಪ್ರತಿಮೆಯ ಕನ್ನಡಕದ ಗ್ಲಾಸ್ ಹಲವು ಬಾರಿ ಕಳವಾಗಿತ್ತು’ ಎಂದು ಸ್ಮರಿಸಿಕೊಂಡರು.

ಲೇಖಕ ಮತ್ತು ಪತ್ರಕರ್ತ ಗಿರೀಶ್ ರಾವ್ ಹತ್ವಾರ್ (ಜೋಗಿ), ‘11ನೇ ಶತಮಾನದಿಂದ ಇಂದಿನವರೆಗೂ ಹನಿಗವನಗಳು ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿವೆ. ರೂಮಿಯ ಹನಿಗವನ ನಗಿಸಿದರೆ, ಡುಂಡಿರಾಜ್ ಅವರ ಹನಿಗವನ ಅಳಿಸುತ್ತದೆ. ಹೀಗೆ ಅದರ ವಿಸ್ತಾರ ಬಹುವಾಗಿದೆ’ ಎಂದು ತಿಳಿಸಿದರು.

ಕಥೆಗಾರ ಕೃಷ್ಣಮೂರ್ತಿ ಕರ್ಕಿ, ‘ಅನುಭಗಳ ಗುಚ್ಛವಾಗಿ ಕತೆಗಳು ಮೂಡಿಬರುತ್ತದೆ. ಕಾದಂಬರಿ ಜೀವನಕ್ಕೆ ಹತ್ತಿರವಾದ ವಿಷಯಗಳನ್ನು ಒಳಗೊಂಡಿದ್ದರೆ, ಅದು ಓದುಗನಿಗೂ ಹತ್ತಿರವಾಗುತ್ತದೆ’ ಎಂದು ಹೇಳಿದರು.

ಸಂಕ್ರಾಂತಿ ಬಳಿಕ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನೆ

ಹರಿದ್ವಾರ (ಉತ್ತರಾಖಂಡ) (ಪಿಟಿಐ): ಅಯೋಧ್ಯೆಯ ರಾಮಮಂದಿರದ ಗರ್ಭಗುಡಿ ಸಿದ್ಧವಾಗಿದ್ದು, ಮಕರ ಸಂಕ್ರಾಂತಿ ಬಳಿಕ ಜನವರಿ 16 ಮತ್ತು 24ರ ನಡುವೆ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪಿಸಲಾಗುವುದು ಎಂದು ರಾಮ ಮಂದಿರ ತೀರ್ಥ ಕ್ಷೇತ್ರ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರೈ ಅವರು ತಿಳಿಸಿದ್ದಾರೆ.

ಭಾನುವಾರ ಇಲ್ಲಿಗೆ ಭೇಟಿ ನೀಡಿ, ಸಂತರು ಮತ್ತು ಸ್ವಾಮೀಜಿಗಳನ್ನು ಭೇಟಿಯಾಗಿ ದೇವಾಲಯದ ನಿರ್ಮಾಣದ ಪ್ರಗತಿ ಬಗ್ಗೆ ಮಾಹಿತಿ ನೀಡಿದರು.

ಅಯೋಧ್ಯೆಯಲ್ಲಿ 10 ದಿನಗಳ ಪ್ರಾಣ ಪ್ರತಿಷ್ಠಾ (ಪ್ರತಿಷ್ಠಾಪನೆ) ಸಮಾರಂಭದಲ್ಲಿ ಭಾಗವಹಿಸುವಂತೆ ಅವರನ್ನು ಆಹ್ವಾನಿಸಿದರು.

ದೇವಾಲಯದ ಮೊದಲ ಮಹಡಿ ನಿರ್ಮಾಣದ ನಂತರ ರಾಮಲಲ್ಲಾ ಪ್ರತಿಷ್ಠಾಪನೆ ನಡೆಯಲಿದೆ. ರಾಮಮಂದಿರದ ಮೊದಲ ಮಹಡಿಯ ಶೇಕಡ 80 ರಷ್ಟು ಕೆಲಸ ಪೂರ್ಣಗೊಂಡಿದೆ. ಭಕ್ತರ ದರ್ಶನದ ನಡುವೆ ನಿರ್ಮಾಣ ಚಟುವಟಿಕೆಗಳು ಮುಂದುವರಿಯುತ್ತವೆ. ಇದರಿಂದ ಯಾವುದೇ ತೊಂದರೆ ಆಗುವುದಿಲ್ಲ ಎಂದು ರೈ ಅವರು ಮಾಹಿತಿ ನೀಡಿದ್ದಾರೆ.

ರಾಮನಗರಕ್ಕೆ ನನ್ನಿಂದ ಅನ್ಯಾಯವಾಗಿಲ್ಲ: ಎಚ್‌ಡಿಕೆ

‘₹1,400 ಕೋಟಿ ಗಳಿಸಿದ್ದು ಹೇಗೆ?’

ಪ್ರಜಾವಾಣಿ ವಾರ್ತೆ

ರಾಮನಗರ: ದೊಡ್ಡಾಲಹಳ್ಳಿ ಮತ್ತು ಸಾತನೂರಿನಲ್ಲಿ ಟೆಂಟ್ ಸಿನಿಮಾ ನಡೆಸುತ್ತಿದ್ದವರು ಇಂದು ಅಧಿಕೃತವಾಗಿ ₹1400 ಕೋಟಿ ಆಸ್ತಿ ಮಾಡಿದ್ದಾರೆ. ಅನಧಿಕೃತವಾಗಿ ಇನ್ನೆಷ್ಟು ಮಾಡಿರಬಹುದು ಎಂಬುದನ್ನು ಜನರೇ ಊಹಿಸಿಕೊಳ್ಳಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘₹50 ಕೋಟಿ ಇದ್ದ ಆಸ್ತಿಯನ್ನು ₹1,400 ಕೋಟಿ ಮಾಡಿಕೊಂಡವರು ಜಿಲ್ಲೆಯ ಅಭಿವೃದ್ಧಿ ಬಗ್ಗೆ ಕನಸು ಕಾಣುತ್ತಾರೆಯೇ?’ ಎಂದು ಅವರು ಡಿ.ಕೆ. ಸಹೋದರರಿಗೆ ತಿರುಗೇಟು ನೀಡಿದರು.

‘ಸಿ.ಎಂ ಆಗಿದ್ದಾಗ ನಾನು ಹೋಟೆಲ್‌ನಲ್ಲಿ ಇದ್ದೆ ಎನ್ನುವ ಡಿ.ಕೆ. ಶಿವಕುಮಾರ್, ಇಂಡಿಯಾ ಮೈತ್ರಿಕೂಟದ ಸಭೆ ಮಾಡಿದ್ದು ಎಲ್ಲಿ? ಅದೇ ಹೋಟೆಲ್‌ನಲ್ಲಿ ತಾನೇ. ನನ್ನಷ್ಟು ಜನಕ್ಕೆ ಹತ್ತಿರವಾಗಿ ಸಿಗೋನು ಈ ಭೂಮಿ ಮೇಲೆ ಯಾರಾದರೂ ಇದ್ದಾರಾ? ಇವರಿಂದ ನಾನು ಪಾಠ ಕಲಿಯಬೇಕಾ?’ ಎಂದು ಹೇಳಿದರು.

‘ರಾಮನಗರ ಅಭಿವೃದ್ಧಿಯೇ ಆಗಿಲ್ಲ, ನೀರು ಕೊಡುತ್ತಿರುವುದು 6ನೇ ಗ್ಯಾರಂಟಿ ಎನ್ನುವ ಸ್ಥಳೀಯ ಶಾಸಕರು, ರಾತ್ರೋರಾತ್ರಿ ಜನರಿಗೆ ನಾಲ್ಕು ಸಾವಿರ ಗಿಫ್ಟ್ ಕೂಪನ್ ಹಂಚಿದ್ದೀರಲ್ಲಾ, ಮೊದಲು ಅದರ ಕತೆ ನೋಡಲಿ. ಆ ಗ್ಯಾರಂಟಿ ಮೊದಲು ಈಡೇರಿಸಲಿ’ ಎಂದು ರಾಮನಗರ ಅಭಿವೃದ್ಧಿ ಕುರಿತು ಶಾಸಕ ಎಚ್‌.ಎ. ಇಕ್ಬಾಲ್ ಹೇಳಿಕೆಗೆ ಕುಮಾರಸ್ವಾಮಿ ತಿರುಗೇಟು ನೀಡಿದರು.

ಜಿಲ್ಲೆಯಲ್ಲಿ ಯಾವುದೇ ಅಭಿವೃದ್ಧಿಯಾಗಿಲ್ಲ ಎನ್ನುವವರು, ದೇವೇಗೌಡರ ಕುಟುಂಬ ಬರುವುದಕ್ಕೆ ಮುಂಚೆ ರಾಮನಗರ ತಾಲ್ಲೂಕು ಮತ್ತು ಜಿಲ್ಲೆ ಹೇಗಿತ್ತು ಎಂಬುದನ್ನು ತಿಳಿದುಕೊಳ್ಳಲಿ. ವರದಿಯೊಂದರ ಪ್ರಕಾರ, ತಲಾ ಆದಾಯದಲ್ಲಿ ರಾಮನಗರ ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಇದು ಜಿಲ್ಲೆಗೆ ದೇವೇಗೌಡರ ಕುಟುಂಬ ನೀಡಿರುವ ಕೊಡುಗೆ ಎಂದರು.

‘ನಾನು ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿದ್ದಾಗ ನೀರಿನ ಬವಣೆ ಎದುರಿಸುತ್ತಿದ್ದ ರಾಮನಗರಕ್ಕೆ ಪ್ರತ್ಯೇಕವಾಗಿ ನೀರು ಪೂರೈಕೆ ಮಾಡಲು ₹456 ಕೋಟಿ ಕೊಟ್ಟು, ಯೋಜನೆಗೆ ಚಾಲನೆ ಕೂಡ ಕೊಟ್ಟಿದ್ದೆ. ಅದಕ್ಕೆ ತಲೆದೋರಿದ ತಕರಾರು ಸರಿಪಡಿಸಲು ಎಷ್ಟು ಕಷ್ಟಪಟ್ಟಿದ್ದೇನೆ ಎಂದು ನನಗೆ ಗೊತ್ತು’ ಎಂದು ಹೇಳಿದರು.

‘ನಾನು ಸಿ.ಎಂ ಆಗಿದ್ದಾಗ ರಾಮನಗರಕ್ಕೆ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ವೈದ್ಯಕೀಯ ಕಾಲೇಜು ಕೊಟ್ಟೆ. ಇವರ ಹಿಂಸೆ ತಡೆಯಲಾಗದೆ, ಪ್ರತ್ಯೇಕವಾಗಿ ಕನಕಪುರಕ್ಕೆ ₹100 ಕೋಟಿ ಮೊತ್ತದ ವೈದ್ಯಕೀಯ ಕಾಲೇಜು ಕೊಡಲು ತೀರ್ಮಾನಿಸಿದೆ. ಬಿಜೆಪಿ ಸರ್ಕಾರದಲ್ಲಿ ಚಿಕ್ಕಬಳ್ಳಾಪುರಕ್ಕೆ ತೆಗೆದುಕೊಂಡು ಹೋದರು. ಇವರು ರಾಮನಗರದ ಕಾಲೇಜನ್ನು ಕನಕಪುರಕ್ಕೆ ಕೊಂಡೊಯ್ದರು. ಇದು ರಾಮನಗರಕ್ಕೆ ಅವರ ಬಳುವಳಿ. ಕ್ಷೇತ್ರದ ಜನ ಇದನ್ನು ಅರ್ಥ ಮಾಡಿಕೊಳ್ಳಬೇಕು’ ಎಂದು ಹೇಳಿದರು.

‘ನಾನು ಮಾಡಿರುವ ಕೆಲಸಗಳಿಗೆ ಇವರು ಸುಣ್ಣಬಣ್ಣ ಹೊಡೆಸಿಕೊಂಡಿದ್ದರೆ ಸಾಕು. ಹೊಸ ಕೆಲಸ ಮಾಡುವ ಅಗತ್ಯವಿಲ್ಲ. ಡಿಸೆಂಬರ್ ಹೊತ್ತಿಗೆ ರಾಮನಗರಕ್ಕೆ 25 ಎಂಎಲ್‌ಡಿ ನೀರು ತರುತ್ತಾರಂತೆ. ಎಲ್ಲಾ ಕಡೆ ಶೇ 80ರಷ್ಟು ಕೆಲಸ ಮುಗಿದಿದೆಯಂತೆ. ಮೂರು ತಿಂಗಳಲ್ಲಿ ಇವರು ಆ ಕೆಲಸ ಮಾಡಿದ್ದಾರೆಯೇ? ಹಿಂದಿನ ಶಾಸಕಿ ಅನಿತಾ ಕುಮಾರಸ್ವಾಮಿ ಅವರು ತಂದ ಯೋಜನೆಗಳ ಹೆಸರು ಹೇಳಿಕೊಂಡು, ಇವರು ಮೈಲೇಜ್ ತೆಗೆದುಕೊಳ್ಳುತ್ತಿದ್ದಾರೆ’ ಎಂದು ಕುಮಾರಸ್ವಾಮಿ ಕಿಡಿಕಾರಿದರು.

‘ಮಗ ಸೋತಿದ್ದಕ್ಕೆ ಜನರನ್ನು ದೂಷಿಸಲ್ಲ’

‘ವಿಧಾನಸಭಾ ಚುನಾವಣೆ ಫಲಿತಾಂಶದ ಬಗ್ಗೆ ರಾಮನಗರ ಕ್ಷೇತ್ರದ ಜನರನ್ನು ನಾನು ದೂಷಿಸುವುದಿಲ್ಲ. ಆಗ, ಅಪಪ್ರಚಾರದ ಜೊತೆಗೆ ನಮ್ಮವರು ಸ್ವಲ್ಪ ಎಡವಿದ್ದಾರೆ’ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

‘ರಾಮನಗರ ಜಿಲ್ಲೆ ಮತ್ತು ಜನರಿಗೆ ನನ್ನಿಂದ ಕಿಂಚಿತ್ತೂ ಅನ್ಯಾಯವಾಗಿಲ್ಲ. ಇಂದಿಗೂ ಜಿಲ್ಲೆಯ ಜನತೆಯನ್ನು ನನ್ನ ತಂದೆ–ತಾಯಿ ಎಂದು ತಿಳಿದು ಕೊಂಡಿದ್ದೇನೆ. ಜಿಲ್ಲೆಗೆ ನಾನು ಕೊಟ್ಟಿರುವ ಕೊಡುಗೆ ಏನು ಎಂಬುದನ್ನು ತಾಯಿ ಚಾಮುಂಡೇಶ್ವರಿ ನೋಡಿಕೊಳ್ಳುತ್ತಾಳೆ’ ಎಂದರು.

ಶಸ್ತ್ರಾಸ್ತ್ರ ರಫ್ತಿಗೆ ದಶಕದ ಯೋಜನೆ: ಡಿಆರ್‌ಡಿಒ ನಿರ್ದೇಶಕ ದಾಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಸ್ತ್ರಾಸ್ತ್ರಗಳು, ಬಾಹ್ಯಾಕಾಶ ತಂತ್ರಜ್ಞಾನವನ್ನು ರಫ್ತು ಮಾಡುವ ಹಂತಕ್ಕೆ ಭಾರತ ಬೆಳೆದಿದೆ. ಮುಂದಿನ ಒಂದು ದಶಕದವರೆಗೆ ಸ್ಥಳೀಯ ಶಸ್ತ್ರಾಸ್ತ್ರ ಅಭಿವೃದ್ಧಿ ಮತ್ತು ರಫ್ತಿಗಾಗಿ ಮಾರ್ಗಸೂಚಿ ರಚಿಸಲಾಗಿದೆ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ವಿದ್ಯುನ್ಮಾನ ಮತ್ತು ಸಂವಹನ ವಿಭಾಗದ ನಿರ್ದೇಶಕ ಬಿ.ಕೆ. ದಾಸ್ ಹೇಳಿದರು.

ನಗರದಲ್ಲಿ ಈಚೆಗೆ ಜಿ-20 ‘ಡಿಜಿಟಲ್ ಇನ್ನೋವೇಷನ್ ಅಲಯನ್ಸ್’ (ಡಿಐಎ) ಶೃಂಗಸಭೆಯ ನಂತರ ಅವರು ಮಾತನಾಡಿದರು.

ದೇಶದ ರಫ್ತು ಪ್ರಮಾಣ ಕಡಿಮೆ ಇದ್ದರೂ, ಸಾಮಗ್ರಿಗಳ ತಯಾರಿಕೆಯಲ್ಲಿ ಸ್ವಾವಲಂಬನೆ ಸಾಧಿಸಲಾಗಿದೆ. ಈಗ ರಫ್ತು ಮಾಡುವ ಮಟ್ಟಕ್ಕೆ ಬೆಳೆಯುತ್ತಿರುವುದು ಮಹತ್ವದ ಸಾಧನೆ. ರಷ್ಯಾ, ಇಸ್ರೇಲ್ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಒಪ್ಪಂದಕ್ಕೆ ಅಮೆರಿಕವೂ ಉತ್ಸುಕವಾಗಿದೆ. ಭಾರತದಲ್ಲಿ ತಯಾರಾಗುವ ಶಸ್ತ್ರಾಸ್ತ್ರಗಳಿಗೆ ಆಫ್ರಿಕಾ, ಮಧ್ಯಪ್ರಾಚ್ಯ, ದಕ್ಷಿಣ ಅಮೆರಿಕ ದೇಶಗಳಲ್ಲಿ ಹೆಚ್ಚಿನ ಬೇಡಿಕೆಯಿದೆ. ಅತ್ಯಾಧುನಿಕ ರೆಡಾರ್‌ಗಳು, ವಿದ್ಯುನ್ಮಾನ ಯುದ್ಧ ವ್ಯವಸ್ಥೆಗಳು, ಸಂವಹನ ವ್ಯವಸ್ಥೆಗಳು ಹಾಗೂ ಜಾಮರ್‌ಗಳಂತಹ ಸಲಕರಣೆಗಳ ನಿರ್ಮಾಣ ಸಾಧ್ಯವಾಗಿದೆ ಎಂದರು.

ವಿದೇಶಗಳಿಂದ ತಂತ್ರಜ್ಞಾನದ ನೆರವು ಪಡೆದರೂ, ಸಂಪೂರ್ಣ ಭಿನ್ನವಾದ ಸ್ವದೇಶಿ ವಿನ್ಯಾಸಕ್ಕೆ ಒತ್ತು ನೀಡಲಾಗಿದೆ. ಅಭಿವೃದ್ಧಿಶೀಲ ದೇಶಗಳಿಗೆ ರಫ್ತು ಮಾಡುವುದರ ಜತೆಗೆ ಡಿಆರ್‌ಡಿಒ ಹಲವು ದೇಶಗಳೊಂದಿಗೆ ಸಹಯೋಗ ಹೊಂದಿದೆ. ಇತರೆ ದೇಶಗಳ ಶಸ್ತ್ರಾಸ್ತ್ರ ಬೇಡಿಕೆಯನ್ನು 45 ದಿನಗಳಲ್ಲಿ ಪೂರೈಸಲಾಗಿದೆ. ನೈಜೀರಿಯಾ, ಬ್ರೆಜಿಲ್‌ನಂತಹ ದೇಶಗಳು ಭಾರತದ ಸಹಕಾರದಲ್ಲಿ ತಮ್ಮ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಿಸಿಕೊಳ್ಳುತ್ತಿವೆ. ಆಧುನೀಕರಣಕ್ಕೆ ತೆರೆದುಕೊಳ್ಳುತ್ತಿವೆ ಎಂದು ಹೇಳಿದರು.

ಸೆ.1ಕ್ಕೆ ‘ಇಂಡಿಯಾ’ ಲಾಂಛನ ಅನಾವರಣ

ಪ್ರಜಾವಾಣಿ ವಾರ್ತೆ..

ಮುಂಬೈ: ನಗರದಲ್ಲಿ ಸೆಪ್ಟಂಬರ್ 1ರಂದು ನಡೆಯಲಿರುವ ‘ಇಂಡಿಯಾ’ದ ಸಭೆಯಲ್ಲಿ ವಿಪಕ್ಷಗಳ ಮೈತ್ರಿಕೂಟದ ಲಾಂಛನವನ್ನು ಅನಾವರಣ ಗೊಳಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಆ. 31 ಹಾಗೂ ಸೆ.1ರಂದು ಸಾಂತಾಕ್ರೂಜ್‌ನ ಹೋಟೆಲ್ ನಲ್ಲಿ ನಡೆಯುವ ‘ಇಂಡಿಯಾ’ದ ಮೂರನೇ ಸಭೆಯಲ್ಲಿ 26 ಅಂಗಪಕ್ಷಗಳ 80ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಳ್ಳುವರು ಎಂದು ಇವೇ ಮೂಲಗಳು ಹೇಳಿವೆ.

ಜೂನ್ 23ರಂದು ಪಟ್ನಾದಲ್ಲಿ ‘ಇಂಡಿಯಾ’ದ ಮೊದಲ ಸಭೆ ನಡೆದಿತ್ತು. ಬೆಂಗಳೂರಿನಲ್ಲಿ ಜುಲೈ 17 ಹಾಗೂ 18ರಂದು 2ನೇ ಸಭೆ ನಡೆದಿತ್ತು.

ಬೈರಮಂಗಲ ರಾಮೇಗೌಡ ಅಭಿಪ್ರಾಯ

‘ಗಾಂಧೀಜಿ ಮರೆತರೆ ಭವಿಷ್ಯ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಸ್ವಾಮಿ ವಿವೇಕಾನಂದ ಅವರನ್ನು ಮರೆತರೆ ಭಾರತಕ್ಕೆ ಭವಿಷ್ಯ ಇಲ್ಲ’ ಎಂದು ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಹೇಳಿದರು.

ನಗರದಲ್ಲಿ ಭಾನುವಾರ ಪಟೇಲ್ ಪಬ್ಲಿಕೇಷನ್ಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ.ಎಂ.ಜಿ. ರಂಗಸ್ವಾಮಿ – ಡಾ.ಕೆ.ವಿ. ಮುದ್ದವೀರಪ್ಪ ಸಂಯೋಜಿಸಿರುವ ‘ಶಿಕ್ಷಣ ಶಿಲ್ಪಿ’, ವಿನಯ್ ಭಟ್ ಸಂಕಲನದ ‘ಮುಖಾಮುಖಿ’, ವೂಡೇ ಪಿ. ಕೃಷ್ಣ ಅವರ ‘ಅಂಬೇಡ್ಕರ್ ಅನುಸಂಧಾನ’, ಎಸ್‌.ವಿ.ಮಂಜುನಾಥ್ ಅವರ ‘ನೂರು ನೆನಪು’ ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಮಹನೀಯರ ಆದರ್ಶಗಳ ಜತೆಗೇ ದೇಶವನ್ನು ಕಟ್ಟಬೇಕಿದೆ. ಆದರ್ಶಗಳ ಜತೆ ಬದುಕು ಸಾಗಿಸುವುದು ಮುಖ್ಯವಾಗಬೇಕು. ಮುಖಾಮುಖಿ ಕೃತಿಯಲ್ಲಿ ಬಹುಪಾಲು ಸಂದರ್ಶನಗಳು ವ್ಯಕ್ತಿಯ ಒಳ, ಹೊರ ವ್ಯಕ್ತಿತ್ವ ಅನಾವರಣ ಮಾಡುತ್ತವೆ’ ಎಂದು ಹೇಳಿದರು.

ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಮಾತನಾಡಿ, ‘ನಮ್ಮ ಸಂವಿಧಾನವೇ ಶ್ರೇಷ್ಠ. ಅದೇ ರಾಷ್ಟ್ರಗ್ರಂಥ’ ಎಂದು ಹೇಳಿದರು.

ಅನುವಾದಕ ಎಂ.ಜಿ.ರಂಗಸ್ವಾಮಿ ಮಾತನಾಡಿ, ‘ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರ ಗುರಿ ಹಾಗೂ ಉದ್ದೇಶವು ದೇಶಕ್ಕೆ ಸ್ವಾತಂತ್ರ್ಯ ಪಡೆದುಕೊಳ್ಳುವುದೇ ಆಗಿತ್ತು. ಇಬ್ಬರ ನಡುವೆಯೂ ವೈಯಕ್ತಿಕ ಭಿನ್ನಾಭಿಪ್ರಾಯಗಳು ಇರಲಿಲ್ಲ. ಅಂಬೇಡ್ಕರ್ ಅವರು ಇತರರ ಅನಿಸಿಕೆಗಳನ್ನೂ ಗೌರವಿಸುತ್ತಿದ್ದರು’ ಎಂದು ಹೇಳಿದರು.

ವೂಡೇ ಪಿ. ಕೃಷ್ಣ ಅವರನ್ನು ಸನ್ಮಾನಿಸಲಾಯಿತು.



ನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಕೃತಿಗಳನ್ನು ಬಿಡುಗಡೆ ಮಾಡಿದರು. ಮಲ್ಲೇಪುರಂ ಜಿ. ವೆಂಕಟೇಶ್, ಅನುವಾದಕ ಎಂ.ಜಿ.ರಂಗಸ್ವಾಮಿ, ವೂಡೇ ಪಿ. ಕೃಷ್ಣ, ಬೈರಮಂಗಲ ರಾಮೇಗೌಡ ಇದ್ದರು -ಪ್ರಜಾವಾಣಿ ಚಿತ್ರ

ಮಂಡಿ ಅಣೆಕಟ್ಟೆಯಲ್ಲಿ ಸಿಲುಕಿದ 10 ಜನ

ಪ್ರಜಾವಾಣಿ ವಾರ್ತೆ

ಶಿಮ್ಲಾ (ಪಿಟಿಐ); ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯ ಕೋಲ್ ಅಣೆಕಟ್ಟು ಜಲವಿದ್ಯುತ್ ಯೋಜನಾ ಸ್ಥಳದಲ್ಲಿ ಅರಣ್ಯ ಇಲಾಖೆ ಐವರು ನೌಕರರು ಸೇರಿದಂತೆ ಹತ್ತು ಜನರು ಭಾನುವಾರ ಸಿಲುಕಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಲುಕಿಕೊಂಡವರನ್ನು ಶೀಘ್ರ ರಕ್ಷಿಸಲಾಗುವುದು. ಸ್ಥಳೀಯ ಆಡಳಿತ ಮತ್ತು ನಿವಾಸಿಗಳ ಸಮನ್ವಯದೊಂದಿಗೆ ಎನ್‌ಡಿಆರ್‌ಎಫ್ ರಕ್ಷಣಾ ಕಾರ್ಯಾಚರಣೆ ಪ್ರಾರಂಭಿಸಿದೆ ಎಂದು ಮಂಡಿ ಜಿಲ್ಲಾಧಿಕಾರಿ ಅರಿಂದಮ್ ಚೌಧರಿ ಅವರು ಹೇಳಿದ್ದಾರೆ.

ಈ ಘಟನೆ ಹೇಗೆ ನಡೆಯಿತು ಎಂಬುದು ತಕ್ಷಣಕ್ಕೆ ತಿಳಿದುಬಂದಿಲ್ಲ.



ಯಲಹಂಕ ಸಮೀಪದ ಸಾದಹಳ್ಳಿಯಲ್ಲಿ ಎಸ್‌.ಜಿ. ಕೃಷ್ಣಮೂರ್ತಿ ಅವರ ‘ಹೋಟೆಲ್‌ಗಳು ಮತ್ತು ರೆಸಾರ್ಟ್ಸ್ ಅಭಿವೃದ್ಧಿ’ ಕೃತಿಯನ್ನು ಬಿಎಂಎಸ್ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಎಸ್‌.ಮುರಳೀಧರ್ ಬಿಡುಗಡೆಗೊಳಿಸಿದರು

‘ಹೋಟೆಲ್‌ಗಳು ಮತ್ತು ರೆಸಾರ್ಟ್ಸ್ ಅಭಿವೃದ್ಧಿ’ ಪುಸ್ತಕ ಬಿಡುಗಡೆ

ಯಲಹಂಕ: ಎಂಜಿನಿಯರಿಂಗ್ ಕ್ಷೇತ್ರದ ಜೊತೆಗೆ ಹೋಟೆಲ್ ಮತ್ತು ರೆಸಾರ್ಟ್ ವಿಭಾಗದಲ್ಲಿ ಆಳವಾದ ಅಧ್ಯಯನ ಮತ್ತು ಅಪಾರ ಅನುಭವವನ್ನು ಎಸ್. ಜಿ. ಕೃಷ್ಣಮೂರ್ತಿ ಹೊಂದಿದ್ದಾರೆ. 97ನೇ ವಯಸ್ಸಿನಲ್ಲಿಯೂ ಅವರ ಆಸಕ್ತಿ ಮತ್ತು ಉತ್ಸಾಹ ಕುಗ್ಗಿಲ್ಲ ಎಂದು ಬಿಎಂಎಸ್ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಎಸ್. ಮುರಳೀಧರ್ ಹೇಳಿದರು.

ಎಸ್‌.ಜಿ.ಕೃಷ್ಣಮೂರ್ತಿ ರಚಿಸಿರುವ ‘ಹೋಟೆಲ್‌ಗಳು ಮತ್ತು ರೆಸಾರ್ಟ್ಸ್ ಅಭಿವೃದ್ಧಿ’ ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು. ಎಸ್‌.ಜಿ.ಕೆ ಮೂರ್ತಿ ಮಾತನಾಡಿ, ‘ಹೋಟೆಲ್ ಮತ್ತು ರೆಸಾರ್ಟ್ ಕುರಿತು ಯಾವುದೇ ಪುಸ್ತಕಗಳಿಲ್ಲ. ಯೋಜನೆ ಹೇಗೆ ಆರಂಭಿಸಬೇಕು? ಯಾವ ವಿಭಾಗಗಳನ್ನು ತೆರೆದು, ಎಂತಹ ಸಿಬ್ಬಂದಿಯನ್ನು ನಿಯೋಜಿಸಬೇಕು? ಎಂಬುದನ್ನು ಕೃತಿಯಲ್ಲಿ ವಿವರಿಸಲಾಗಿದೆ’ ಎಂದರು.

ಸ್ಟರ್ಲಿಂಗ್ ಎಂಜಿನಿಯರಿಂಗ್ ಕನ್ಸಲ್ಟೆನ್ಸಿ ಸರ್ವಿಸಸ್ ನಿರ್ದೇಶಕ ಎನ್‌.ಎನ್. ನಾಗೇಂದ್ರಕುಮಾರ್ ಇದ್ದರು.

‘ಪರಂಪರೆಯ ಕಸುವು’ ಗೋಷ್ಠಿಯಲ್ಲಿ ಸಾಹಿತಿ ರಹಮತ್ ತರಿಕೆರೆ ಅಭಿಪ್ರಾಯ

ದ್ವೇಷಕ್ಕಾಗಿ ‘ನಾವು ಮತ್ತು ಪರರು’ ಬಳಕೆಯೇ ಸಮಸ್ಯೆ

ಪ್ರಜಾವಾಣಿ ವಾರ್ತೆ



ರಹಮತ್ ತರಿಕೆರೆ

ಬೆಂಗಳೂರು: ‘ನಾವು ಮತ್ತು ಪರರು ಎಂಬ ಶಬ್ದಗಳು ಹೋಲಿಕೆ ಮಾಡಲು ಹಾಗೂ ಶ್ರೇಷ್ಠತೆ ತೋರಿಸಲು ಬಳಕೆಯಾಗುತ್ತಲೇ ಬಂದಿವೆ. ಆದರೆ, ಯಾರನ್ನೋ ದ್ವೇಷಿಸಲು ಈ ಶಬ್ದಗಳನ್ನು ಬಳಸುತ್ತಿರುವುದೇ ಸಮಸ್ಯೆ ಸೃಷ್ಟಿಸಿದೆ’ ಎಂದು ಸಾಹಿತಿ ರಹಮತ್ ತರಿಕೆರೆ ಹೇಳಿದರು.

ಜಾಗೃತ ಕರ್ನಾಟಕ ಭಾನುವಾರ ಆಯೋಜಿಸಿದ ‘ನಮ್ಮ ಕರ್ನಾಟಕ ನಮ್ಮ ಮಾದರಿ’ ಚಿಂತನಾ ಸಮಾವೇಶದ ‘ಪರಂಪರೆಯ ಕಸುವು’ ಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ನಮ್ಮ ರಾಜ್ಯ, ಪರರಾಜ್ಯ, ನಮ್ಮವರು, ಅನ್ಯರು ಎಂದೆಲ್ಲ ಇರುವಾಗಲೇ ತನ್ನಂತೆ ಪರರನ್ನು ಬಗೆಯಬೇಕು ಎಂಬ ಮಾತುಗಳು ಬಂದಿವೆ. ಎಲ್ಲರನ್ನು ಒಂದೇ ರೀತಿ ಕಾಣಲು ಬಸವಣ್ಣ, ಕುವೆಂಪು ಸಹಿತ ಅನೇಕರು ಹೇಳಿರುವುದು ಆಯಾ ಕಾಲದಲ್ಲಿ ಆ ರೀತಿ ಇತ್ತು ಎಂದು ಅಲ್ಲ. ಪರಿಸ್ಥಿತಿ ಬಿಗಡಾಯಿಸಿದ್ದರಿಂದ ನಾವು ಇರಬೇಕಾದ ರೀತಿಯನ್ನು ತೋರಿದ ದಾರಿಯದು’ ಎಂದರು.

ಪ್ರಾದೇಶಿಕ ಅಸಮಾನತೆಯ ಸಮಸ್ಯೆ ಬಗ್ಗೆ ಸಹಾಯಕ ಪ್ರಾಧ್ಯಾಪಕಿ ಸ್ವಾತಿ ಶಿವಾನಂದ್ ಮಾತನಾಡಿ, ‘ಕರ್ನಾಟಕ ಪ್ರಾಂತ್ಯ ಬೇಕು ಎಂದು 1920ರಲ್ಲಿಯೇ ಬಾಂಬೆ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದ ಜನರು ಬೇಡಿಕೆ ಇಟ್ಟಿದ್ದರು. ಅದರಲ್ಲಿ ಮೈಸೂರು ಪ್ರಾಂತ್ಯದ ಸೇರ್ಪಡೆಯ ಬಗ್ಗೆ ಅಷ್ಟು ಆಸಕ್ತಿ ಇರಲಿಲ್ಲ. ಸ್ವಾತಂತ್ರ್ಯ ದೊರೆತ ಬಳಿಕ ಭಾಷಾವಾರು ರಾಜ್ಯ ರಚನೆಯ ವೇಳೆಯಲ್ಲಿ ಮೈಸೂರು ರಾಜ್ಯದ ಗುಣಮಟ್ಟಕ್ಕೆ ಉಳಿದವು ಇಲ್ಲ ಎಂಬ ಕಾಲೊನಿಯಲ್ ಮನಸ್ಥಿತಿ ಮೈಸೂರು ಭಾಗದವರಲ್ಲಿ ಇತ್ತು. ನಿಜ ನೋಡಿದರೆ ಮೈಸೂರು ಪ್ರಾಂತ್ಯಕ್ಕಿಂತ ಬಾಂಬೇ ಕರ್ನಾಟಕವು ಶಿಕ್ಷಣದಲ್ಲಿ ಮುಂದಿತ್ತು. ಕೃಷಿಯಲ್ಲಿ ಹೈದರಾಬಾದ್ ಕರ್ನಾಟಕ ಮುಂದಿತ್ತು’ ಎಂದು ತಿಳಿಸಿದರು.

ಸಾಮಾಜಿಕ ನ್ಯಾಯದ ಸವಾಲು ಮತ್ತು ಸಾಧ್ಯತೆ ಬಗ್ಗೆ ಸಹ ಪ್ರಾಧ್ಯಾಪಕ ಪ್ರದೀಪ್ ರಮಾವತ್ ಜೆ. ಮಾತನಾಡಿ, ‘ನಾನು ಅಸ್ಸಾಂನಲ್ಲಿ ಕೆಲಸ ಮಾಡುತ್ತಿದ್ದು, ಅಲ್ಲಿನ ಬುಡಕಟ್ಟುಗಳ ಸ್ಥಿತಿ ನೋಡಿದರೆ ಕರ್ನಾಟಕವು ಸಾವಿರ ಪಟ್ಟು ಮುಂದಿದೆ’ ಎಂದರು.

ಕಲ್ಯಾಣದ ಕಾರ್ಯಕ್ರಮಗಳ ಆರ್ಥಿಕತೆ ಬಗ್ಗೆ ರಾಜಕೀಯ ವಿಶ್ಲೇಷಕ ಬಿ.ಸಿ. ಬಸವರಾಜ್ ಮಾತನಾಡಿ, ‘ಜನರ ಕೊಳ್ಳುವ ಶಕ್ತಿ ಕಡಿಮೆಯಾದಾಗ ಅದನ್ನು ಹೆಚ್ಚಿಸಲು ಸರ್ಕಾರ ರೂಪಿಸುವ ಗ್ಯಾರಂಟಿಯಂಥ ಯೋಜನೆಗಳು ಅಗತ್ಯ. ತೆರಿಗೆ ವಿನಾಯಿತಿ ಸಹಿತ ಅನೇಕ ಭಾಗ್ಯಗಳನ್ನು ಪಡೆಯುತ್ತಿರುವ ಶ್ರೀಮಂತರು, ಶ್ರೀಮಂತ ಉದ್ಯಮಿಗಳೇ ಪಡೆಯುತ್ತಿರುವುದು ಬಿಟ್ಟಿಭಾಗ್ಯ’ ಎಂದು ಅಂಕಿ ಅಂಶಗಳನ್ನು ನೀಡಿದರು.

ಸಹಾಯಕ ಪ್ರಾಧ್ಯಾಪಕ ಬಸವರಾಜ್ ಎಂ. ಬಿರಾದಾರ್ ಸಮನ್ವಯ ಮಾಡಿದರು.



ನಮ್ಮ ಕರ್ನಾಟಕ ನಮ್ಮ ಮಾದರಿ’ ಚಿಂತನಾ ಸಮಾವೇಶದಲ್ಲಿ ಅಂಕಣಕಾರ ಎ. ನಾರಾಯಣ, ವಿಶ್ರಾಂತ ಕುಲಪತಿ ಸಬೀಹಾ ಭೂಮಿಗೌಡ, ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆಂಜನೇಯ ರೆಡ್ಡಿ ಇದ್ದರು. –ಪ್ರಜಾವಾಣಿ ಚಿತ್ರ

‘ಕರ್ನಾಟಕ ಮಾದರಿಯನ್ನು ಜನ ಸ್ವೀಕರಿಸುವಂತಾಗಬೇಕು’

‘ಕೇರಳ ಮಾದರಿಯನ್ನು ತಮ್ಮವು ಎಂದು ಕೇರಳದ ಜನ ಒಪ್ಪಿಕೊಂಡಂತೆ, ತಮಿಳುನಾಡು ಮಾದರಿಯನ್ನು ತಮಿಳು ಜನ ಒಪ್ಪಿಕೊಂಡಂತೆ, ಕರ್ನಾಟಕದ ಮಾದರಿಯನ್ನು ಇಲ್ಲಿನ ಜನರು ಒಪ್ಪಿಕೊಂಡಿಲ್ಲ. ಆ ಕಾರಣದಿಂದಲೇ ಕರ್ನಾಟಕದ ಮಾದರಿ ಬಗ್ಗೆ ಇಲ್ಲಿನ ಸರ್ಕಾರಗಳು ಕೂಡ ಗಂಭೀರವಾಗಿಲ್ಲ’ ಎಂದು ಅಂಕಣಕಾರ ಎ. ನಾರಾಯಣ ವಿಷಾದ ವ್ಯಕ್ತಪಡಿಸಿದರು.

ಚಿಂತನಾ ಸಮಾವೇಶದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದ ಅವರು, ‘ರಾಜಕೀಯ ಅಧಿಕಾರವನ್ನು ಮೇಲಿನಿಂದ ಕೆಳಗೆ ಪ್ರವಹಿಸುವಂತೆ ಮಾಡಿದ, ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಿ ಸರ್ಕಾರಿ ಉದ್ಯೋಗವನ್ನು ಕೂಡ ಮೇಲಿನಿಂದ ಕೆಳಗೆ ಹರಿಯುವಂತೆ ಮಾಡಿದ, ಭೂಸುಧಾರಣೆಯ ಮೂಲಕ ಭೂಮಿ ಇಲ್ಲದವರಿಗೆ ಭೂಮಿ ಸಿಗುವಂತೆ ಮಾಡಿದ ಅರಸು ಆಡಳಿತ. ಗ್ಯಾರಂಟಿಗಳನ್ನು ಜಾರಿ ಮಾಡುತ್ತಿರುವ ಸಿದ್ದರಾಮಯ್ಯರ ಆಡಳಿತ ಕರ್ನಾಟಕದ ಮಾದರಿಗಳು. ಅಭಿವೃದ್ಧಿ ಮತ್ತು ಅದರ ಮರುಹಂಚಿಕೆಯ ಮಾದರಿಯದು’ ಎಂದು ವಿಶ್ಲೇಷಿಸಿದರು.

ಲಂಡನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಜೇಮ್ಸ್ ಮ್ಯಾನರ್, ವರ್ಚುವಲ್ ಭಾಷಣ ಮಾಡಿ, ‘ದೇವರಾಜ ಅರಸು ಅವರು ರಾಜಕೀಯ ಅಧಿಕಾರವನ್ನು ಭೂಮಾಲೀಕರಿಂದ ಹಿಂದುಳಿದ ಜನರಿಗೆ ಪಲ್ಲಟಗೊಳಿಸುವ ಮೂಲಕ ರಾಜಕೀಯದ ಗತಿ ಬದಲಾಯಿಸಿದರು. ಹಿಂದುಳಿದ ವರ್ಗ ಮತ್ತು ಇತರರ ಬೆಂಬಲವಿಲ್ಲದೇ ಯಾರೂ ರಾಜಕೀಯ ಮಾಡಲು ಸಾಧ್ಯವಿಲ್ಲದಂತೆ ಮಾಡಿದರು’ ಎಂದು ನೆನಪು ಮಾಡಿಕೊಂಡರು.


ವಿಶ್ರಾಂತ ಕುಲಪತಿ ಸಬಿಹಾಭೂಮಿ ಗೌಡ ಮಾತನಾಡಿ, ‘ಸ್ವಾಮಿನಾಥನ್ ಆಯೋಗದ ವರದಿಯಂತೆ ಭೂಮಿ ಪಟ್ಟವನ್ನು ದಂಪತಿಯ ಹೆಸರಲ್ಲಿ ಮಾಡಲು ಕ್ರಮ ಕೈಗೊಳ್ಳಬೇಕು. ಎಸ್‌ಸಿಸಿಪಿ, ಟಿಎಸ್‌ಪಿ ಮಾದರಿಯಲ್ಲಿ ಮಹಿಳೆಯರ ಅಭಿವೃದ್ಧಿಗೆ ಮೀಸಲಿಡಬೇಕು ಮತ್ತು ಅವರಿಗೇ ಆ ಅನುದಾನವನ್ನು ಬಳಸಬೇಕು. ಜನಸಂಖ್ಯೆಗೆ ಅನುಗುಣವಾಗಿ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ಸಿಗಬೇಕು. ನೀತಿ ನಿರೂಪಣಾ ಸ್ಥಾನಗಳಲ್ಲಿ ಶೇ 33ರಷ್ಟು ಮಹಿಳೆಯರಿಗೆ ನೀಡಬೇಕು‘ ಎಂದು ಆಗ್ರಹಿಸಿದರು.

ಆಂಜನೇಯ ರೆಡ್ಡಿ ಗೋಷ್ಠಿಯ ಸಮನ್ವಯ ಮಾಡಿದರು.

ಚಿತ್ರಾವಳಿ



ನಗರದ ಮಾರತಹಳ್ಳಿ ಮುನ್ನೇಕೊಳಲಿನ ವಾಗ್ದೇವಿ ವಿಲಾಸ ಶಾಲೆಯಲ್ಲಿ ನಡೆದ ವಾಗ್ದೇವಿ ಕಲಾ ಉತ್ಸವದಲ್ಲಿ ಚಳ್ಳಕೆರೆಯ ಎಂ.ಎಸ್‌.ರಾಮಸ್ವಾಮಿ ಹಾಗೂ ಎಂ ಎಸ್. ಶ್ರೀನಿವಾಸನ್ ಅವರಿಗೆ 'ವಾಗ್ದೇವಿ ವೇದರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಭಾರತೀಯ ಬಾಹ್ಯಾಕಾಶ ತಂತ್ರಜ್ಞಾನ ಸಂಸ್ಥೆಯ ಕುಲಪತಿ ಡಾ.ಬಿ.ಎನ್. ಸುರೇಶ್ ಹಾಗೂ ವಾಗ್ದೇವಿ ವಿಲಾಸ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕೆ.ಹರೀಶ್ ಇದ್ದರು.



ಬೆಂಗಳೂರು ವಿಶ್ವವಿದ್ಯಾಲಯದ ಹಿಂದುಳಿದ ವರ್ಗಗಳ ಕೋಶದಿಂದ ನಡೆದ ಡಿ.ದೇವರಾಜು ಅರಸು ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಕುಲಪತಿ ಪ್ರೊ.ಎಸ್. ಎಂ. ಜಯಕರ ಪುಷ್ಪನಮನ ಸಲ್ಲಿಸಿದರು. ಕುಲಸಚಿವ ಶೇಕ್ ಲತೀಫ್, ಹಿಂದುಳಿದ ವರ್ಗಗಳ ಕೋಶದ ವಿಶೇಷಾಧಿಕಾರಿ ಡಾ.ಡಿ.ಕೆ.ಚಿತ್ತಯ ಪೂಜಾರ್ ಇದ್ದರು.



ಸ್ನೇಹ ಪ್ರಿಂಟರ್ಸ್ ಹಾಗೂ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಜಂಟಿಯಾಗಿ ನಗರದಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಎಸ್. ರಂಗನಾಥ್ ಅವರ (ಎಡದಿಂದ ಮೊದಲಿಗರು) ‘ಮಹನೀಯರ ಮಾತುಗಳಲ್ಲಿ ಮಹನೀಯರು’ ಕೃತಿಯನ್ನು ರಾಷ್ಟ್ರೋತ್ಥಾನ ಸಾಹಿತ್ಯದ ಪ್ರಧಾನ ಸಂಪಾದಕ ಎಸ್‌.ಆರ್. ರಾಮಸ್ವಾಮಿ ಬಿಡುಗಡೆ ಮಾಡಿದರು. ಹಳಗನ್ನಡ ವಿದ್ವಾಂಸ ಟಿ.ವಿ. ವೆಂಕಟಾಚಲ ಶಾಸ್ತ್ರಿ ಹಾಗೂ ವಿದ್ವಾಂಸ ಶತಾವಧಾನಿ ಆರ್. ಗಣೇಶ್ ಇದ್ದಾರೆ.



ಸುಭಾಷಿತ
ಜನರಿಗೆ ಹಿರಿಯರಿಂದ ಬರುವ ಆಭರಣಗಳಲ್ಲಿ ಭಾಷೆಯೂ ಒಂದು. ಅದು ಚೆನ್ನಾಗಿದ್ದರೆ ಭೂಷಣ.
-ಬಿ.ಎಂ.ಶ್ರೀ

ಬ್ಯಾಂಕುಗಳಿಗೆ ಆರ್‌ಬಿಐ ಮಾರ್ಗಸೂಚಿ ಪರಿಣಾಮಕಾರಿಯಾಗಿ ಜಾರಿಗೆ ಬರಲಿ

ಆಗಸ್ಟ್ ತಿಂಗಳ ಎರಡನೆಯ ವಾರದಲ್ಲಿ ಸಭೆ ಸೇರಿದ್ದ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ಗ್ರಾಹಕರ ಹಿತದೃಷ್ಟಿಯಿಂದ ಕೆಲವು ಪ್ರಮುಖ ತೀರ್ಮಾನಗಳನ್ನು ಕೈಗೊಂಡಿತು. ಬ್ಯಾಂಕ್ ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳಲ್ಲಿ (ಎನ್‌ಬಿಎಫ್‌ಸಿ) ಸಾಲ ಪಡೆದವರಿಗೆ, ನಿಶ್ಚಿತ ಬಡ್ಡಿ ದರ ವ್ಯವಸ್ಥೆಗೆ ಬದಲಾಗಲು ಅವಕಾಶ ನೀಡಬೇಕು ಎಂಬುದು ಅದರಲ್ಲಿ ಒಂದು. ಈ ತೀರ್ಮಾನದ ಮುಂದಿನ ಹೆಜ್ಜೆಯಾಗಿ ಆರ್‌ಬಿಐ ಈಗ ವಿಸ್ತೃತ ನಿಯಮಾವಳಿಗಳನ್ನು ಪ್ರಕಟಿಸಿದೆ. ಇವು ಡಿಸೆಂಬರ್ 31ಕ್ಕೆ ಮೊದಲು ಜಾರಿಗೆ ಬರಲಿವೆ ಎಂದು ಆರ್‌ಬಿಐ ಹೇಳಿದೆ. 2022ರ ಮೇ ತಿಂಗಳಿನಿಂದ ರೆಪೊ ದರವು ಹೆಚ್ಚುತ್ತ ಬಂದಿರುವ ಪರಿಣಾಮವಾಗಿ, ಬ್ಯಾಂಕ್ ಸಾಲದ ಮೇಲಿನ ಬಡ್ಡಿ ದರ ಕೂಡ ಹೆಚ್ಚಾಗಿದೆ. ಕಡಿಮೆ ಬಡ್ಡಿ ದರ ಇದ್ದ ಸಂದರ್ಭದಲ್ಲಿ ವಿವಿಧ ಬಗೆಯ ಸಾಲಗಳನ್ನು ಪಡೆದವರ ಮಾಸಿಕ ಕಂತುಗಳ (ಇಎಂಐ) ಮೊತ್ತ ಹೆಚ್ಚಾಗಿದೆ. ಇನ್ನು ಕೆಲವು ಪ್ರಕರಣಗಳಲ್ಲಿ, ಸಾಲದ ಮರುಪಾವತಿ ಅವಧಿ ಹೆಚ್ಚಾಗಿದೆ. ಕೆಲವು ಅಪರೂಪದ ಪ್ರಕರಣಗಳಲ್ಲಿ, ಇಎಂಐ ಮೊತ್ತವು ಮೊದಲಿನಷ್ಟೇ ಉಳಿದುಕೊಂಡಿದ್ದರೂ, ಬಡ್ಡಿ ಹೆಚ್ಚಳದ ಪರಿಣಾಮವಾಗಿ ಆ ಇಎಂಐ ಮೊತ್ತವು ಸಾಲದ ಅಸಲಿನ ಮೇಲೆ ಪ್ರತಿ ತಿಂಗಳು ಬರುವ ಬಡ್ಡಿಯನ್ನು ತೀರಿಸಲಿಕ್ಕೂ ಸಾಕಾಗುತ್ತಿಲ್ಲ. ಅಂದರೆ, ಇಎಂಐ ಮೊತ್ತವನ್ನು ಅಷ್ಟೇ ಉಳಿಸಿಕೊಂಡರೆ, ವ್ಯಕ್ತಿ ಸಾಲವನ್ನು ತೀರಿಸಲು ಸಾಧ್ಯವೇ ಆಗದ ಸ್ಥಿತಿ ನಿರ್ಮಾಣವಾಗಿದೆ. ಕೆಲವು ಪ್ರಕರಣಗಳಲ್ಲಿ, ನೌಕರ ವರ್ಗದವರು ಪಡೆದ ಸಾಲದ ಮರುಪಾವತಿ ಅವಧಿ ವಿಸ್ತರಣೆ ಕಂಡು, ನೌಕರ ನಿವೃತ್ತರಾದ ನಂತರವೂ ಸಾಲದ ಕಂತುಗಳನ್ನು ಕಟ್ಟಬೇಕಾದ ಸ್ಥಿತಿ ಇದೆ.



ಇಎಂಐ ಮೊತ್ತ, ಮರುಪಾವತಿ ಅವಧಿ ವಿಸ್ತರಣೆಯಂತಹ ವಿಷಯಗಳನ್ನು ಹಣಕಾಸು ಸಂಸ್ಥೆಗಳು ಗ್ರಾಹಕರಿಗೆ ಸರಿಯಾದ ರೀತಿಯಲ್ಲಿ ತಿಳಿಸಿಲ್ಲ ಎಂಬ ದೂರುಗಳು ಇವೆ. ಇವುಗಳಿಗೆ ಕಡಿವಾಣ ಹಾಕುವ ಹಾಗೂ ಗ್ರಾಹಕರು ಪಾರದರ್ಶಕವಾಗಿ ಸಾಲದ ಸುಳಿಯಲ್ಲಿ ಸಿಲುಕದಂತೆ ಮಾಡುವ ಉದ್ದೇಶದಿಂದ ಆರ್‌ಬಿಐ ಈಗ ಈ ನಿಯಮಾವಳಿಗಳನ್ನು ಹೊರಡಿಸಿದೆ. 'ರೆಪೊ ದರದಲ್ಲಿ ಆಗುವ ಬದಲಾವಣೆಗಳಿಂದ ಇಎಂಐ ಮೊತ್ತ ಹಾಗೂ ಸಾಲದ ಮರುಪಾವತಿ ಅವಧಿಯ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂಬುದನ್ನು ಹಣಕಾಸು ಸಂಸ್ಥೆಗಳು ಸಾಲ ಮಂಜೂರು ಮಾಡುವಾಗ ಗ್ರಾಹಕರಿಗೆ ಸ್ಪಷ್ಟವಾಗಿ ತಿಳಿಸಬೇಕು. ನಂತರ, ಇಎಂಐ ಹೆಚ್ಚಳ ಅಥವಾ ಮರುಪಾವತಿ ಅವಧಿಯ ವಿಸ್ತರಣೆಯನ್ನು ಸೂಕ್ತ ರೀತಿಯಲ್ಲಿ ತಕ್ಷಣವೇ ತಿಳಿಸಬೇಕು' ಎಂದು ಆರ್‌ಬಿಐ ತಾಕೀತು ಮಾಡಿರುವುದು ಸ್ವಾಗತಾರ್ಹ. ಹಣಕಾಸು ಸಾಕ್ಷರತೆ ಕಡಿಮೆ ಇರುವ ಕಾರಣ, ರೆಪೊ ದರ ಹಾಗೂ ಅದರಲ್ಲಿನ ಬದಲಾವಣೆಗಳಿಂದ ಆಗುವ ಪರಿಣಾಮಗಳ ಬಗ್ಗೆ ಅರಿವಿನ ಕೊರತೆ ಇದೆ. ತಾವು ಸಾಲ ಬಯಸಿದ ಸಂದರ್ಭದಲ್ಲಿದ್ದ ಕಡಿಮೆ ಪ್ರಮಾಣದ ಬಡ್ಡಿಯನ್ನು ಕಂಡು, ಆ ಬಡ್ಡಿ ದರಕ್ಕೆ ಸಾಲ ಪಡೆದು, ಬದಲಾದ ಪರಿಸ್ಥಿತಿಯಲ್ಲಿ ಮರುಪಾವತಿ ಅವಧಿ ವಿಸ್ತರಣೆಯಾಗಿರುವ ಅಥವಾ ಇಎಂಐ ದುಬಾರಿಯಾಗಿ ಸಂಕಷ್ಟಕ್ಕೆ ಸಿಲುಕಿರುವವರು ಇದ್ದಾರೆ. ಆದರೆ, ಈಗ ಆರ್‌ಬಿಐ ಹೊರಡಿಸಿರುವ ಮಾರ್ಗಸೂಚಿಗಳು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬಂದಲ್ಲಿ, ಇಂತಹ ಸಮಸ್ಯೆ ಎದುರಾಗದಂತೆ ನೋಡಿಕೊಳ್ಳಬಹುದು.

ಈ ನಿಯಮಗಳ ಬಗ್ಗೆ ಗ್ರಾಹಕರಿಗೆ ಅರಿವು ಮೂಡಿಸುವ ಕೆಲಸ ಮಾಡಿದರೆ ಮಾತ್ರ ಆರ್‌ಬಿಐ ಉದ್ದೇಶ ಪೂರ್ಣ ಪ್ರಮಾಣದಲ್ಲಿ ಈಡೇರುತ್ತದೆ


ಬ್ಯಾಂಕ್ ಹಾಗೂ ಎನ್‌ಬಿಎಫ್‌ಸಿಗಳಿಗೆ ಆರ್‌ಬಿಐ ನೀಡಿರುವ ಇನ್ನೊಂದು ಸೂಚನೆ, 'ದಂಡದ ರೂಪದಲ್ಲಿ ಬಡ್ಡಿ' ವಸೂಲು ಮಾಡುವುದಕ್ಕೆ ಸಂಬಂಧಿಸಿದೆ. ಬ್ಯಾಂಕುಗಳು ಹಾಗೂ ಎನ್‌ಬಿಎಫ್‌ಸಿಗಳು ತಮ್ಮ ವರಮಾನ ಹೆಚ್ಚಿಸಿಕೊಳ್ಳುವ ಕ್ರಮವಾಗಿ 'ದಂಡದ ರೂಪದಲ್ಲಿ ಬಡ್ಡಿ' ವಿಧಿಸುವ ಮಾರ್ಗ ತುಳಿಯುತ್ತಿರುವುದು ತಪ್ಪುವಂತೆ ಆರ್‌ಬಿಐ ಕೆಲವು ನಿಯಮಗಳನ್ನು ಜಾರಿಗೆ ತಂದಿದೆ. ಸಾಲ ಮರುಪಾವತಿ ಯಾವುದೇ ಕಾರಣಕ್ಕೆ ವಿಳಂಬವಾದರೆ ದಂಡ ಶುಲ್ಕವನ್ನು ಮಾತ್ರ ವಸೂಲು ಮಾಡಬೇಕು ಎಂದು ಸ್ಪಷ್ಟಪಡಿಸಿದೆ. ಗ್ರಾಹಕರು ಹಣಕಾಸಿನ ಸಂಕಷ್ಟಕ್ಕೆ ಸಿಲುಕಿ ಸಾಲ ಮರುಪಾವತಿಯನ್ನು ತಪ್ಪಿಸಬಹುದು. ಅಂಥವರಿಗೆ ದಂಡದ ರೂಪದಲ್ಲಿ ಹೆಚ್ಚುವರಿ ಬಡ್ಡಿ ಹೊರಿಸುವುದು ಮಾನವೀಯ ಕ್ರಮವಾಗುವುದಿಲ್ಲ. ಈ ಎಲ್ಲ ಸೂಚನೆಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರುವ ಜೊತೆಯಲ್ಲಿಯೇ, ಈ ನಿಯಮಗಳ ಬಗ್ಗೆ ಗ್ರಾಹಕರಿಗೆ ಅರಿವು ಮೂಡಿಸುವ ಕೆಲಸ ಕೂಡ ಆಗಬೇಕು. ಇದು ದೊಡ್ಡ ಮಟ್ಟದಲ್ಲಿ ಆಗಬೇಕು. ಈ ಕೆಲಸವನ್ನು ಆರ್‌ಬಿಐ ಮತ್ತು ಹಣಕಾಸು ಸಂಸ್ಥೆಗಳು ಜೊತೆಯಾಗಿ ಮಾಡಬಹುದು. ಆಗ ಮಾತ್ರ ಆರ್‌ಬಿಐ ಉದ್ದೇಶ ಪೂರ್ಣ ಪ್ರಮಾಣದಲ್ಲಿ ಈಡೇರುತ್ತದೆ.

ದಿನದ ಟ್ವೀಟ್



ಉತ್ತಮರಾಗಲು ಬೇಕಿದೆ ವಿವೇಕ
ನಿಮ್ಮ ಸ್ನೇಹಿತರು ಹಾಗೂ ಸಹೋದ್ಯೋಗಿಗಳನ್ನು ವಿವೇಕದಿಂದ ಆಯ್ಕೆ ಮಾಡಿಕೊಳ್ಳಿ. ಉತ್ತಮರಾಗಲು ಇರುವ ದಾರಿಯೆಂದರೆ, ಸರಿಯಾದ ವ್ಯಕ್ತಿಗಳ ನಡುವೆ ಇರುವುದು.
ಮೋತಿಲಾಲ್ ಓಸ್ವಾಲ್, ಉದ್ಯಮಿ

ಕಿಡಿನುಡಿ



2013ರಿಂದ 2018ರವರೆಗೆ ಡಿ.ಕೆ.ಶಿವಕುಮಾರ್ ಸಚಿವರಾಗಿದ್ದಾಗ ರಾಮನಗರಕ್ಕೆ ಯಾಕೆ ನೀರು ಕೊಡಲಿಲ್ಲ? ಆಗ ಏನು ಮಾಡುತ್ತಿದ್ದರು? ಬಂಡೆ ಒಡೆಯುತ್ತಾ ಕುಳಿತಿದ್ರಾ?
ಎಚ್.ಡಿ.ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ
ಶುಕ್ರವಾರ, 21-8-1998

- **ಸಕ್ಕರೆ ಲೈಸೆನ್ಸ್ ವ್ಯವಸ್ಥೆ ರದ್ದು; ಕಡ್ಡಾಯ ಲೆವಿ ಪದ್ಧತಿ ಇನ್ನಿಲ್ಲ**

ನವದೆಹಲಿ, ಆ. 20 (ಪಿಟಿಐ)– ಕೇಂದ್ರ ಸರ್ಕಾರ ಇಂದು ಸಕ್ಕರೆ ಉದ್ಯಮವನ್ನು ಪರವಾನಗಿ ನಿಯಂತ್ರಣದಿಂದ ಮುಕ್ತಗೊಳಿಸಿತು.

ಆರ್ಥಿಕ ವ್ಯವಹಾರಗಳ ಕುರಿತಾದ ಸಂಪುಟ ಸಮಿತಿಯ (ಸಿಸಿಇಎ) ಸಭೆಯಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು ಎಂದು ಕೃಷಿ ಖಾತೆ ರಾಜ್ಯ ಸಚಿವ ಸೋಮಪಾಲ್ ಇಂದು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಸಕ್ಕರೆ ಉತ್ಪಾದನೆ ಮೇಲಿನ ನಿಯಂತ್ರಣವನ್ನು ತೆಗೆದುಹಾಕುವ ನಿರ್ಧಾರ 'ಐತಿಹಾಸಿಕ' ಎಂದು ಬಣ್ಣಿಸಿದ ಸಚಿವ ಸೋಮಪಾಲ್, 'ಇನ್ನು ಮುಂದೆ ಸಕ್ಕರೆ ಕಾರ್ಖಾನೆಗಳಿಗೆ ಸಕ್ಕರೆಯನ್ನು ಸರ್ಕಾರಿ ದಾಸ್ತಾನಿಗೆ ನೀಡಬೇಕಾದಂತಹ ಯಾವುದೇ ಜವಾಬ್ದಾರಿ ಇರುವುದಿಲ್ಲ' ಎಂದರು.

- **ಅರಸು ಹೆಸರಿನಲ್ಲಿ ಅಣೆಕಟ್ಟು ಕಟ್ಟಿ– ಹಾವನೂರು**

ಬೆಂಗಳೂರು, ಆ. 20– 'ಹಿಂದುಳಿದ ವರ್ಗಗಳ ಬೈಬಲ್' ಸೃಷ್ಟಿಕರ್ತ ಲಕ್ಷ್ಮಣ ಗೂಳಪ್ಪ ಹಾವನೂರು ಅವರಿಗೆ 'ದೇವರಾಜ ಅರಸು' ಪ್ರಶಸ್ತಿಯನ್ನು ಇಂದು ಸಂಜೆ ವಿಧಾನಸೌಧದಲ್ಲಿ ಏರ್ಪಡಿಸಿದ್ದ ಸ್ಮರಣೀಯ ಸಮಾರಂಭದಲ್ಲಿ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರದಾನ ಮಾಡಿದರು.

ಪ್ರಶಸ್ತಿ ಪತ್ರ, ಒಂದು ಲಕ್ಷ ರೂಪಾಯಿಯ ಚೆಕ್ ಅನ್ನು ಫಲ ತಾಂಬೂಲಗಳೊಂದಿಗೆ ನೀಡಲಾಯಿತು. ಶಾಲು ಹೊದಿಸಿ ಸನ್ಮಾನಿಸಲಾಯಿತು. ಪ್ರಶಸ್ತಿ ಸ್ವೀಕರಿಸಿದ ಹಾವನೂರು ಅವರು ಸರ್ಕಾರಕ್ಕೆ ಕೃತಜ್ಞತೆ ಅರ್ಪಿಸಿ, ರೈತರ– ಸಮಾಜದ ಏಳಿಗೆಯಾಗಬೇಕಾದರೆ 'ನೀರಾವರಿ'ಗೆ ಆದ್ಯತೆ ಕೊಡಬೇಕೆಂಬ ದೂರದೃಷ್ಟಿ ದೇವರಾಜ ಅರಸು ಅವರಿಗೆ ಇತ್ತು. ಆದ್ದರಿಂದ ಅವರ ಹೆಸರಿನಲ್ಲಿ ನಾಲೆ ಅಥವಾ ಅಣೆಕಟ್ಟು ಕಟ್ಟಲು ಪ್ರಶಸ್ತಿಯ ಹಣವನ್ನು ಸರ್ಕಾರ ಉಪಯೋಗಿಸಿಕೊಳ್ಳಲು ವಾಪಸು ನೀಡುತ್ತಿರುವುದಾಗಿ ತಿಳಿಸಿ ಚೆಕ್ ಅನ್ನು ಸರ್ಕಾರಕ್ಕೆ ಹಿಂದಿರುಗಿಸಿದರು.

'ಪ್ರಶಸ್ತಿ ಹಣದ ಜೊತೆಗೆ ನಾನು ಹಾಗೂ ಹಾವನೂರು ಕಾನೂನು ಕಾಲೇಜು ವತಿಯಿಂದ ತಲಾ ಒಂದು ಲಕ್ಷ ರೂಪಾಯಿ ಕೊಡುತ್ತೇವೆ. ಸರ್ಕಾರ ಒಂದು ಲಕ್ಷ ರೂಪಾಯಿ ಸೇರಿಸಿ ದೇವರಾಜ ಅರಸು ಅವರ ಹೆಸರಿನಲ್ಲಿ ನಾಲೆಯನ್ನೋ ಅಣೆಕಟ್ಟನ್ನೋ ನಿರ್ಮಿಸಲಿ' ಎಂದು ಅವರು ವಿನಂತಿಸಿದರು. ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾವನೂರು ಅವರು ನೀಡಿದ ಸಲಹೆಯಂತೆ ಸರ್ಕಾರ ನಡೆಯುವುದಾಗಿ ಭರವಸೆ ನೀಡಿದರು.

50 ವರ್ಷಗಳ ಹಿಂದೆ
ಮಂಗಳವಾರ, 21-8-1973

- **ಬೆಳೆಗಾರರ ಬಳಿ ಇರುವ ಭತ್ತ ಸ್ವಾಧೀನಕ್ಕೆ ರಾಜ್ಯ ಸರ್ಕಾರದ ಯೋಚನೆ**

ಬೆಂಗಳೂರು, ಆ. 20– ಮಾರುಕಟ್ಟೆಗೆ ಆಹಾರ ಧಾನ್ಯ ಕೊರತೆಯನ್ನು ನಿವಾರಿಸಲು, ಹೆಚ್ಚಿನ ದರ ಬಯಸಿ ಬೆಳೆಯುವವರು ಬಚ್ಚಿಟ್ಟುಕೊಂಡಿರುವ ಭತ್ತವನ್ನು, ಅಗತ್ಯ ವಸ್ತುಗಳ ಸಂಗ್ರಹ ಘೋಷಣಾ ಆಜ್ಞೆಯ ಪ್ರಕಾರ ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರ ಯೋಚಿಸುತ್ತಿದೆ.

ರೈತರು ಸಾಮಾನ್ಯವಾಗಿ ಮಾರುಕಟ್ಟೆಗೆ ಕಳುಹಿಸುವ ಹೆಚ್ಚುವರಿ ಧಾನ್ಯವನ್ನು ಹೆಚ್ಚು ಬೆಲೆ ಬರಬಹುದೆಂದು ಇದೀಗ ತಮ್ಮ ಬಳಿಯೇ ಉಳಿಸಿಕೊಂಡಿದ್ದು, ಅದು ಮಾರುಕಟ್ಟೆಗೆ ಬರುವಂತೆ ಮಾಡದೇ ಹೋದರೆ, ಮುಂದಿನ ಎರಡು ಮೂರು ತಿಂಗಳ ಕಾಲ ರಾಜ್ಯವು ಆಹಾರ ಸಂಕಷ್ಟಕ್ಕೆ ಈಡಾಗಬಹುದೆಂದು ಸರ್ಕಾರದ ಹಲವು ವಲಯಗಳಲ್ಲಿ ಅಭಿಪ್ರಾಯವಿದೆ.

- **ಅರಸು: ಜನಸೇವೆಗೆ ಪುನರಪಿ ದೀಕ್ಷೆ**

ಬೆಂಗಳೂರು, ಆ. 20– ಐವತ್ತೆಂಟು ತುಂಬಿ ಐವತ್ತೊಂಬತ್ತನೇ ವರ್ಷಕ್ಕೆ ಇಂದು ಕಾಲಿಟ್ಟ ರಾಜ್ಯದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ತಮ್ಮ ಹುಟ್ಟುಹಬ್ಬದಂದು ಜನತಾ ಸೇವೆಯ ಪಣವನ್ನು ಮುಂದುವರಿಸಿದ್ದಾರೆ.

ವರದಿಗಾರರು ಹುಟ್ಟುಹಬ್ಬದ ಶುಭಾಶಯ ಕೋರಿದ ಸಂದರ್ಭದಲ್ಲಿ, ಮುಖ್ಯಮಂತ್ರಿಗಳು 'ಜನತಾ ಸೇವೆ ಮಾಡುವ ಪಣ ತೊಡುತ್ತೇನೆ' ಎಂದು ಹೇಳಿದರು.

ಪದವಿ ಶಿಕ್ಷಣಕ್ಕೆ ಬಹುಮುಖಿ ಆಯಾಮ ಮತ್ತು ವಿಸ್ತಾರ ಸಿಗಲಿ

ಶಿಕ್ಷಣ ನೀತಿ: ಆಗಬೇಕಿರುವುದೇನು?



ವಿಶ್ಲೇಷಣೆ
ಸಬಿತಾ ಬನ್ನಾಡಿ

'ಮೇಡಂ, ದೊಡ್ಡ ಫೋನ್ ಕೊಡಿಸ್ಲೇಬೇಕಾ?' ಬಿಸಿಲ ದುಡಿಮೆಗೆ ಚರ್ಮ ಸುಕ್ಕಾಗಿ ಕಪ್ಪಾಗಿರುವ ಮುಖ, ಚಪ್ಪಲಿ ಇಲ್ಲದ ಕಾಲು, ಮಾಸಲು ಬಟ್ಟೆಯಲ್ಲಿದ್ದ ತಂದೆಯೊಬ್ಬರು ಮಗಳನ್ನು ಓದಿಸುವ ಆಸೆಯಲ್ಲಿ ಕಾಲೇಜಿಗೆ ಸೇರಿಸಲು ಬಂದವರು ಹೀಗೆ ಕೇಳುತ್ತಿರುವಾಗ ನನಗೆ, 'ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದ' ಅನುಭವ. ಪದವಿಯ ರಾಷ್ಟ್ರೀಯ ಶಿಕ್ಷಣ ನೀತಿಯ ಜೊತೆಗೆ ಸ್ಮಾರ್ಟ್‌ಫೋನ್ ಅನ್ನು ವಿದ್ಯಾರ್ಥಿಗಳಿಗೆ ಕಡ್ಡಾಯಗೊಳಿಸಲಾಗಿತ್ತು. ಅವರು ಪ್ರತಿದಿನ ಅದರಲ್ಲೇ ಲಾಗಿನ್ ಆಗಬೇಕು.

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸುವ್ಯವಸ್ಥಿತವಾಗಿ, ಅಲ್ಲಿನ ಪರಿಸರಕ್ಕೆ ತಕ್ಕಂತೆ ಅಳವಡಿಸಿರುವ ಇಂತಹ ಶಿಕ್ಷಣ ಕ್ರಮದಿಂದ ಪ್ರೇರಿತಗೊಂಡು ಇಲ್ಲೂ ಅದನ್ನು ಜಾರಿಗೊಳಿಸುವ ಆತುರ ಸರ್ಕಾರಕ್ಕೆ ಇತ್ತಾದರೂ ಇಲ್ಲಿನ ತಳಮಟ್ಟದ ಸಮಸ್ಯೆಗಳ ಸ್ವರೂಪದ ಅಗಾಧತೆಯೇ ಬೇರೆ ರೀತಿಯದು. ಫೀಸನ್ನು ಕಟ್ಟುವುದೂ ಕಷ್ಟವಾಗಿರುವ ವಿದ್ಯಾರ್ಥಿಗಳ ನಡುವೆ ನಾವಿದ್ದೇವೆ. ಹೆಣ್ಣುಮಕ್ಕಳಿಗೆ ಅತಿಬೇಗ ಮದುವೆ, ಹುಡುಗರು ದುಡಿಮೆಯ ಕಾರಣಕ್ಕೆ ಪದವಿಯನ್ನು ಅರ್ಧದಲ್ಲೇ ಕೈಬಿಡುವುದಂತೂ ನಿವಾರಿಸಿಕೊಳ್ಳಲಾಗದ ಸಂಗತಿಗಳಾಗಿವೆ.

ಹಾಗೆ ನೋಡಿದರೆ ಕರ್ನಾಟಕದ ಸರ್ಕಾರಿ ಪದವಿ ಕಾಲೇಜುಗಳು ಅತ್ಯಂತ ವೇಗವಾಗಿ ಯಶಸ್ಸನ್ನು ಸಾಧಿಸಿದ್ದು ಅಲ್ಲಿನ ಗುಣಮಟ್ಟದ ಶಿಕ್ಷಣ, ಶಿಕ್ಷಕರಿಂದ. ಹೋಬಳಿ ಮಟ್ಟದಲ್ಲೂ ಮಕ್ಕಳಿಗೆ ಕನಿಷ್ಠ ಹಣದಲ್ಲಿ ಗರಿಷ್ಠ ಶಿಕ್ಷಣ ಲಭ್ಯವಾದ್ದರಿಂದಾಗಿ ಸುಸಜ್ಜಿತ ಖಾಸಗಿ ಕಾಲೇಜುಗಳಿಗಿಂತಲೂ ಕನಿಷ್ಠ ಭೌತಿಕ ಸೌಲಭ್ಯದ ಸರ್ಕಾರಿ ಕಾಲೇಜುಗಳೆಡೆಗೆ ವಿದ್ಯಾರ್ಥಿಗಳು ಧಾವಿಸುತ್ತಾರೆ. ಹೀಗಿರುವಾಗ ಇದ್ದಕ್ಕಿದ್ದಂತೆ ಎನ್‌ಇಪಿ (ರಾಷ್ಟ್ರೀಯ ಶಿಕ್ಷಣ ನೀತಿ) ಜಾರಿಯಾಯಿತು. ಈಗಿನ ಸರ್ಕಾರ ಇದೀಗ ಎಸ್‌ಇಪಿ (ರಾಜ್ಯ ಶಿಕ್ಷಣ ನೀತಿ) ಜಾರಿಗೆ ತರುವ ಬಗ್ಗೆ ಹೇಳುತ್ತಿದೆ. ಎನ್‌ಇಪಿ ಎಂದರೆ ಬರೀ ಪಠ್ಯಕ್ರಮದ ಹೇರಿಕೆ ಅಥವಾ ಬದಲಾವಣೆ ಆಗಿರುವುದಲ್ಲ. ಬದಲಿಗೆ ಶಿಕ್ಷಣದ ಒಟ್ಟು ಚೌಕಟ್ಟನ್ನೇ ಬದಲಿಸಿರುವುದು.

ಎನ್‌ಇಪಿಯನ್ನು ಅಳವಡಿಸುವಾಗ ಪದವಿ ಕಾಲೇಜಿನ ವಿದ್ಯಾರ್ಥಿಗಳನ್ನಾಗಲೀ ಉಪನ್ಯಾಸಕರನ್ನಾಗಲೀ ಗಣನೆಗೇ ತೆಗೆದುಕೊಳ್ಳಲಿಲ್ಲ. ವಿಶ್ವವಿದ್ಯಾಲಯಗಳ ಕುಲಪತಿಗಳೊಂದಿಗೆ ಸಭೆ ನಡೆಸಲಾಯಿತು. ಆದರೆ ಈ ಕುಲಪತಿಗಳಿಗೆ ಪದವಿಯ ಸಿಲೆಬಸ್ ಕೂಡಾ ಗೊತ್ತಿರುವುದಿಲ್ಲ. ಯಾಕೆಂದರೆ ಅವರೆಲ್ಲಾ ವಿಶ್ವವಿದ್ಯಾಲಯಗಳಲ್ಲಿ ಪಾಠ ಮಾಡಿದವರಾಗಿರುತ್ತಾರೆಯೇ ವಿನಾ ಒಂದು ದಿನಕ್ಕಾದರೂ ಪದವಿ ಪಾಠ ಮಾಡಿರುವುದಿಲ್ಲ. ಇಲ್ಲಿನ ಗ್ರೌಂಡ್ ರಿಯಾಲಿಟಿ ತಿಳಿದಿಲ್ಲದ ಒಂದಿಷ್ಟು ಜನರನ್ನು ಸೇರಿಸಿಕೊಂಡು ಮಾಡಿದ ಸಮಿತಿಯು ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಕೂಲವಾಗುವಂತೆ ಕೊಟ್ಟ ನಿರ್ದೇಶನಗಳನ್ನು, ಯಾವ ಸವಲತ್ತೂ ಇಲ್ಲದ ಸರ್ಕಾರಿ ಕಾಲೇಜುಗಳವರು ತುಟಿಪಿಟಕ್ಕೆನ್ನದೆ ಅನುಸರಿಸುವುದು ಬಿಟ್ಟು ಬೇರೆ ಆಯ್ಕೆ ಇರಲಿಲ್ಲ.

ಎನ್‌ಇಪಿಯನ್ನು ಹೊರನೋಟದಲ್ಲಿ ಒಂದು ದಾಖಲೆಯ ರೂಪದಲ್ಲಿ ಓದಿದಾಗ ಅದ್ಭುತವಾಗಿ ಕಾಣಿಸುತ್ತದೆ. ಆದರೆ ಒಳಗಿನ ಕತೆ ಬೇರೆಯೇ ಇದೆ. ಮೊದಲು ಪದವಿ ಮಕ್ಕಳು ಮೂರು ಮೇಜರ್ ಸಬ್ಜೆಕ್ಟ್‌ಗಳ ಜೊತೆಗೆ ಎರಡು ಭಾಷೆಗಳನ್ನು ಅಧ್ಯಯನ ಮಾಡುತ್ತಿದ್ದರು. ಇದು ಪ್ರೋಗ್ರಾಂಗಳಾಗಿ (ಬಿಎ, ಬಿಕಾಂ, ಬಿಎಸ್ಸಿ) ಇದ್ದು ಆಸಕ್ತರು ತಮಗೆ ಬೇಕಾದ್ದನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಎನ್‌ಇಪಿಯಲ್ಲಿ ಎರಡು ವಿಷಯಗಳ ನಾಲ್ಕು ಪೇಪರ್ + ಮುಕ್ತ ಆಯ್ಕೆಯ ಒಂದು ಪೇಪರ್ + ಎರಡು ಭಾಷೆಗಳನ್ನು ಅಧ್ಯಯನ ಮಾಡುತ್ತಾರೆ. ಇವುಗಳ ಜೊತೆಗೆ ಪ್ರತಿ ಸೆಮಿಸ್ಟರ್‌ನಲ್ಲಿ ಪ್ರತ್ಯೇಕವಾಗಿ ಯೋಗ, ಎನ್‌ಎಸ್‌ಎಸ್, ಕ್ರೀಡೆ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಡಿಜಿಟಲ್ ಫ್ಲೂಯೆನ್ಸಿ-ಯಂತಹವು ಕಡ್ಡಾಯವಾಗಿರುತ್ತವೆ.

ಮುಕ್ತ ಆಯ್ಕೆ ಎಂದರೆ ಯಾವುದೇ ಪ್ರೋಗ್ರಾಂನ ವಿದ್ಯಾರ್ಥಿ ಇನ್ನಾವುದೇ ಪ್ರೋಗ್ರಾಂನ ಒಂದು ಸಬ್ಜೆಕ್ಟ್ ಆಯ್ಕೆ ಮಾಡಿಕೊಳ್ಳಬಹುದು. ಉದಾಹರಣೆಗೆ, ಇತಿಹಾಸ, ಅರ್ಥಶಾಸ್ತ್ರದ ಜೊತೆಗೆ ಫಿಸಿಕ್ಸ್, ಕಾಮರ್ಸ್ ಏನಾದರೂ ತೆಗೆದುಕೊಳ್ಳಬಹುದು. ಆದರೆ ಕರ್ನಾಟಕದಲ್ಲಿ, ತಮ್ಮದೇ ಪ್ರೋಗ್ರಾಂನ ಇನ್ನೊಂದು ಸಬ್ಜೆಕ್ಟ್ ತೆಗೆದುಕೊಳ್ಳಲು ಅವಕಾಶ ನೀಡಲಿಲ್ಲ. ಉದಾಹರಣೆಗೆ, ಕಲಾ ವಿಭಾಗದ ಮಕ್ಕಳು ಕಡ್ಡಾಯವಾಗಿ ಒಂದು ಪೇಪರ್ ಅನ್ನು ವಿಜ್ಞಾನ, ವಾಣಿಜ್ಯ, ಬಿಬಿಎ ಇತ್ಯಾದಿಯಿಂದಲೇ ತೆಗೆದುಕೊಳ್ಳುವಂತೆ ನಿರ್ಬಂಧಿಸಲಾಯಿತು. ಈ ವಿಷಯವನ್ನು ಅವರು ಎರಡು ವರ್ಷ ಓದುತ್ತಾರೆ. ಮುಂದೆ ಇದರಲ್ಲಿ ಮಾಸ್ಟರ್ಸ್ ಮಾಡಲು ಅವಕಾಶ ಇಲ್ಲ.

ಇನ್ನು ಯೋಗ, ಎನ್‌ಎಸ್‌ಎಸ್, ಕ್ರೀಡೆ, ಡಿಜಿಟಲ್ ಫ್ಲೂಯೆನ್ಸಿ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಇತ್ಯಾದಿಗಳನ್ನೆಲ್ಲಾ ಇವರು ಕಲಿತಿದ್ದಾರೆ ಎಂಬಂತೆ ಅವರ ಮಾರ್ಕ್ಸ್ ಕಾರ್ಡ್ ನೋಡಿದಾಗ ಭಾಸವಾಗುತ್ತದೆ. ನೋಡುವವರು ಮೂಗಿನ ಮೇಲೆ ಬೆರಳಿಡುವಂತೆ ಈ ಸಬ್ಜೆಕ್ಟ್‌ಗಳು ಕಾಣುತ್ತವೆ. ಆದರೆ ಇಲ್ಲಿ ಇವರು ಏನೂ ಕಲಿತಿರುವುದಿಲ್ಲ. ಒಬ್ಬ ಸೈನ್ಸ್ ವಿದ್ಯಾರ್ಥಿಯನ್ನೇ ಬೇಕಿದ್ದರೆ ನೀವು ಕೇಳಿ ನೋಡಿ. ಡಿಜಿಟಲ್ ಫ್ಲೂಯೆನ್ಸಿಯನ್ನು ಹೇಗೋ ಇಪ್ಪತ್ತೈದು ಅಂಕಕ್ಕೆ ಬರೆದು ಪಾಸಾಗಿದ್ದೇವೆ ಎಂದು ನಿಟ್ಟುಸಿರು ಬಿಡುತ್ತಾರೆ. ವಾಸ್ತವವಾಗಿ ಆಗಿದ್ದೇನೆಂದರೆ, ಮೊದಲು ಶಿಸ್ತಾಗಿ ಕಲಿಯುತ್ತಿದ್ದ ಮೂರು ಸಬ್ಜೆಕ್ಟ್‌ಗಳಲ್ಲಿ ಈಗ ಒಂದು ಮೈನಸ್ ಆಯ್ತು ಅಷ್ಟೇ. ಉಳಿದಿದ್ದೆಲ್ಲ ಅಂಕಪಟ್ಟಿಯಲ್ಲಿ ಅಲಂಕಾರಕ್ಕೆ ಇವೆಯೇ ವಿನಾ ಆ ವಿಷಯಗಳಿಂದ ಕಾಲೇಜಿನ ಒಳಗೂ ಹೊರಗೂ ಯಾವ ಉಪಯೋಗವೂ ಇಲ್ಲ.



ಮೊದಲಾದರೆ ಮೂರು ವಿಷಯಗಳಲ್ಲಿ ಯಾವುದರಲ್ಲಿ ಬೇಕಿದ್ದರೂ ಮಾಸ್ಟರ್ಸ್ ಮಾಡಬಹುದಿತ್ತು. ಎರಡು ಭಾಷಾ ವಿಷಯಗಳಲ್ಲೂ ಮುಂದೆ ಮಾಸ್ಟರ್ಸ್ ಮಾಡುವ ಅವಕಾಶವೂ ಇತ್ತು. ಬಿ.ಇಡಿಗೆ ಪೂರಕವಾಗಿತ್ತು. ಈಗ ಆಂತರಿಕ ಅಂಕಗಳನ್ನು ನಲವತ್ತಕ್ಕೆ ಹೆಚ್ಚಿಸಿದ್ದರಿಂದ ಅಂಕಗಳೇನೋ ಹೆಚ್ಚು ಬರುತ್ತಿವೆ. ಜ್ಞಾನ ಕಡಿಮೆ ಸಿಗುತ್ತಿದೆ. ಇರುವ ಎರಡು ವಿಷಯಗಳಲ್ಲಿ ಸ್ನಾತಕೋತ್ತರ ಮಟ್ಟದ ವಿಷಯಗಳನ್ನೆಲ್ಲಾ ತುರುಕಲಾಗಿದೆ. ಆದರೆ ಎಲ್ಲವನ್ನೂ ಸ್ಯಾಂಪಲ್ ರೀತಿ ಕಲಿಯುತ್ತಾರೆ. ನಾವು ಉಸಿರು ಕಟ್ಟಿಕೊಂಡು ಪಾಠ ಮಾಡಬೇಕಿದೆ.

'ನಾವೆಲ್ಲಾ ಮನೆಗೆ ಹೋದಮೇಲೆ ನೀವು ಕಾಲೇಜಲ್ಲಿ ಏನು ಮಾಡ್ತೀರಿ?' ಅಂತ ಪಕ್ಕದ ಮನೆಯ ವಿದ್ಯಾರ್ಥಿನಿಯೊಬ್ಬಳು ಕೇಳಿದ್ದಳು. 'ನಾವು ಕಂಪ್ಯೂಟರ್, ಲ್ಯಾಪ್‌ಟಾಪ್‌ಗಳಲ್ಲಿ ಕೆಲಸ ಮಾಡ್ತೀವಿ' ಅಂದಾಗ ಅವಳಿಗೆ ವಿಚಿತ್ರ ಅನ್ನಿಸಿತ್ತು. ಇಂದು ಹೆಚ್ಚೂಕಡಿಮೆ ರಾಜ್ಯದ ಎಲ್ಲಾ ಸರ್ಕಾರಿ ಕಾಲೇಜುಗಳಲ್ಲಿ ಬೋಧಕೇತರ ಸಿಬ್ಬಂದಿ ಇಲ್ಲವೇ ಇಲ್ಲ ಎಂಬಂತಾಗಿದೆ. ಕೆಲವು ಕಾಲೇಜುಗಳಲ್ಲಿ ಒಬ್ಬರೂ ಇಲ್ಲ. ಕಾಯಂ ಪ್ರಿನ್ಸಿಪಾಲರಿಲ್ಲ. ಕೆಲವೆಡೆ ಈಗಿನ್ನೂ ನೇಮಕಗೊಂಡವರೇ ಪ್ರಾಂಶುಪಾಲರು. ಇನ್ನೊಂದೆಡೆ, ಇಪ್ಪತ್ತೈದು, ಮೂವತ್ತು ವರ್ಷ ಸೇವೆ ಮಾಡಿದವರಿಗೂ ಪ್ರಾಂಶುಪಾಲರಾಗುವ ಅವಕಾಶ ಇಲ್ಲ. ಕಚೇರಿಯ ಕೆಲಸದ ಸಹಾಯದಿಂದ ಹಿಡಿದು ನ್ಯಾಕ್, ಕಲಿಕಾ ನಿರ್ವಹಣೆ ವ್ಯವಸ್ಥೆ (ಎಲ್‌ಎಮ್‌ಎಸ್), ಸಾಂಸ್ಕೃತಿಕ ಚಟುವಟಿಕೆಗಳ ದಾಖಲೀಕರಣ, ಎನ್‌ಎಸ್‌ಎಸ್, ಎನ್‌ಸಿಸಿ, ಸ್ಟೂಡೆಂಟ್ ಕೌನ್ಸೆಲಿಂಗ್, ಅಫಿಲಿಯೇಷನ್, ಪ್ರತಿದಿನವೂ ಕೇಂದ್ರ ಕಚೇರಿ ಕೇಳುವ ಹತ್ತು ಹಲವು ಮಾಹಿತಿಗಳ ಅಪ್‌ಲೋಡ್, ಟೆಸ್ಟ್, ಮುಖ್ಯ ಪರೀಕ್ಷೆ ಪೇಪರ್ ತಯಾರಿ, ಡ್ಯೂಟಿ, ಮೌಲ್ಯಮಾಪನ, ಮೀಟಿಂಗ್, ರಿಫ್ರೆಶರ್ ಕೋರ್ಸ್, ಎಫ್‌ಡಿಪಿ, ತರಬೇತಿ ಶಿಬಿರಗಳು, ಕಾಲೇಜಲ್ಲಿ ಕಾರ್ಯಕ್ರಮಗಳ ಆಯೋಜನೆ, ಸಂಬಳ ಹಾಗೂ ಇನ್ನಿತರೆ ಬಿಲ್ ಮಾಡುವುದು, ಅಡ್ಮಿಷನ್ ಕೆಲಸ, ಗ್ರಂಥಪಾಲಕ, ದೈಹಿಕ ಶಿಕ್ಷಣ ಶಿಕ್ಷಕರು ನೇಮಕವಾಗಿಲ್ಲದಿದ್ದರೆ ಆ ಹೆಚ್ಚುವರಿ ಕೆಲಸ, ಕೊನೆಗೆ ಪರೀಕ್ಷೆ ನಡೆಸಿ ಬಂಡಲ್ ಹೊಲಿಯಲೂ ಹಿಂದೆ ಮುಂದೆ ನೋಡದೆ ಮುಗಿಸುವುದು... ಇವೆಲ್ಲವನ್ನೂ ಬೆರಳೆಣಿಕೆಯಷ್ಟಿರುವ ಕಾಯಂ ಉಪನ್ಯಾಸಕರೇ ಮಾಡಬೇಕು. ಉಪನ್ಯಾಸಕರ ಮೊದಲ ಪ್ರೀತಿ ಪಾಠ ಮಾಡುವುದೇ ಆದರೂ ಮೇಲೆ ಹೇಳಿದ ಎಲ್ಲಾ ಕೆಲಸಗಳು ಆಗದೇ ಕಾಲೇಜುಗಳು ನಡೆಯುವುದಿಲ್ಲ ಎಂಬುದೂ ವಾಸ್ತವವೇ ಆಗಿದೆ!

ಯಾವುದೇ ಬದಲಾವಣೆಗೂ ಮುನ್ನ ಸರ್ಕಾರ ಪ್ರತಿ ಕಾಲೇಜಿನಿಂದ ಒಬ್ಬ ನುರಿತ ಪ್ರಾಧ್ಯಾಪಕರನ್ನು ಆರಿಸಿ ಕರೆಸಿಕೊಂಡು ಸಭೆ ನಡೆಸಬೇಕು. ಹತ್ತು ಹಲವು ಸಂಗತಿಗಳನ್ನು ಪಠ್ಯಕ್ರಮದಲ್ಲಿ ತುರುಕಬಾರದು. ಮೊದಲಿನಂತೆ ಮೂರು ಮೇಜರ್ ಸಬ್ಜೆಕ್ಟ್‌ಗಳು ಮುಂದುವರಿಯಬೇಕು. ಕನಿಷ್ಠ ವಿದ್ಯಾರ್ಥಿ ಸಂಖ್ಯೆಯನ್ನು ಹತ್ತಕ್ಕೆ ಮಿತಿಗೊಳಿಸಬೇಕು. ವಿದ್ಯಾರ್ಥಿಗಳ ಕೊರತೆಯಿಂದಾಗಿ ಹಲವು ವಿಭಾಗಗಳು ಈಗಾಗಲೇ ಮುಚ್ಚುವ ಅಪಾಯದಲ್ಲಿವೆ. ನಾಲ್ಕು ವರ್ಷ ಎಂದು ಭಾವಿಸಿದ (!) ಪದವಿಗಿಂತ ಉದ್ಯೋಗಾಧಾರಿತ ಡಿಪ್ಲೊಮಾಗಳೇ ವಾಸಿ ಎಂದು ವಿದ್ಯಾರ್ಥಿಗಳು ಅತ್ತ ಹೋಗಲು ಆರಂಭಿಸಿದ್ದು, ಪದವಿ ಕಾಲೇಜುಗಳಿಗೆ ಇದು ಎಚ್ಚರಿಕೆಯ ಕರೆಗಂಟೆಯಾಗಿದೆ.

ಚುರುಮುರಿ



ಆಪರೇಷನ್ ಕಾಲವಿದು!
• ಸುಮಂಗಲಾ

'ಆಪರೇಷನ್ ಹಸ್ತ ಅಂತ ಏನೋ ಭಾರೀ ಸುದ್ದಿ ಹರಡೈತಿ. ಅಂದ್ರೇನು... ಕೈಗೆ ಆಪರೇಷನ್ ಮಾಡ್ತಾರೇನು?' ಅಮಾಯಕನಂತೆ ಬೆಕ್ಕಣ್ಣ ಪ್ರಶ್ನಿಸಿತು.

'ಕೈಗೆ ಆಪರೇಷನ್ ಮಾಡೂದಲ್ಲಲೇ... ಕೈಯೇ ಬ್ಯಾರೆಯವರಿಗೆ ಆಪರೇಷನ್ ಮಾಡತೈತಿ' ಎಂದೆ.

'ಅಂದ್ರೆ ಇದು ಆಪರೇಷನ್ ಕಮಲದ ರಿವರ್ಸ್! ಕಮಲಕ್ಕನ ಮನಿಯವ್ರು ಆಪರೇಷನ್ ಮಾಡಾಕೆ ಕೈಗೆ ಕತ್ತರಿ ಕೊಟ್ಟು ಸುಮ್ಮನೆ ಕುಂದ್ರತಾರೆ ಅಂತ ಮಾಡೀಯೇನ್? ನಮ್ಮ ಯೆಡ್ಯೂರಜ್ಜಾರು, ಮೋದಿ ಮಾಮಾರು, ಶಾ ಅಂಕಲ್ಲು ಎಲ್ಲಾ ಥರದ ಆಪರೇಷನ್ ತಜ್ಞರು, ಗೊತ್ತೈತಿಲ್ಲೋ' ಎಂದು ಗುರ್ರೆಂದಿತು.

'ನನಗ್ಯಾಕೆ ಗುರ್ ಅಂತಿದಿ? ಆಪರೇಷನ್ ಮಾಡಿಸಿಕೊಳ್ಳಾಕೆ ರೆಡಿಯಾಗೀವಿ ಅಂತ ನಿಮ್ ಕಮಲಕ್ಕನ ಮನಿಯಾಗಿನ ಅತೃಪ್ತರೇ ಹಿಂದಿನ ಬಾಗಿಲಿನಾಗೆ ನಿಂತಾರಂತಲ್ಲ. ಯಾವ ಆಪರೇಷನ್ ಆದ್ರೂ ಸರಿ, ಅರಿವಳಿಕೆ ಅಂದ್ರ ಅನಸ್ತೇಶಿಯಾ ಕೊಡಾಕೆ ಕುಮಾರಣ್ಣ ಹೊಂಚು ಹಾಕ್ತಾ ನಿಂತಾನ' ನಾನು ನಕ್ಕೆ.

'ಈ ಹಿಂದೆ ಆಪರೇಷನ್ ಮಾಡಿಸಿಕೊಂಡವರು 'ಘರ್ ವಾಪ್ಸಿ' ಇಲ್ಲ, ನಾವು ಇದ್ದಲ್ಲೇ ಇರತೀವಿ ಅಂತ ಪ್ರಮಾಣ ಮಾಡ್ಯಾರಲ್ಲ ಮತ್ತೆ' ಬೆಕ್ಕಣ್ಣ ತಲೆ ಕೆರೆದುಕೊಂಡಿತು.

'ನೋಡಾ... ಹಿಂದಿನ ಬಾಗಿಲಿನಿಂದ ಒಂದು ಕಾಗೆ ಹಾರಿಬಿಡತಾರ. ಅದು ಯಾರ ಮನಿ ಮರದ ಮ್ಯಾಗೆ ಹೋಗಿ ಕೂರತದ, ಅಲ್ಲೇನು ಕಾಳು ಸಿಗತದ ನೋಡತಾರ. ಮತ್ತ ಮುಂದಿನ ಬಾಗಿಲಿನಾಗೆ ನಿಂತು, ಗ್ರೂಪ್ ಫೋಟೊಗೆ ಪೋಸು ಕೊಟ್ಟು, ಇಲ್ಲೇನು ಗಿಟ್ಟಸಬೌದು ನೋಡತಾರ... ರಾಜಕೀಯದಾಗೆ ಏನೂ ಆಗಬೌದು' ಎಂದೆ.

'ಹಿಂದಿನ ಬಾಗಿಲಿನಾಗೆ ಹಾರಿಬಿಟ್ಟ ಕಾಗೆ ನಾಕಾರು ಕಡೆ ಹೋಗೂದ್ರಾಗೆ ಬಿಳಿ ಕಾಗೆ ಆಗಿರತದ ಅಷ್ಟೇ. ಆಪರೇಷನ್ ಕಮಲ ಅಥವಾ ಆಪರೇಷನ್ ಹಸ್ತ ಯಾವುದಾದರೂ ಖರೇ ಖರೇ ಆಪರೇಷನ್ನಿನ ಹೊರೆ ಬೀಳೂದು ಮಾತ್ರ ಶ್ರೀಸಾಮಾನ್ಯನ ಮೇಲೆ. ಪಕ್ಷದಿಂದ ಪಕ್ಷಕ್ಕೆ ಹಾರೋ ಜಿಗಿತವೀರರಿಗೆ ತಕ್ಕ ಶಾಸ್ತಿ ಮಾಡೂದು ಬಿಟ್ಟು, ಸುದ್ದಿ ಜಗೀತಾ, ಮಂಗ್ಯಾನಂಗೆ ಕೂಡತೀರಿ ನೀವು' ಎಂದು ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು.

ಸಂಗತ

ಜಲ ಸಂಸತ್: ಗದ್ದಲವಿಲ್ಲ, ಸಭಾತ್ಯಾಗವಿಲ್ಲ!

ರಾಜಸ್ಥಾನದ ಶಾಲೆಯೊಂದರಲ್ಲಿ ವಿದ್ಯಾರ್ಥಿಗಳ ನೇರ ಉಸ್ತುವಾರಿಯಲ್ಲಿ ನಡೆಯುವ 'ಜಲ ಸಂಸತ್', ನಿರೀಕ್ಷೆಗೂ ಮೀರಿ ಜಲ ಸ್ವಾವಲಂಬನೆಯ ಪಾಠವನ್ನು ಕಲಿಸುತ್ತಿದೆ

• ಶಿಶಿರ ವಸಿಷ್ಠ

ಲೋಕಸಭೆಯ ಕಾರ್ಯಕಲಾಪಗಳು ಹೇಗೆ ನಡೆಯುತ್ತವೆ ಎಂಬುದನ್ನು ತಿಳಿಸಿಕೊಡುವ 'ಯುವ ಸಂಸತ್' ಚಟುವಟಿಕೆಯು ಶಿಕ್ಷಣ ಇಲಾಖೆಯ ಆದೇಶದಂತೆ ರಾಜ್ಯದಲ್ಲಿ ಪ್ರತಿವರ್ಷ ಎಲ್ಲ ಜಿಲ್ಲೆಗಳಲ್ಲೂ ನಡೆಯುತ್ತದೆ. ಅಧ್ಯಾಪಕರ ಮಾರ್ಗದರ್ಶನದಲ್ಲಿ ನೂರಾರು ವಿದ್ಯಾರ್ಥಿಗಳು ಕಾರ್ಯಕ್ರಮ ನಡೆಸಿ ಕೊಡುತ್ತಾರೆ. ಪಿಯುಸಿ ಮತ್ತು ಪದವಿ ಶಿಕ್ಷಣದ ಕಲಾ ವಿಭಾಗದ ವಿದ್ಯಾರ್ಥಿಗಳು ಹೆಚ್ಚಾಗಿ ಭಾಗವಹಿಸುವ ಈ ಕಾರ್ಯಕ್ರಮ ಬರೀ ಒಂದು ದಿನ ನಡೆಯುತ್ತದೆ. ಮತ್ತೆ ಅದರ ಪ್ರಸ್ತಾಪವಾಗುವುದು ಮುಂದಿನ ವರ್ಷವೇ!

ಆದರೆ ರಾಜಸ್ಥಾನದ ಖಾಸಗಿ ಶಾಲೆಯೊಂದರ ಒಬ್ಬ ಮುಖ್ಯ ಶಿಕ್ಷಕಿಯು ಜನ– ಜಾನುವಾರುಗಳಿಗೆ ಅನುಕೂಲ ಕಲ್ಪಿಸುವ ಜಲ ಸಂಸತ್ ಅಂದರೆ 'ವಾಟರ್ ಪಾರ್ಲಿಮೆಂಟ್' ಶುರುಮಾಡಿ ಯಶಸ್ವಿಯಾಗಿದ್ದಾರೆ. ತಾವು ಪ್ರತಿನಿಧಿಸುವ ಶಾಲೆಯಷ್ಟೇ ಅಲ್ಲ, ಜೋಧಪುರ ಜಿಲ್ಲೆಯ 150 ಶಾಲೆಗಳಲ್ಲಿ ಜಲ ಸಂಸತ್ ಸ್ಥಾಪನೆಯಾಗಿದ್ದು, ಕೆಲಸ ಯಶಸ್ವಿಯಾಗಿ ನಡೆಯುತ್ತಿದೆ. ವಿದ್ಯಾರ್ಥಿಗಳ ನೇರ ಉಸ್ತುವಾರಿಯಲ್ಲಿ ನಡೆಯುವ ಈ ಚಟುವಟಿಕೆ ನಿರೀಕ್ಷೆಗೂ ಮೀರಿ ಜಲ ಸ್ವಾವಲಂಬನೆಯ ಪಾಠ ಕಲಿಸುತ್ತಿದೆ.

'ನೀರಿನ ಒಂದು ಹನಿಯೂ ವ್ಯರ್ಥವಾಗದಂತೆ ನೋಡಿಕೊಳ್ಳುವುದು ಹೇಗೆ ಎಂಬುದನ್ನು ನಮಗೆ ಕಲಿಸಲಾಗಿದೆ, ಅದನ್ನು ನಾವು ಜೀವನಪೂರ್ತಿ ನೆನಪಿಟ್ಟುಕೊಂಡು ಅದರಂತೆ ನಡೆಯುತ್ತೇವೆ' ಎನ್ನುವ ವಿದ್ಯಾರ್ಥಿನಿ ಐಮಾನ್ ಬಾನೊ, 'ನಮ್ಮ ಶಾಮಸದನ ಶಾಲೆ ದೇಶಕ್ಕೇ ಮಾದರಿ' ಎನ್ನುತ್ತಾಳೆ. ಪ್ರತಿದಿನ, ವಾರ, ತಿಂಗಳು ಶಾಲೆಯಲ್ಲಿ ಬಳಕೆಯಾಗುವ ನೀರಿನ ಲೆಕ್ಕ ವಿದ್ಯಾರ್ಥಿಗಳ ಬಳಿ ಇದೆ. ಮುಖ್ಯ ಶಿಕ್ಷಕಿ ಶೀಲಾ ಅಸೋಪ್‌ರ ಚಿಂತನೆಯಿಂದ ಕಾರ್ಯರೂಪ ತಳೆದಿರುವ ಜಲ ಸಂಸತ್, ವಿದ್ಯಾರ್ಥಿ ದೆಸೆಯಲ್ಲಿಯೇ ನೀರಿನ ಸಂರಕ್ಷಣೆಯ ಪಾಠ ಕಲಿಸುತ್ತಿದೆ.

ನೀರಿನ ಸಂರಕ್ಷಣೆಗಾಗಿ ದೇಶದ ಹಲವು ಶಾಲೆಗಳು ನೀರಿಗಾಗಿ ನಡಿಗೆ, ಓಟ, ಅಭಿಯಾನ, ಚರ್ಚೆ, ಸಂವಾದಗಳನ್ನು ಹಮ್ಮಿಕೊಳ್ಳುತ್ತವೆ. ಆದರೆ ಪ್ರಾಯೋಗಿಕವಾಗಿ ನೀರಿನ ಸಂರಕ್ಷಣೆಯ ಕೆಲಸವನ್ನು ವಿದ್ಯಾರ್ಥಿಗಳಿಗೆ ಕಲಿಸುವ ಶಾಲೆಗಳು ಬೆರಳೆಣಿಕೆಯಷ್ಟು ಮಾತ್ರ. ಅಂಥ ಶಾಲೆಗಳ ಪೈಕಿ 'ಶಾಮಸದನ' ಶಾಲೆ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ.

ಈ ಶಾಲೆಯಲ್ಲಿ ಸಂಸತ್‌ನಲ್ಲಿ ನಡೆಯುವಂತೆ ಯಾವ ಉದ್ದುದ್ದ ಚರ್ಚೆಯೂ ನಡೆಯುವುದಿಲ್ಲ. ಆರೋಪ, ಪ್ರತ್ಯಾರೋಪಗಳು ಇರುವುದಿಲ್ಲ. ಮಸೂದೆಯ ಪ್ರತಿಗಳನ್ನು ಹರಿದು ತೂರುವುದು, ಗದ್ದಲ ಎಬ್ಬಿಸಿ ಸಭಾತ್ಯಾಗ ಮಾಡುವಂತಹ ಯಾವ ಅತಿರೇಕದ ಚಟುವಟಿಕೆಯೂ ನಡೆಯುವುದಿಲ್ಲ. ಬದಲಿಗೆ, ಪ್ರತಿ ತರಗತಿಯೂ ಬಳಸುವ ನೀರಿನ ಲೆಕ್ಕಾಚಾರವನ್ನು ಡಿಜಿಟಲ್ ಕ್ಯಾಲೆಂಡರಿನಲ್ಲಿ ದಾಖಲಿಸಲಾಗುತ್ತದೆ.

ಸಂಗ್ರಹಗೊಂಡ ನೀರು ಮತ್ತು ಬಳಕೆಯಾದ ನೀರು ಎರಡರ ಬಗ್ಗೆಯೂ ಲೆಕ್ಕವಿರುತ್ತದೆ. ಹೆಚ್ಚು ಅಥವಾ ಕಡಿಮೆ ಬಳಕೆಯಾಗಿದ್ದರೆ ಅದಕ್ಕೆ ಕಾರಣಗಳೇನು ಎಂಬುದನ್ನು ವಿದ್ಯಾರ್ಥಿಗಳೇ ನಡೆಸುವ ಇ- ಮ್ಯಾಗಜಿನ್‌ನಲ್ಲಿ ಪ್ರಕಟಿಸಿ ಶಾಲೆಯ ಎಲ್ಲರ ಗಮನ ಸೆಳೆಯಲಾಗುತ್ತದೆ. ರ‍್ಯಾಲಿ, ಸ್ಪರ್ಧೆ, ಕಾಲ್ನಡಿಗೆ ಜಾಥಾ ಮತ್ತು ಸಾರ್ವಜನಿಕರ ಸಭೆ ನಡೆಸಿ ನೀರಿನ ಸಂರಕ್ಷಣೆ ಕುರಿತು ತಿಳಿವಳಿಕೆ ನೀಡುವ ಕೆಲಸ ಮಾಡುವ ವಿದ್ಯಾರ್ಥಿ-ಶಿಕ್ಷಕರು ನೀರಿನ ಕೊರತೆಯಾಗದಂತೆ ನೀರನ್ನು ಹೇಗೆ ಬಳಸಬೇಕು ಎಂಬುದರ ತರಬೇತಿಯನ್ನೂ ಪ್ರಾತ್ಯಕ್ಷಿಕೆಯ ಮೂಲಕ ನೀಡುತ್ತಿದ್ದಾರೆ.

ವಾಶ್‌ಬೇಸಿನ್‌ಗಳ ನೀರನ್ನು ನೇರ ಕೈತೋಟಕ್ಕೆ ಹಾಯಿಸಿ ಪೋಷಕಾಂಶಭರಿತ ಸೊಪ್ಪು, ತರಕಾರಿಗಳನ್ನು ಬೆಳೆಯಲಾಗುತ್ತಿದೆ. ಮಳೆನೀರನ್ನು ಸಂಗ್ರಹಿಸುವುದರ ಜೊತೆಗೆ ಶಾಲೆಯಲ್ಲಿ ಸೋರುವ ನಲ್ಲಿಗಳನ್ನು ಸರಿಮಾಡುವ ಪ್ಲಂಬಿಂಗ್ ಕೆಲಸವೂ ಮಕ್ಕಳಿಗೆ ಗೊತ್ತಿದೆ. ಈ ಕೆಲಸ ಗೊತ್ತಿದ್ದ ಶಿಕ್ಷಕರೇ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ. ವಿದ್ಯಾರ್ಥಿಗಳೇ ಸದಸ್ಯರಾಗಿರುವ 'ನೀರಿನ ಲೋಕಸಭೆ' ವರ್ಷಪೂರ್ತಿ ಚಟುವಟಿಕೆಯಿಂದ ಇರುತ್ತದೆ.

2016ರಿಂದಲೂ ತಾವು ಕೆಲಸ ಮಾಡಿದಲ್ಲೆಲ್ಲಾ ಜಲ ಸಂಸತ್ ಪರಿಕಲ್ಪನೆಯನ್ನು ಕಾರ್ಯಗತಗೊಳಿಸಿರುವ ಶೀಲಾ ಅಸೋಪ್, 2020ರ ವೇಳೆಗೆ ಜೋಧಪುರದ ಬವೋರಿ ಬ್ಲಾಕ್‌ನ ಶಿಕ್ಷಣ ಇಲಾಖೆಯ ಅಧಿಕಾರಿಯಾಗಿ ನಿಯೋಜಿತರಾದರು. ಆನಂತರ 150 ವಿವಿಧ ಶಾಲೆಗಳಲ್ಲಿ ಜಲ ಸಂಸತ್‌ಗಳು ಕಾರ್ಯಾರಂಭ ಮಾಡಿವೆ. ಶೀಲಾ ಅವರ ಕೆಲಸವನ್ನು ಗಮನಿಸಿರುವ ಕೇಂದ್ರ ಸರ್ಕಾರವು ಜಲಸಂರಕ್ಷಣೆಯ ಕೈಂಕರ್ಯ ಮಾಡುವವರಿಗಾಗಿ ಇರುವ ದೇಶಮಟ್ಟದ 'ಜಲ ಸಂರಕ್ಷಕ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.



ಶಾಲೆಗಳಲ್ಲಿ ಪ್ರಾರಂಭಿಸಲಾದ ಜಲ ಸಂಸತ್‌ಗಳಿಗೆ ಆರ್ಥಿಕ ಸಹಾಯ ಮಾಡಲು ಸಾರ್ವಜನಿಕ ಸಂಘ–ಸಂಸ್ಥೆಗಳು, ಸಮುದಾಯಗಳು ಮುಂದೆ ಬಂದಿವೆ. ಶಾಲೆಗೆ ಸಂಬಂಧಿಸಿದ ನೀರಿನ ಸಂರಕ್ಷಣೆಯ ಕೆಲಸಗಳಲ್ಲದೆ ಸುತ್ತಲಿನ ಸಾಮಾನ್ಯ ಬಾವಿ ಮತ್ತು ಮೆಟ್ಟಿಲಿನ ಬಾವಿಗಳನ್ನು ಶುದ್ಧಿಗೊಳಿಸುವ ಕೆಲಸವನ್ನೂ ಮಾಡುತ್ತಿರುವ ವಿದ್ಯಾರ್ಥಿ ಹಾಗೂ ಸಾರ್ವಜನಿಕರು ಸಂಭಾವ್ಯ ಜಲಕ್ಷಾಮವನ್ನು ತಡೆಯುತ್ತೇವೆ ಎನ್ನುತ್ತಾರೆ. ಸ್ಥಳೀಯ ಸಂಸ್ಥೆ- ಪಂಚಾಯಿತಿಗಳು ಮಾಡಿರುವ ಜಲ ಸ್ವಾವಲಂಬನೆಯ ಅನೇಕ ಕ್ರಾಂತಿಕಾರಿ ಉದಾಹರಣೆಗಳು ಈಗಾಗಲೇ ನಮ್ಮ ಮುಂದಿವೆ.

ಇದೇ ರಾಜ್ಯದ ರಾಜಸ್‌ಮಂಡ್ ಜಿಲ್ಲೆಯ ಗಂಗಸ್ ಗ್ರಾಮದ ಶಾಲಾ ವಿದ್ಯಾರ್ಥಿಗಳು ಫ್ಲೋರೈಡ್‌ಯುಕ್ತ ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಶಾಲೆಯ ಆವರಣದಲ್ಲೇ ಮಳೆ ನೀರು ಸಂಗ್ರಹ ವ್ಯವಸ್ಥೆ ಮಾಡಿಕೊಂಡು ಇಡೀ ಗ್ರಾಮದ ಜನರಿಗೆ ನೆರವಾಗಿದ್ದರು. ಈಗ ಅಂಥದ್ದೇ ಶಾಲೆಯ ವಿದ್ಯಾರ್ಥಿಗಳು ಇಡೀ ದೇಶಕ್ಕೇ ನೀರಿನ ಸಂರಕ್ಷಣೆಯ ಪಾಠ ಹೇಳಿಕೊಡುತ್ತಿದ್ದಾರೆ. ಕಲಿಯಲು ನಮಗೇನು ಧಾಡಿ?

ವಾಚಕರ ವಾಣಿ

ಶ್ರವಣದೋಷಕ್ಕೆ ಚಿಕಿತ್ಸೆ: ಬೇಕಾಗಿದೆ ವಸತಿಗೃಹ

ಶ್ರವಣದೋಷವಿರುವ ಮಕ್ಕಳಿಗೆ ಕಾಕ್ಲಿಯರ್ ಇಂಪ್ಲಾಂಟ್ ಸಾಧನ ಅಳವಡಿಸುವ ಯೋಜನೆ ರಾಜ್ಯದಲ್ಲಿ ಕುಂಟುತ್ತಾ ಸಾಗುತ್ತಿರುವುದರ ಬಗೆಗಿನ ವರದಿ (ಪ್ರ.ವಾ., ಆ. 18) ಓದಿದಾಗ, ಇಂತಹ ಸಮಸ್ಯೆ ಹೊಂದಿರುವ ಮಕ್ಕಳ ಪೋಷಕರು ಇನ್ನೊಂದು ಸಮಸ್ಯೆಯನ್ನೂ ಎದುರಿಸುತ್ತಿರುವುದು ನೆನಪಾಯಿತು. ಶ್ರವಣದೋಷವಿರುವ ಮಕ್ಕಳಿಗೆ ಚಿಕಿತ್ಸೆ ನೀಡಲು ಮೈಸೂರಿನಲ್ಲಿ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಿದೆ. ಇಲ್ಲಿ ನೀಡುವ ಚಿಕಿತ್ಸೆಯ ಅವಧಿ ಬಹುತೇಕ 3 ತಿಂಗಳಿನಿಂದ 6 ತಿಂಗಳ ಕಾಲದ್ದಾಗಿರುತ್ತದೆ. ಇನ್ನು ಕೆಲವು ಮಕ್ಕಳಿಗೆ ಇನ್ನೂ ಹೆಚ್ಚಿನ ಅವಧಿ ಬೇಕಾಗುತ್ತದೆ. ಕರ್ನಾಟಕದಿಂದ ಮಾತ್ರವಲ್ಲದೆ ದಕ್ಷಿಣದ ರಾಜ್ಯಗಳಾದ ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶದಿಂದಲೂ ಸಮಸ್ಯೆಯಿರುವ ಮಕ್ಕಳನ್ನು ಚಿಕಿತ್ಸೆಗಾಗಿ ಇಲ್ಲಿಗೆ ಕರೆತರಲಾಗುತ್ತದೆ.

ಹೀಗೆ ಬರುವ ಮಕ್ಕಳು ಮತ್ತು ಅವರ ಪೋಷಕರಿಗೆ ಇಲ್ಲಿ ಉಳಿದುಕೊಳ್ಳಲು ಸೂಕ್ತ ವಸತಿ ವ್ಯವಸ್ಥೆ ಇಲ್ಲ. ಸಮಸ್ಯೆ ಹೊಂದಿದ ಮಕ್ಕಳನ್ನು ಕರೆದುಕೊಂಡು ವಸತಿ ವ್ಯವಸ್ಥೆಗಾಗಿ ಅವರು ಪಡುವ ಪರದಾಟ ಕರುಣಾಜನಕವಾಗಿರುತ್ತದೆ. ಬಹುತೇಕ ಪೋಷಕರು ಬಡ ಮತ್ತು ಮಧ್ಯಮವರ್ಗದ ಹಿನ್ನೆಲೆಯವರಾಗಿದ್ದು, ದುಬಾರಿ ಬಾಡಿಗೆ ನೀಡುವಷ್ಟು ಶಕ್ತರಾಗಿರುವುದಿಲ್ಲ. ಕೆಲವೊಮ್ಮೆ ಸಾಲ ಮಾಡಿ ಹಣ ತಂದರೂ ಜಾತಿ, ಧರ್ಮ ಮತ್ತು ಆಹಾರಪದ್ಧತಿಯ ಕಾರಣಕ್ಕೆ ಅವರಿಗೆ ಬಾಡಿಗೆ ಮನೆಗಳು ಸಿಗುವುದಿಲ್ಲ. ಈ ಕಾರಣದಿಂದ ಸರ್ಕಾರವು ಇಂತಹವರಿಗೆ ಸಹಾಯವಾಗುವಂತೆ ಸಂಸ್ಥೆಯ ಸನಿಹದಲ್ಲಿ ವಸತಿಗೃಹವೊಂದನ್ನು ಮತ್ತು ಅದಕ್ಕೆ ಲಗತ್ತಾಗಿ ಇಂದಿರಾ ಕ್ಯಾಂಟೀನ್ ಒಂದನ್ನು ತೆರೆಯುವುದು ಒಳ್ಳೆಯದು. ಚಿಕಿತ್ಸೆಗಾಗಿ ಇಲ್ಲಿಗೆ ನೆರೆರಾಜ್ಯಗಳ ಜನರೂ ಬರುತ್ತಿರುವುದರಿಂದ ವಸತಿಗೃಹ ನಿರ್ಮಾಣಕ್ಕೆ ಆ ರಾಜ್ಯ ಸರ್ಕಾರಗಳ ನೆರವನ್ನೂ ಪಡೆಯಬಹುದು.
ಡಾ. ಸರ್ಜಾಶಂಕರ್ ಹರಳಿಮಠ, ಮೈಸೂರು

ಪಾಷಾಣಕೆ ಸಮ

ಲೋಕಾ ಬಲೆಗೆ ಕೋಟಿ ಕುಳಗಳು
ಸುದ್ದಿ ಓದಿ ಬೆಚ್ಚಿಬಿದ್ದಿತು ಜನಮನ
ಬಾಳಿಸದು ಬದುಕಿಸದು ಕದ್ದದ್ದು
ಪಾಷಾಣಕೆ ಸಮ ಪರಧನ
ದುಡಿದುಂಡ ಅಂಬಲಿ ಅಮೃತವದು
ಹಂಚಿ ಉಂಡು ಕೂಡಿಬಾಳುವುದು
ಬಾಳನೀತಿ ಸಮತೆಗೆ ಬುನಾದಿ

ಸಿ.ಪಿ.ಸಿದ್ಧಾಶ್ರಮ, ಮೈಸೂರು

ತಾಳ್ಮೆಗೆಡುವ ಮನಸ್ಸಿಗೆ ಪರಿಹಾರವೇನು?

ಮಧ್ಯಪ್ರದೇಶದ ಇಂದೋರ್‌ನಲ್ಲಿ ಸಾಕುನಾಯಿಗಳ ಕಚ್ಚಾಟವು ಅವುಗಳ ಮಾಲೀಕರ ನಡುವೆ ಜಗಳಕ್ಕೆ ಕಾರಣವಾಗಿ, ಮಾಲೀಕರೊಬ್ಬರು ಹಾರಿಸಿದ ಗುಂಡಿನಿಂದ ಇಬ್ಬರು ಮೃತಪಟ್ಟಿರುವುದು ವರದಿಯಾಗಿದೆ (ಪ್ರ.ವಾ., ಆ. 19). ನಾಯಿಗಳ ಜಗಳದ ಕಾರಣದಿಂದ ಮಾಲೀಕರು ಜಗಳವಾಡಿಕೊಂಡು ಗುಂಡು ಹಾರಿಸಿ ಕೊಲೆ ಮಾಡುವುದು ಮನುಷ್ಯ ವರ್ತನೆಯೇ? ಮನುಷ್ಯನ ಮನಸ್ಸು ಇಷ್ಟೊಂದು ಕ್ರೂರವೇ? ಇಂತಹ ಸಣ್ಣಪುಟ್ಟ ಕೃತ್ಯಗಳಿಗೂ ತಾಳ್ಮೆ ಕಳೆದುಕೊಳ್ಳುವ ಮಟ್ಟಕ್ಕೆ ಮನುಷ್ಯನ ಮನಸ್ಸು ಹೋಗಲು ಕಾರಣಗಳೇನು? ತಿನ್ನುವ ಆಹಾರ, ಅಮಲು, ಜೀವನಶೈಲಿ, ಹೊರನೋಟಕ್ಕೆ ಕಾಣುವ ವರ್ತನೆಗಳಂತಹ ಕಾರಣಗಳಲ್ಲಿ ಯಾವುದಾದರೊಂದು ಮನುಷ್ಯನ ಮೆದುಳಿನ ಮೇಲೆ ಪರಿಣಾಮ ಬೀರಿರಬೇಕಲ್ಲವೇ? ಅಥವಾ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿಯೇ ಲೋಪವಿದೆಯೆ? ಒಳ್ಳೆಯ ಸಂಘಟನೆಗಳ ಕೊರತೆಯೇ?

ಇತ್ತೀಚಿನ ದಿನಗಳಲ್ಲಿ ಮನುಷ್ಯ ಮನುಷ್ಯರ ನಡುವೆ ಇಂತಹ ತಾಳ್ಮೆಗೆಟ್ಟ ಪ್ರಕರಣಗಳು ಅಲ್ಲಲ್ಲಿ ನಡೆಯುತ್ತಲೇ ಇವೆ. ಸರ್ಕಾರ ಮತ್ತು ಸಾಮಾಜಿಕ ಚಿಂತಕರು ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ಸೂಕ್ತ ಪರಿಹಾರ ಹುಡುಕಬೇಕಾಗಿದೆ.
ತಾ.ಸಿ.ತಿಮ್ಮಯ್ಯ, ಬೆಂಗಳೂರು

ಗುಣಮಟ್ಟದ ಮೊಟ್ಟೆ ಪೂರೈಕೆಯಾಗಲಿ

9 ಮತ್ತು 10ನೇ ತರಗತಿಯ ಮಕ್ಕಳಿಗೂ ವಾರಕ್ಕೆ ಎರಡು ಮೊಟ್ಟೆ ವಿತರಿಸುವ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರ ಚಾಲನೆ ನೀಡಿರುವುದು ಒಳ್ಳೆಯ ಬೆಳವಣಿಗೆ. ಮಕ್ಕಳು ಬೌದ್ಧಿಕವಾಗಿ ಹಾಗೂ ದೈಹಿಕವಾಗಿ ಸಬಲರಾಗುವ ದಿಸೆಯಲ್ಲಿ ಮೊಟ್ಟೆ ಅಗತ್ಯ ಪೋಷಕಾಂಶವನ್ನು ಒದಗಿಸುತ್ತದೆ. ಇತ್ತೀಚೆಗೆ ಅಂಗನವಾಡಿಗಳಿಗೆ ಪೂರೈಕೆಯಾದ ಮೊಟ್ಟೆಗಳು ಕಳಪೆ ಗುಣಮಟ್ಟದಿಂದ ಕೂಡಿದ್ದ ಕುರಿತು ವರದಿಗಳು ಬಂದಿವೆ ಹಾಗೂ ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದಲ್ಲಿ ನಡೆದಿದ್ದ ಮೊಟ್ಟೆ ಹಗರಣದ ಬಗ್ಗೆಯೂ ಓದಿದ್ದೇವೆ. ಮಕ್ಕಳಿಗೆ ಪೂರೈಸುವ ಮೊಟ್ಟೆಗಳು ಉತ್ತಮ ಗುಣಮಟ್ಟದವಾಗಿರಬೇಕು ಹಾಗೂ ನಿಯಮಿತವಾಗಿ ಪೂರೈಕೆಯಾಗಬೇಕು. ಮೊಟ್ಟೆಯನ್ನು ತಿನ್ನದ ಮಕ್ಕಳಿಗೆ ವಿತರಿಸುವ ಶೇಂಗಾ ಚಿಕ್ಕಿ ಹಾಗೂ ಬಾಳೆಹಣ್ಣು ಕೂಡ ಗುಣಮಟ್ಟದಿಂದ ಕೂಡಿರಬೇಕು. ಈ ದಿಸೆಯಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ನಿಗಾ ವಹಿಸಬೇಕು.
ಪ್ರಸಾದ್ ಜಿ.ಎಂ., ಮೈಸೂರು

ಸ್ಥಳೀಯ ಅರ್ಹರಿಗೆ ಲಭ್ಯವಾಗಲಿ ಉದ್ಯೋಗ

ನೆರೆಯ ಶ್ರೀಲಂಕಾದ ಮಾಜಿ ಕ್ರಿಕೆಟಿಗ ಮುತ್ತಯ್ಯ ಮುರಳೀಧರನ್ ಅವರು ಚಾಮರಾಜನಗರ ಜಿಲ್ಲೆಯ ಬದನಗುಪ್ಪೆ ಕೈಗಾರಿಕಾ ಪ್ರದೇಶದಲ್ಲಿ ಸುಮಾರು ₹ 400 ಕೋಟಿ ವೆಚ್ಚದಲ್ಲಿ ಬೃಹತ್ ಪಾನೀಯ ತಯಾರಿಕಾ ಘಟಕ ಸ್ಥಾಪಿಸಲು ಮುಂದಾಗಿರುವುದು ಸ್ವಾಗತಾರ್ಹ. ಇದಕ್ಕಾಗಿ ಅವರು 46 ಎಕರೆ ಪ್ರದೇಶವನ್ನು ಈಗಾಗಲೇ ಖರೀದಿಸಿದ್ದು, ರಾಜ್ಯ ಸರ್ಕಾರದ ಸಹಕಾರದೊಂದಿಗೆ ನಿರ್ಮಾಣ ಕಾಮಗಾರಿ ಶೀಘ್ರಗತಿಯಲ್ಲಿ ನಡೆಯುತ್ತಿದೆ ಎನ್ನಲಾಗಿದೆ. ಈ ಕಾರ್ಖಾನೆಯಲ್ಲಿ ಸುಮಾರು 800 ಮಂದಿಗೆ ಉದ್ಯೋಗ ದೊರೆಯುವ ನಿರೀಕ್ಷೆ ಇದೆ. ಕಾರ್ಖಾನೆಯ ಆಡಳಿತ ಮಂಡಳಿಯು ಸ್ಥಳೀಯ ಅರ್ಹ ಅಭ್ಯರ್ಥಿಗಳಿಗೆ ಗರಿಷ್ಠ ಸಂಖ್ಯೆಯ ಉದ್ಯೋಗಾವಕಾಶ ಕಲ್ಪಿಸಲಿ.
ಕೆ.ವಿ.ವಾಸು, ಮೈಸೂರು

ಇನ್ನಷ್ಟು ಇಂದಿರಾ ಕ್ಯಾಂಟೀನ್: ಸ್ವಾಗತಾರ್ಹ ಕ್ರಮ


ಬಿಬಿಎಂಪಿ ಹೊರತುಪಡಿಸಿ ರಾಜ್ಯದ ಇತರ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮತ್ತೆ 188 ಹೊಸ ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಲು ಸರ್ಕಾರ ಮುಂದಾಗಿರುವ ಸುದ್ದಿ (ಪ್ರ.ವಾ., ಆ. 20) ಓದಿ ಸಂತೋಷವಾಯಿತು. ಜೀವನಾವಶ್ಯಕ ವಸ್ತುಗಳೆಲ್ಲಾ ದುಬಾರಿಯಾಗಿರುವ ಈ ಕಾಲದಲ್ಲಿ ಬರೀ 10 ರೂಪಾಯಿಗೆ ಊಟ ಸಿಗುವುದು ಸ್ವಾಗತಾರ್ಹ. ಇದರಿಂದ ಬಡಜನರು, ಆಟೊ ಚಾಲಕರು, ಕೂಲಿ ಕಾರ್ಮಿಕರು, ಸರ್ಕಾರಿ ಆಸ್ಪತ್ರೆಗೆ ಬಂದವರು ಅಗ್ಗದ ದರದಲ್ಲಿ ಊಟ ಮಾಡುವಂತಾಗಿದೆ.
ಮಲ್ಲನಗೌಡ ಪಾಟೀಲ, ರಂಕಲಕೊಪ್ಪ, ರಾಮದುರ್ಗ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಉಡಾನ್: ಶೇ 53ರಷ್ಟು ಮಾರ್ಗಗಳಲ್ಲಿ ಸ್ಥಗಿತ



ಪ್ರಜಾವಾಣಿ ವಾರ್ತೆ





ದೇಶದಲ್ಲಿ ಪ್ರಾದೇಶಿಕ ವಿಮಾನಯಾನ ಸಂಪರ್ಕವನ್ನು ಬಲಪಡಿಸುವ ಸಲುವಾಗಿ ಕೇಂದ್ರ ಸರ್ಕಾರವು 2017–18ರಲ್ಲಿ ಜಾರಿಗೆ ತಂದಿದ್ದ 'ಉಡಾನ್' ಯೋಜನೆಯು, ಜನರಿಗೆ ಕೈಗೆಟಕುವ ದರದಲ್ಲಿ ವಿಮಾನಯಾನ ಸೇವೆಯನ್ನು ಒದಗಿಸುವಲ್ಲಿ ಯಶಸ್ವಿಯಾಗಿದೆ. ಮೂರು ಹಂತಗಳಲ್ಲಿ ಜಾರಿಯಾಗಿದ್ದ ಯೋಜನೆಯ ಫಲಾನುಭವಿಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಆದರೂ, ನಿರೀಕ್ಷಿತ ಪ್ರಮಾಣದಲ್ಲಿ ಪ್ರಗತಿ ಸಾಧಿಸಿಲ್ಲ. ಈ ಯೋಜನೆ ಅಡಿಯಲ್ಲಿ ಕಾರ್ಯಾರಂಭ ಮಾಡಿದ್ದ ವಿಮಾನಯಾನ ಮಾರ್ಗಗಳಲ್ಲಿ, ಈಗ ಅರ್ಧಕ್ಕೂ ಹೆಚ್ಚು ಮಾರ್ಗಗಳಲ್ಲಿ ಸೇವೆ ಸ್ಥಗಿತವಾಗಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿಯಲ್ಲಿ ಹೇಳಲಾಗಿದೆ.

ಮೊದಲ ಹಂತದ ಯೋಜನೆಯನ್ನು (ಉಡಾನ್-1) 2017ರ ಮಾರ್ಚ್‌ನಲ್ಲಿ, ಉಡಾನ್-2 ಅನ್ನು 2018ರ ಮಾರ್ಚ್ ಮತ್ತು ಉಡಾನ್-3ನ್ನು 2019ರ ಮಾರ್ಚ್‌ನಲ್ಲಿ ಆರಂಭಿಸಲಾಗಿತ್ತು. ದೇಶದ ಬೇರೆ ಬೇರೆ ಜಿಲ್ಲೆಗಳಲ್ಲಿ, ಪ್ರದೇಶಗಳಲ್ಲಿ ಈಗಾಗಲೇ ಇರುವ ಮತ್ತು ಬಳಕೆಯಲ್ಲಿ ಇಲ್ಲದ ವಿಮಾನ ನಿಲ್ದಾಣ ಮತ್ತು ಹೆಲಿಪೋರ್ಟ್‌ಗಳನ್ನು ಮೇಲ್ದರ್ಜೆಗೆ ಏರಿಸುವುದು ಹಾಗೂ ಅವುಗಳ ಮೂಲಕ ವಿಮಾನಯಾನ ಸೇವೆ ಒದಗಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿತ್ತು. ಅಲ್ಲದೆ, ಅಗತ್ಯವಿರುವೆಡೆ ಹೊಸ ವಿಮಾನ ನಿಲ್ದಾಣ ಮತ್ತು ಹೆಲಿಪೋರ್ಟ್‌ಗಳನ್ನು ನಿರ್ಮಿಸುವುದೂ ಯೋಜನೆಯ ಭಾಗವಾಗಿತ್ತು. ಕೇಂದ್ರ ಸರ್ಕಾರ ವಿಮಾನ ನಿಲ್ದಾಣ ಮತ್ತು ಹೆಲಿಪೋರ್ಟ್‌ಗಳನ್ನು ಒದಗಿಸಿಕೊಡುವುದು ಆಯಾ ರಾಜ್ಯ ಸರ್ಕಾರಗಳು ಭದ್ರತೆ, ತೆರಿಗೆ ವಿನಾಯಿತಿ, ವಿದ್ಯುತ್-ನೀರು ಪೂರೈಕೆ ಮತ್ತು ಇತರೆ ಸವಲತ್ತುಗಳನ್ನು ರಿಯಾಯಿತಿ ದರದಲ್ಲಿ ಒದಗಿಸಬೇಕಿತ್ತು. ಆದರೆ ಈ ಎಲ್ಲಾ ರಿಯಾಯಿತಿ ಮತ್ತು ವಿನಾಯಿತಿಗಳು ಸೀಮಿತ ಅವಧಿಗೆ ಮಾತ್ರ ಅನ್ವಯವಾಗುತ್ತವೆ. ಆ ಅವಧಿ ಮುಗಿದ ಕೂಡಲೇ ಹಲವು ಮಾರ್ಗಗಳಲ್ಲಿ ವಿಮಾನಯಾನ ಸೇವೆ ಸ್ಥಗಿತವಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಉಡಾನ್-1, 2 ಮತ್ತು 3ರ ಅಡಿಯಲ್ಲಿ ಒಟ್ಟು 953 ಮಾರ್ಗಗಳಲ್ಲಿ ಸೇವೆ ಒದಗಿಸಲು ವಿಮಾನಯಾನ ಸಚಿವಾಲಯಕ್ಕೆ ವಿಮಾನಯಾನ ಕಂಪನಿಗಳು ಪ್ರಸ್ತಾವ ಸಲ್ಲಿಸಿದ್ದವು. ಅವುಗಳಲ್ಲಿ 774 ಮಾರ್ಗಗಳಲ್ಲಿ ಸೇವೆ ಆರಂಭಿಸಲು ಸಚಿವಾಲಯವು ಅನುಮೋದನೆ ನೀಡಿತ್ತು. ಆದರೆ, 774 ಮಾರ್ಗಗಳಲ್ಲಿ ಕಾರ್ಯಾರಂಭವಾಗಿದ್ದು 371 ಮಾರ್ಗಗಳಲ್ಲಿ ಮಾತ್ರ. ಉಳಿದ 403 ಮಾರ್ಗಗಳಲ್ಲಿ ಸೇವೆ ಆರಂಭವಾಗಲೇ ಇಲ್ಲ. ಅಗತ್ಯ ಸೌಲಭ್ಯಗಳು ಇಲ್ಲದೇ ಇರುವುದು, ವಿಮಾನನಿಲ್ದಾಣ ಮತ್ತು ಹೆಲಿಪೋರ್ಟ್‌ಗಳ ಕಾರ್ಯಾಚರಣೆಗೆ ಅನುಮತಿ ದೊರೆಯದೇ ಇರುವುದು ಹಾಗೂ ಸೂಚಿತ ದರದಲ್ಲಿ ಸೇವೆ ಕಾರ್ಯಸಾಧುವಲ್ಲದೇ ಇರುವುದು, ಸೇವೆ ಆರಂಭವಾಗದೇ ಇರುವುದಕ್ಕೆ ಪ್ರಮುಖ ಕಾರಣಗಳು ಎಂದು ಸಿಎಜಿ ಗುರುತಿಸಿದೆ.

ಮೂರೂ ಹಂತದ ಯೋಜನೆಯಲ್ಲಿ, ಯಾವುದೇ ಮಾರ್ಗದಲ್ಲಿ ಸೇವೆ ಆರಂಭಿಸಿದ ನಂತರ ಒಂದು ವರ್ಷದವರೆಗೆ ಕಡ್ಡಾಯವಾಗಿ ಸೇವೆ ಒದಗಿಸಲೇಬೇಕು ಎಂಬ ನಿಯಮ ಇತ್ತು. ಹೀಗಾಗಿ ಕಾರ್ಯಾರಂಭ ಮಾಡಿದ ಬಹುತೇಕ ಮಾರ್ಗಗಳಲ್ಲಿ ಒಂದು ವರ್ಷದವರೆಗೆ ಸೇವೆ ಜಾರಿಯಲ್ಲಿತ್ತು. ಆದರೆ ಒಂದು ವರ್ಷದ ನಂತರ 139 ಮಾರ್ಗಗಳಲ್ಲಿ ಸೇವೆಯನ್ನು ಸ್ಥಗಿತಗೊಳಿಸಲಾಯಿತು.

ಕಾರ್ಯಾಚರಣೆ ಕಾರ್ಯಸಾಧುವಲ್ಲ ಎಂಬುದನ್ನೇ ಸೇವೆ ಸ್ಥಗಿತಕ್ಕೆ ಕಂಪನಿಗಳು ಕೊಟ್ಟ ಪ್ರಮುಖ ಕಾರಣವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿನಾಯಿತಿ ಹಾಗೂ ರಿಯಾಯಿತಿಗಳ ಕಾರಣ ಉಳಿದ 232 ಮಾರ್ಗಗಳಲ್ಲಿ ಮೂರು ವರ್ಷಗಳವರೆಗೆ ಸೇವೆ ಲಭ್ಯವಿತ್ತು. ಆದರೆ, ಮೂರು ವರ್ಷಗಳ ನಂತರ ಇನ್ನೂ 58 ಮಾರ್ಗಗಳಲ್ಲಿ ಸೇವೆ ಸ್ಥಗಿತವಾಯಿತು. 2023ರ ಮಾರ್ಚ್ ಅಂತ್ಯದವರೆಗೆ ಉಡಾನ್ ಯೋಜನೆ ಅಡಿಯಲ್ಲಿ ಲಭ್ಯವಿದ್ದ ವಿಮಾನಯಾನ ಮಾರ್ಗಗಳ ಸಂಖ್ಯೆ 174ಕ್ಕೆ ಕುಸಿದಿತ್ತು. ಅನುಮೋದನೆ ದೊರೆತ (774) ಮಾರ್ಗಗಳ ಸಂಖ್ಯೆಗೆ ಹೋಲಿಸಿದರೆ ಇದು ಶೇ 22.5ರಷ್ಟು ಮಾತ್ರ.


ಯೋಜನೆ ಜಾರಿಯಲ್ಲಿ ಹಲವು ತೊಡಕುಗಳಿದ್ದು, ಅವುಗಳನ್ನು ನಿವಾರಿಸಿದರೆ ಮತ್ತಷ್ಟು ಪ್ರಗತಿ ಸಾಧಿಸಬಹುದು ಮತ್ತು ಜನರಿಗೆ ಕೈಗೆಟುಕುವ ದರದಲ್ಲಿ ವಿಮಾನಯಾನ ಸೇವೆ ಒದಗಿಸಬಹುದು ಎಂದು ಸಿಎಜಿ ತನ್ನ ವರದಿಯಲ್ಲಿ ಅಭಿಪ್ರಾಯಪಟ್ಟಿದೆ.

ಪ್ರಯಾಣಿಕರ ಸಂಖ್ಯೆ ಏರಿಕೆ

2017ರಲ್ಲಿ ಮೊದಲ ಹಂತದ ಉಡಾನ್ ಯೋಜನೆ ಜಾರಿಗೆ ಬಂದಾಗ, ಅದಕ್ಕೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿತ್ತು. 2017–18ನೇ ಆರ್ಥಿಕ ವರ್ಷದ ಅಂತ್ಯಕ್ಕೆ 56 ಮಾರ್ಗಗಳಲ್ಲಷ್ಟೇ ಸೇವೆ ಲಭ್ಯವಿತ್ತು. ಕಡಿಮೆ ಸಂಖ್ಯೆ ಮಾರ್ಗಗಳು ಮತ್ತಿತರ ಕಾರಣದಿಂದ ಇಡೀ ವರ್ಷದಲ್ಲಿ ಯೋಜನೆ ಅಡಿಯ ಸೇವೆ ಬಳಸಿಕೊಂಡ ಪ್ರಯಾಣಿಕರ ಸಂಖ್ಯೆ 2.63 ಲಕ್ಷ ಮಾತ್ರ. ಆದರೆ ನಂತರದ ವರ್ಷಗಳಲ್ಲಿ ಪ್ರಯಾಣಿಕರ ಸಂಖ್ಯೆ ಏರಿಕೆಯಾಗುತ್ತಲೇ ಸಾಗಿದೆ

- ಯೋಜನೆ ಆರಂಭವಾದ ಎರಡನೇ (2018–19)ವರ್ಷ ಉಡಾನ್ ವಿಮಾನಗಳಲ್ಲಿ ಪ್ರಯಾಣಿಸಿದ ಪ್ರಯಾಣಿಕರ ಸಂಖ್ಯೆ 12.40 ಲಕ್ಷಕ್ಕೆ ಏರಿಕೆಯಾಗಿತ್ತು
- 2019–20ನೇ ಆರ್ಥಿಕ ವರ್ಷದಲ್ಲಿ 300ಕ್ಕೂ ಹೆಚ್ಚು ಮಾರ್ಗಗಳಲ್ಲಿ ಉಡಾನ್ ಸೇವೆ ಲಭ್ಯವಿತ್ತು. ಈ ಕಾರಣದಿಂದ ಸೇವೆ ಪಡೆದುಕೊಂಡ ಪ್ರಯಾಣಿಕರ ಸಂಖ್ಯೆಯಲ್ಲೂ ಗಣನೀಯ ಪ್ರಮಾಣದ ಏರಿಕೆಯಾಗಿತ್ತು. ಆ ವರ್ಷದಲ್ಲಿ ಒಟ್ಟು 29.91 ಲಕ್ಷ ಮಂದಿ ಉಡಾನ್ ಸೇವೆಯನ್ನು ಬಳಸಿಕೊಂಡಿದ್ದರು
- 2020–21ರಲ್ಲಿ ಕೋವಿಡ್ ಕಾರಣದಿಂದ ಸೇವೆಯ ಸಂಖ್ಯೆಯೂ ಕಡಿಮೆಯಾಗಿತ್ತು ಮತ್ತು ಪ್ರಯಾಣಿಕರ ಸಂಖ್ಯೆಯಲ್ಲೂ ಇಳಿಕೆಯಾಗಿತ್ತು
- 2021–22 ಉಡಾನ್ ಇತಿಹಾಸದಲ್ಲೇ ಅತಿಹೆಚ್ಚು ಪ್ರಗತಿ ಸಾಧಿಸಿದ ವರ್ಷವಾಗಿದೆ. ಕೋವಿಡ್ ನಿರ್ಬಂಧಗಳು ಪೂರ್ಣ ಪ್ರಮಾಣದಲ್ಲಿ ಸಡಿಲವಾದ ಕಾರಣ, ಬಹುತೇಕ ಮಾರ್ಗಗಳಲ್ಲಿ ಸೇವೆಗೆ ಮರುಚಾಲನೆ ನೀಡಲಾಗಿತ್ತು. ಆ ವರ್ಷದಲ್ಲಿ ಒಟ್ಟು 32.99 ಲಕ್ಷ ಪ್ರಯಾಣಿಕರು ಉಡಾನ್ ವಿಮಾನಗಳಲ್ಲಿ ಪ್ರಯಾಣಿಸಿದ್ದಾರೆ
- ಆದರೆ, 2022–23ರಲ್ಲಿ ಹಲವು ಮಾರ್ಗಗಳಲ್ಲಿ ಸೇವೆ ಸ್ಥಗಿತವಾಯಿತು. ಇದಕ್ಕೆ ಪ್ರಯಾಣಿಕರ ಕೊರತೆ ಕಾರಣ ಎಂದು ಹೇಳಲಾಗಿದೆಯಾದರೂ, ಸರ್ಕಾರದ ಸವಲತ್ತು ಸ್ಥಗಿತವಾಗಿದ್ದು ಪ್ರಮುಖ ಕಾರಣ ಎಂಬುದನ್ನು ಸಿಎಜಿ ಗುರುತಿಸಿದೆ. ಸೇವೆ ಇಲ್ಲದೇ ಇರುವ ಕಾರಣ ಆ ವರ್ಷ ಉಡಾನ್ ವಿಮಾನಗಳಲ್ಲಿ ಪ್ರಯಾಣಿಸಿದವರ ಸಮಖ್ಯೆ 24.97 ಲಕ್ಷಕ್ಕೆ ಕುಸಿದಿತ್ತು
- ಕೈಗೆಟುಕುವ ದರದಲ್ಲಿ ಗುಣಮಟ್ಟದ ಸೇವೆ ಮತ್ತು ಅತ್ಯಂತ ಅಗತ್ಯವಿರುವ ಮಾರ್ಗಗಳಲ್ಲಿ ಸೇವೆಯನ್ನು ಒದಗಿಸಿದರೆ ಉಡಾನ್ ಯೋಜನೆ ಮತ್ತಷ್ಟು ಪ್ರಗತಿ ಸಾಧಿಸಲಿದೆ. ಪ್ರಯಾಣಿಕರ ಸಂಖ್ಯೆಯೂ ಏರಿಕೆಯಾಗಲಿದೆ ಎಂದು ಸಿಎಜಿ ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ

ಪ್ರಯಾಣಿಕರ ಸಂಖ್ಯೆ(ಲಕ್ಷಗಳಲ್ಲಿ)



ಶಿಫಾರಸುಗಳು

- ಉಡಾನ್ ಯೋಜನೆಗೆಂದು ಸಾಮಾನ್ಯ ವಿಮಾನಗಳ ಪ್ರತಿ ಪ್ರಯಾಣದ ಮೇಲೆ ವಿಧಿಸಲಾಗುತ್ತಿರುವ ₹5,000 ಲೆವಿ, ಸಂಗ್ರಹಕ್ಕೆ ಏಕರೂಪತೆ ತರಬೇಕು. ಕೆಲವು ವಿಮಾನಯಾನ ಸಂಸ್ಥೆಗಳು ಪ್ರಯಾಣಿಕರಿಂದ ಅಗತ್ಯಕ್ಕಿಂತ ಹೆಚ್ಚಿನ ಲೆವಿ ಶುಲ್ಕ ಸಂಗ್ರಹಿಸುತ್ತಿವೆ. ಆದರೆ, ಉಡಾನ್ ನಿಧಿಗೆ ನೀಡುತ್ತಿರುವುದು ₹5,000 ಮಾತ್ರ. ₹5,000ದಷ್ಟು ಶುಲ್ಕವನ್ನಷ್ಟೇ ಪ್ರಯಾಣಿಕರಿಂದ ಸಂಗ್ರಹಿಸುವ ವ್ಯವಸ್ಥೆಯನ್ನು ಜಾರಿಗೆ ತರಬೇಕು
- ಉಡಾನ್ ನಿಧಿಯಲ್ಲಿ ಲಭ್ಯವಿದ್ದ ಅನುದಾನವು ಯಾವ ವರ್ಷವೂ ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಿಲ್ಲ. ಆ ನಿಧಿಯನ್ನು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗುವಂತೆ ನೋಡಿಕೊಳ್ಳಬೇಕು ಮತ್ತು ಆ ಮೂಲಕ ವಿಮಾನನಿಲ್ದಾಣಗಳು/ಹೆಲಿಪೋರ್ಟ್‌ಗಳನ್ನು ಶೀಘ್ರವೇ ಅಭಿವೃದ್ಧಿ ಮಾಡಬೇಕು
- ಉಡಾನ್ ಯೋಜನೆ ಅಡಿ ಕಾರ್ಯನಿರ್ವಹಿಸುತ್ತಿರುವ ವಿಮಾನಗಳ ಟಿಕೆಟ್ ದರಕ್ಕೂ, ಹೆಲಿಕಾಪ್ಟರ್‌ಗಳ ಟಿಕೆಟ್ ದರಕ್ಕೂ ತೀರಾ ವ್ಯತ್ಯಾಸವಿದೆ. ವಿಮಾನಗಳಿಗೆ ಹೋಲಿಸಿದರೆ, ಹೆಲಿಕಾಪ್ಟರ್‌ಗಳು ತೀರಾ ದುಬಾರಿ. ಈ ಅಂತರವನ್ನು ಕಡಿಮೆ ಮಾಡಬೇಕು. ಆ ಮೂಲಕ ಜನ ಸಾಮಾನ್ಯರೂ ಹೆಲಿಕಾಪ್ಟರ್‌ಗಳ ಸೇವೆ ಬಳಸುವಂತಹ ಸ್ಥಿತಿ ನಿರ್ಮಿಸಬೇಕು
- ಯೋಜನೆಯಲ್ಲಿ ಉಲ್ಲೇಖಿಸಿರುವಂತೆ ಹಲವು ರಾಜ್ಯ ಸರ್ಕಾರಗಳು ವಿಮಾನನಿಲ್ದಾಣ/ಹೆಲಿಪೋರ್ಟ್‌ಗಳ ಭದ್ರತೆ/ನಿರ್ವಹಣೆಯ ಹೊಣೆಯನ್ನು ಹೊತ್ತುಕೊಂಡಿಲ್ಲ. ಈ ಲೋಪವನ್ನು ವಿಮಾನಯಾನ ಸಚಿವಾಲಯವು ಕಡೆಗಣಿಸಿದೆ. ಇದೂ ಸಹ ಹಲವು ಮಾರ್ಗಗಳಲ್ಲಿ ಕಾರ್ಯಾಚರಣೆ ಸ್ಥಗಿತವಾಗಲು ಕಾರಣವಾಗಿದೆ. ಇಂತಹ ಲೋಪಗಳನ್ನು ಸರಿಪಡಿಸುವ ಮೂಲಕ, ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಕ್ರಮ ತೆಗೆದುಕೊಳ್ಳಬೇಕು
- ಸಚಿವಾಲಯವು ಅನುಮೋದನೆ ನೀಡಿದ 31 ಹೆಲಿಪೋರ್ಟ್‌ಗಳಲ್ಲಿ ಶೇ 70ಕ್ಕೂ ಹೆಚ್ಚು ಹೆಲಿಪೋರ್ಟ್‌ಗಳಿಗೆ ಡಿಜಿಸಿಎ ಅನುಮತಿ ನೀಡಿರಲಿಲ್ಲ. ಇದರಿಂದ 50ಕ್ಕೂ ಹೆಚ್ಚು ಮಾರ್ಗಗಳಲ್ಲಿ ಹೆಲಿಕಾಪ್ಟರ್ ಸೇವೆ ಆರಂಭಿಸಲು ಸಾಧ್ಯವಾಗಿಲ್ಲ. ಅನುಮೋದನೆ ನೀಡುವುದಕ್ಕೂ ಮುನ್ನ, ಅಲ್ಲಿ ಅಗತ್ಯ ಸೌಲಭ್ಯಗಳು ಇವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದನ್ನು ವಿಮಾನಯಾನ ಸಚಿವಾಲಯವು ರೂಢಿಸಿಕೊಳ್ಳಬೇಕು

ಆಧಾರ: ಸಿಎಜಿ

'ಸಪ್ಲೈಯರ್ ಶಂಕರ'ನಾದ ನಿಶ್ಚಿತ್



'ಗಂಟುಮೂಟೆ', 'ಟಾಮ್ ಆ್ಯಂಡ್ ಜೆರ್ರಿ' ಸಿನಿಮಾ ಖ್ಯಾತಿಯ ನಾಯಕ ನಿಶ್ಚಿತ್ ಕೊರೋಡಿ ಅಭಿನಯದ 'ಸಪ್ಲಯರ್ ಶಂಕರ' ಸದ್ದಿಲ್ಲದೇ ಶೂಟಿಂಗ್ ಮುಗಿಸಿ ಬಿಡುಗಡೆಗೆ ಸಜ್ಜಾಗಿದೆ. 'ಲಗೋರಿ' ಸಿನಿಮಾದ ದೀಪಿಕಾ ಆರಾಧ್ಯ ನಿಶ್ಚಿತ್‌ಗೆ ಜೋಡಿಯಾಗಿದ್ದಾರೆ.

ಸಿನಿಮಾದ ಮೋಷನ್ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದ್ದು, ಜೈಲಿನ ಕಂಬಿಯೊಳಗೆ ನಾಯಕನ ದೇಹದಿಂದ ರಕ್ತ ಬಸಿಯುತ್ತಿರುವ ಚಿತ್ರಿಕೆ ಇದೆ. ಹೊಸಬರಾದ ರಂಜಿತ್ ಸಿಂಗ್ ರಜಪೂತ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ತ್ರಿನೇತ್ರ ಫಿಲ್ಮ್ಸ್ ಸಂಸ್ಥೆಯಡಿ ಎಂ.ಚಂದ್ರಶೇಖರ್ ಹಾಗೂ ನಾಗೇಂದ್ರ ಸಿಂಗ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.

'ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದ್ದು, ಬಾರ್ ಸಪ್ಲೈಯರ್ ಸುತ್ತ ಇಡೀ ಸಿನಿಮಾ ಸಾಗುತ್ತದೆ. ಗೋಪಾಲ ಕೃಷ್ಣ ದೇಶಪಾಂಡೆ, ಜ್ಯೋತಿ ರೈ, ನವೀನ್ ಡಿ ಪಡಿಲ್ ಸೇರಿದಂತೆ ಒಂದಷ್ಟು ಹೊಸಬರು ಚಿತ್ರದಲ್ಲಿದ್ದಾರೆ' ಎಂದು ನಿರ್ದೇಶಕರು ಹೇಳಿದ್ದಾರೆ.

ಸತೀಶ್ ಕುಮಾರ್.ಎ ಛಾಯಾಗ್ರಹಣ, ಆರ್.ಬಿ.ಭರತ್ ಸಂಗೀತ, ಸತೀಶ್ ಚಂದ್ರಯ್ಯ ಸಂಕಲನ ಚಿತ್ರಕ್ಕಿದೆ.



ಅಂಜನ್

ಬಿಡುಗಡೆಯಾಯ್ತು 'ಚೋಳ' ಟೀಸರ್!

ಸಾಮಾಜಿಕ ಮಾಧ್ಯಮಗಳಲ್ಲಿ ರೂರಲ್ ಸ್ಟಾರ್ ಎಂದೇ ಜನಪ್ರಿಯರಾಗಿರುವ ಉತ್ತರ ಕರ್ನಾಟಕದ ಅಂಜನ್ ನಾಯಕನಾಗಿ ನಟಿಸಿರುವ 'ಚೋಳ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಈ ಹಿಂದೆ ನಿರ್ಮಾಪಕರಾಗಿದ್ದ ಸುರೇಶ್ ಡಿ.ಎಂ ಈ ಚಿತ್ರದ ಮೂಲಕ ನಿರ್ದೇಶಕರೂ ಆಗಿದ್ದು, ತಮ್ಮ ಸೃಷ್ಟಿ ಎಂಟರ್‌ಪ್ರೈಸಸ್ ಲಾಂಛನದಲ್ಲಿ ಈ ಚಿತ್ರ ನಿರ್ಮಿಸಿದ್ದಾರೆ.

'ಶೀರ್ಷಿಕೆ ಐತಿಹಾಸಿಕ ಕಥೆ ಎಂಬ ಭಾವನೆ ಮೂಡಿಸಬಹುದು. ಆದರೆ ಇದು ಪ್ರೀತಿ, ರೌಡಿಸಂ ಸೇರಿದಂತೆ ಅನೇಕ ಅಂಶಗಳನ್ನು ಹೊಂದಿರುವ ಆಧುನಿಕ ಜಗತ್ತಿನ ಕಥೆ. ಈಗಾಗಲೇ ಒಂದಷ್ಟು ಭಾಗಗಳ ಚಿತ್ರೀಕರಣ ಮುಗಿದಿದೆ' ಎನ್ನುತ್ತಾರೆ ಸುರೇಶ್.

ನಾಯಕಿಯರಾಗಿ ದಿಶಾ ಪಾಂಡೆ ಮತ್ತು ಪ್ರತಿಭಾ ಕಾಣಿಸಿಕೊಂಡಿದ್ದಾರೆ. ದಿನೇಶ್ ಮಂಗಳೂರು ಮತ್ತು ಬಲ ರಾಜವಾಡಿ ಖಳನಾಯಕರು. ಲಾಯ್ ವ್ಯಾಲೆಂಟೈನ್ ಸಲ್ಡಾನ ಸಂಗೀತ,ಸಂದೀಪ್ ಹೊನ್ನಾಳ್ಳಿ ಛಾಯಾಗ್ರಹಣ, ಶಿವಕುಮಾರ್ ಎ. ಸಂಕಲನ ಈ ಚಿತ್ರಕ್ಕಿದೆ. ನಟ ವರ್ಧನ್, ಮಜಾ ಭಾರತ ಖ್ಯಾತಿಯ ಜಗಪ್ಪ, ಮಿಂಚು ಮುಂತಾದವರಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ಅಲ್ಪಸಂಖ್ಯಾತರಾದ ಕುಕಿ ಬುಡಕಟ್ಟು ಸಮುದಾಯದ ವಿರುದ್ಧ ದ್ವೇಷ ಹರಡುವ ಆರ್‌ಎಸ್‌ಎಸ್ ಪ್ರಾಯೋಜಕತ್ವದ ಕಾರ್ಯಕ್ರಮದಲ್ಲಿ ಮಣಿಪುರದ ರಾಜ್ಯಪಾಲೆ ಅವರು ಯಾಕಾಗಿ ಭಾಗಿಯಾಗಿದ್ದಾರೆ' ಎಂದು ಪ್ರಶ್ನಿಸಿ ಹಲವರು ಫೋಟೊವೊಂದನ್ನು 'ಎಕ್ಸ್'ನಲ್ಲಿ ಪೋಸ್ಟ್‌ಮಾಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.




'ಈ ಫೋಟೊದಲ್ಲಿ ಇರುವುದು ಮಣಿಪುರದ ರಾಜ್ಯಪಾಲೆ ಅಲ್ಲ. ಇವರು ಹಿಂದೂ ಸೇನಾದ ರಾಷ್ಟ್ರೀಯ ಸಂಯೋಜಕಿ ಶಬ್ನಂ ಜೈನ್ ಕುಂದ್ರಾ. ಜೊತೆಗೆ, ಇದು ಆರ್‌ಎಸ್‌ಎಸ್ ಪ್ರಾಯೋಜತ್ವದ ಕಾರ್ಯಕ್ರಮ ಕೂಡ ಅಲ್ಲ' ಎಂದು ಕಾರ್ಯಕ್ರಮದ ಆಯೋಜಕಿ ಸೋಹನ್ ಗಿರಿ ಅವರು ಸ್ಪಷ್ಟಪಡಿಸಿದ್ದಾರೆ. ಮಣಿಪುರದ ರಾಜಭವನವೂ ಈ ಫೋಟೊದಲ್ಲಿ ಇರುವವರು ಮಣಿಪುರದ ರಾಜ್ಯಪಾಲೆ ಅಲ್ಲ ಎಂದು ಹೇಳಿದೆ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಮನದ ದೂಳನ್ನು ಮೊದಲು ಒರೆಸಿಕೊಳ್ಳೋಣ

ನುಡಿ ಬೆಳಗು



ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಅಪಾರ್ಟ್‌ಮೆಂಟ್ ಒಂದಕ್ಕೆ ನವ ದಂಪತಿ ಬಾಡಿಗೆಗೆ ಬಂದರು. ಮನೆಯ ಕಿಟಕಿಯ ದೊಡ್ಡ ಗಾಜಿನಿಂದ ಎದುರು ಮನೆಯ ಹಿಂಬದಿ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಎದುರು ಮನೆಯಾಕೆ ಬಟ್ಟೆ ತೊಳೆದು ಅದನ್ನು ಒಣ ಹಾಕಿದ್ದಳು. ಅದನ್ನು ನೋಡಿದ ಪತ್ನಿ, 'ಎಷ್ಟು ಕೆಟ್ಟದಾಗಿ ಒಗೆದಿದ್ದಾಳೆ ಒಂದೋ ಅವಳು ಬಳಸುವ ಸೋಪ್ ಸರಿ ಇಲ್ಲ ಅಥವಾ ಅವಳಿಗೆ ಬಟ್ಟೆ ಒಗೆಯಲು ಸರಿಯಾಗಿ ಬರೋಲ್ಲ' ಎಂದಳು. ಪತಿ ಮೌನವಾಗಿದ್ದ. ಮರುದಿನ ಎದ್ದಾಗಲೂ ಅದೇ ದೃಶ್ಯ ಹೆಂಡತಿಯಿಂದ ಅದೇ ಕಾಮೆಂಟ್! ಒಂದು ತಿಂಗಳು ಪ್ರತಿದಿನವೂ ಅದೇ ದೃಶ್ಯಾವಳಿ, ಪತ್ನಿಯಿಂದ ಅದೇ ಹೇಳಿಕೆ, ಗಂಡನದು ಅದೇ ಮೌನ. 31ನೇ ದಿನ ಹೆಂಡತಿ ನೋಡುತ್ತಾಳೆ, ಎದುರು ಮನೆಯಾಕೆ ಒಣ ಹಾಕಿದ್ದ ಬಟ್ಟೆ ಬಹಳ ಶುಭ್ರವಾಗಿ ಗೋಚರಿಸುತ್ತಿದೆ. ಆಗ ಹೆಂಡತಿ, 'ಹಾ! ಈ ದಿನ ಬಟ್ಟೆ ಶುಭ್ರವಾಗಿ ಕಾಣಿಸುತ್ತಿದೆ. ಒಂದೋ ಆಕೆ ಬಟ್ಟೆ ತೊಳೆಯುವುದನ್ನು ಕಲಿತಿದ್ದಾಳೆ ಅಥವಾ ಆಕೆ ತನ್ನ ಸೋಪನ್ನೇ ಬದಲಿಸಿದ್ದಾಳೆ' ಎಂದು ಉದ್ಗರಿಸಿದಳು. ಆಗ ಮೌನ ಮುರಿದ ಪತಿ ಹೇಳಿದ, 'ಎರಡೂ ಅಲ್ಲ. ನಾನು ನಮ್ಮ ಮನೆಯ ಕಿಟಕಿಯ ಗಾಜಿನ ಮೇಲೆ ಅಂಟಿಕೊಂಡಿದ್ದ ದೂಳನ್ನು ಒರೆಸಿದ್ದೇನೆ'.

ನಮ್ಮ ಕಣ್ಣಿನ ಪೊರೆಯಿಂದಾಗಿ ಹೊರಗಿನ ದೃಶ್ಯ ಸರಿಯಾಗಿ ಗೋಚರಿಸದಿದ್ದಾಗ ನಾವು ನಮ್ಮ ದೃಷ್ಟಿದೋಷವನ್ನು ಮೊದಲು ಸರಿಪಡಿಸಿಕೊಳ್ಳಬೇಕೆ ಹೊರತು ದೃಶ್ಯವೇ ಸರಿ ಇಲ್ಲ ಎಂದು ದೂಷಿಸುವುದಲ್ಲ. ನಾವು ಸರಿ ಇದ್ದರೆ ನಮಗೆ ಈ ಜಗತ್ತು ಸರಿಯಾಗಿ ಕಾಣಿಸುತ್ತದೆ. ನಾವು ಇನ್ನೊಬ್ಬರತ್ತ ತಪ್ಪು ಎಂದು ಬೆರಳು ಮಾಡುವಾಗ ಉಳಿದ ನಾಲ್ಕು ಬೆರಳುಗಳು ನಮ್ಮ ಕಡೆಗೇ ಮುಖ ಮಾಡಿಕೊಂಡು ತಪ್ಪಿನಲ್ಲಿ ನಮ್ಮ ಪಾಲೂ ಇದೆ ಎಂದು ಸಾರಿ ಹೇಳುತ್ತಿರುತ್ತವೆ ಎಂಬುದನ್ನು ನಾವೆಂದಿಗೂ ಮರೆಯಬಾರದು.

'ಪರರ ತಪ್ಪನೊಂದನು ಜನರು ದೂಷಿಪರಲ್ತೆ, ತಮ್ಮ ಸಾವಿರ ತಪ್ಪನ್ನು ಮರೆತು ನಿನ್ನ ಬಾಲದೊಳೊಂದು ತೂತಿದೆ' ಎಂದಂತೆ ಸಾರಣೆಯು ಸೂಜಿಯನ್ನು ಕುರಿತು ಎನ್ನುತ್ತಾರೆ ಹಿರಿಯ ಕವಿ ಎಸ್. ವಿ. ಪರಮೇಶ್ವರ ಭಟ್ಟರು, ತಮ್ಮ ಇಂದ್ರ ಚಾಪದಲ್ಲಿ. ತನ್ನ ಮೈತುಂಬ ತೂತಿರುವ ಸಾರಣೆ, ಸೂಜಿಯ ಬಳಿ ನಿನ್ನ ಬಾಲದಲ್ಲಿ ತೂತಿದೆ ಎಂದು ದೂಷಿಸುವಂತೆ ನಾವೂ ಸಹ ನಮ್ಮ ಸಾವಿರ ತಪ್ಪನ್ನು ಮರೆತು ಬಿಡುತ್ತೇವೆ. ಇನ್ನೊಬ್ಬರ ಒಂದು ತಪ್ಪನ್ನು ಎತ್ತಿ ಆಡಲು ಸಿಗುವ ಯಾವ ಅವಕಾಶವನ್ನು ಬಿಡದ ನಾವು ನಮ್ಮ ತಪ್ಪುಗಳನ್ನು ಗುರುತಿಸುವ ಹಾಗೂ ತಿದ್ದಿಕೊಳ್ಳುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡುವುದೇ ಇಲ್ಲ.

ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ ಎಂಬುದಾಗಿ ಬಸವಣ್ಣನವರು ಪರರನ್ನು ದೂಷಿಸುವುದು ಹಾಗೂ ತನ್ನನ್ನೇ ಸರಿ ಎಂದು ಬಣ್ಣಿಸಿಕೊಳ್ಳುವುದನ್ನು ಮಹಾಪಾತಕಗಳೆಂದು ಗುರುತಿಸುತ್ತಾರೆ. ಇನ್ನೊಬ್ಬರ ತಪ್ಪನ್ನು ನಿಂದಿಸುವುದರಲ್ಲೇ ಸಮಯ ವ್ಯಯಿಸುವುದರ ಬದಲು, ನಮ್ಮ ತಪ್ಪುಗಳನ್ನು ಗುರುತಿಸಿಕೊಂಡು ತಿದ್ದಿಕೊಳ್ಳುವುದೇ ಆತ್ಮೋನ್ನತಿಯ ಸರಿಯಾದ ಪಥ.

ನಡೆಯುವವನು ಎಡವುತ್ತಾನೆ ಎಂಬಂತೆ ಎಲ್ಲರೂ ತಪ್ಪು ಮಾಡುವುದು ಸಹಜ. ಆದರೆ ಮಾಡಿದ ತಪ್ಪಿನಿಂದ ಕಲಿತು ಮುಂದೆ ಅದು ಮರುಕಳಿಸದಂತೆ ಜಾಗೃತರಾಗಿರುವವರು ಸಾಧಕರಾಗುತ್ತಾರೆ. ತಾನೆಂದೂ ತಪ್ಪು ಮಾಡುವುದಿಲ್ಲ ಎಂದು ಭ್ರಮಿಸಿಕೊಂಡು ಬೇರೆಯವರದೇ ತಪ್ಪು ಎಂದು ಹಳಹಳಿಸುವುದು ನಕಾರಾತ್ಮಕ ಧೋರಣೆ. ನಮ್ಮನ್ನು ನಾವು ಸದಾ ಸರಿ ಎಂದು ಭಾವಿಸಿಕೊಳ್ಳುವುದರ ಬದಲು ನಾವು ಎಲ್ಲೆಲ್ಲಿ ಎಡವುತ್ತಿದ್ದೇವೆ ಎಂಬ ಸ್ವಯಂ ವಿಮರ್ಶೆ ಮಾಡಿಕೊಂಡಾಗ ನಮ್ಮ ಕಿಟಕಿಗೆ ಅಂಟಿದ ದೂಳು, ನಮ್ಮ ಕಣ್ಣಿಗೆ ಕಾಣಿಸುತ್ತದೆ ಅದನ್ನು ಸ್ವಚ್ಛಗೊಳಿಸಿಕೊಂಡಾಗ ಈ ಜಗತ್ತು ಸ್ಪಷ್ಟವಾಗಿ ಗೋಚರಿಸುತ್ತದೆ.

ಲೇಖಕ: ವ್ಯಕ್ತಿತ್ವ ವಿಕಸನ ತರಬೇತುದಾರ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಆಗಸ್ಟ್ 21, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಪಂಚಮಿ ಗಂ. 26-01 ನಕ್ಷತ್ರ: ಚಿತ್ತಾ ಅಹೋರಾತ್ರ ಯೋಗ: ಶುಭ ಗಂ. 22-20 ಕರಣ: ಬವ ಗಂ. 13-15, ಸಿಂಹ ಮಾಸದ 04 ನೇ ದಿನ, ಮಳೆನಕ್ಷತ್ರ: ಮಘಾ 2. ರಾಹುಕಾಲ : ಬೆಳಿಗ್ಗೆ 07-30 –09-00, ಸೂರ್ಯೋದಯ : 06-22 ಸೂರ್ಯಾಸ್ತ : 06-45, ಮುಸ್ಲಿಂ ದಿನಾಂಕ : 04 ಸಫರ್, ದಿನ ವಿಶೇಷ : ನಾಗ ಪಂಚಮಿ, ಖೋರ್ದಾದ್ ಸಾಲ್ (ಪ್ರೊಫೆಟ್ ಜರ್ತೋಸ್ತ್ರ ವರ ಜನ್ಮದಿನ) - ಪಾರ್ಸಿ
ಅದೃಷ್ಟ ಸಂಖ್ಯೆ : 4, 1

ಮೇಷ: ಅಭಿವೃದ್ಧಿಯ ವಿಚಾರದಲ್ಲಿ ಸ್ವಪ್ರಯತ್ನದೊಂದಿಗೆ ದೈವ ಬಲವೂ ಇರುತ್ತದೆ. ಆಹಾರದಲ್ಲಿ ಎಣ್ಣೆಯ ಪದಾರ್ಥ ಮತ್ತು ಖಾರದ ಪದಾರ್ಥಗಳ ಸಾಧ್ಯವಾದಷ್ಟು ಮಿತಬಳಕೆ ಒಳ್ಳೆಯದು. ಆರೋಗ್ಯದ ಬಗ್ಗೆ ಕಾಳಜಿ ತೋರಿ.

ವೃಷಭ: ಕೆಲವೊಂದು ಜವಾಬ್ದಾರಿಯುತ ಊರಿನ ಸಾರ್ವಜನಿಕ ಕಾರ್ಯಗಳು ನಿಮ್ಮ ಮುಂದಾಳತ್ವದಲ್ಲಿ ನಡೆಯಲಿದೆ. ಸ್ಥಿರ ಆಸ್ತಿಯನ್ನು ಖರೀದಿಸುವ ಬಗ್ಗೆ ಯೋಚನೆ ಮಾಡಿ. ನಿರೀಕ್ಷಿತ ಕಡೆಗಳಿಂದ ಧನ ಒದಗಿ ಬರುವುದು.

ಮಿಥುನ: ಕಾರ್ಖಾನೆಯೊಂದನ್ನು ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳುವ ಅವಕಾಶಗಳು ನಂಬಿಕಸ್ಥ ಸ್ನೇಹಿತನ ಸಹಾಯದಿಂದ ನಡೆಸಬಹುದು. ವಂಶ ಪಾರಂಪರ್ಯವಾಗಿ ಬಂದ ಉದ್ಯೋಗದಲ್ಲಿ ಹೆಚ್ಚಿನ ಏಳಿಗೆ ಕಾಣುವಿರಿ.

ಕರ್ಕಾಟಕ: ನಡವಳಿಕೆ ಎಲ್ಲರ ಕೇಂದ್ರ ಬಿಂದುವಾಗಲಿದೆ. ಮನರಂಜನೆಗೂ ಸಾಕಷ್ಟು ಸಮಯವನ್ನು ಮೀಸಲಿಡುವುದರಿಂದ ನೆಮ್ಮದಿ ಇರಲಿದೆ. ಸ್ವ ಉದ್ಯೋಗಿಗಳಿಗೆ ಉದ್ಯೋಗ ನಿಮಿತ್ತ ಪ್ರಯಾಣ ಸಂಭವ ಇರುವುದು.

ಸಿಂಹ: ಮಕ್ಕಳ ಅಭಿವೃದ್ಧಿ ಅಥವಾ ಅವರ ಕೆಲಸಗಳ ಬಗ್ಗೆ ನೆರೆಯವರಿಂದ ಪ್ರಶಂಸೆಯ ಮಾತು ಕೇಳಿ ಆನಂದವಾಗುತ್ತದೆ. ಅವಿವಾಹಿತರಿಗೆ ಕಂಕಣ ಭಾಗ್ಯ ಪ್ರಾಪ್ತಿಯಾಗಲಿದೆ. ಆದಾಯದ ಬಗ್ಗೆಯೂ ಗಮನವಿರಲಿ.

ಕನ್ಯಾ: ಉತ್ಸಾಹವನ್ನು ಹೆಚ್ಚಿಸಿಕೊಳ್ಳುವ ಸಮಯವಾಗಿದೆ. ಬಾಲ್ಯ ಸ್ನೇಹಿತರ ಅಪರೂಪದ ಭೇಟಿಯು ಸಂತೋಷ ಉಂಟುಮಾಡಲಿದೆ. ದುರ್ಗಾದೇವಿಯ ಸೇವೆಯಿಂದ ಶುಭ ಫಲವನ್ನು ನಿರೀಕ್ಷಿಸಬಹುದು.

ತುಲಾ: ಬಟ್ಟೆ ವ್ಯಾಪಾರಿಗಳಿಗೆ ಇಂದು ಉತ್ತಮ ಮಾರಾಟ ಹಾಗೂ ಉತ್ತಮ ಲಾಭವಾಗುವುದು. ವ್ಯಾಪಾರ ನಿಮಿತ್ತ ಜನಗಳ ವಿಶ್ವಾಸವನ್ನು ಸಂಪಾದಿಸುವಲ್ಲಿ ಯಶಸ್ವಿ. ಮನೆಯ ಸಣ್ಣಪುಟ್ಟ ರಿಪೇರಿ ಕೆಲಸಗಳಿಗೆ ಹಣ ವ್ಯಯವಾಗುತ್ತದೆ.

ವೃಶ್ಚಿಕ: ತಪ್ಪು ಮಾಡುವುದು ಮಕ್ಕಳ ಸ್ವಾಭಾವಿಕ ಗುಣವೆಂಬುವುದು ಮರೆತು ಮಕ್ಕಳನ್ನು ಅತಿಯಾಗಿ ಶಿಕ್ಷಿಸಬೇಡಿ. ತಿಂಡಿ-ತಿನಿಸುಗಳ ವ್ಯಾಪಾರದಲ್ಲಿನ ಲಾಭವು ನಿಮ್ಮ ಇನ್ನೊಂದು ವ್ಯವಹಾರದ ಅಭಿವೃದ್ಧಿಗೆ ಸಹಕಾರಿಯಾಗಲಿದೆ.

ಧನು: ಮನೆ ಕಟ್ಟಲು ಅಥವಾ ಮನೆಯನ್ನು ನವೀಕರಿಸಲು ಹಣದ ವ್ಯವಸ್ಥೆ ಸಹೋದರರಿಂದ ಆಗಲಿದೆ. ಮನೆಯಲ್ಲಿ ಶುಭ ಸಮಾರಂಭವು ಸುಸೂತ್ರವಾಗಿ ನಡೆದುದಕ್ಕೆ ಸಮಾಧಾನಗೊಳ್ಳುವಿರಿ . ಸಂತೋಷ ನೆಮ್ಮದಿ ಇರುವುದು.

ಮಕರ: ಬರಹಗಾರರಿಗೆ ಬರವಣಿಗೆಯ ಮೇಲೆ ಆಕ್ಷೇಪವನ್ನು ವ್ಯಕ್ತಪಡಿಸುವ ಜನರ ಮಧ್ಯದಲ್ಲಿ ಇರಬೇಕಾದ ಪರಿಸ್ಥಿತಿ ಎದುರಾಗ ಬಹುದು. ಮುಂಬರುವ ಶುಭ ಕಾರ್ಯಗಳಿಗೆ ಹೆಚ್ಚಿನ ತಯಾರಿ ನಡೆಸಿಕೊಳ್ಳಬೇಕಾಗಬಹುದು.


ಕುಂಭ: ಮಕ್ಕಳು ಜೀವನದಲ್ಲಿ ಒಂದು ಉತ್ತಮ ಹಂತವನ್ನು ತಲುಪಿರುವುದನ್ನು ಯೋಚಿಸಿಕೊಂಡು ನೆಮ್ಮದಿ ಹಾಗೂ ಸಂತಸ ಪಡುವಂತಾಗುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಅಗಾಧ ಪ್ರಯತ್ನ ಮಾಡಬೇಕಾಗುವುದು.

ಮೀನ: ಸ್ವಂತ ಉದ್ಯೋಗದವರು ಅಧಿಕ ಬಂಡವಾಳ ಹಾಕುವುದರಿಂದ ಕೈ ಸುಡುವಂತಾಗುವುದು. ಮನಸ್ಸಿನ ದುಗುಡಗಳು ಕಡಿಮೆಯಾಗಿ ಸಹಾಯ ಮಾಡಿದ ಸ್ನೇಹಿತರ ಪಾತ್ರವೇ ಜೀವನದಲ್ಲಿ ಮುಖ್ಯವೆನಿಸಲಿದೆ.

ಪದಬಂಧ 5417 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಚುಂಬನದೊಂದಿಗೆ ಸಿಕ್ಕಿರುವ ರತ್ನ (2)
2.ಗಡಿಗೆ ಹತ್ತಿರವಿರಿಸಿದ ದೊಣ್ಣೆ (3)
5.ಇನ್ನೂ ಬಲಿಯದಿರುವ ಕಾಯಿ (4)
7.ನರಕಾಧಿಪತಿಯ ಮಗ (4)
9.ನಿರಂತರ ಎಂದು ಹೀಗೆನ್ನಿ (3)
10.ವ್ಯಾಯಾಮ ಶಾಲೆಯಿದು (3)
12.ಮಂಜ ನಡುವಿದ್ದರೆ ಇದು ಸೂಕ್ತ! (4)
15.ಮರದೊಳಗೆ ಕಾಣುತ್ತಿರುವ ದುಂಬಿ (4)
17.ಮನಸ್ಸಿನ ಅಸ್ವಾಸ್ಥತೆ (3)
18.ಖನಿಜಗಳ ನೆಲೆ (2)

ಮೇಲಿಂದ ಕೆಳಕ್ಕೆ
1.ದುಮುಗುಟ್ಟುತ್ತಿರುವ ಅಜ್ಜ (3)
2.ಕಡಾಯಿ ಹಿಡಿದು ತೋರಿಸುತ್ತಿರುವ ಒಣಜಂಬ (3)
3.ಗೆಳತಿಯೊಂದಿಗೆ ಸ್ನೇಹಿತ ಬಂದಿದ್ದಾನೆ (3)
4.ನನಸಲ್ಲ! ಇದು ಸ್ವಪ್ನ! (3)
6.ಸುತ ಗಳಿಸಿರುವ ಪುಣ್ಯ (3)
8.ವಸ್ತುಗಳನ್ನು ತೂಗುವ ಯಂತ್ರ (3)
9.ವಿರಸದ ವಿರುದ್ಧ ಪದ (3)
11.ಕಬ್ಬಿಣದ ಕೆಲಸಗಾರನಿಲ್ಲಿ ತಿರುಗಿದ್ದಾನೆ (3)
13.ಮಂದಿ ಪ್ರವೇಶಿಸಿರುವ ಗುಡಿ (3)
14.ಉಪಪತ್ನಿ ಇಲ್ಲಿದ್ದಾಳೆ (3)
15.ಭವ್ಯವಾದ ಸೌಧ (3)
16.ಮಣಿ ಧರಿಸಿದ ಚಲುವೆ (3)



5416ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚಕ್ಷುಃಪ್ರೀತಿ 4.ಲವಾಜಮೆ
6.ವಿವರ 7.ಅಡವಿ
8.ದನುಜ 10.ದಮನ
12.ಗಟಾರ 13.ಅಪಾತ್ರ
14.ಅನಿರುದ್ಧ 16.ಬಹಿರಂಗ

ಮೇಲಿಂದ ಕೆಳಕ್ಕೆ:
1.ಚಮ್ಮಾರ 2.ತಿಲ
3.ಆಮೆ 5.ವಾಕ್ಕೋವಿದ
6.ವಿಷಾದ 7.ಅಧರ
9.ಜಗದ್ಗುರು 11.ನಕ್ಷತ್ರ
13.ಅನಂಗ 14.ಅಕ್ಕ
15.ಧ್ವಜ

ಸುಡೊಕು 5803

		2		3			6	8
4	1				7	3		9
		3		9		1		7
		4			9		8	
	2			5				3
8			2				4	
	4			2		8		
			9					5
2		8		7			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5802 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ತೈಲ ದರ ಏರಿಕೆ ಆತಂಕಕಾರಿ: ಸಚಿವಾಲಯದ ಅಧಿಕಾರಿ

'ತರಕಾರಿ ಬೆಲೆ ಇಳಿಕೆ ನಿರೀಕ್ಷೆ'

ನವದೆಹಲಿ (ಪಿಟಿಐ): ಮಾರುಕಟ್ಟೆಗೆ ಹೊಸ ಬೆಳೆಯು ಬರಲಿರುವ ಕಾರಣ ಮುಂದಿನ ತಿಂಗಳಿನಿಂದ ತರಕಾರಿಗಳ ಬೆಲೆಯು ಇಳಿಕೆ ಕಾಣುವ ನಿರೀಕ್ಷೆ ಇದೆ. ಆದರೆ, ಕಚ್ಚಾ ತೈಲ ದರ ಏರಿಕೆಯು ಆತಂಕ ಮೂಡಿಸಿದೆ ಎಂದು ಹಣಕಾಸು ಸಚಿವಾಲಯದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಶೇ 6ರಷ್ಟು ಮಳೆ ಕೊರತೆ ಆಗಿದ್ದರೂ ಮುಂಗಾರು ಬಿತ್ತನೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಕಡಿಮೆ. ಹಣದುಬ್ಬರ ನಿಯಂತ್ರಿಸಲು ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಸರ್ಕಾರದ ಸಂಗ್ರಹದಲ್ಲಿ ಇರುವ ಗೋಧಿ ಮತ್ತು ಅಕ್ಕಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತಿದೆ. ಅಕ್ಕಿ, ಸಕ್ಕರೆ ರಫ್ತು ಮೇಲೆ ನಿರ್ಬಂಧಗಳನ್ನು ವಿಧಿಸುವುದರ ಜೊತೆಗೆ ಎಣ್ಣೆಕಾಳುಗಳು ಮತ್ತು ಬೇಳೆಕಾಳುಗಳ ಆಮದಿಗೆ ಅವಕಾಶ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಟೊಮೆಟೊ ದರ ನಿಯಂತ್ರಿಸಲು ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಿದೆ. ಇದರಿಂದಾಗಿ ಮುಂಬರುವ ತಿಂಗಳುಗಳಲ್ಲಿ ಬೆಲೆಯು ಇನ್ನಷ್ಟು ಇಳಿಕೆ ಆಗಲಿದೆ. ಟೊಮೆಟೊ ಹೊಸ ಬೆಳೆ ಶೀಘ್ರವೇ ಬರಲಿದ್ದು ಬೆಲೆಯ ಮೇಲಿನ ಒತ್ತಡ ತಗ್ಗಲಿದೆ ಎಂದಿದ್ದಾರೆ.

'ಎಕ್ಸೈಸ್ ಸುಂಕ ಇಳಿಕೆ ಚಿಂತನೆ ಇಲ್ಲ'

ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಕಡಿತ ಮಾಡುವ ಯಾವುದೇ ಆಲೋಚನೆ ಸರ್ಕಾರಕ್ಕೆ ಇಲ್ಲ ಎಂದು ಅಧಿಕಾರಿ ತಿಳಿಸಿದ್ದಾರೆ.

ಕಚ್ಚಾ ತೈಲ ದರ ಏರಿಕೆ ಕಾಣುತ್ತಿರುವುದು ಆತಂಕ ಮೂಡಿಸಿದೆ. ಹೀಗಿದ್ದರೂ, ತೈಲ ಮಾರಾಟ ಕಂಪನಿಗಳ ದೃಷ್ಟಿಯಿಂದ ಸಹನೀಯ ಮಟ್ಟದಲ್ಲಿಯೇ ಇದೆ. ಹೀಗಾಗಿ ನೀತಿಯಲ್ಲಿ ಯಾವುದೇ ಹೊಂದಾಣಿಕೆ ಮಾಡುವ ಅಗತ್ಯ ಈಗ ಕಂಡುಬರುತ್ತಿಲ್ಲ. ಕಚ್ಚಾ ತೈಲ ದರವು ಬ್ಯಾರಲ್‌ಗೆ 80–85 ಡಾಲರ್ ಇದ್ದರೆ ಪರವಾಗಿಲ್ಲ. ಬ್ಯಾರಲ್‌ಗೆ 90 ಡಾಲರ್‌ವರೆಗೆ ಇದ್ದರೂ ಯಾವುದೇ ಸಮಸ್ಯೆ ಇಲ್ಲ. ಅದನ್ನೂ ಮೀರಿದರೆ ಹಣದುಬ್ಬರ ಮತ್ತು ಇನ್ನಿತರ ವಿಷಯಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುತ್ತದೆ ಎಂದು ಅವರು ವಿವರಿಸಿದ್ದಾರೆ.

ಕಚ್ಚಾ ತೈಲ ದರವು ಸದ್ಯ ಬ್ಯಾರಲ್‌ಗೆ 85 ಡಾಲರ್‌ನ ಮಟ್ಟದಲ್ಲಿದೆ. ಬಜೆಟ್ ಸಂದರ್ಭದಲ್ಲಿ ಬ್ಯಾರಲ್‌ಗೆ 70 ಡಾಲರ್‌ನಿಂದ 73 ಡಾಲರ್‌ನ ಮಟ್ಟದಲ್ಲಿ ಇತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100 ಮೊಟ್ಟೆಗೆ	₹465
	12 ಮೊಟ್ಟೆಗೆ	₹65
ಮೈಸೂರು	100 ಮೊಟ್ಟೆಗೆ	₹467

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹366-535

ದ್ವಿತಳಿ (ಬಿ.ವಿ) ₹400-666

'ನವೆಂಬರ್ ಅಂತ್ಯಕ್ಕೆ 16ನೇ ಹಣಕಾಸು ಆಯೋಗ ರಚನೆ'

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು 16ನೇ ಹಣಕಾಸು ಆಯೋಗವನ್ನು ನವೆಂಬರ್ ಅಂತ್ಯದ ವೇಳೆಗೆ ರಚನೆ ಮಾಡುವ ನಿರೀಕ್ಷೆ ಇದೆ ಎಂದು ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಅವರು ಹೇಳಿದ್ದಾರೆ.

2026ರ ಏಪ್ರಿಲ್ 1ರಿಂದ ಐದು ಹಣಕಾಸು ವರ್ಷಗಳ ಅವಧಿಗೆ ಕೇಂದ್ರ ಸರ್ಕಾರ ಸಂಗ್ರಹಿಸುವ ತೆರಿಗೆ ವರಮಾನವನ್ನು ರಾಜ್ಯಗಳಿಗೆ ಎಷ್ಟು ಪ್ರಮಾಣದಲ್ಲಿ ಹಂಚಿಕೆ ಮಾಡಬೇಕು ಎನ್ನುವುದನ್ನೂ ಒಳಗೊಂಡು ಹಲವು ವಿಷಯಗಳಲ್ಲಿ ಆಯೋಗವು ಶಿಫಾರಸು ನೀಡಲಿದೆ.

15ನೇ ಹಣಕಾಸು ಆಯೋಗವು 2021–22ರಿಂದ 2025–26ರವರೆಗಿನ ಐದು ಹಣಕಾಸು ವರ್ಷಗಳಿಗೆ ಸಂಬಂಧಿಸಿದ ವರದಿಯನ್ನು 2020ರ ನವೆಂಬರ್ 9ರಂದು ಸಲ್ಲಿಸಿದೆ.

2021–22ರಿಂದ 2025–26ರವರೆಗೆ ಕೇಂದ್ರ ಸರ್ಕಾರ ಸಂಗ್ರಹಿಸುವ ತೆರಿಗೆ ವರಮಾನದಲ್ಲಿ ರಾಜ್ಯಗಳಿಗೆ ಶೇಕಡ 42ರಷ್ಟು ಪಾಲು ನೀಡುವಂತೆ ಎನ್.ಕೆ. ಸಿಂಗ್ ನೇತೃತ್ವದ 15ನೇ ಹಣಕಾಸು ಆಯೋಗವು ಶಿಫಾರಸು ಮಾಡಿದೆ. 14ನೇ ಆಯೋಗವು ಮಾಡಿದ್ದ ಶಿಫಾರಸಿನಲ್ಲಿಯೂ, ಇದೇ ಪ್ರಮಾಣದಲ್ಲಿ ಹಂಚಿಕೆ ಆಗಬೇಕು ಎಂದು ಹೇಳಲಾಗಿತ್ತು.

ಜಲ ವಿವಾದ: 23ಕ್ಕೆ ಸರ್ವಪಕ್ಷ ಸಭೆ

ಒಂದನೇ ಪುಟದಿಂದ

'ಈ ವರ್ಷ ಸರಿಯಾದ ಪ್ರಮಾಣದಲ್ಲಿ ಮಳೆ ಬಿದ್ದಿಲ್ಲ. ಹೀಗಾಗಿ, ರಾಜ್ಯದ ಹಾಗೂ ರೈತರ ಹಿತ ಕಾಯುವುದು ನಮ್ಮ ಕರ್ತವ್ಯ. ರಾಜ್ಯದಲ್ಲಿನ ಅಣೆಕಟ್ಟುಗಳಲ್ಲಿ ನೀರಿನ ಪ್ರಮಾಣ ಕುಸಿದಿದೆ' ಎಂದರು.

'ಕಾವೇರಿ ನದಿಯಿಂದ ನೀರು ಹರಿಸುವಂತೆ ಆದೇಶಿಸಲು ಕೋರಿ ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಗೆ ಪ್ರತಿಯಾಗಿ ಸೋಮವಾರ (ಆಗಸ್ಟ್ 21) ನಾವು ಮನವಿ ಸಲ್ಲಿಸುತ್ತೇವೆ. ಈಗಾಗಲೇ ನೀರು ಹರಿಸುವ ನಿರ್ಧಾರ ಮರು ಪರಿಶೀಲಿಸಲು ಪ್ರಾಧಿಕಾರಕ್ಕೆ ಮನವಿ ಮಾಡಿದ್ದೇವೆ. ರೈತರ ಹಿತ ಕಾಯಬೇಕಿದೆ. ಜೊತೆಗೆ, ಕೋರ್ಟ್ ನಿರ್ಧಾರಕ್ಕೂ ಆದ್ಯತೆ ನೀಡಬೇಕಿದೆ.

'ಬಿಜೆಪಿ ಹಾಗೂ ಜೆಡಿಎಸ್‌ನವರು ರಾಜಕೀಯ ಮಾಡಲು ಮುಂದಾಗಿದ್ದಾರೆ. ಅವರಿಗೆ ತಮ್ಮ ಕಾಲದಲ್ಲಿ ಏನಾಗಿತ್ತು ಎಂಬ ಅರಿವಿಲ್ಲ. ಇಂತಹ ವಿಷಯದಲ್ಲಿ ರಾಜಕೀಯ ಮಾಡಬಾರದು ಎಂದೇ ಸರ್ವಪಕ್ಷ ಸಭೆ ಕರೆಯಲಾಗಿದೆ' ಎಂದರು.

ಸುಧಾ, ಮಯೂರ ಓದಿರಿ

ನಿಮ್ಮ ಉಳಿತಾಯ ಹೆಚ್ಚಿಸುವುದು ಹೇಗೆ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಹಣಕಾಸು ನಿರ್ವಹಣೆಯಲ್ಲಿ ಮೊದಲ ಹೆಜ್ಜೆ ಉಳಿತಾಯ. ಯಾರು ಉಳಿತಾಯ ಮಾಡಿ ಹೂಡಿಕೆ ಮಾಡುತ್ತಾರೋ ಅವರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಮನೆ ಖರೀದಿ, ಮಕ್ಕಳ ಶಿಕ್ಷಣ, ಕಾರು ಖರೀದಿ, ಮಕ್ಕಳ ಮದುವೆ, ನಿವೃತ್ತಿ ಜೀವನ ಹೀಗೆ ಪ್ರತಿಯೊಂದಕ್ಕೂ ಉಳಿತಾಯದ ಜೊತೆ ಹೂಡಿಕೆ ಮಾಡುವ ಅಭ್ಯಾಸ ಬೇಕು. ಎಷ್ಟು ಸಮರ್ಪಕವಾಗಿ ನಾವು ಉಳಿಸಿ ಹಣ ಬೆಳೆಸುತ್ತೇವೆಯೋ ಅಷ್ಟು ಉತ್ತಮ ರೀತಿಯಲ್ಲಿ ಸಂಪತ್ತು ಸೃಷ್ಟಿಯಾಗುತ್ತದೆ.

ಉಳಿತಾಯ ಹೆಚ್ಚಿಸಲು ಇರುವ ಕೆಲವು ಸರಳ ಮಾರ್ಗೋಪಾಯಗಳ ಬಗ್ಗೆ ತಿಳಿಯೋಣ.

1. ಗುಣಮಟ್ಟ, ಬೆಲೆಗೆ ಆದ್ಯತೆ ಕೊಡಿ: ಉತ್ತಮ ಗುಣಮಟ್ಟದ ವಸ್ತುಗಳನ್ನು ಸರಿಯಾದ ಬೆಲೆಗೆ ಖರೀದಿಸಬೇಕು ಎನ್ನುವ ಲೆಕ್ಕಾಚಾರಕ್ಕೆ ನಾವು ಅಂಟಿಕೊಳ್ಳಬೇಕೇ ಹೊರತು ಬ್ರಾಂಡೆಡ್ ಉತ್ಪನ್ನಗಳೇ ಬೇಕು ಎಂಬ ನಿಲುವು ಸರಿಯಲ್ಲ. ಕೆಲವರಿಗೆ ಬಟ್ಟೆ, ವಾಚ್, ಶೂ, ದಿನಸಿ... ಎಲ್ಲವೂ ಬ್ರಾಂಡೆಡ್ ಆಗಬೇಕು. ಎಲ್ಲದಕ್ಕೂ 'ಬ್ರಾಂಡ್' ಎನ್ನದೇ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಗುಣಮಟ್ಟಕ್ಕಷ್ಟೇ ಒತ್ತು ಕೊಟ್ಟರೆ ಹಣ ಉಳಿಸಲು ಸಾಧ್ಯ.

2. ಬೇಡದ ಚಂದಾದಾರಿಕೆಗಳನ್ನು ನಿಲ್ಲಿಸಿ: ಎಷ್ಟೋ ಸಂದರ್ಭಗಳಲ್ಲಿ ನಾವು ಐದಾರು ಒಟಿಟಿ ಚಂದಾದಾರಿಕೆ ಪಡೆದಿರುತ್ತೇವೆ. ಆದರೆ ಒಂದೆರಡನ್ನು ಮಾತ್ರ ಬಳಸುತ್ತಿರುತ್ತೇವೆ. ಒಂದು ಒಟಿಟಿ ಪ್ಲಾಟ್‌ಫಾರಂನ ವಾರ್ಷಿಕ ಶುಲ್ಕ ಸುಮಾರು ₹1,500ರಿಂದ ₹2,000ವರೆಗೂ ಇರುತ್ತದೆ. ಇಷ್ಟು ದುಬಾರಿ ಶುಲ್ಕದ ಒಟಿಟಿಗಳನ್ನು ಬಳಸದಿದ್ದರೂ ಸ್ವಯಂಚಾಲಿತವಾಗಿ ಕ್ರೆಡಿಟ್ ಕಾರ್ಡ್ ಅಥವಾ ಡೆಬಿಟ್ ಕಾರ್ಡ್‌ನಿಂದ ಹಣ ಕಡಿತವಾಗುತ್ತಿದ್ದರೆ ಅದು ಅನಗತ್ಯ ವೆಚ್ಚವಲ್ಲವೇ? ಹಾಗಾಗಿ ಯಾವ ಚಂದಾದಾರಿಕೆ ಬಳಸುತ್ತಿಲ್ಲವೋ ಅದನ್ನು ಕೂಡಲೇ ನಿಲ್ಲಿಸಿ.

3. ಸಮೂಹ ಸಾರಿಗೆ ಬಳಸಿ: ಸಣ್ಣ–ಪುಟ್ಟ ಪ್ರಯಾಣಕ್ಕೂ ಆಟೊ ರಿಕ್ಷಾ, ಕ್ಯಾಬ್ ಬಳಸುವುದನ್ನು ಕಡಿಮೆ ಮಾಡಿ. ರೈಲು, ಬಸ್, ಮೆಟ್ರೊ ಬಳಸುವುದನ್ನು ರೂಢಿಸಿಕೊಳ್ಳಿ. ಆಟೊ ರಿಕ್ಷಾ ಅಥವಾ ಕ್ಯಾಬ್ ಪ್ರಯಾಣಕ್ಕೆ ಸಾಧ್ಯವಾದಲ್ಲೆಲ್ಲ ಕಡಿವಾಣ ಹಾಕಿ, ಸಮೂಹ ಸಾರಿಗೆ ಬಳಕೆಯಿಂದ ಉಳಿತಾಯವಾಗುವ ಹಣವನ್ನು ಪ್ರತಿ ತಿಂಗಳು ಮ್ಯೂಚುವಲ್ ಫಂಡ್ ಎಸ್ಐಪಿಯಲ್ಲಿ ತೊಡಗಿಸಿ. ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಮಾಡುವ ಹೂಡಿಕೆಗಳಿಗೆ ಶೇ 12ರಷ್ಟು ವಾರ್ಷಿಕ ಬಡ್ಡಿ ಲಾಭ ಸಿಗಬಹುದು. ಉಳಿತಾಯ ಮಾಡಿದ ಹಣವನ್ನು ಹೂಡಿಕೆ ಮಾಡುವುದರಿಂದ ಎಷ್ಟು ಮೊತ್ತದ ಹಣ ಪೇರಿಸಬಹುದು ಎಂಬ ಸರಳ ಲೆಕ್ಕವೊಂದನ್ನು ಹಾಕಿ. ಆಗ ಅದರಿಂದ ಸಿಗುವ ಪ್ರಯೋಜನ ಎಷ್ಟು ಎಂಬುದರ ಚಿತ್ರಣವೊಂದು ಸಿಗುತ್ತದೆ!

4. ಆನ್‌ಲೈನ್ ಖರೀದಿ: ವಿವಿಧ ಹೆಸರುಗಳಲ್ಲಿ ಆನ್‌ಲೈನ್ ಮಳಿಗೆಗಳಲ್ಲಿ ಖರೀದಿ ಉತ್ಸವಗಳು ನಡೆಯುತ್ತಿರುತ್ತವೆ. ಇಂತಹ ಸಂದರ್ಭಗಳಲ್ಲಿ ಗ್ರಾಹಕರು ತಮಗೆ ಯಾವ ವಸ್ತು ಅಗತ್ಯ ಎಂಬುದನ್ನು ಚಿಂತಿಸದೆ ಆಫರ್ ಇರುವ ವಸ್ತುಗಳ ಖರೀದಿಗೆ ಮುಂದಾಗುತ್ತಾರೆ. ₹1 ಸಾವಿರದ ಉತ್ಪನ್ನ ₹500ಕ್ಕೆ ಸಿಗುತ್ತದೆ ಎಂದಾಕ್ಷಣ ಆ ಉತ್ಪನ್ನ ತಮಗೆ ಅಗತ್ಯವೋ, ಅದು ಉಪಯೋಗಕ್ಕೆ ಬರುತ್ತದೆಯೋ ಎನ್ನುವುದನ್ನು ಆಲೋಚನೆ ಮಾಡದೆ ಖರೀದಿ ಮಾಡುತ್ತಾರೆ. ಯಾವುದೇ ಖರೀದಿಗೆ ಮೊದಲು ಶಾಪಿಂಗ್ ಲಿಸ್ಟ್ ಸಿದ್ಧಪಡಿಸಿಕೊಳ್ಳಬೇಕು. ಅದರಲ್ಲಿನ ಉತ್ಪನ್ನಗಳನ್ನು ಹೊರತುಪಡಿಸಿ ಬೇರೆ ಉತ್ಪನ್ನಗಳನ್ನು ಖರೀದಿಸಬಾರದು. ಶಾಪಿಂಗ್ ಲಿಸ್ಟ್ ಮಾಡುವಾಗ ನಾವು ಅಗತ್ಯ ವಸ್ತುಗಳ ಪಟ್ಟಿ ಮಾಡಿರುತ್ತೇವೆ. ಅಗತ್ಯ ವಸ್ತುಗಳ ಪಟ್ಟಿ ಮಾಡಿಕೊಳ್ಳದೆ ನೇರವಾಗಿ ಖರೀದಿಗೆ ಹೋದಾಗ ಅಗತ್ಯವಿಲ್ಲದ ವಸ್ತುಗಳನ್ನೂ ಖರೀದಿಸುವ ಸಾಧ್ಯತೆ ಇರುತ್ತದೆ.

5. ಕೂಪನ್ ಸೈಟ್ ಲಾಭ: ವಿವಿಧ ಉತ್ಪನ್ನಗಳನ್ನು ಖರೀದಿಸಲು ಡಿಸ್ಕೌಂಟ್ ಕೂಪನ್‌ಗಳನ್ನು ಕೊಡುವ ವೆಬ್‌ಸೈಟ್‌ಗಳಿವೆ. ಅಂತಹ ವೇದಿಕೆಗಳನ್ನು ಹಣ ಉಳಿತಾಯಕ್ಕೆ ಬಳಸಿಕೊಳ್ಳಿ. ಹೋಟೆಲ್ ಊಟ ಖರೀದಿಸಲು, ಫುಡ್ ಡೆಲಿವರಿ ಪಡೆಯಲು, ಔಷಧಿ ತರಿಸಲು, ಬಟ್ಟೆ ಖರೀದಿ, ಎಲೆಕ್ಟ್ರಾನಿಕ್ಸ್ ಉತ್ಪನ್ನ ಖರೀದಿ ಹೀಗೆ ಬಹುತೇಕ ಖರೀದಿಗಳಿಗೆ ರಿಯಾಯಿತಿ ಕೂಪನ್‌ಗಳು ಸಿಗುತ್ತವೆ.

6. ಮನೆ ಊಟ–ತಿಂಡಿ: ಉದ್ಯೋಗದಲ್ಲಿರುವ ಅನೇಕರು ಮನೆಯಿಂದ ತಿಂಡಿ, ಊಟ ತೆಗೆದುಕೊಂಡು ಕೆಲಸಕ್ಕೆ ಹೋಗುವುದಿಲ್ಲ. ಹೋಟೆಲ್ ಊಟ ಮಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಆದರೆ ಹೀಗೆ ಹೊರಗೆ ತಿನ್ನುವುದರಿಂದ ದುಡ್ಡು ಕರಗುವ ಜೊತೆಗೆ ಆರೋಗ್ಯಕ್ಕೂ ಹೊಡೆತ ಬೀಳಬಹುದು. ಮೂರು ಹೊತ್ತಿನ ಊಟ, ತಿಂಡಿಗೆ ದಿನಕ್ಕೆ ₹300 ಖರ್ಚಾಗುತ್ತದೆ ಎಂದಾದರೆ ತಿಂಗಳಿಗೆ ₹9,000 ಆಗುತ್ತದೆ. ಇದರಲ್ಲಿ ಅರ್ಧದಷ್ಟು ವ್ಯಯಿಸಿದರೆ ಸಾಕು, ಮನೆಯಲ್ಲೇ ತಯಾರಿಸಿದ ಗುಣಮಟ್ಟದ ರುಚಿಕರ ಆಹಾರ ಸೇವಿಸಬಹುದು. ಅನಿವಾರ್ಯ ಎಂದಾಗ ಹೋಟೆಲ್ ಅವಲಂಬನೆ ತಪ್ಪಲ್ಲ. ಆದರೆ ಅದೇ ಒಂದು ಚಟವಾಗಬಾರದು.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಮಾರಾಟದ ಒತ್ತಡಕ್ಕೆ ಕುಸಿದ ಪೇಟೆ

ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ನಾಲ್ಕನೇ ವಾರವೂ ಕುಸಿತ ಕಂಡಿವೆ. ಆಗಸ್ಟ್ 18ಕ್ಕೆ ಕೊನೆಗೊಂಡ ವಾರದಲ್ಲಿ ನಿಫ್ಟಿ ಮತ್ತು ಸೆನ್ಸೆಕ್ಸ್ ಸೂಚ್ಯಂಕಗಳು ಇಳಿಕೆಯಾಗಿವೆ. 64,948 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.57ರಷ್ಟು ಕುಸಿದಿದೆ. 19,310 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ 0.60ರಷ್ಟು ತಗ್ಗಿದೆ.

ಹಣದುಬ್ಬರ ಹೆಚ್ಚಳ, ಜಾಗತಿಕವಾಗಿ ಬ್ಯಾಂಕ್ ಬಡ್ಡಿ ದರ ಏರಿಕೆ, ಚೀನಾ ಅರ್ಥ ವ್ಯವಸ್ಥೆಯಲ್ಲಿ ಹಿಂಜರಿಕೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಮೇಲೆ ಪರಿಣಾಮ ಬೀರಿವೆ. ವಲಯವಾರು ಪ್ರಗತಿಯಲ್ಲಿ ಬಿಎಸ್ಇ ಲೋಹ ಸೂಚ್ಯಂಕ ಶೇ 4ರಷ್ಟು, ಟೆಲಿಕಾಂ ಶೇ 2ರಷ್ಟು, ಅನಿಲ ಮತ್ತು ತೈಲ ಸೂಚ್ಯಂಕ ಶೇ 1.2ರಷ್ಟು ಕುಸಿದಿವೆ. ಬಿಎಸ್ಇ ಪವರ್ ಸೂಚ್ಯಂಕ ಶೇ 0.5ರಷ್ಟು ಹೆಚ್ಚಳ ಕಂಡಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಕಳೆದ ವಾರ ₹3,379.31 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹3,892.3 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್ಇ ಲಾರ್ಜ್ ಕ್ಯಾಪ್‌ನಲ್ಲಿ ನೈಕಾ, ಇಂಡಸ್ ಟವರ್ಸ್, ಇನ್ಫೊ ಎಜ್ ಇಂಡಿಯಾ, ಹಿಂಡಾಲ್ಕೊ ಇಂಡಸ್ಟ್ರೀಸ್, ಮಾರಿಕೊ, ಜೊಮಾಟೊ ಮತ್ತು ಜೆಎಸ್‌ಡಬ್ಲ್ಯು ಸ್ಟೀಲ್ ಶೇ 4ರಿಂದ ಶೇ 9ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಪ್ರೋಕ್ಟರ್ ಆ್ಯಂಡ್ ಗ್ಯಾಂಬಲ್ ಹೆಲ್ತ್ ಕೇರ್ ಲಿ., ಆಲ್ ಕಾರ್ಗೊ ಟರ್ಮಿನಲ್ಸ್ ಲಿ., ಸೋನಾಲಿಸ್ ಕನ್ಸ್ಯೂಮರ್ ಪ್ರಾಡಕ್ಟ್ಸ್ ಸೇರಿ ಕೆಲವು ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಜಾಗತಿಕ ವಿದ್ಯಮಾನಗಳು ಮತ್ತು ದೇಶಿ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಇನ್ವಾಯ್ಸ್ ಅಪ್ಲೋಡ್ ಮಾಡಿದವರಿಗೆ ಲಕ್ಕಿ ಡ್ರಾದಲ್ಲಿ ಪಾಲ್ಗೊಳ್ಳಲು ಅವಕಾಶ

ಜಿಎಸ್‌ಟಿ: ₹1 ಕೋಟಿವರೆಗೆ ಬಹುಮಾನ

ನವದೆಹಲಿ (ಪಿಟಿಐ): ಖರೀದಿಸಿದ ಉತ್ಪನ್ನ ಅಥವಾ ಪಡೆದ ಸೇವೆಗೆ ಸಿಗುವ ಜಿಎಸ್‌ಟಿ ಇನ್ವಾಯ್ಸ್‌ಅನ್ನು ಮೊಬೈಲ್ ಆ್ಯಪ್ ಮೂಲಕ ಅಪ್ಲೋಡ್ ಮಾಡುವ ಗ್ರಾಹಕರಿಗೆ ₹1 ಕೋಟಿ ಬಂಪರ್ ಬಹುಮಾನ ಪಡೆಯುವ ಅವಕಾಶ ಸಿಗಬಹುದು!

ಜಿಎಸ್‌ಟಿ ಇನ್ವಾಯ್ಸ್ ಅಪ್ಲೋಡ್ ಮಾಡುವವರಿಗೆ ಬಹುಮಾನ ನೀಡುವ 'ಮೇರಾ ಬಿಲ್ ಮೇರಾ ಅಧಿಕಾರ್' ಯೋಜನೆಗೆ ಕೇಂದ್ರ ಸರ್ಕಾರ ಶೀಘ್ರದಲ್ಲಿಯೇ ಚಾಲನೆ ನೀಡುವ ಸಾಧ್ಯತೆ ಇದೆ. ಉತ್ಪನ್ನವೊಂದನ್ನು ಖರೀದಿಸಿದಾಗ ಅಥವಾ ಸೇವೆಯೊಂದನ್ನು ಪಡೆದಾಗ ಜಿಎಸ್‌ಟಿ ಇನ್ವಾಯ್ಸ್ ಪಡೆಯುವುದನ್ನು ಉತ್ತೇಜಿಸುವ ಈ ಯೋಜನೆಯ ಅಡಿಯಲ್ಲಿ, ₹10 ಲಕ್ಷದಿಂದ ₹1 ಕೋಟಿವರೆಗೆ ನಗದು ಬಹುಮಾನ ನೀಡಲಾಗುತ್ತದೆ.

ಮುಖ್ಯಾಂಶಗಳು

- ಯೋಜನೆಗೆ ಈ ತಿಂಗಳಲ್ಲೇ ಚಾಲನೆ ಸಿಗುವ ಸಾಧ್ಯತೆ
- ಜಿಎಸ್‌ಟಿ ಇನ್ವಾಯ್ಸ್ ಕೇಳಿ ಪಡೆಯುವುದನ್ನು ಉತ್ತೇಜಿಸುವ ಯೋಜನೆ
- ಪ್ರತಿ ತಿಂಗಳು ಅಥವಾ ಮೂರು ತಿಂಗಳಿಗೊಮ್ಮೆ ಲಕ್ಕಿ ಡ್ರಾ

ಪ್ರತಿ ತಿಂಗಳು ಅಥವಾ ತ್ರೈಮಾಸಿಕಕ್ಕೆ ಒಮ್ಮೆ ಈ ಬಹುಮಾನ ನೀಡುವ ಸಾಧ್ಯತೆ ಇದೆ. ಉತ್ಪನ್ನಗಳ ಮಾರಾಟಗಾರರಿಗೆ ಅಥವಾ ವಿವಿಧ ಸೇವೆಗಳನ್ನು ಒದಗಿಸುವವರಿಗೆ ಪಾವತಿಸುವ ಮೊತ್ತಕ್ಕೆ ಪ್ರತಿಯಾಗಿ ಪಡೆಯುವ ಇನ್ವಾಯ್ಸ್ ಅನ್ನು ಆ್ಯಪ್ ಮೂಲಕ ಅಪ್ಲೋಡ್ ಮಾಡಬೇಕು. 'ಮೇರಾ ಬಿಲ್ ಮೇರಾ ಅಧಿಕಾರ್' ಹೆಸರಿನ ಆ್ಯಪ್, ಆ್ಯಂಡ್ರಾಯ್ಡ್ ಹಾಗೂ ಐಒಎಸ್ ಕಾರ್ಯಾಚರಣೆ ವ್ಯವಸ್ಥೆ ಇರುವ ಸ್ಮಾರ್ಟ್‌ಫೋನ್‌ಗಳಿಗೆ ಲಭ್ಯವಾಗಲಿದೆ.

ಆ್ಯಪ್ ಮೂಲಕ ಅಪ್ಲೋಡ್ ಮಾಡುವ ಇನ್ವಾಯ್ಸ್‌ನಲ್ಲಿ ಮಾರಾಟಗಾರರ ಜಿಎಸ್‌ಟಿಐಎನ್ ಸಂಖ್ಯೆ, ಇನ್ವಾಯ್ಸ್ ಸಂಖ್ಯೆ, ಪಾವತಿಸಿದ ಮೊತ್ತ ಹಾಗೂ ತೆರಿಗೆಯ ಮೊತ್ತ ಸ್ಪಷ್ಟವಾಗಿರಬೇಕು. ವ್ಯಕ್ತಿಯೊಬ್ಬ ಒಂದು ತಿಂಗಳಲ್ಲಿ ಗರಿಷ್ಠ 25 ಇನ್ವಾಯ್ಸ್ ಅಪ್ಲೋಡ್ ಮಾಡಬಹುದು. ₹200ಕ್ಕಿಂತ ಹೆಚ್ಚಿನ ಖರೀದಿ ಮೌಲ್ಯದ ಇನ್ವಾಯ್ಸ್‌ಗಳನ್ನು ಬಹುಮಾನಕ್ಕೆ ಪರಿಗಣಿಸಲಾಗುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಂಪ್ಯೂಟರ್ ನೆರವಿನಿಂದ ಪ್ರತಿ ತಿಂಗಳು 500ಕ್ಕೂ ಹೆಚ್ಚು ಲಕ್ಕಿ ಡ್ರಾ ನಡೆಸಿ, ಲಕ್ಷಾಂತರ ರೂಪಾಯಿ ಬಹುಮಾನ ನೀಡಲಾಗುತ್ತದೆ. ಪ್ರತಿ ತ್ರೈಮಾಸಿಕದಲ್ಲಿ ಎರಡು ಲಕ್ಕಿ ಡ್ರಾ ಪ್ರತ್ಯೇಕವಾಗಿ ನಡೆಸಲಾಗುತ್ತದೆ. ಬಹುಮಾನದ ಮೊತ್ತ ₹1 ಕೋಟಿವರೆಗೂ ಇರಬಹುದು ಎಂದು ಅಧಿಕಾರಿ ಹೇಳಿದ್ದಾರೆ. ಈ ಯೋಜನೆಯು ಅಂತಿಮಗೊಳ್ಳುವ ಹಂತದಲ್ಲಿದೆ. ಇದನ್ನು ಈ ತಿಂಗಳಲ್ಲಿಯೇ ಆರಂಭಿಸುವ ಸಾಧ್ಯತೆ ಇದೆ ಎಂದು ಗೊತ್ತಾಗಿದೆ. 'ಮೇರಾ ಬಿಲ್ ಮೇರಾ ಅಧಿಕಾರ್' ಯೋಜನೆಯು ಗ್ರಾಹಕರು ಜಿಎಸ್‌ಟಿ ಇನ್ವಾಯ್ಸ್‌ಅನ್ನು ಕೇಳಿ ಪಡೆಯುವುದನ್ನು ಉತ್ತೇಜಿಸಲಿದೆ. ಗ್ರಾಹಕರು ತಮ್ಮ ಹೆಸರು ನೋಂದಾಯಿಸಿಕೊಂಡು, ಜಿಎಸ್‌ಟಿ ಇನ್ವಾಯ್ಸ್ ಅಪ್ಲೋಡ್ ಮಾಡಲು ಅಗತ್ಯವಿರುವ ತಂತ್ರಜ್ಞಾನವನ್ನು ಜಿಎಸ್‌ಟಿ ನೆಟ್‌ವರ್ಕ್ ಅಭಿವೃದ್ಧಿಪಡಿಸಿದೆ.

ಕೆನರಾ ಡಿಜಿಟಲ್ ರುಪಿ ಆ್ಯಪ್‌ನಲ್ಲಿ ಯುಪಿಐ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆನರಾ ಡಿಜಿಟಲ್ ರುಪಿ' ಆ್ಯಪ್‌ನಲ್ಲಿ ಯುಪಿಐ ಮೂಲಕ ಡಿಜಿಟಲ್ ಕರೆನ್ಸಿಯನ್ನು ಪಾವತಿಸುವ ಸೌಲಭ್ಯಕ್ಕೆ ಕೆನರಾ ಬ್ಯಾಂಕ್ ಚಾಲನೆ ನೀಡಿದೆ.

ಇದರಿಂದಾಗಿ ಗ್ರಾಹಕರು 'ಕೆನರಾ ಡಿಜಿಟಲ್ ರುಪಿ' ಆ್ಯಪ್ ಮೂಲಕ ವ್ಯಾಪಾರಿಗಳ ಯುಪಿಐ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಡಿಜಿಟಲ್ ರೂಪಾಯಿ ಮೂಲಕವೂ ಪಾವತಿಸಬಹುದು.

ಆರ್‌ಬಿಐನ ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿಯ (ಸಿಬಿಡಿಸಿ) ಪ್ರಾಯೋಗಿಕ ಯೋಜನೆಯ ಭಾಗವಾಗಿ ಇದನ್ನು ಬಿಡುಗಡೆ ಮಾಡಿದೆ. ಸರ್ಕಾರಿ ಮತ್ತು ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ಈ ಸೌಲಭ್ಯ ಕಲ್ಪಿಸಿರುವ ಮೊದಲ ಬ್ಯಾಂಕ್ ತಾನು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.



ಕೇರಳದ ಕೊಚ್ಚಿಯಲ್ಲಿ ಕಲಾವಿದರು ಭಾನುವಾರ ಓಣಂ ಹಬ್ಬದ ಆರಂಭವನ್ನು ಸೂಚಿಸುವ ಅತ್ತಂ ಮೆರವಣಿಗೆ ನಡೆಸಿದರು –ಪಿಟಿಐ ಚಿತ್ರ

ಚಂದ್ರಯಾನ–3 ಲ್ಯಾಂಡಿಂಗ್ ನೇರ ಪ್ರಸಾರ

23ರ ಸಂಜೆ 6.04ಕ್ಕೆ ಚಂದ್ರ ಸ್ಪರ್ಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಮಹತ್ವಾಕಾಂಕ್ಷೆಯ ಚಂದ್ರಯಾನ–3 ರ ಚಂದ್ರಸ್ಪರ್ಶ ಇದೇ 23 ರಂದು ಭಾರತೀಯ ಕಾಲಮಾನದ ಪ್ರಕಾರ ಸಂಜೆ 6.04 ಕ್ಕೆ ಸರಿಯಾಗಿ ಸಮಯ ನಿಗದಿಪಡಿಸಲಾಗಿದೆ.

ಇದಕ್ಕೆ ಪೂರಕವಾಗಿ ಭಾನುವಾರ ಲ್ಯಾಂಡರ್‌ನ ವೇಗ ತಗ್ಗಿಸಿ, ಚಂದ್ರನ ಮೇಲ್ಮೈಗೆ ಅತ್ಯಂತ ಸನಿಹದಲ್ಲಿ ಅಂದರೆ, 25 ಕಿ.ಮೀ ಕಕ್ಷೆಗೆ ತಂದು ನೆಲೆಗೊಳಿಸಲಾಗಿದೆ. ಲ್ಯಾಂಡರ್ ಈಗ 25 ಕಿ.ಮೀ x 134 ಕಕ್ಷೆಯಲ್ಲಿದೆ.

ನೋದನ ಘಟಕದಿಂದ (ಪ್ರೊಪಲ್ಷನ್ ಮಾಡ್ಯೂಲ್) ಪ್ರತ್ಯೇಕಗೊಂಡ ನಂತರ ಎರಡು ಹಂತಗಳಲ್ಲಿ ಲ್ಯಾಂಡರ್‌ನ ವೇಗ ತಗ್ಗಿಸುವ ಕಾರ್ಯ ನಡೆದಿದೆ. ಈಗ ಆಂತರಿಕ ತಪಾಸಣೆ ಕಾರ್ಯ ನಡೆಯುತ್ತಿದ್ದು, ಇಳಿದಾಣದ (ಲ್ಯಾಂಡಿಂಗ್ ಸ್ಥಳ) ಪ್ರದೇಶದಲ್ಲಿ ಸೂರ್ಯೋದಯಕ್ಕಾಗಿ ನಿರೀಕ್ಷಿಸಲಾಗುತ್ತಿದೆ. ಬುಧವಾರ ಸಂಜೆ 5.45 ಕ್ಕೆ ಸರಿಯಾಗಿ ಕಕ್ಷೆಯಿಂದ ಲ್ಯಾಂಡರ್ ಅನ್ನು ಕೆಳಗಿಳಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದು ಇಸ್ರೊ ತಿಳಿಸಿದೆ.

ಲ್ಯಾಂಡರ್(ವಿಕ್ರಮ್) ಸಂಜೆ 6.04 ಕ್ಕೆ ಚಂದ್ರ ಸ್ಪರ್ಶ ಮಾಡಲಿದೆ. ಈ ಇಡೀ ಪ್ರಕಿಯೆಯ ನೇರ ವಿಡಿಯೊ ಪ್ರಸಾರ ಸಂಜೆ 5.27 ಕ್ಕೆ ಆರಂಭವಾಗಲಿದೆ. ಇಸ್ರೊ ವೆಬ್‌ಸೈಟ್, ಯೂಟ್ಯೂಬ್ ಚಾನೆಲ್, ಫೇಸ್‌ಬುಕ್ ಪೇಜ್, ಡಿಡಿ ನ್ಯಾಷನಲ್ ಚಾನೆಲ್‌ನಲ್ಲಿ ನೇರ ಪ್ರಸಾರವಿರುತ್ತದೆ. ಎಲ್ಲ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗಾಗಿ ನೇರ ಪ್ರಸಾರದ ವೀಕ್ಷಣೆಗೆ ವ್ಯವಸ್ಥೆ ಮಾಡಬೇಕು. ಇದಕ್ಕೆ ಪೂರಕವಾಗಿ ಸೋಮವಾರದಿಂದ ಪ್ರಚಾರ ನೀಡಬೇಕು ಎಂದು ಇಸ್ರೊ ಮನವಿ ಮಾಡಿದೆ.

ಇಸ್ರೊ ವೆಬ್‌ಸೈಟ್ https://isro.gov.in, ಯೂಟ್ಯೂಬ್ https://youtube.com/watch?v=DLA_64yz8Ss... ಫೇಸ್‌ಬುಕ್ ಪೇಜ್ https://facebook.com/ISRO

ಪಾಕಿಸ್ತಾನ: ಇಮ್ರಾನ್ ಆಪ್ತ ಕುರೇಶಿ ಬಂಧನ

ಇಸ್ಲಾಮಾಬಾದ್ (ಪಿಟಿಐ): ರಾಜತಾಂತ್ರಿಕ ಗೋಪ್ಯ ಮಾಹಿತಿ ಸೋರಿಕೆ ಪ್ರಕರಣದಲ್ಲಿ ಪಾಕಿಸ್ತಾನ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಆಪ್ತ, ಮಾಜಿ ವಿದೇಶಾಂಗ ಸಚಿವ ಶಾ ಮಹಮ್ಮದ್ ಕುರೇಶಿ ಅವರನ್ನು ಬಂಧಿಸಲಾಗಿದೆ.



ಕುರೇಶಿ

ಕುರೇಶಿ (67) ಅವರನ್ನು ಶನಿವಾರ ರಾತ್ರಿ ಬಂಧಿಸಿ ಫೆಡರಲ್ ತನಿಖಾ ಸಂಸ್ಥೆಯ (ಎಫ್‌ಐಎ) ಮುಖ್ಯ ಕಚೇರಿಗೆ ಕರೆದೊಯ್ಯಲಾಗಿತ್ತು. ಭಾನುವಾರ ಅವರನ್ನು ಇಲ್ಲಿನ ಸೆಷನ್ಸ್ ಕೋರ್ಟ್ ಎದುರು ಹಾಜರುಪಡಿಸಲಾಗಿದ್ದು, ಕೋರ್ಟ್ ಒಂದು ದಿನದ ಮಟ್ಟಿಗೆ ಎಫ್‌ಐಎ ವಶಕ್ಕೆ ನೀಡಿದೆ.

ಕುರೇಶಿ ವಿದೇಶಾಂಗ ಸಚಿವರಾಗಿದ್ದ ಅವಧಿಯಲ್ಲಿ ಅಮೆರಿಕದಲ್ಲಿರುವ ಪಾಕಿಸ್ತಾನ ರಾಯಭಾರ ಕಚೇರಿಯು ವಿದೇಶಾಂಗ ಇಲಾಖೆಗೆ ಕಳುಹಿಸಿದ್ದ ಸಂದೇಶವನ್ನು ಬಹಿರಂಗಪಡಿಸಿದ ಆರೋಪದ ಮೇಲೆ ಅಧಿಕೃತ ಗೋಪ್ಯ ಕಾಯ್ದೆ ಅಡಿಯಲ್ಲಿ ಅವರನ್ನು ಬಂಧಿಸಲಾಗಿದೆ. ಎಫ್‌ಐಎ ವಶಕ್ಕೆ ನೀಡುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಕುರೇಶಿ, 'ಸಂಬಂಧಿಸದ ಯಾವುದೇ ವ್ಯಕ್ತಿಗಳೊಂದಿಗೂ ಗೋಪ್ಯ ಮಾಹಿತಿ ಹಂಚಿಕೊಂಡಿಲ್ಲ. ಇದು ರಾಜಕೀಯ ಪ್ರೇರಿತ ಪ್ರಕರಣ' ಎಂದಿದ್ದಾರೆ.

ಚಂದ್ರನ ಅಂಗಳದಲ್ಲಿ ರಷ್ಯಾ ನೌಕೆ ಪತನ

ಮಾಸ್ಕೊ(ಎಪಿ/ಎಎಫ್‌ಪಿ): ಚಂದ್ರನ ಅನ್ವೇಷಣೆಗಾಗಿ ರಷ್ಯಾ ಮೊದಲ ಬಾರಿಗೆ ಉಡ್ಡಯನ ಮಾಡಿದ್ದ ಗಗನನೌಕೆ 'ಲೂನಾ–25', ಚಂದಿರನ ಅಂಗಳದಲ್ಲಿ ಪತನಗೊಂಡಿದೆ.

ಚಂದ್ರನ ದಕ್ಷಿಣ ಧ್ರುವದ ಅಂಗಳದಲ್ಲಿ ಇಳಿಸುವುದಕ್ಕೆ ಸಂಬಂಧಿಸಿದ ಪ್ರಕ್ರಿಯೆ ನಡೆಯುತ್ತಿದ್ದ ಸಂದರ್ಭದಲ್ಲಿ ನೌಕೆಯು ಪತನಗೊಂಡಿದೆ. ಚಂದ್ರನ ಮೇಲ್ಮೈಗೆ ಗಗನನೌಕೆ ಅಪ್ಪಳಿಸಿದ್ದೇ ಈ ಅವಘಡಕ್ಕೆ ಕಾರಣ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ' ಎಂದು ರಷ್ಯಾ ಬಾಹ್ಯಾಕಾಶ ಸಂಸ್ಥೆ ರಾಸ್‌ಕಾಸ್ಮೋಸ್ ಭಾನುವಾರ ಹೇಳಿದೆ.

'ಶನಿವಾರ, ಸ್ಥಳೀಯ ಕಾಲಮಾನ 2.57ಕ್ಕೆ 'ಲೂನಾ–25' ಸಂಸ್ಥೆಯೊಂದಿಗೆ ಸಂಪರ್ಕ ಕಳೆದುಕೊಂಡಿತು. ಗಗನನೌಕೆಯನ್ನು ಪತ್ತೆ ಮಾಡುವ ಹಾಗೂ ಸಂಪರ್ಕವನ್ನು ಮರುಸ್ಥಾಪಿಸುವ ನಿಟ್ಟಿನಲ್ಲಿ ಆಗಸ್ಟ್ 19 ಹಾಗೂ 20ರಂದು ಕೈಗೊಂಡ ಕ್ರಮಗಳು ಫಲ ನೀಡಲಿಲ್ಲ' ಎಂದು ಹೇಳಿದೆ.

ನೌಕೆ ಪತನಗೊಂಡಿರುವ ಕುರಿತು ಉನ್ನತ ಮಟ್ಟದ ತನಿಖೆ ನಡೆಸಲಾಗುವುದು ಎಂದಿರುವ ಸಂಸ್ಥೆ, ಪತನಕ್ಕೆ ಕಾರಣವಾಗಿರಬಹುದಾದ ತಾಂತ್ರಿಕ ತೊಂದರೆ ಕುರಿತು ಮಾಹಿತಿ ನೀಡಿಲ್ಲ.

800 ಕೆ.ಜಿ ತೂಕದ 'ಲೂನಾ–25' ನೌಕೆಯನ್ನು ಚಂದ್ರನ ದಕ್ಷಿಣ ಧ್ರುವದ ಅಂಗಳದಲ್ಲಿ ಸೋಮವಾರ ಇಳಿಸಲು ಯೋಜಿಸಿದ್ದ ರಷ್ಯಾ, ಆ ಮೂಲಕ ಇತಿಹಾಸ ಸೃಷ್ಟಿಸುವ ತವಕದಲ್ಲಿತ್ತು.

ಉಡ್ಡಯನದ ನಂತರ 'ಲೂನಾ–25' ಗಗನನೌಕೆಯನ್ನು ಚಂದ್ರನ ಕಕ್ಷೆಗೆ ಬುಧವಾರ ಯಶಸ್ವಿಯಾಗಿ ಸೇರಿಸಲಾಗಿತ್ತು. ಈ ನೌಕೆಯು ಒಂದು ವರ್ಷ ಕಾಲ ಚಂದ್ರನ ಅಂಗಳದಲ್ಲಿದ್ದು, ಮಣ್ಣಿನ ಮಾದರಿಗಳನ್ನು ಸಂಗ್ರಹಿಸಲಿತ್ತು.

ನೌಕೆಯಲ್ಲಿ ಅಳವಡಿಸಿದ್ದ ಕ್ಯಾಮೆರಾಗಳು ಈಗಾಗಲೇ ಚಂದ್ರನ ಮೇಲ್ಮೈಯ ಚಿತ್ರಗಳನ್ನು ಸೆರೆ ಹಿಡಿದು, ರವಾನಿಸಿವೆ. ಆಗಿನ ಯುಎಸ್‌ಎಸ್‌ಆರ್ 1976ರಲ್ಲಿ ಗಗನನೌಕೆ 'ಲೂನಾ–24'ಅನ್ನು ಚಂದ್ರನ ಮೇಲೆ ಇಳಿಸಿತ್ತು. ನಂತರ ಅದು, ಶುಕ್ರ ಗ್ರಹದ ಅನ್ವೇಷಣೆಯತ್ತ ತನ್ನ ಬಾಹ್ಯಾಕಾಶ ಕಾರ್ಯಕ್ರಮವನ್ನು ಕೇಂದ್ರೀಕರಿಸಿತ್ತು.

ಕೆ.ಆರ್. ನಗರ ಕೃಷಿ ಅಧಿಕಾರಿಗಳು ವಶಕ್ಕೆ

ಒಂದನೇ ಪುಟದಿಂದ

ಮಂಡ್ಯ ಜಿಲ್ಲೆಯ ಏಳು ತಾಲ್ಲೂಕುಗಳ ಸಹಾಯಕ ಕೃಷಿ ನಿರ್ದೇಶಕರ ಹೆಸರಿನಲ್ಲಿ ಪತ್ರ ಬರೆದು, ಅವರ ನಕಲಿ ಸಹಿ ಮಾಡಿ ಮೈಸೂರಿನ ಸರಸ್ವತಿಪುರಂ ಅಂಚೆ ಕಚೇರಿ ಮೂಲಕ ರಾಜ್ಯಪಾಲರಿಗೆ ಕಳುಹಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಇಬ್ಬರು ಅಧಿಕಾರಿಗಳನ್ನು ವಶಕ್ಕೆ ಪಡೆದು, ಅಜ್ಞಾತ ಸ್ಥಳಕ್ಕೆ ಕರೆದೊಯ್ದು ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಭಾನುವಾರ ಬೆಳಿಗ್ಗೆ ಕೆ.ಆರ್.ನಗರದ ಕೃಷಿ ಇಲಾಖೆ ಕಚೇರಿಗೆ ಅಧಿಕಾರಿಗಳನ್ನು ಕರೆಸಿಕೊಂಡು ವಶಕ್ಕೆ ಪಡೆದಿದ್ದಾರೆ. ಕಚೇರಿಯಲ್ಲಿದ್ದ ಕೆಲವು ದಾಖಲಾತಿಗಳನ್ನೂ ವಶಪಡಿಸಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಸಚಿವರ ವಿರುದ್ಧ ನಕಲಿ ಪತ್ರ ಬರೆಯಲು ರಾಜಕೀಯ ಒತ್ತಡ ಇತ್ತೇ ಎಂಬ ಬಗ್ಗೆ ಸಿಐಡಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

'ಸಿಐಡಿ ಡಿವೈಎಸ್‌ಪಿ ಕರೆ ಮಾಡಿ, ನಮ್ಮ ಇಲಾಖೆ ಅಧಿಕಾರಿಗಳನ್ನು ವಶಕ್ಕೆ ಪಡೆದ ಮಾಹಿತಿ ನೀಡಿದ್ದಾರೆ. ಜೊತೆಗೆ ಕಚೇರಿಯಲ್ಲಿ ತಪಾಸಣೆ ನಡೆಸಿದ ವಿಚಾರವನ್ನೂ ಗಮನಕ್ಕೆ ತಂದಿದ್ದಾರೆ' ಎಂದು ಮೈಸೂರು ಜಿಲ್ಲೆ ಕೃಷಿ ಜಂಟಿ ನಿರ್ದೇಶಕ ಬಿ.ಎಸ್.ಚಂದ್ರಶೇಖರ್ 'ಪ್ರಜಾವಾಣಿ'ಗೆ ತಿಳಿಸಿದರು.

ಈ ಬಗ್ಗೆ ಮಂಡ್ಯದಲ್ಲಿ ಪ್ರತಿಕ್ರಿಯಿಸಿದ ಸಚಿವ ಚಲುವರಾಯಸ್ವಾಮಿ, 'ಅಧಿಕಾರಿಗಳನ್ನು ವಶಕ್ಕೆ ಪಡೆದಿರುವ ವಿಷಯ ನನಗೆ ಗೊತ್ತಿಲ್ಲ. ಸಿಐಡಿ ಇನ್ನೂ ಸರ್ಕಾರಕ್ಕೆ ವರದಿ ನೀಡಿಲ್ಲ. ಮಂಡ್ಯ ಜಿಲ್ಲೆಯ ಅಧಿಕಾರಿಗಳ ಹೆಸರಿನಲ್ಲಿ ಏಕೆ ಪತ್ರ ಬರೆದರು ಎಂಬ ವಿಷಯ ಗೊತ್ತಾಗಬೇಕು, ಪತ್ರ ಬರೆಯಲು ಪ್ರಚೋದನೆ ಇತ್ತಾ ಎಂಬ ಬಗ್ಗೆಯೂ ತಿಳಿಯಬೇಕು' ಎಂದು ಹೇಳಿದರು.

ಲಡಾಖ್: ಪ್ರಧಾನಿ ಮೋದಿ ಎದುರು ಪ್ರಶ್ನೆ ಮುಂದಿಟ್ಟ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ

ಚೀನಾ ಅತಿಕ್ರಮಣ ಮಾಡಿದ್ದು ಸುಳ್ಳೇ?

ಲೇಹ್ (ಪಿಟಿಐ): 'ಲಡಾಖ್‌ನ ಒಂದಿಂಚೂ ಭೂಮಿಯನ್ನು ಚೀನಾ ವಶಪಡಿಸಿಕೊಂಡಿಲ್ಲ ಎಂದು ಮೋದಿ ಅವರು ಹೇಳಿರುವುದು ಸತ್ಯಕ್ಕೆ ದೂರವಾದ ಮಾತು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಭಾನುವಾರ ಪ್ರಧಾನಿ ವಿರುದ್ಧ ವಾಗ್ದಾಳಿ ನಡೆಸಿದರು.

ತಮ್ಮ ತಂದೆ, ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಜನ್ಮದಿನದ ಅಂಗವಾಗಿ ಗೌರವನಮನ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಚೀನಾ ಸೇನೆ ಲಡಾಖ್‌ನ ಹುಲ್ಲುಗಾವಲನ್ನು ಸ್ವಾಧೀನಪಡಿಸಿಕೊಂಡಿರುವ ಹಿನ್ನೆಲೆಯಲ್ಲಿ ಇಲ್ಲಿನ ಜನರು ತಲ್ಲಣಗೊಂಡಿದ್ದಾರೆ' ಎಂದು ತಿಳಿಸಿದರು.

ಈ ಪ್ರದೇಶದಲ್ಲಿ (ಲಡಾಖ್) ಯಾರನ್ನೇ ಕೇಳಿ, ಚೀನಾ ಸೇನೆ ಹುಲ್ಲುಗಾವಲನ್ನು ಸ್ವಾಧೀನಪಡಿಸಿಕೊಂಡಿದೆ ಎಂದೇ ಹೇಳುತ್ತಾರೆ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

'ಚೀನಾ ಸೇನೆ ಒಳನುಸುಳಿ ತಮ್ಮ ಹುಲ್ಲುಗಾವಲು ವಶಪಡಿಸಿಕೊಂಡಿದೆ. ಅಲ್ಲಿಗೆ ಪ್ರವೇಶಿಸಲು ತಮಗ್ಯಾರಿಗೂ ಅವಕಾಶವಿಲ್ಲ ಎಂದು ಇಲ್ಲಿನ ಜನರು ಸ್ಪಷ್ಟವಾಗಿ ಹೇಳಿದ್ದಾರೆ' ಎಂದರು.

'ಭಾರತ್ ಜೋಡೊ ಯಾತ್ರೆಯ ವೇಳೆಯೇ ನಾನು ಲಡಾಖ್‌ಗೆ ಬರಬೇಕಾಗಿತ್ತು. ಆದರೆ ಕಾರಣಾಂತರಗಳಿಂದ ಇಲ್ಲಿಗೆ ಭೇಟಿ ನೀಡುವ ಯೋಜನೆ ಕೈಬಿಡಬೇಕಾಯಿತು. ಆದ್ದರಿಂದ ಸಂಪೂರ್ಣ ಪ್ರಮಾಣದ ಪ್ರವಾಸ ಕೈಗೊಳ್ಳಲೆಂದು ಈಗ ಇಲ್ಲಿಗೆ ಬಂದಿದ್ದೇನೆ' ಎಂದು ಅವರು ವಿವರಿಸಿದರು.

'ನಾನು ಈಗಾಗಲೇ ಪ್ಯಾಂಗಾಂಗ್‌ಗೆ ಬಂದಿದ್ದೇನೆ. ನಂತರ, ನುಬ್ರಾ ಮತ್ತು ಕಾರ್ಗಿಲ್‌ಗೆ ಭೇಟಿ ನೀಡಲಿದ್ದೇನೆ. ಈ ಪ್ರವಾಸದ ಉದ್ದೇಶವೇನೆಂದರೆ ಇಲ್ಲಿನ ಜನರ ಏನು ಹೇಳುತ್ತಾರೆ ಮತ್ತು ಅವರ ಕಷ್ಟಗಳೇನು ಎಂಬುದನ್ನು ಆಲಿಸುವುದು. ಹುಲ್ಲುಗಾವಲು ವಶದ ಕುರಿತು ಜನರು ವಿಪರೀತ ಕಳವಳಗೊಂಡಿದ್ದಾರೆ. ಇಲ್ಲಿನ ಮತ್ತೊಂದು ಸಮಸ್ಯೆಯೇನೆಂದರೆ ಸಮರ್ಪಕ ದೂರವಾಣಿ ಸಂಪರ್ಕ ಇಲ್ಲದಿರುವುದು' ಎಂದು ಅವರು ತಿಳಿಸಿದರು.


ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಲೇಹ್‌ನ ಪ್ಯಾಂಗಾಂಗ್ ಸರೋವರದ ಬಳಿ ತಮ್ಮ ತಂದೆ ರಾಜೀವ್ ಗಾಂಧಿ ಅವರ ಜನ್ಮದಿನದ ಅಂಗವಾಗಿ ಭಾನುವಾರ ಗೌರವ ನಮನ ಸಲ್ಲಿಸಿದರು —ಪಿಟಿಐ ಚಿತ್ರ

ಪಂಚಾಂಗ ಹಿಡಿದ ಪೊಲೀಸರು!

ಅಪರಾಧ ನಿಯಂತ್ರಣಕ್ಕೆ ಹೆಚ್ಚಿನ ಗಸ್ತಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಲಖನೌ: ಸಾಮಾನ್ಯವಾಗಿ ವಿವಾಹ ಮುಹೂರ್ತ, ಗೃಹಪ್ರವೇಶದಂಥ ವಿಶೇಷ ಸಂದರ್ಭಗಳ ದಿನಾಂಕ ನಿಗದಿ ಮಾಡಲು ಹಿಂದೂಗಳು ಪಂಚಾಂಗ ಬಳಸುತ್ತಾರೆ. ಆದರೆ, ಉತ್ತರಪ್ರದೇಶ ಪೊಲೀಸರು ಅಪರಾಧ ಕೃತ್ಯಗಳ ನಿಯಂತ್ರಣಕ್ಕಾಗಿ ಪಂಚಾಂಗದ ಮೊರೆ ಹೋಗಿದ್ದಾರೆ.

ಉತ್ತರಪ್ರದೇಶ ಡಿಜಿಪಿ ವಿಜಯ್ ಕುಮಾರ್ ಅವರು ಜಿಲ್ಲಾ ಪೊಲೀಸ್ ಅಧಿಕಾರಿಗಳಿಗೆ ಮತ್ತು ಠಾಣೆಗಳಿಗೆ ಸುತ್ತೋಲೆಯೊಂದನ್ನು ಹೊರಡಿಸಿದ್ದು, 'ಬಹುತೇಕ ಅಪರಾಧ ಕೃತ್ಯಗಳು ಅಮಾವಾಸ್ಯೆಗೂ ಮೊದಲಿನ ಕೃಷ್ಣಪಕ್ಷದಲ್ಲಿ, ನಂತರದ ಶುಕ್ಲಪಕ್ಷದ ಒಂದುವಾರ ಹೆಚ್ಚು ಘಟಿಸಿವೆ' ಎಂದು ಅದರಲ್ಲಿ ವಿವರಿಸಲಾಗಿದೆ.

'ಅಪರಾಧ ಕೃತ್ಯ ನಡೆಯುವ ಈ ದಿನಗಳಲ್ಲಿ ಪೊಲೀಸ್ ಅಧಿಕಾರಿಗಳು ಜಾಗರೂಕರಾಗಿರಬೇಕು. ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ಗಸ್ತಿಗೆ ನಿಯೋಜಿಸಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ.

'ಈ ಹಿಂದೆ ಇದೇ ಅವಧಿಯಲ್ಲಿ ಅಪರಾಧ ಕೃತ್ಯಗಳು ನಡೆದಿರುವ ತಾಣಗಳು, ಅವುಗಳ ಮಾರ್ಗಗಳನ್ನು ಗುರುತಿಸಿ, ಇಲ್ಲಿ ಅಪರಾಧಗಳು ಪುನರಾವರ್ತನೆಯಾಗದಂತೆ ಎಚ್ಚರವಹಿಸಬೇಕು' ಎಂದು ತಿಳಿಸಿದೆ. ಅಷ್ಟೇ ಅಲ್ಲ, ಸುತ್ತೋಲೆಯೊಂದಿಗೆ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ಅಮಾವಾಸ್ಯೆಯ ಆಸುಪಾಸಿನ ಅವಧಿಯನ್ನು ಗುರುತಿಸಿರುವ ಪಂಚಾಂಗದ ಪ್ರತಿಯನ್ನೂ ಹಂಚಲಾಗಿದೆ.

'ಅಪರಾಧ ಘಟನೆಗಳ ವಿಶ್ಲೇಷಣೆಗೆ ಅನುಗುಣವಾಗಿ ಪೊಲೀಸ್ ಪ್ರತಿಕ್ರಿಯಾ ವಾಹನಗಳ (ಪಿಆರ್‌ವಿ) ಮಾರ್ಗಗಳ ನಕ್ಷೆಯನ್ನು ಸಿದ್ಧಪಡಿಸುವಂತೆ ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸುತ್ತೋಲೆಯಲ್ಲಿ ನಮೂದಿಸಲಾದ ದಿನಾಂಕಗಳಿಗೆ ಅನುಗುಣವಾಗಿ ಪೊಲೀಸರು ಈಗಾಗಲೇ ವಿಶ್ಲೇಷಣಾ ಕಾರ್ಯವನ್ನು ಆರಂಭಿಸಿದ್ದಾರೆ. 'ವರದಿಯನ್ನು ರಾಜ್ಯ ಪೊಲೀಸ್ ಕೇಂದ್ರಕಚೇರಿಗೆ ಕಳುಹಿಸಲಾಗುವುದು' ಎಂದು ಮೂಲಗಳು ಹೇಳಿವೆ.

ನಟ ರಜನೀಕಾಂತ್ ನಡೆಗೆ ಪರ– ವಿರೋಧದ ಚರ್ಚೆ

ಯೋಗಿ ಪಾದಕ್ಕೆರಗಿದ ತಲೈವಾ

ಪ್ರಜಾವಾಣಿ ವಾರ್ತೆ

ಲಖನೌ: ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಶನಿವಾರ ಭೇಟಿ ಮಾಡಿದ್ದ ಸಂದರ್ಭದಲ್ಲಿ ನಟ ರಜನೀಕಾಂತ್ ಅವರು ಆದಿತ್ಯನಾಥ ಅವರ ಪಾದಮುಟ್ಟಿ ನಮಸ್ಕರಿಸಿದ್ದರು. ಇದು ಈಗ ಸಾಮಾಜಿಕ ಮಾಧ್ಯಮಗಳಲ್ಲಿ ವಿವಾದ ಹುಟ್ಟುಹಾಕಿದೆ.

ಸೂಪರ್ ಸ್ಟಾರ್ ನಡೆ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಪರ–ವಿರೋಧ ಚರ್ಚೆಗಳೂ ನಡೆಯುತ್ತಿವೆ.

72 ವರ್ಷದ ರಜನೀಕಾಂತ್ ಅವರು 51 ವರ್ಷದ ಆದಿತ್ಯನಾಥ ಪಾದ ಮುಟ್ಟಿ ನಮಸ್ಕರಿಸಿದ್ದು ಸರಿಯಲ್ಲ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಅವರ ಕಟ್ಟಾ ಅಭಿಮಾನಿಗಳು ಮಾತ್ರ ರಜನೀಕಾಂತ್ ನಡೆಯನ್ನು ಸಮರ್ಥಿಸಿಕೊಂಡಿದ್ದಾರೆ. ಮುಖ್ಯಮಂತ್ರಿ ಆದಿತ್ಯನಾಥ ಅವರು ಯೋಗಿಯೂ ಆಗಿದ್ದು, ಗೋರಖನಾಥ ಮಠದ ಮುಖ್ಯಸ್ಥರೂ ಆಗಿರುವ ಕಾರಣ, ಅವರ ಪಾದಕ್ಕೆರಗಿ ನಮಸ್ಕರಿಸಿದ್ದರಲ್ಲಿ ತಪ್ಪೇನೂ ಇಲ್ಲ ಎಂದು ಅಭಿಮಾನಿಗಳು ಪ್ರತಿಕ್ರಿಯಿಸಿದ್ದಾರೆ.

ವಯಸ್ಸಿನಲ್ಲಿ ತಮಗಿಂತ ಚಿಕ್ಕವರಿದ್ದರೂ ಮಠಾಧೀಶರಾಗಿರುವವರ ಪಾದ ಮುಟ್ಟಿ ರಜನೀಕಾಂತ್ ನಮಸ್ಕರಿಸಿರುವ ಹಳೆಯ ವಿಡಿಯೊಗಳನ್ನು ಸಹ ಕೆಲವರು ಹಂಚಿಕೊಂಡಿದ್ದಾರೆ.

ಇನ್ನೊಂದೆಡೆ, ಈ ವಿವಾದ ಭುಗಿಲೆದ್ದ ಬೆನ್ನಲ್ಲೇ, ಮತ್ತೊಬ್ಬ ತಮಿಳು ನಟ ದಳಪತಿ ವಿಜಯ್ ಅವರ ತಂದೆ ಎಸ್.ಎ.ಚಂದ್ರಶೇಖರ್ ಅವರು ಇತ್ತೀಚೆಗೆ ರಜನೀಕಾಂತ್ ಅವರ ಪಾದ ಮುಟ್ಟಿ ನಮಸ್ಕರಿಸಿದ್ದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಇದು ರಜನೀಕಾಂತ್ ಮತ್ತು ವಿಜಯ್ ಅಭಿಮಾನಿಗಳ ನಡುವೆ ಜಟಾಪಟಿಗೂ ಕಾರಣವಾಗಿದೆ.

ತಮ್ಮ ಚಿತ್ರ 'ಜೈಲರ್' ಪ್ರಚಾರಕ್ಕಾಗಿ ಲಖನೌಗೆ ಬಂದಿದ್ದ ರಜನೀಕಾಂತ್ ಅವರು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರಲ್ಲದೆ, ವಿವಿಧ ರಾಜಕೀಯ ಮುಖಂಡರನ್ನೂ ಭೇಟಿ ಮಾಡಿದ್ದಾರೆ. ಅಯೋಧ್ಯೆಗೂ ಅವರು ಭೇಟಿ ಕೊಟ್ಟಿದ್ದಾರೆ.


ತಮಿಳು ಮೇರು ನಟ ರಜನೀಕಾಂತ್ ಅವರು ಲಖನೌದಲ್ಲಿ ಶನಿವಾರ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಪಾದ ಮುಟ್ಟಿ ನಮಸ್ಕರಿಸಿದರು —ಪಿಟಿಐ ಚಿತ್ರ

'ರಜನಿ ಚಿತ್ರ ನೋಡಿದ್ದೆ'

ತಮಿಳು ಚಿತ್ರರಂಗದ ಮೇರು ನಟ ರಜನೀಕಾಂತ್ ಅವರು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರನ್ನು ಭಾನುವಾರ ಅವರ ನಿವಾಸದಲ್ಲಿ ಭೇಟಿ ಮಾಡಿದರು.

'ಅಖಿಲೇಶ್ ನನ್ನ ಆತ್ಮೀಯ ಸ್ನೇಹಿತ. ಒಂಬತ್ತು ವರ್ಷಗಳ ಹಿಂದೆ ಮುಂಬೈನಲ್ಲಿ ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಮೊದಲ ಬಾರಿಗೆ ಅವರನ್ನು ಭೇಟಿ ಮಾಡಿದ್ದೆ. ಅಂದಿನಿಂದ ನಮ್ಮ ಸ್ನೇಹ ಮುಂದುವರಿದಿದ್ದು, ಈಗಲೂ ದೂರವಾಣಿ ಮೂಲಕ ಸಂಪರ್ಕದಲ್ಲಿದ್ದೇವೆ' ಎಂದು ರಜನೀಕಾಂತ್ ಹೇಳಿದರು.

ರಜನೀಕಾಂತ್ ಅವರೊಂದಿಗಿನ ತಮ್ಮ ಒಡನಾಟ ವಿವರಿಸಿದ ಅಖಿಲೇಶ್, ಎಂಜಿನಿಯರಿಂಗ್ ಅಧ್ಯಯನಕ್ಕಾಗಿ ಮೈಸೂರಿನಲ್ಲಿದ್ದಾಗ ರಜನೀಕಾಂತ್ ಅವರ ಚಿತ್ರಗಳನ್ನು ನೋಡಿ ಸಂಭ್ರಮಿಸಿದ್ದನ್ನು ಮೆಲುಕು ಹಾಕಿದರು. ರಜನೀಕಾಂತ್ ಅವರೊಂದಿಗಿನ ಚಿತ್ರಗಳನ್ನು ಅಖಿಲೇಶ್ ಅವರು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

ಭಾರತದ ಯುಪಿಐ ಪಾವತಿ ವ್ಯವಸ್ಥೆಗೆ ಜರ್ಮನಿ ಪ್ರಶಂಸೆ

ನವದೆಹಲಿ (ಪಿಟಿಐ): ಆನ್‌ಲೈನ್ ಪಾವತಿ ವೇದಿಕೆ ಭಾರತದ ಯುಪಿಐ ವ್ಯವಸ್ಥೆಯ ಬಗ್ಗೆ ಜರ್ಮನಿಯ ರಾಯಭಾರ ಕಚೇರಿಯು ಭಾನುವಾರ ಪ್ರಶಂಸಿಸಿದ್ದು, ಜರ್ಮನಿಯ ಸಚಿವರೊಬ್ಬರು ತರಕಾರಿ ಅಂಗಡಿಯಲ್ಲಿ ಯುಪಿಐ ಮೂಲಕ ಹಣ ಪಾವತಿಸಿರುವ ವಿಡಿಯೊ ಒಂದನ್ನು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಹಂಚಿಕೊಂಡಿದೆ.

ಜರ್ಮನಿಯ ಡಿಜಿಟಲ್ ಮತ್ತು ಸಾರಿಗೆ ಸಚಿವ ವೋಲ್ಕರ್ ವಿಸ್ಸಿಂಗ್ ಅವರು ಇಲ್ಲಿನ ತರಕಾರಿ ಅಂಗಡಿಯಲ್ಲಿ ತಾವು ಖರೀದಿಸಿದ ಪದಾರ್ಥಗಳಿಗೆ ಯುಪಿಐ ಮೂಲಕ ಹಣ ಪಾವತಿ ಮಾಡಿದ್ದಾರೆ.

'ಭಾರತದ ಯಶೋಗಾಥೆ ಎಂದರೆ ಡಿಜಿಟಲ್ ಮೂಲಸೌಕರ್ಯ. ಯುಪಿಐ ಪ್ರತಿಯೊಬ್ಬರಿಗೂ ಸೆಕೆಂಡ್‌ಗಳಲ್ಲಿ ವಹಿವಾಟು ಮಾಡಲು ಅನುವು ಮಾಡಿಕೊಡುತ್ತದೆ. ಲಕ್ಷಾಂತರ ಭಾರತೀಯರು ಇದನ್ನು ಬಳಸುತ್ತಿದ್ದಾರೆ. ಜರ್ಮನಿಯ ಸಚಿವ ವೋಲ್ಕರ್ ವಿಸ್ಸಿಂಗ್ ಅವರು ಯುಪಿಐ ಪಾವತಿಗಳ ಸರಳ ವಿಧಾನದ ಸ್ವಅನುಭವ ಪಡೆದಿದ್ದು, ಈ ವಿಧಾನವು ಅವರನ್ನು ತುಂಬಾ ಸೆಳೆದಿದೆ' ಎಂದು ರಾಯಭಾರ ಕಚೇರಿಯು ಮೆಚ್ಚುಗೆ ವ್ಯಕ್ತಪಡಿಸಿದೆ.

'ನೀಟ್': ಡಿಎಂಕೆ ಸತ್ಯಾಗ್ರಹ

ಚೆನ್ನೈ (ಪಿಟಿಐ): ವೈದ್ಯಕೀಯ ಕೋರ್ಸ್ ಪ್ರವೇಶಕ್ಕಾಗಿ ನಡೆಸುವ ರಾಷ್ಟ್ರೀಯ ಪ್ರವೇಶ ಮತ್ತು ಅರ್ಹತಾ ಪರೀಕ್ಷೆ (ನೀಟ್) ರದ್ದುಪಡಿಸುವಂತೆ ಒತ್ತಾಯಿಸಿ ಆಡಳಿತಾರೂಢ ಡಿಎಂಕೆ ಪಕ್ಷದ ವತಿಯಿಂದ ರಾಜ್ಯದಾದ್ಯಂತ ಭಾನುವಾರ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿತ್ತು.

ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಪುತ್ರ ಹಾಗೂ ಸಚಿವ ಉದಯನಿಧಿ ನೇತೃತ್ವದಲ್ಲಿ ಇಲ್ಲಿನ ವಳ್ಳುವರ್ ಕೊಟ್ಟಮ್‌ನಲ್ಲಿ ನಡೆದ ಸತ್ಯಾಗ್ರಹದಲ್ಲಿ ಸಂಪುಟದ ಸಚಿವರು ಹಾಗೂ ಪಕ್ಷದ ಮುಖಂಡರು ಪಾಲ್ಗೊಂಡಿದ್ದರು.

ಅರಿಯಲೂರಿನ ಎಸ್.ಅನಿತಾ ಸೇರಿದಂತೆ 'ನೀಟ್' ವಿಚಾರವಾಗಿ ಆತ್ಮಹತ್ಯೆ ಮಾಡಿಕೊಂಡಿರುವ ರಾಜ್ಯದ ಆಕಾಂಕ್ಷಿಗಳ ಭಾವಚಿತ್ರಗಳನ್ನು ಸತ್ಯಾಗ್ರಹ ನಡೆದ ವೇದಿಕೆಯಲ್ಲಿ ಅಳವಡಿಸಿ, ಅವುಗಳಿಗೆ ಹೂಮಾಲೆ ಹಾಕಿ ಗೌರವ ಸಲ್ಲಿಸಲಾಗಿತ್ತು.

ಡಿಎಂಕೆಯ ಯುವ ಘಟಕ, ವಿದ್ಯಾರ್ಥಿಗಳ ಹಾಗೂ ವೈದ್ಯರ ಘಟಕಗಳ ಪದಾಧಿಕಾರಿಗಳು ಕೂಡ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ನವದಂಪತಿಗಳು ಕೂಡ ನೀಟ್ ವಿರೋಧಿ ಫಲಕಗಳೊಂದಿಗೆ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಗಮನ ಸೆಳೆದರು. ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಸಚಿವ ದೊರೈಮುರುಗನ್, 'ನೀಟ್ ವಿದ್ಯಾರ್ಥಿ ವಿರೋಧಿಯಾಗಿದ್ದು, ಈ ಪರೀಕ್ಷೆಯನ್ನು ಡಿಎಂಕೆ ವಿರೋಧಿಸುತ್ತಲೇ ಬಂದಿದೆ' ಎಂದರು.

ಮದುರೈನಲ್ಲಿ ನಡೆದ ಸತ್ಯಾಗ್ರಹ: ನೀಟ್ ವಿರೋಧಿಸಿ ರಾಜ್ಯದಾದ್ಯಂತ ಉಪವಾಸ ಸತ್ಯಾಗ್ರಹ ಹಮ್ಮಿಕೊಂಡಿದ್ದರೂ, ಮದುರೈನಲ್ಲಿ ನಡೆಯಲಿಲ್ಲ.

ಎಐಎಡಿಎಂಕೆ ವತಿಯಿಂದ ರಾಜ್ಯ ಮಟ್ಟದ ಬೃಹತ್ ಸಮಾವೇಶ ನಡೆಯುತ್ತಿದ್ದ ಕಾರಣ ಮದುರೈನಲ್ಲಿ ನೀಟ್ ವಿರೋಧಿ ಹೋರಾಟವನ್ನು ಹಮ್ಮಿಕೊಂಡಿರಲಿಲ್ಲ.

ಆಗಸ್ಟ್ 23ರಂದು ಮದುರೈನಲ್ಲಿ ಹೋರಾಟ ನಡೆಸಲಾಗುತ್ತದೆ ಎಂದು ಡಿಎಂಕೆ ಮೂಲಗಳು ಹೇಳಿವೆ.

ಅಣ್ಣಾಮಲೈ ಟೀಕೆ: 'ನೀಟ್' ವಿರೋಧಿಸಿ ಉಪವಾಸ ಸತ್ಯಾಗ್ರಹ ನಡೆಸಿದ ಡಿಎಂಕೆ ನಡೆಯನ್ನು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಟೀಕಿಸಿದ್ದಾರೆ.

'ನೀಟ್ ವಿವಾದಾತ್ಮಕ ವಿಷಯವೇ ಅಲ್ಲ. ಡಿಎಂಕೆ ಇದನ್ನು ರಾಜಕೀಯಗೊಳಿಸುತ್ತಿದ್ದು, ಭಾವನಾತ್ಮಕ ವಿಷಯವನ್ನಾಗಿ ಮಾಡಿದೆ. ಹಲವು ಆಕಾಂಕ್ಷಿಗಳು ಆತ್ಮಹತ್ಯೆ ಮಾಡಿಕೊಳ್ಳಲು ಡಿಎಂಕೆಯ ಈ ನಡೆಯೇ ಕಾರಣ' ಎಂದು ಅವರು ಆರೋಪಿಸಿದ್ದಾರೆ.



'ನೀಟ್' ರದ್ದತಿಗೆ ಆಗ್ರಹಿಸಿ ಚೆನ್ನೈನಲ್ಲಿ ಡಿಎಂಕೆ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ ನವದಂಪತಿ —ಪಿಟಿಐ ಚಿತ್ರ

ಹೋರಾಟ ನಿಲ್ಲದು: ಸ್ಟಾಲಿನ್

'ನೀಟ್‌ನಿಂದ ರಾಜ್ಯಕ್ಕೆ ವಿನಾಯಿತಿ ನೀಡುವುದನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಎಲ್ಲ ಪ್ರಯತ್ನಗಳನ್ನು ನಡೆಸಲಾಗುವುದು. ನಮ್ಮ ಬೇಡಿಕೆ ಈಡೇರುವವರೆಗೆ ಹೋರಾಟ ನಿಲ್ಲದು' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಶನಿವಾರ ಹೇಳಿದ್ದಾರೆ.

ಖಾಸಗಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ನೀಟ್ ವಿರೋಧಿ ಮಸೂದೆಗೆ ಅಂಕಿತ ಹಾಕುವುದಿಲ್ಲ ಎಂಬುದಾಗಿ ಹೇಳಿರುವ ರಾಜ್ಯಪಾಲ ಆರ್.ಎನ್. ರವಿ ಅವರ ಹೇಳಿಕೆಯನ್ನು ಪ್ರಸ್ತಾಪಿಸಿದ ಅವರು, 'ಈ ವಿಷಯವು ಈಗ ರಾಷ್ಟ್ರಪತಿ ಅವರ ಮುಂದಿದೆ. ರಾಜ್ಯ ವಿಧಾನಸಭೆ ಅಂಗೀಕರಿಸಿದ ಮಸೂದೆಯನ್ನು ರಾಷ್ಟ್ರಪತಿಯವರಿಗೆ ಕಳುಹಿಸುವ ಪೋಸ್ಟ್‌ಮನ್ ರೀತಿಯ ಕೆಲಸ ಮಾತ್ರ ರಾಜ್ಯಪಾಲರದ್ದು' ಎಂದರು.

ಬಾಲಕ, ಮತ್ತಿಬ್ಬರ ಸಜೀವ ದಹನ ಪ್ರಕರಣ ಸಿಬಿಐಗೆ

ಇಂಫಾಲ್ (ಪಿಟಿಐ): ಹಿಂಸಾಚಾರದ ಸಂದರ್ಭದಲ್ಲಿ ನಡೆದ ಕುಕಿ– ಮೈತೇಯಿ ದಂಪತಿಯ 7 ವರ್ಷದ ಮಗನ ಸಜೀವ ದಹನ ಪ್ರಕರಣ ಸೇರಿದಂತೆ 20 ಪ್ರಕರಣಗಳನ್ನು ಮಣಿಪುರದ ಪೊಲೀಸರು ಸಿಬಿಐಗೆ ಹಸ್ತಾಂತರಿಸಿದ್ದಾರೆ.

ಬಾಲಕನ ಜೊತೆ ಆತನ ತಾಯಿ ಹಾಗೂ ಚಿಕ್ಕಮ್ಮನನ್ನೂ ದಹಿಸಲಾಗಿತ್ತು.

ಹಿಂಸಾಚಾರದಲ್ಲಿ ತಲೆಗೆ ಗುಂಡೇಟು ಬಿದ್ದು ಗಾಯಗೊಂಡಿದ್ದ ಬಾಲಕ ತಾನ್ಸಿಂಗ್ ಹ್ಯಾಂಗ್ಸಿಂಗ್‌ನನ್ನು ಜೂನ್ 4ರಂದು ಆತನ ತಾಯಿ ಮೀನಾ ಹ್ಯಾಂಗ್ಸಿಂಗ್, ಚಿಕ್ಕಮ್ಮ ಲಿಡಿಯಾ ಲೌರೆಂಬಮ್ ಅವರು ಪೊಲೀಸರ ಬೆಂಗಾವಲಿನೊಂದಿಗೆ ಆಂಬುಲೆನ್ಸ್‌ನಲ್ಲಿ ಕರೆದೊಯ್ಯುತ್ತಿದ್ದರು. ಆ ವೇಳೆ, ಆಂಬುಲೆನ್ಸ್‌ಗೆ ಅಡ್ಡಗಟ್ಟಿದ ಕುಕಿ ಜನರ ಗುಂಪೊಂದು ವಾಹನಕ್ಕೆ ಬೆಂಕಿ ಹಚ್ಚಿತ್ತು.

ಲ್ಯಾಂಫೆಲ್ ಠಾಣೆಯಲ್ಲಿ ದಾಖಲಾದ ಒಂದು ಎಫ್‌ಐಆರ್ ಮತ್ತು ಬಾಲಕನ ತಂದೆ ಜೋಶುವಾ ಹ್ಯಾಂಗ್ಸಿಂಗ್ ಅವರು ಕಾಂಗ್‌ಪೋಕ್‌ಪಿ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ್ದ ಮತ್ತೊಂದು ಎಫ್‌ಐಆರ್, ಒಟ್ಟು ಎರಡು ಎಫ್‌ಐಆರ್‌ಗಳನ್ನು ಸಿಬಿಐಗೆ ಹಸ್ತಾಂತರಿಸಲಾಗಿದೆ.

ಲ್ಯಾಂಫೆಲ್ ಪೊಲೀಸ್ ಠಾಣೆಯಲ್ಲಿ ಕೊಲೆಗೆ ಸಂಬಂಧಿಸಿದ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಲಾಗಿದ್ದರೆ, ಕಾಂಗ್‌ಪೋಕ್‌ಪಿ ಪೊಲೀಸ್ ಠಾಣೆಯಲ್ಲಿ ಗುಂಪಿನ ಹಠಾತ್ ಪ್ರಚೋದನೆಯ ಗಲಭೆಯಲ್ಲಿ ನಡೆದ ಹತ್ಯೆ ಪ್ರಕರಣದ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಕಾರ್ತಿಕ್, ಸಮರ್ಥ್ ಮಿಂಚು: ಮೈಸೂರಿಗೆ ಜಯ

ಮಹಾರಾಜ ಟ್ರೋಫಿ ಟಿ20: ಸಿಸೊಡಿಯಾ ಶತಕ, ಹುಬ್ಬಳ್ಳಿಗೆ ಮೊದಲ ಸೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಂಭಿಕ ಬ್ಯಾಟರ್ ಭಾನುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಚೆಂದದ ಶತಕ ಗಳಿಸಿದರು. ಆದರೆ ಹುಬ್ಬಳ್ಳಿ ಟೈಗರ್ಸ್ ತಂಡವು 6 ವಿಕೆಟ್‌ಗಳ ಅಂತರದಿಂದ ಮೈಸೂರು ವಾರಿಯರ್ಸ್ ಮುಂದೆ ಪರಾಭವಗೊಂಡಿತು.

ಇಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಸತತ ಐದು ಪಂದ್ಯಗಳಲ್ಲಿ ಜಯಿಸಿದ್ದ ಹುಬ್ಬಳ್ಳಿ ತಂಡದ ಅಜೇಯ ಓಟಕ್ಕೆ ಮೈಸೂರು ತಂಡವು ತಡೆಯೊಡ್ಡಿತು. ಸಿ.ಎ. ಕಾರ್ತಿಕ್ (50ಕ್ಕೆ4 ಹಾಗೂ 29 ರನ್) ಆಲ್‌ರೌಂಡ್ ಆಟ ಮತ್ತು ಆರ್. ಸಮರ್ಥ್ (73; 42ಎ) ಅರ್ಧಶತಕದ ಬಲದಿಂದ ಮೈಸೂರು ತಂಡವು ಗೆದ್ದಿತು.

ಸಿಸೊಡಿಯಾ ಶತಕದ ನೆರವಿನಿಂದ ಹುಬ್ಬಳ್ಳಿ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 185 ರನ್ ಗಳಿಸಿತ್ತು. ಮೈಸೂರು ತಂಡವು ಇನಿಂಗ್ಸ್‌ನಲ್ಲಿ ಇನ್ನೂ ಏಳು ಎಸೆತಗಳು ಬಾಕಿಯಿರುವಾಗಲೇ 4 ವಿಕೆಟ್ ಕಳೆದುಕೊಂಡು ಗುರಿ ಮುಟ್ಟಿತು.

ಸಂಕ್ಷಿಪ್ತ ಸ್ಕೋರ್: ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 185 (ಲವನೀತ್ ಸಿಸೊಡಿಯಾ 105, ಮನೀಷ್ ಪಾಂಡೆ 33, ಪ್ರವೀಣ ದುಬೆ 16, ಸಿ.ಎ. ಕಾರ್ತಿಕ್ 50ಕ್ಕೆ4) **ಮೈಸೂರು ವಾರಿಯರ್ಸ್:** 18.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 188 (ಆರ್. ಸಮರ್ಥ್ 73, ಸಿ. ಕಾರ್ತಿಕ್ 29, ಕರುಣ್ ನಾಯರ್ 41, ಶೋಯಬ್ ಮ್ಯಾನೇಜರ್ ಔಟಾಗದೆ 21, ಶಿವಕುಮಾರ್ ರಕ್ಷಿತ್ ಔಟಾಗದೆ 22, ಪ್ರವೀಣ ದುಬೆ 38ಕ್ಕೆ3) **ಫಲಿತಾಂಶ:** ಮೈಸೂರು ವಾರಿಯರ್ಸ್‌ಗೆ 6 ವಿಕೆಟ್‌ಗಳ ಜಯ.

ಮಂಗಳೂರು ಡ್ರ್ಯಾಗನ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 120 (ಕೃತಿಕ್ ಕೃಷ್ಣ 14, ನವೀನ್ ಎಂ.ಜಿ. 19, ಗೌರವ್ ಧಿಮಾನ್ 27, ಆದಿತ್ಯ ಗೋಯಲ್ 22, ಅಭಿಲಾಷ್ ಶೆಟ್ಟಿ 20ಕ್ಕೆ2, ವೈಶಾಖ ವಿಜಯಕುಮಾರ್ 31ಕ್ಕೆ2, ಅಮಿತ್ ವರ್ಮಾ 13ಕ್ಕೆ2) **ಗುಲ್ಬರ್ಗ ಮಿಸ್ಟಿಕ್ಸ್:** 17.1 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 121 (ಆರ್. ಸ್ಮರಣ್ ಔಟಾಗದೆ 62, ಶರತ್ ಶ್ರೀನಿವಾಸ್ 20, ಆದಿತ್ಯ ಗೋಯಲ್ 20ಕ್ಕೆ1, ಕೆ. ಗೌತಮ್ 29ಕ್ಕೆ1) **ಫಲಿತಾಂಶ:** ಗುಲ್ಬರ್ಗ ಮಿಸ್ಟಿಕ್ಸ್‌ಗೆ 5 ವಿಕೆಟ್‌ಗಳ ಜಯ.


ಸಿ.ಎ. ಕಾರ್ತಿಕ್ ಬ್ಯಾಟಿಂಗ್

ವೈಶಾಖ ಆಟಕ್ಕೆ ಒಲಿದ ಜಯ

ನಾಯಕ ವೈಶಾಖ ವಿಜಯಕುಮಾರ್ (31ಕ್ಕೆ2) ಅಮೋಘ ಬೌಲಿಂಗ್ ಬಲದಿಂದ ಗುಲ್ಬರ್ಗ್ ಮಿಸ್ಟಿಕ್ಸ್ ತಂಡವು 5 ವಿಕೆಟ್‌ಗಳಿಂದ ಮಂಗಳೂರು ಡ್ರ್ಯಾಗನ್ಸ್ ವಿರುದ್ಧ ಜಯಿಸಿತು.

ಮಂಗಳೂರು ಡ್ರ್ಯಾಗನ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 120 ರನ್ ಗಳಿಸಿತು. ಗೌರವ್ ಧಿಮಾನ್ (27; 22ಎ, 4X3, 6X1) ಮತ್ತು ಆದಿತ್ಯ ಗೋಯಲ್ (ಔಟಾಗದೆ 22) ಅವರಿಬ್ಬರೇ 20 ರನ್‌ಗಳ ಗಡಿ ದಾಟಿದವರು. ಗುಲ್ಬರ್ಗ ತಂಡವು ಆರ್. ಸ್ಮರಣ್ ಅಜೇಯ ಅರ್ಧಶತಕದ ಬಲದಿಂದ 17.1 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 121 ರನ್ ಗಳಿಸಿ ಜಯಿಸಿತು.

18ನೇ ರಾಜ್ಯ ಮೌಂಟೇನ್ ಬೈಕ್ ಚಾಂಪಿಯನ್‌ಷಿಪ್

ಬೆಂಗಳೂರು ಜಿಲ್ಲೆಗೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಬೆಂಗಳೂರು ಜಿಲ್ಲೆ ತಂಡವು ಭಾನುವಾರ ಮುಕ್ತಾಯಗೊಂಡ 18ನೇ ರಾಜ್ಯ ಮೌಂಟೇನ್ ಬೈಕ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು. ಮೈಸೂರು ಜಿಲ್ಲೆಯು ರನ್ನರ್ಸ್ ಅಪ್ ಆಯಿತು.

ರಾಜ್ಯ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ ಮತ್ತು ಏಟ್ರಿಯಾ ತಾಂತ್ರಿಕ ವಿಶ್ವವಿದ್ಯಾಲಯ ಆಶ್ರಯದಲ್ಲಿ ಆಯೋಜಿಸಿದ್ದ ಎರಡು ದಿನಗಳ ಚಾಂಪಿಯನ್‌ಷಿಪ್‌ನಲ್ಲಿ ಬೆಂಗಳೂರು ಜಿಲ್ಲೆ 66 ಹಾಗೂ ಮೈಸೂರು ಜಿಲ್ಲೆ 59 ಅಂಕ ಗಳಿಸಿದವು.

ಫಲಿತಾಂಶಗಳು: ಬಾಲಕರು: 16 ವರ್ಷದೊಳಗಿನವರು: 2 ಲ್ಯಾಪ್ ಮಾಸ್ ಸ್ಟಾರ್ಟ್: ಸವಿಯನ್ ಸಾಬು (ಬೆಂಗಳೂರು)–1, ಸಿ. ರುಚಿರ್ (ಮೈಸೂರು)–2, ರಿಹಾನ ರೋಷನ್ (ಬೆಂಗಳೂರು)–3. 18 ವರ್ಷದೊಳಗಿನವರು: 3 ಲ್ಯಾಪ್ ಮಾಸ್ ಸ್ಟಾರ್ಟ್: ಸಮರ್ಪಣ್ ಜೈನ್ (ಮೈಸೂರು)–1, ಎಸ್. ಧನಂಜಯ (ಮೈಸೂರು)–2, ಹನಮಂತ ಮರನೂರ (ಕ್ರೀಡಾ ನಿಲಯ, ವಿಜಯಪುರ)–3.

ಪುರುಷರು: 3 ಲ್ಯಾಪ್ ಮಾಸ್ ಸ್ಟಾರ್ಟ್: ಕೆ.ವಿ. ವೈಶಾಖ್ (ಮೈಸೂರು)–1, ಡೆನಿಲ್ ಲೋಬೊ (ಬೆಂಗಳೂರು)–2, ಆರ್. ಜೀವನ್ (ತುಮಕೂರು)–3.

ಬಾಲಕಿಯರು: 16 ವರ್ಷದೊಳಗಿನವರು: 1 ಲ್ಯಾಪ್ ಮಾಸ್ ಸ್ಟಾರ್ಟ್: ರೇಣುಕಾ ಕಾಖಂಡಕಿ (ಕ್ರೀಡಾ ನಿಲಯ, ಬಾಗಲಕೋಟೆ)–1, ಕೈನಾ ಬರುಹಾ (ಬೆಂಗಳೂರು)– 2, ಎಸ್.ಎಸ್. ಪರಣಿತಾ (ಕ್ರೀಡಾ ನಿಲಯ, ವಿಜಯಪುರ)–3. 18 ವರ್ಷದೊಳಗಿನವರು: 2 ಲ್ಯಾಪ್ ಮಾಸ್ ಸ್ಟಾರ್ಟ್: ಕರೇನ್ ಮಾರ್ಷಲ್ (ಮೈಸೂರು)–1, ಎಚ್.ಎನ್. ನಾಗಸಿರಿ (ಮೈಸೂರು)–2, ಪವಿತ್ರಾ ಕುರ್ತಕೋಟಿ (ಗದಗ)–3.

ಮಹಿಳೆಯರು: 2 ಲ್ಯಾಪ್ ಮಾಸ್ ಸ್ಟಾರ್ಟ್: ಸ್ಟಾರ್ ನರ್ಝರಿ (ಬೆಂಗಳೂರು; 23 ನಿ.46.09 ಸೆ)–1, ಅಕ್ಷತಾ ಬಿರಾದಾರ್ (ಕ್ರೀಡಾ ನಿಲಯ, ವಿಜಯಪುರ)–2, ಆರತಿ ಭಾಟಿ (ವಿಜಯಪುರ)–3.


18ನೇ ರಾಜ್ಯಮಟ್ಟದ ಮೌಂಟೇನ್ ಬೈಕ್ ಚಾಂಪಿಯನ್‌ಷಿಪ್‌ನಲ್ಲಿ ಪುರುಷರ 3 ಲ್ಯಾಪ್ ಮಾಸ್ ಸ್ಟಾರ್ಟ್ ಹಾಗೂ ಮಹಿಳೆಯರ 2 ಲ್ಯಾಪ್ ಮಾಸ್ ಸ್ಟಾರ್ಟ್‌ನಲ್ಲಿ ಪ್ರಥಮ ಸ್ಥಾನ ಗಳಿಸಿದ ಕೆ.ವಿ. ವೈಶಾಖ್ (ಎಡ) ಮತ್ತು ಸ್ಟಾರ್ ನರ್ಝರಿ —ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

ವಿಶ್ವ ಅಥ್ಲೆಟಿಕ್ಸ್: ಸಂತೋಷ್, ಸರ್ವೇಶ್‌ಗೆ ನಿರಾಸೆ

ಬುಡಾಪೆಸ್ಟ್ (ಪಿಟಿಐ): ಭಾರತದ ಸಂತೋಷ್ ಕುಮಾರ್ ತಮಿಳರಸನ್ ಮತ್ತು ಸರ್ವೇಶ್ ಅನಿಲ್ ಕುಶಾರೆ ಇಲ್ಲಿ ನಡೆಯುತ್ತಿರುವ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ನಿರಾಸೆ ಅನುಭವಿಸಿದರು.

ಭಾನುವಾರ ನಡೆದ 400 ಮೀ. ಹರ್ಡಲ್ಸ್ ಸ್ಪರ್ಧೆಯ ಮೂರನೇ ಹೀಟ್ಸ್‌ನಲ್ಲಿ ಓಡಿದ ಸಂತೋಷ್, 7ನೇ ಸ್ಥಾನ ಪಡೆದು ಸೆಮಿಫೈನಲ್ ಪ್ರವೇಶಿಸಲು ವಿಫಲರಾದರು. ಅವರು 50.46 ಸೆಕೆಂಡುಗಳೊಂದಿಗೆ ಗುರಿ ತಲುಪಿದರು.

ಹೈಜಂಪ್ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ ಸರ್ವೇಶ್, ತಮ್ಮ ಮೂರು ಪ್ರಯತ್ನಗಳಲ್ಲಿ 2.25 ಮೀ. ದಾಟಲು ವಿಫಲರಾದರು. ಅರ್ಹತಾ ಹಂತದ 'ಬಿ' ಗುಂಪಿನಲ್ಲಿ 11ನೇ ಹಾಗೂ ಒಟ್ಟಾರೆಯಾಗಿ 20ನೇ ಸ್ಥಾನ ಪಡೆದರು.

ಕೂಟದ ಮೊದಲ ದಿನವೂ ಭಾರತದ ಅಥ್ಲೀಟ್‌ಗಳಿಗೆ ನಿರಾಸೆ ಎದುರಾಗಿತ್ತು.

ವಿಶ್ವಕಪ್ ಚೆಸ್: ಫೈನಲ್‌ಗೆ ಕಾರ್ಲ್‌ಸನ್

ಮತ್ತೆ ಡ್ರಾ ಸಾಧಿಸಿದ ಪ್ರಜ್ಞಾನಂದ

ಬಾಕು, ಅಜರ್‌ಬೈಜಾನ್: ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಮತ್ತು ಅಮೆರಿಕದ ಫ್ಯಾಬಿಯಾನೊ ಕರುವಾನ ನಡುವಣ ವಿಶ್ವಕಪ್ ಚೆಸ್ ಟೂರ್ನಿ ಸೆಮಿಫೈನಲ್‌ನ ಎರಡನೇ ಪಂದ್ಯವೂ ಭಾನುವಾರ ಡ್ರಾದಲ್ಲಿ ಕೊನೆಗೊಂಡಿತು.

ಇದರಿಂದ ವಿಜೇತರನ್ನು ನಿರ್ಣಯಿಸಲು ಸೋಮವಾರ ರ್‍ಯಾಪಿಡ್ ಟೈಬ್ರೇಕರ್ ಪಂದ್ಯ ನಡೆಯಲಿದೆ. ಶನಿವಾರ ನಡೆದಿದ್ದ ಕ್ಲಾಸಿಕಲ್ ಮಾದರಿಯ ಮೊದಲ ಪಂದ್ಯವೂ ಡ್ರಾದಲ್ಲಿ ಕೊನೆಗೊಂಡಿತ್ತು.

ಬಿಳಿ ಕಾಯಿಗಳೊಂದಿಗೆ ಆಡಿದ ಪ್ರಜ್ಞಾನಂದ ಅವರು ಅನುಭವಿ ಎದುರಾಳಿಯ ತಂತ್ರಗಳಿಗೆ ಮರುತಂತ್ರ ರೂಪಿಸುವಲ್ಲಿ ಯಶಸ್ವಿಯಾದರು. 47 ನಡೆಗಳ ಬಳಿಕ ಇಬ್ಬರೂ ಡ್ರಾಗೆ ಒಪ್ಪಿಕೊಂಡರು.

ಫೈನಲ್‌ಗೆ ಕಾರ್ಲ್‌ಸನ್: ವಿಶ್ವದ ಅಗ್ರಮಾನ್ಯ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಇನ್ನೊಂದು ಸೆಮಿಫೈನಲ್‌ನಲ್ಲಿ ಸ್ಥಳೀಯ ಆಟಗಾರ ನಿಜತ್ ಅಬಸೋವ್ ಅವರನ್ನು 1.5–0.5 ಪಾಯಿಂಟ್ಸ್‌ಗಳಿಂದ ಮಣಿಸಿ ಫೈನಲ್ ಪ್ರವೇಶಿಸಿದರು.

ಶನಿವಾರ ನಡೆದಿದ್ದ ಪಂದ್ಯ ಜಯಿಸಿದ್ದ ಕಾರ್ಲ್‌ಸನ್, ಭಾನುವಾರ ಡ್ರಾ ಮಾಡಿಕೊಂಡು ಇದೇ ಮೊದಲ ಬಾರಿ ಪ್ರಶಸ್ತಿ ಸುತ್ತು ತಲುಪಿದರು. ಮಾಜಿ ವಿಶ್ವಚಾಂಪಿಯನ್ ಕಾರ್ಲ್‌ಸನ್ ಅವರು ವಿಶ್ವಕಪ್ ಚೆಸ್ ಟೂರ್ನಿಯನ್ನು ಒಮ್ಮೆಯೂ ಜಯಿಸಿಲ್ಲ. ಈ ಬಾರಿ ಪ್ರಶಸ್ತಿಯತ್ತ ದಿಟ್ಟ ಹೆಜ್ಜೆಯಿಟ್ಟಿದ್ದಾರೆ.


ಮ್ಯಾಗ್ನಸ್ ಕಾರ್ಲ್‌ಸನ್

ಬ್ಯಾಸ್ಕೆಟ್‌ಬಾಲ್: ಐಬಿಬಿಸಿ ತಂಡಕ್ಕೆ ಗೆಲುವು

ಬೆಂಗಳೂರು: ಯಶವಂತ್ ಮತ್ತು ಸುರೇಶ್ ಅವರ ಆಟದ ಬಲದಿಂದ ಐಬಿಬಿಸಿ ತಂಡವು ಪ್ರೊ.ಎನ್.ಸಿ. ಪರಪ್ಪ ಸ್ಮಾರಕ ಎವರ್ ರೋಲಿಂಗ್ ಟ್ರೋಫಿಯ ರಾಜ್ಯ 'ಎ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 77–76 ರಿಂದ ಬಿಎಸ್‌ಎನ್‌ಎಲ್ ತಂಡವನ್ನು ಮಣಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಐಬಿಬಿಸಿ ತಂಡವು 1 ಪಾಯಿಂಟ್ ಅಂತರದಿಂದ ಜಯ ಸಾಧಿಸಿತು.

ಮತ್ತೊಂದು ಪಂದ್ಯದಲ್ಲಿ ಎಸ್. ಬ್ಲೂಸ್ ತಂಡವು 79–76 ರಿಂದ ಭಾರತ್ ಎಸ್.ಯು ತಂಡವನ್ನು ಸೋಲಿಸಿತು.

ಇತರ ಪಂದ್ಯಗಳಲ್ಲಿ ಡಿವೈಇಎಸ್ ಬೆಂಗಳೂರು ತಂಡವು ಮನೋಜ್ (30), ರಕ್ಷಿತ್ (19) ಅವರ ಆಟದ ನೆರವಿನಿಂದ 72–68ರಿಂದ ಬೀಗಲ್ಸ್ ಬಿ.ಸಿ ತಂಡವನ್ನು ಪರಾಭವಗೊಳಿಸಿತು. ಯಂಗ್ ಓರಿಯನ್ಸ್ ಎಸ್.ಸಿ ತಂಡವು 104–57 ರಿಂದ ಜಿಎಸ್‌ಟಿ ಅಂಡ್ ಕಸ್ಟಮ್ಸ್ ತಂಡವನ್ನು ಮಣಿಸಿತು. ಬ್ಯಾಂಕ್ ಆಫ್ ಬರೋಡಾ ತಂಡವು 84–52 ರಿಂದ ಎಂಎನ್‌ಕೆ ರಾವ್ ಪಾರ್ಕ್ ತಂಡವನ್ನು ಸೋಲಿಸಿತು.

ಶೂಟಿಂಗ್: ಅಖಿಲ್ ಒಲಿಂಪಿಕ್ಸ್‌ಗೆ ಅರ್ಹತೆ

ಬಾಕು, ಅಜರ್‌ಬೈಜಾನ್ (ಪಿಟಿಐ): ಭಾರತದ ಅಖಿಲ್ ಶೊರಾನ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ ರೈಫಲ್ ತ್ರಿ ಪೊಸಿಷನ್‌ನಲ್ಲಿ ಕಂಚು ಗೆದ್ದುಕೊಂಡರಲ್ಲದೆ, ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದರು.

ಭಾನುವಾರ ನಡೆದ ಸ್ಪರ್ಧೆಯಲ್ಲಿ ಫೈನಲ್ ಪ್ರವೇಶಿಸಿದ ಎಂಟು ಶೂಟರ್‌ಗಳಲ್ಲಿ ಅಖಿಲ್, 450.0 ಪಾಯಿಂಟ್ಸ್‌ಗಳೊಂದಿಗೆ ಮೂರನೇ ಸ್ಥಾನ ಪಡೆದರು. ಅವರು ಅರ್ಹತಾ ಹಂತದಲ್ಲಿ 585 ಪಾಯಿಂಟ್ಸ್‌ಗಳೊಂದಿಗೆ ಆರನೆಯವರಾಗಿ ಪದಕ ಸುತ್ತು ತಲುಪಿದ್ದರು. ಆಸ್ಟ್ರಿಯದ ಅಲೆಕ್ಸಾಂಡರ್ ಶ್ಮಿರ್ಲ್ (462.6) ಚಿನ್ನ ಹಾಗೂ ಜೆಕ್ ಗಣರಾಜ್ಯದ ಪೆಟ್ರ್ ನಿಂಬರ್‌ಸ್ಕಿ (459.2) ಬೆಳ್ಳಿ ಗೆದ್ದುಕೊಂಡರು.

ರಿದಂ ಸಾಂಗ್ವಾನ್, ಇಶಾ ಸಿಂಗ್ ಮತ್ತು ಮನು ಭಾಕರ್ ಅವರನ್ನೊಳಗೊಂಡ ಭಾರತ ಮಹಿಳಾ ತಂಡ 25 ಮೀ. ಪಿಸ್ತೂಲ್ ವಿಭಾಗದಲ್ಲಿ ಚಿನ್ನ ಜಯಿಸಿತು. ಒಟ್ಟು 1,744 ಪಾಯಿಂಟ್ಸ್‌ಗಳನ್ನು ಕಲೆಹಾಕಿದ ಭಾರತ ತಂಡ, ಚೀನಾ ತೈಪೆ ವಿರುದ್ಧ ಗೆದ್ದಿತು. ಈ ಸ್ಪರ್ಧೆಯ ಕಂಚು ಚೀನಾ ತನ್ನದಾಗಿಸಿಕೊಂಡಿತು.

ವೈಯಕ್ತಿಕ ವಿಭಾಗದಲ್ಲಿ ಎಂಟನೇ ಸ್ಥಾನ ಪಡೆದ ಸಾಂಗ್ವಾನ್ ಅವರು ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಳ್ಳುವ ಅವಕಾಶ ಕಳೆದುಕೊಂಡರು.

ಅಖಿಲ್, ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ ಮತ್ತು ನೀರಜ್ ಕುಮಾರ್ ಅವರಿದ್ದ ಭಾರತ ತಂಡ ಪುರುಷರ ರೈಫಲ್ ತ್ರಿ ಪೊಸಿಷನ್‌ನಲ್ಲಿ ಒಟ್ಟು 1,750 ಪಾಯಿಂಟ್ಸ್‌ಗಳೊಂದಿಗೆ ಚಿನ್ನ ಗೆದ್ದಿತು. ಈ ಮೂಲಕ ಅಖಿಲ್ ಒಂದೇ ದಿನ ಎರಡು ಪದಕ ಗೆದ್ದ ಸಾಧನೆ ಮಾಡಿದರು.

'ವಿಶ್ವಕಪ್ ಶೂಟಿಂಗ್‌ನಲ್ಲಿ ಪದಕ ಗೆಲ್ಲುವ ಜತೆ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವುದು ಸಂತಸ ಉಂಟುಮಾಡಿದೆ. ಹಲವು ವರ್ಷಗಳ ಕಠಿಣ ಪರಿಶ್ರಮಕ್ಕೆ ಫಲ ಸಿಕ್ಕಿದೆ' ಎಂದು ಅಖಿಲ್ ಪ್ರತಿಕ್ರಿಯಿಸಿದ್ದಾರೆ.


ಅಖಿಲ್ ಶೊರಾನ್

ಕಿಕ್‌ಸ್ಟಾರ್ಟ್ ತಂಡಕ್ಕೆ ಜಯ

ಬೆಂಗಳೂರು: ಕ್ಲೀಟಸ್ ಡಾಮಿನಿಕ್ ಜೇಕಬ್ ಪಾಲ್ ಮತ್ತು ಏನಮ್ ಗ್ರಾಫೆನ್‌ಬರ್ಗ್ ಜುವಾ ಅವರು ಗಳಿಸಿದ ಹ್ಯಾಟ್ರಿಕ್ ಗೋಲಿನ ನೆರವಿನಿಂದ ಕಿಕ್‌ಸ್ಟಾರ್ಟ್ ಎಫ್.ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 6–1ರಿಂದ ರೆಬೆಲ್ಸ್ ಎಫ್.ಸಿ ತಂಡವನ್ನು ಪರಾಭವಗೊಳಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ತಂಡವು 5 ಗೋಲುಗಳ ಅಂತರದಿಂದ ಜಯ ಸಾಧಿಸಿತು. ಆ ತಂಡದ ಕ್ಲೀಟಸ್ (7, 32, 52ನೇ) ಮತ್ತು ಏನಮ್ (13, 62, 99ನೇ) ತಲಾ ಮೂರು ಗೋಲು ದಾಖಲಿಸಿದರು. ಅಬಿಯಾಂಗ್ ಮೇಮ್ ನೊಂಗ್ನೆಂಗ್ ರೆಬೆಲ್ಸ್ ಪರ ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಎಫ್.ಸಿ ಬೆಂಗಳೂರು ಯುನೈಟೆಡ್ ತಂಡವು 7–0ಯಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ತಂಡವನ್ನು ಮಣಿಸಿತು. ಕಾರ್ತಿಕ್ ಗೋವಿಂದಸ್ವಾಮಿ (2, 19, 47ನೇ) ಹ್ಯಾಟ್ರಿಕ್ ಗೋಲು ಗಳಿಸಿದರು. ಕಮಲೇಶ್ ಎರಡು ಬಾರಿ, ಚೆಸ್ಟರ್ ಪೌಲ್ ಲಿಂಗ್ಡೊ, ರಿಷಭ್ ಡೊಬ್ರಿಯಾಲ್ ತಲಾ 1 ಬಾರಿ ಚೆಂಡನ್ನು ಗುರಿ ಸೇರಿಸಿದರು.

ಎರಡನೇ ಟಿ20 ಪಂದ್ಯ: ಐರ್ಲೆಂಡ್ ವಿರುದ್ಧ 33 ರನ್ ಗೆಲುವು

ಸರಣಿ ಗೆದ್ದ ಬೂಮ್ರಾ ಬಳಗ

ಡಬ್ಲಿನ್ (ಪಿಟಿಐ): ಆರಂಭಿಕ ಬ್ಯಾಟರ್ ಋತುರಾಜ್ ಗಾಯಕವಾಡ ಅವರ ಅರ್ಧಶತಕ ಮತ್ತು ಬೌಲರ್‌ಗಳ ಪರಿಣಾಮಕಾರಿ ದಾಳಿ ಬಲದಿಂದ ಭಾರತ ತಂಡವು ಐರ್ಲೆಂಡ್ ಎದುರಿನ ಎರಡನೇ ಟಿ20 ಪಂದ್ಯವನ್ನು 33 ರನ್‌ಗಳಿಂದ ಗೆದ್ದುಕೊಂಡಿತು.

ಈ ಮೂಲಕ ಜಸ್‌ಪ್ರೀತ್ ಬೂಮ್ರಾ ಬಳಗ ಮೂರು ಪಂದ್ಯಗಳ ಸರಣಿಯನ್ನು 2–0 ಯಿಂದ ಕೈವಶ ಮಾಡಿಕೊಂಡಿದೆ. ಮೂರನೇ ಹಾಗೂ ಅಂತಿಮ ಪಂದ್ಯ ಬುಧವಾರ ನಡೆಯಲಿದೆ.

ದ ವಿಲೇಜ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 185 ರನ್ ಗಳಿಸಿತು. ಆ ಬಳಿಕ ಆತಿಥೇಯ ತಂಡವನ್ನು 8 ವಿಕೆಟ್ ನಷ್ಟಕ್ಕೆ 152 ರನ್‌ಗಳಿಗೆ ನಿಯಂತ್ರಿಸಿತು.

ಸವಾಲಿನ ಗುರಿ ಬೆನ್ನಟ್ಟಿದ ಐರ್ಲೆಂಡ್ ಪರ ಆರಂಭಿಕ ಬ್ಯಾಟರ್ ಆ್ಯಂಡಿ ಬಲ್ಬರ್ನಿ (72 ರನ್; 52 ಎ., 4X5, 6X4) ಮಾತ್ರ ಪ್ರತಿರೋಧ ಒಡ್ಡಿದರು. ಇತರರು ಭಾರತದ ಬೌಲಿಂಗ್ ದಾಳಿಯನ್ನು ಎದುರಿಸಿ ನಿಲ್ಲಲು ವಿಫಲರಾದರು.

ಪ್ರಸಿದ್ಧ ಕೃಷ್ಣ (29ಕ್ಕೆ 2) ಎದುರಾಳಿಗಳಿಗೆ ಆರಂಭಿಕ ಆಘಾತ ನೀಡಿದರೆ, ಬೂಮ್ರಾ (15ಕ್ಕೆ 2) ಮತ್ತು ರವಿ ಬಿಷ್ಣೋಯಿ (37ಕ್ಕೆ 2) ತಲಾ ಎರಡು ವಿಕೆಟ್ ಪಡೆದರು.

ಮಿಂಚಿದ ಋತುರಾಜ್: ಇದಕ್ಕೂ ಮುನ್ನ ಟಾಸ್ ಗೆದ್ದ ಐರ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. 4ನೇ ಓವರ್‌ನಲ್ಲಿ ಕ್ರೇಗ್ ಯಂಗ್ ಹಾಕಿದ ಎಸೆತದಲ್ಲಿ ದೊಡ್ಡ ಹೊಡೆತ ಆಡಲು ಯತ್ನಿಸಿದ ಯಶಸ್ವಿ ಜೈಸ್ವಾಲ್, ಫೀಲ್ಡರ್ ಕರ್ಟಿಸ್‌ಗೆ ಕ್ಯಾಚಿತ್ತರು. ನಂತರದ ಓವರ್‌ನಲ್ಲಿ ಬ್ಯಾರಿ ಮೆಕಾರ್ಥಿ ಎಸೆತದಲ್ಲಿ ತಿಲಕ್ ವರ್ಮಾ ಔಟಾದರು. ಕೇವಲ ಒಂದು ರನ್ ಗಳಿಸಿದರು.


ಋತುರಾಜ್ ಗಾಯಕವಾಡ ಬ್ಯಾಟಿಂಗ್ ವೈಖರಿ

ಇನ್ನೊಂದೆಡೆ ತಾಳ್ಮೆಯಿಂದ ಆಡುತ್ತಿದ್ದ ಋತುರಾಜ್ ಅವರೊಂದಿಗೆ ಸೇರಿದ ಸಂಜು ಸ್ಯಾಮ್ಸನ್ ಇನಿಂಗ್ಸ್‌ಗೆ ಬಲ ತುಂಬಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ ಋತುರಾಜ್ (58; 43ಎ, 4X6, 6X1) ಮತ್ತು ಸಂಜು (40; 26ಎ, 4X5, 6X1) 71 ರನ್ ಸೇರಿಸಿದರು.

ಬೆಂಜಮಿನ್ ವೈಟ್ ಬೌಲಿಂಗ್‌ನಲ್ಲಿ ಸಂಜು ಕ್ಲೀನ್‌ಬೌಲ್ಡ್ ಆಗುವುದರೊಂದಿಗೆ ಜೊತೆಯಾಟ ಮುರಿಯಿತು. ಕ್ರೀಸ್‌ಗೆ ಬಂದ ನವಪ್ರತಿಭೆ ರಿಂಕು ಸಿಂಗ್ (38; 21ಎ) ತಮ್ಮ ಮೇಲಿನ ನಿರೀಕ್ಷೆಯನ್ನು ಹುಸಿಗೊಳಿಸಲಿಲ್ಲ. 180.95ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ಎರಡು ಬೌಂಡರಿ ಮತ್ತು ಮೂರು ಸಿಕ್ಸರ್ ಸಿಡಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ:20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 185 (ಯಶಸ್ವಿ ಜೈಸ್ವಾಲ್ 18, ಋತುರಾಜ್ ಗಾಯಕವಾಡ 58, ಸಂಜು ಸ್ಯಾಮ್ಸನ್ 40, ರಿಂಕು ಸಿಂಗ್ 38, ಶಿವಂ ದುಬೆ ಔಟಾಗದೆ 22, ಬ್ಯಾರಿ ಮೆಕಾರ್ಥಿ 36ಕ್ಕೆ2, ಕ್ರೇಗ್ ಯಂಗ್ 29ಕ್ಕೆ1, ಮಾರ್ಕ್ ಅಡೇರ್ 36ಕ್ಕೆ1, ಬೆಂಜಮಿನ್ ವೈಟ್ 33ಕ್ಕೆ1) **ಐರ್ಲೆಂಡ್:** 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 152 (ಆ್ಯಂಡಿ ಬಲ್ಬರ್ನಿ 72, ಮಾರ್ಕ್ ಅಡೇರ್ 23, ಜಸ್‌ಪ್ರೀತ್ ಬೂಮ್ರಾ 15ಕ್ಕೆ 2, ಪ್ರಸಿದ್ಧ ಕೃಷ್ಣ 29ಕ್ಕೆ 2, ರವಿ ಬಿಷ್ಣೋಯಿ 37ಕ್ಕೆ 2) ಫಲಿತಾಂಶ: ಭಾರತಕ್ಕೆ 33 ರನ್ ಗೆಲುವು

ಕ್ರಿಕೆಟ್: ತಿರುಗೇಟು ನೀಡಿದ ನ್ಯೂಜಿಲೆಂಡ್

ದುಬೈ (ಎಎಫ್‌ಪಿ): ಯುನೈಟೆಡ್ ಅರಬ್ ಎಮಿರೆಟ್ಸ್ (ಯುಎಇ) ಎದುರು ಎರಡನೇ ಪಂದ್ಯದಲ್ಲಿ ಆಘಾತ ಅನುಭವಿಸಿದ್ದ ನ್ಯೂಜಿಲೆಂಡ್ ತಂಡ ಅಂತಿಮ ಟಿ20 ಕ್ರಿಕೆಟ್ ಪಂದ್ಯವನ್ನು 32 ರನ್‌ಗಳಿಂದ ಗೆದ್ದುಕೊಂಡು ಸರಣಿಯನ್ನು 2–1 ರಿಂದ ತನ್ನದಾಗಿಸಿಕೊಂಡಿದೆ.

ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟಿಮ್ ಸೌಥಿ ಬಳಗ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 166 ರನ್ ಗಳಿಸಿದರೆ, ಆತಿಥೇಯ ತಂಡ ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 134 ರನ್ ಗಳಿಸಲಷ್ಟೇ ಶಕ್ತವಾಯಿತು.

ಮೊದಲ ಪಂದ್ಯ ಸೋತಿದ್ದ ಯುಎಇ, ಶನಿವಾರ ನಡೆದಿದ್ದ ಎರಡನೇ ಪಂದ್ಯದಲ್ಲಿ ಬಲಿಷ್ಠ ಎದುರಾಳಿಗಳನ್ನು 7 ವಿಕೆಟ್‌ಗಳಿಂದ ಮಣಿಸಿ ಸರಣಿಯಲ್ಲಿ 1–1 ರಿಂದ ಸಮಬಲ ಸಾಧಿಸಿತ್ತು.

ಮೊದಲು ಬ್ಯಾಟ್ ಮಾಡಿದ್ದ ನ್ಯೂಜಿಲೆಂಡ್, 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 142 ರನ್ ಗಳಿಸಿತ್ತು. ಗುರಿ ಬೆನ್ನಟ್ಟಿದ್ದ ಯುಎಇ ನಾಯಕ ಮೊಹಮ್ಮದ್ ವಸೀಂ (5) ಮತ್ತು ಆಸಿಫ್ (ಅಜೇಯ 48; 29ಎ) ಬ್ಯಾಟಿಂಗ್ ನೆರವಿನಿಂದ 15.4 ಓವರ್‌ಗಳಲ್ಲಿ 3 ವಿಕೆಟ್‌ಗೆ 144 ರನ್ ಗಳಿಸಿ ಜಯಿಸಿತ್ತು.


ಫಿಫಾ ಮಹಿಳೆಯರ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆದ ಸ್ಪೇನ್ ತಂಡದ ಆಟಗಾರ್ತಿಯರು ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಸ್ಪೇನ್ ಮುಡಿಗೆ ಚೊಚ್ಚಲ ಕಿರೀಟ

ವಿಶ್ವಕಪ್ ಫುಟ್‌ಬಾಲ್: ಫೈನಲ್‌ನಲ್ಲಿ ಇಂಗ್ಲೆಂಡ್ ಎದುರು ಜಯ

ಸಿಡ್ನಿ (ಎಎಫ್‌ಪಿ): ನಾಯಕಿ ಓಲ್ಗಾ ಕರ್ಮೋನಾ ತಂದಿತ್ತ ಗೋಲಿನ ನೆರವಿನಿಂದ ಇಂಗ್ಲೆಂಡ್ ತಂಡವನ್ನು 1–0 ಯಿಂದ ಮಣಿಸಿದ ಸ್ಪೇನ್, ಫಿಫಾ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಚೊಚ್ಚಲ ಪ್ರಶಸ್ತಿ ಗೆದ್ದು ಸಂಭ್ರಮಿಸಿತು.

ಸಿಡ್ನಿಯ ‘ಸ್ಟೇಡಿಯಂ ಆಸ್ಟ್ರೇಲಿಯಾ’ ದಲ್ಲಿ ಸುಮಾರು 76 ಸಾವಿರ ಪ್ರೇಕ್ಷಕರ ಸಮ್ಮುಖದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದ 29ನೇ ನಿಮಿಷದಲ್ಲಿ ಗೆಲುವಿನ ಗೋಲು ದಾಖಲಾಯಿತು.

ಮೆರಿಯೊನಾ ಕಾಲ್ಡೆಂಟಿ ಅವರು ಅಂಗಳದ ಎಡಭಾಗಕ್ಕೆ ನೀಡಿದ ನಿಖರ ಪಾಸ್‌ನಲ್ಲಿ ಚೆಂಡನ್ನು ನಿಯಂತ್ರಣಕ್ಕೆ ಪಡೆದುಕೊಂಡ ಕರ್ಮೋನಾ, ಎದುರಾಳಿ ಡಿಫೆಂಡರ್‌ಗಳು ಮತ್ತು ಗೋಲ್‌ಕೀಪರ್‌ಅನ್ನು ತಪ್ಪಿಸಿ ಯಶಸ್ವಿಯಾಗಿ ಗುರಿ ಸೇರಿಸಿದರು. ಏಕೈಕ ಗೋಲಿನ ಮುನ್ನಡೆಯನ್ನು ಕೊನೆಯವರೆಗೂ ಕಾಪಾಡಿಕೊಳ್ಳುವಲ್ಲಿ ಸ್ಪೇನ್ ಯಶಸ್ವಿಯಾಯಿತು.

1991 ರಿಂದ 2023ರ ವರೆಗೆ ಒಟ್ಟು ಒಂಬತ್ತು ವಿಶ್ವಕಪ್ ಟೂರ್ನಿಗಳು ನಡೆದಿದ್ದು, ಕಿರೀಟ ಮುಡಿಗೇರಿಸಿದ ಐದನೇ ತಂಡ ಎಂಬ ಗೌರವ ಸ್ಪೇನ್‌ಗೆ ಒಲಿಯಿತು. ಈ ಮೂಲಕ ಅಮೆರಿಕ, ಜರ್ಮನಿ, ನಾರ್ವೆ ಮತ್ತು ಜಪಾನ್ ತಂಡಗಳ ಸಾಲಿಗೆ ಸೇರಿತು.

ಮಹಿಳಾ ವಿಶ್ವಕಪ್ ವಿಜೇತರು

ವರ್ಷ	ಚಾಂಪಿಯನ್	ರನ್ನರ್ ಅಪ್
1991	ಅಮೆರಿಕ	ನಾರ್ವೆ
1995	ನಾರ್ವೆ	ಜರ್ಮನಿ
1999	ಅಮೆರಿಕ	ಚೀನಾ
2003	ಜರ್ಮನಿ	ಸ್ವೀಡನ್
2007	ಜರ್ಮನಿ	ಬ್ರೆಜಿಲ್
2011	ಜಪಾನ್	ಅಮೆರಿಕ
2015	ಅಮೆರಿಕ	ಜಪಾನ್
2019	ಅಮೆರಿಕ	ನೆದರ್ಲೆಂಡ್ಸ್
2023	ಸ್ಪೇನ್	ಇಂಗ್ಲೆಂಡ್

ಸ್ಪೇನ್ ರಾಣಿ ಲೆತಿಝಿಯಾ ಸೇರಿದಂತೆ ಗಣ್ಯರ ಮುಂದೆ ನಡೆದ ಫೈನಲ್ ಪಂದ್ಯ ರೋಚಕತೆಯಿಂದ ಕೂಡಿತ್ತು. 29 ನೇ ನಿಮಿಷದಲ್ಲಿ ಮುನ್ನಡೆ ದೊರೆತದ್ದು ಸ್ಪೇನ್ ಆಟಗಾರ್ತಿಯರ ಉತ್ಸಾಹವನ್ನು ಇಮ್ಮಡಿಗೊಳಿಸಿತು.

70 ನೇ ನಿಮಿಷದಲ್ಲಿ ಇಂಗ್ಲೆಂಡ್‌ನ ಕಿಯೆರಾ ವಾಲ್ಶ್ ಅವರು ಹ್ಯಾಂಡ್ ಬಾಲ್ ಮಾಡಿದ್ದಕ್ಕೆ ರೆಫರಿ, ಸ್ಪೇನ್‌ಗೆ ಪೆನಾಲ್ಟಿ ಕಿಕ್ ಅವಕಾಶ ನೀಡಿದರು. ಆದರೆ ಜೆನಿಫರ್ ಹೆರ್ಮೊಸೊ ಅವರು ಒದ್ದ ಚೆಂಡನ್ನು ಇಂಗ್ಲೆಂಡ್ ಗೋಲ್‌ಕೀಪರ್ ಮೇರಿ ಅರ್ಪ್ಸ್ ತಮ್ಮ ಎಡಭಾಗಕ್ಕೆ ಡೈವ್ ಹೊಡೆದು ತಡೆದರು.

90 ನಿಮಿಷಗಳ ಆಟದ ಬಳಿಕ 13 ನಿಮಿಷಗಳ ‘ಇಂಜುರಿ ಅವಧಿ’ ನೀಡಲಾಯಿತು. ರಕ್ಷಣೆಗೆ ಒತ್ತುನೀಡಿದ ಸ್ಪೇನ್, ಎದುರಾಳಿ ತಂಡದ ಗೋಲು ಗಳಿಸುವ ಎಲ್ಲ ಪ್ರಯತ್ನಗಳನ್ನು ತಡೆದು ಗೆಲುವು ಒಲಿಸಿಕೊಂಡಿತು. ಚೊಚ್ಚಲ ಕಿರೀಟ ಗೆಲ್ಲುವ ಅವಕಾಶ ಕಳೆದುಕೊಂಡ ಇಂಗ್ಲೆಂಡ್ ಆಟಗಾರ್ತಿಯರು ಕಣ್ಣೀರಿಟ್ಟರು.

ಸ್ಪೇನ್ ತಂಡ ಮಿರುಗುವ ಟ್ರೋಫಿಯೊಂದಿಗೆ ₹ 35 ಕೋಟಿ ನಗದು ಬಹುಮಾನ ಪಡೆದರೆ, ಇಂಗ್ಲೆಂಡ್ ₹ 25 ಕೋಟಿ ತನ್ನದಾಗಿಸಿಕೊಂಡಿತು.

ಬೊನ್ಮತಿಗೆ ‘ಗೋಲ್ಡನ್ ಬಾಲ್’: ಸ್ಪೇನ್ ತಂಡದ ಮಿಡ್‌ಫೀಲ್ಡರ್ ಐತಾನಾ ಬೊನ್ಮತಿ ಅವರು ಟೂರ್ನಿಯ ಶ್ರೇಷ್ಠ ಆಟಗಾರ್ತಿಗೆ ನೀಡುವ ‘ಗೋಲ್ಡನ್ ಬಾಲ್’ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಅತಿಹೆಚ್ಚು ಗೋಲು ಗಳಿಸಿದ ಜಪಾನ್‌ನ ಹಿನಾಟ ಮಿಯಜಾವ (5 ಗೋಲು) ಅವರು ‘ಗೋಲ್ಡನ್ ಬೂಟ್’ ಗೌರವ ಪಡೆದರೆ, ‘ಗೋಲ್ಡನ್ ಗ್ಲೋವ್’ ಪ್ರಶಸ್ತಿಯು ಇಂಗ್ಲೆಂಡ್‌ನ ಗೋಲ್‌ಕೀಪರ್ ಮೇರಿ ಅರ್ಪ್ಸ್ ಅವರಿಗೆ ಒಲಿಯಿತು. ‘ಅತ್ಯುತ್ತಮ ಯುವ ಆಟಗಾರ್ತಿ’ಗೆ ನೀಡುವ ಪ್ರಶಸ್ತಿಗೆ ಸ್ಪೇನ್‌ನ 19 ವರ್ಷದ ಸಲ್ಮಾ ಪರೆಲುಯೆಲೊ ಭಾಜನರಾದರು.


ರಾಷ್ಟ್ರೀಯ ಸಬ್ ಜೂನಿಯರ್ ಮತ್ತು ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದ ಕರ್ನಾಟಕ ತಂಡ

ಈಜು: ಕರ್ನಾಟಕ ಸಮಗ್ರ ಚಾಂಪಿಯನ್

ಬೆಂಗಳೂರು: ಕರ್ನಾಟಕದ ಈಜುಪಟುಗಳು ರಾಷ್ಟ್ರೀಯ ಸಬ್ ಜೂನಿಯರ್ ಮತ್ತು ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ನಿರೀಕ್ಷೆಯಂತೆಯೇ ಸಮಗ್ರ ಪ್ರಶಸ್ತಿಯನ್ನು ತಮ್ಮಲ್ಲೇ ಉಳಿಸಿಕೊಂಡರು.

ಭುವನೇಶ್ವರದಲ್ಲಿ ಭಾನುವಾರ ಕೊನೆಗೊಂಡ ಕೂಟದಲ್ಲಿ ಕರ್ನಾಟಕ ತಂಡ 50 ಚಿನ್ನ, 42 ಬೆಳ್ಳಿ ಮತ್ತು 27 ಕಂಚಿನ ಪದಕಗಳೊಂದಿಗೆ ಅಗ್ರಸ್ಥಾನ ಪಡೆಯಿತು. 11 ಚಿನ್ನ, 24 ಬೆಳ್ಳಿ ಮತ್ತು 19 ಕಂಚು ಸೇರಿದಂತೆ 54 ಪದಕ ಗೆದ್ದುಕೊಂಡ ಮಹಾರಾಷ್ಟ್ರ ಎರಡನೇ ಸ್ಥಾನ ಗಳಿಸಿತು.

ಕರ್ನಾಟಕದ ಇಶಾನ್ ಮೆಹ್ರಾ (5 ಚಿನ್ನ, 2 ಕೂಟ ದಾಖಲೆ) ಅವರು ಬಾಲಕರ ‘ಗುಂಪು–2’ ರಲ್ಲಿ ಮತ್ತು ತನಿಷಿ ಗುಪ್ತಾ (4 ಚಿನ್ನ, 1 ಬೆಳ್ಳಿ, 3 ಕೂಟ ದಾಖಲೆ) ಬಾಲಕಿಯರ ‘ಗುಂಪು–2’ ರಲ್ಲಿ ‘ಶ್ರೇಷ್ಠ ಈಜುಪಟು’ ಗೌರವ ಪಡೆದುಕೊಂಡರು.

ಅಂತಿಮ ದಿನ ನಡೆದ ಬಾಲಕರ ‘ಗುಂಪು–2‘ರ 200 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಕರ್ನಾಟಕದ ವೇದಾಂತ ಎಂ.ವಿ. ಅವರು 2 ನಿ.11.74 ಸೆ.ಗಳೊಂದಿಗೆ ಚಿನ್ನ ಗೆದ್ದು ಹೊಸ ದಾಖಲೆ ನಿರ್ಮಿಸಿದರು. ಆರ್ಯನ್ ಭೋಸಲೆ (2 ನಿ. 11.97 ಸೆ.) ಹೆಸರಿನಲ್ಲಿದ್ದ ದಾಖಲೆಯನ್ನು ಮುರಿದರು.

ಇದೇ ಗುಂಪಿನ 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಟಿ.ಅಕ್ಷಜ್ (2 ನಿ. 1.85 ಸೆ.) ಅವರು ಚಿನ್ನ ಗೆದ್ದರೆ, ಮೋನಿಷ್ ಪಿ.ವಿ. ಕಂಚು ಪಡೆದುಕೊಂಡರು.

ಅಂತಿಮ ದಿನ ಮಿಂಚಿದ ರಾಜ್ಯದ ಬಾಲಕಿಯರು ನಾಲ್ಕು ಚಿನ್ನ ಗೆದ್ದುಕೊಂಡರು. ‘ಗುಂಪು–1’ರ 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಹಷಿಕಾ ರಾಮಚಂದ್ರ (2 ನಿ. 8.35 ಸೆ.) ಚಿನ್ನ ಜಯಿಸಿದರೆ, ಶಿರಿನ್ ಅವರು ಮೂರನೇ ಸ್ಥಾನ ಪಡೆದರು.

‘ಗುಂಪು–2’ ರ 200 ಮೀ. ಫ್ರೀಸ್ಟೈಲ್‌ನಲ್ಲಿ ಧೀನಿಧಿ ದೇಸಿಂಗು (2 ನಿ. 5.62 ಸೆ.) ಮತ್ತು ಶ್ರೀ ಚಾರಣಿ ಅವರು ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಜಯಿಸಿದರು.

200 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ನೈಶಾ (2 ನಿ. 24.71 ಸೆ.) ಅಗ್ರಸ್ಥಾನ ಗಳಿಸಿದರು. 50 ಮೀ. ಬಟರ್‌ಫ್ಲೈನಲ್ಲಿ ತನಿಷಿ ಗುಪ್ತಾ (28.52 ಸೆ.) ಮತ್ತು ಧೀನಿಧಿ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಗೆದ್ದುಕೊಂಡರು.

ವಿಶ್ವ ಬ್ಯಾಡ್ಮಿಂಟನ್ ಇಂದಿನಿಂದ

ಕೋಪನ್‌ಹೆಗನ್ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ಆಟಗಾರರು ಬೊಗಸೆ ತುಂಬ ಪದಕಗಳನ್ನು ಗೆದ್ದು ಬೀಗುವ ನಿರೀಕ್ಷೆಯೊಂದಿಗೆ ಸೋಮವಾರ ಇಲ್ಲಿ ಆರಂಭವಾಗಲಿರುವ ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಎಚ್.ಎಸ್. ಪ್ರಣಯ್ ಮತ್ತು ಲಕ್ಷ್ಯ ಸೇನ್ ಭಾರತದ ಭರವಸೆಯ ತಾರೆಗಳಾಗಿದ್ದಾರೆ. ಡಬಲ್ಸ್‌ನಲ್ಲಿ ‘ಸೂಪರ್ ಜೋಡಿ’ ಎನಿಸಿಕೊಂಡಿರುವ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯ ಮೇಲೆ ಅಪಾರ ನಿರೀಕ್ಷೆ ಇದೆ. ಮಹಿಳೆಯರ ಸಿಂಗಲ್ಸ್‌ನಲ್ಲಿ ಒಲಿಂಪಿಯನ್ ಪಿ.ವಿ. ಸಿಂಧು ಮೇಲೆ ಎಲ್ಲರ ಕಣ್ಣು ನೆಟ್ಟಿದೆ.

ಮಾಜಿ ವಿಶ್ವ ಚಾಂಪಿಯನ್ ಮತ್ತು 2 ಒಲಿಂಪಿಕ್ ಪದಕಗಳ ವಿಜೇತರಾಗಿರುವ ಸಿಂಧು ಕಳೆದ ಕೆಲವು ಟೂರ್ನಿಗಳಲ್ಲಿ ಪ್ರಶಸ್ತಿ ಗಳಿಸಿಲ್ಲ. ಆದ್ದರಿಂದ ಅವರು ಈ ಟೂರ್ನಿಯಲ್ಲಿ ಗೆಲುವಿನ ಹಾದಿಗೆ ಮರಳುವರೇ ಎಂಬ ಕುತೂಹಲ ಗರಿಗೆದರಿದೆ.

ಪಿ.ವಿ. ಸಿಂಧು ಭಾರತದ ಪರ ಏಕೈಕ ಚಿನ್ನ (2019) ಗೆದ್ದ ಆಟಗಾರ್ತಿಯಾಗಿದ್ದಾರೆ. ಎರಡು ಬೆಳ್ಳಿ, ಎರಡು ಕಂಚು ಸೇರಿದಂತೆ ಒಟ್ಟು ಐದು ಪದಕಗಳನ್ನು ಅವರು ಬೇಟೆಯಾಡಿದ್ದಾರೆ. ಆದರೆ, 2019ರ ಆವೃತ್ತಿ ಬಳಿಕ ಅವರಿಗೆ ಪದಕ ಗೆಲ್ಲಲು ಸಾಧ್ಯವಾಗಲಿಲ್ಲ. ಸಿಂಧು ಅವರಿಗೆ ಮೊದಲ ಸುತ್ತಿನಲ್ಲಿ ‘ಬೈ’ ನೀಡಲಾಗಿದೆ. ಜಪಾನ್‌ನ ನೊಜೊಮಿ ಒಕುಹರಾ ಮತ್ತು ವಿಯೆಟ್ನಾಂನ ಥುಯ್ ಲಿನ್ ನ್ಗುಯೆನ್ ನಡುವಿನ ಪಂದ್ಯದ ವಿಜೇತರನ್ನು ಸಿಂಧು ಮುಂದಿನ ಸುತ್ತಿನಲ್ಲಿ ಎದುರಿಸಲಿದ್ದಾರೆ.


ಪಿ.ವಿ. ಸಿಂಧು

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 1977ರಿಂದ ಭಾರತವು ಈತನಕ 1 ಚಿನ್ನ, ನಾಲ್ಕು ಬೆಳ್ಳಿ ಮತ್ತು 8 ಕಂಚು ಸೇರಿದಂತೆ 13 ಪದಕಗಳನ್ನು ಗೆದ್ದಿದೆ. ಪ್ರಕಾಶ್ ಪಡುಕೋಣೆ (1983) ಅವರು ಕಂಚು ಗೆದ್ದ ಮೊದಲ ಭಾರತೀಯ ಆಟಗಾರ. 2021ರ ಆವೃತ್ತಿಯಲ್ಲಿ ಕಿದಂಬಿ ಶ್ರೀಕಾಂತ್ ಮತ್ತು ಲಕ್ಷ್ಯ ಸೇನ್ ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದಿದ್ದರು.

ಪ್ರಸ್ತುತ ಉತ್ತಮ ಲಯದಲ್ಲಿರುವ ಪ್ರಣಯ್ ಮೇಲೆ ನಿರೀಕ್ಷೆ ಹೆಚ್ಚಿದೆ. ಅವರು ಫಿನ್ಲೆಂಡ್‌ನ ಕ್ಯಾಲೆ ಕೊಲ್ಜೊನೆನ್ ಅವರನ್ನು ಎದುರಿಸುವ ಮೂಲಕ ಇಲ್ಲಿ ಅಭಿಯಾನ ಆರಂಭಿಸುವರು. ವಿಶ್ವದ 11ನೇ ರ‍್ಯಾಂಕ್‌ನ ಲಕ್ಷ್ಯ ಸೇನ್ ಅವರು ಆರಂಭಿಕ ಸುತ್ತಿನಲ್ಲಿ ವಿಶ್ವದ 110 ರ‍್ಯಾಂಕ್‌ನ ಜಾರ್ಜಸ್ ಜೂಲಿಯನ್ ಪೌಲ್ (ಮಾರಿಷಸ್) ಅವರನ್ನು ಎದುರಿಸುವರು. 20ನೇ ರ‍್ಯಾಂಕ್‌ನ ಕಿದಂಬಿ ಶ್ರೀಕಾಂತ್ ಮೊದಲ ಸುತ್ತಿನಲ್ಲಿ 15ನೇ ರ‍್ಯಾಂಕ್‌ನ ಕೆಂಟಾ ನಿಶಿಮೊಟೊ (ಜಪಾನ್) ಅವರ ಸವಾಲನ್ನು ಎದುರಿಸಲಿದ್ದಾರೆ.

ಅದ್ಭುತ ಫಾರ್ಮ್‌ನಲ್ಲಿರುವ ಸಾತ್ವಿಕ್ ಮತ್ತು ಚಿರಾಗ್ ಜೋಡಿಗೆ ಆರಂಭಿಕ ಸುತ್ತಿನಲ್ಲಿ ‘ಬೈ’ ದೊರಕಿದೆ.

ಹಾಕಿ: ಜರ್ಮನಿಗೆ ಮಣಿದ ಭಾರತ

ಡಸೆಲ್‌ಡಾರ್ಫ್, ಜರ್ಮನಿ (ಪಿಟಿಐ): ಭಾರತದ ಜೂನಿಯರ್ ಹಾಕಿ ತಂಡವು ನಾಲ್ಕು ರಾಷ್ಟ್ರಗಳ ಹಾಕಿ ಟೂರ್ನಿಯಲ್ಲಿ ಆತಿಥೇಯ ತಂಡದ ವಿರುದ್ಧ 2–3ರಿಂದ ಪರಾಭವಗೊಂಡಿತು.

ಮೊದಲ ಪಂದ್ಯದಲ್ಲಿ ಸ್ಪೇನ್ ತಂಡವನ್ನು 6–2 ಗೋಲುಗಳಿಂದ ಮಣಿಸಿದ್ದ ಭಾರತದ ಆಟಗಾರರು, ಶನಿವಾರ ತಡರಾತ್ರಿ ನಡೆದ ಎರಡನೇ ಪಂದ್ಯದಲ್ಲಿ ಮುಗ್ಗರಿಸಿದರು. ಭಾರತದ ಸುದೀಪ್ ಚಿರ್ಮಾಕೊ (7 ಮತ್ತು 60ನೇ) ಎರಡು ಗೋಲು ಗಳಿಸಿ ಮಿಂಚಿದರು. ಮೈಕೆಲ್ ಸ್ಟ್ರುಥಾಫ್ (41ನೇ), ಬೆನ್ ಹ್ಯಾಸ್‌ಬಾಚ್ (53ನೇ) ಮತ್ತು ಫ್ಲೋರಿಯನ್ ಸ್ಪೆರ್ಲಿಂಗ್ (55ನೇ) ಚೆಂಡನ್ನು ಗುರಿ ಸೇರಿಸಿ ಜರ್ಮನಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಭಾರತ ಮಹಿಳೆಯರು ಇಂಗ್ಲೆಂಡ್ ಜತೆ 3–3 ಗೋಲುಗಳ ಡ್ರಾ ಸಾಧಿಸಿದರು.